ಕಾರ್ಯದರ್ಶಿಗಳು ಜಿಲ್ಲಾಮಟ್ಟದ ಅಧಿಕಾರಿಗಳಿಗೆ ಕಟ್ಟುನಿಟ್ಟಾಗಿ ಜಿಲ್ಲಾ ಪಂಚಾಯತ್‌ನ ಕಾರ್ಯಕ್ರಮಗಳ ಬಗ್ಗೆ ಕಾಳಜಿ ತೋರಿಸಬೇಕೆಂದು ಸೂಚನೆ ನೀಡಲು ಕೋರಿರುತ್ತಾರೆ.

ಸದರಿ ವಿಷಯವನ್ನು ಸಭೆಯಲ್ಲಿ ಪರಿಶೀಲಿಸಿದಾಗ DCF, Social Forestry Shri Sathish Baba Rai ರವರು ಮೂರು ತಿಂಗಳಿನಿಂದ MGNREGA Login ಆಗುತ್ತಿಲ್ಲವೆಂದು ಹೇಳಿದರು. ಆದರೆ ಈ ಬಗ್ಗೆ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಅವರು ಯಾವುದೇ ಮಾಹಿತಿಯನ್ನು ತಿಳಿಸಿರುವುದಿಲ್ಲ. ಅದೇ ರೀತಿ ಜಂಟಿ ನಿರ್ದೇಶಕರು ಕೃಷಿ ಶ್ರೀ ಜಯಸ್ವಾಮಿರವರು ಸುಮಾರು 550 ರೈತರ ಭೂಮಿಯಲ್ಲಿ ಟ್ರೆಂಚ್, ಬೆಂಡಿಂಗ್, ಇತ್ಯಾದಿ ಮಾಡಲು ಅವರಿಗೆ ಸಿಬ್ಬಂದಿಗಳ ಕೊರತೆ ಇರುತ್ತದೆ ಎಂದು ತಿಳಿಸಿದರು. ಇದಕ್ಕಾಗಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು **ಶೇಕಡಾ ಒಂದು ಆಡಳಿತ ವೆಚ್ಚದಲ್ಲಿ ಹೆಚ್ಚುವರಿ ಸಿಬ್ಬಂದಿಗಳನ್ನು ಈ ಕೆಲಸಕ್ಕಾಗಿ ಉಪಯೋಗಿಸಬಹುದಾಗಿದೆ ಎಂದು ಸೂಚಿಸಿದರು.** ಕೃಷಿ, ತೋಟಗಾರಿಕೆ, ರೇಷ್ಮೆ, ಅರಣ್ಯ, ಪಶುಸಂಗೋಪನೆ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗಳವರು Integrated Farm Development ಯೋಜನೆಯನ್ನು MGNREGA ಅಡಿಯಲ್ಲಿ ಮಾಡಬೇಕೆಂದು ಸೂಚಿಸಲಾಯಿತು. ಇದರಿಂದ ಹೆಚ್ಚಾಗಿ ಒಣಭೂಮಿ ಇರುವ ತುಮಕೂರು ರೈತರಿಗೆ ವರ್ಷವಿಡೀ ಆದಾಯವಿರುತ್ತದೆ. ಅದರಂತೆ ತಾಲ್ಲೂಕು ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಪ್ರತಿಯೊಂದು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ (PDO) ಮೂಲಕ ಗ್ರಾಮ ಪಂಚಾಯತ್ ಮಟ್ಟದಲ್ಲಿ ಆಯ್ಕೆಯಾದ ರೈತರಿಗೆ **ವಿವಿಧ ಬೆಳೆಗಳಿಂದ ಬರುವಂತಹ ಆದಾಯದ ಬಗ್ಗೆ ಮಾಹಿತಿ ಹಂಚಿಕೊಂಡು ಸೂಕ್ತ Multiple Cropping ಪ್ರಸ್ತಾವನೆಗಳನ್ನು ರೈತರಿಗೆ ತಿಳಿಸಿ,** MGNREGA ಅಡಿಯಲ್ಲಿ ಅವರ ಭೂಮಿಯನ್ನು ಅಭಿವೃದ್ಧಿಪಡಿಸಲು ಹಾಗೂ ಆದಾಯವನ್ನು ಹೆಚ್ಚಿಸಲು ಕ್ರಮ ಜರುಗಿಸಲು ಸೂಚಿಸಲಾಯಿತು. (ಉದಾಹರಣಗೆ ನೀರಾವರಿಯುತ ಕೃಷಿಯಲ್ಲಿ ಅತ್ಯಧಿಕ ಆದಾಯ ರೂ.15,000 ಪ್ರತಿ ಹೆಕ್ಟೇರ್ ಇದ್ದರೆ, ರೇಷ್ಮೆಯಲ್ಲಿ ರೂ.10.00 ಲಕ್ಷ ಪ್ರತಿ ವರ್ಷ ಆದಾಯ ಬರುತ್ತದೆ ಎಂದು ಅಧಿಕಾರಿಗಳು ಸಭೆ ಗಮನಕ್ಕೆ ತಂದರು).

ಜಿಲ್ಲೆಯಲ್ಲಿ ಸುಮಾರು 106 ಗ್ರಾಮಗಳಲ್ಲಿ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡುತ್ತಿರುವುದರಿಂದ ಸದರಿ ಗ್ರಾಮಗಳಲ್ಲಿ ನೀರು ಸಂರಕ್ಷಣೆ ಹಾಗೂ ಕೊಳವೆಬಾವಿಗಳ ಪುನಶ್ಚೇತನ ಮಾಡಲು ಆದ್ಯತೆ ಮೇರೆಗೆ ಕ್ರಮಕೈಗೊಳ್ಳಲು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಸೂಚಿಸಲಾಯಿತು.

ಜಿಲ್ಲೆಯಲ್ಲಿ ತುರ್ತು ಕುಡಿಯುವ ನೀರಿನ ಅವಶ್ಯಕತೆಗಾಗಿ ಕೋರಿರುವ 505 ಕೊಳವೆ ಬಾವಿಗಳ ಖರ್ಚು ರೂ.10.59 ಕೋಟಿಯನ್ನು ಹೆಚ್ಚುವರಿ ಅನುದಾನವಾಗಿ ಬಿಡುಗಡೆ ಮಾಡಲು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರನ್ನು ಕೋರಲಾಗಿದೆ.

ಮಧ್ಯಾಹ್ನ 3 ಗಂಟೆಯಿಂದ ರಾತ್ರಿ 9 ಗಂಟೆವರೆಗೂ ಸ್ಮಾರ್ಟ್ ಸಿಟಿ ಮಂಡಳಿ ಸಭೆಯನ್ನು ನಡೆಸಲಾಯಿತು ಹಾಗೂ ಕಾಮಗಾರಿಗಳನ್ನು ಪರಿಶೀಲಿಸಲಾಯಿತು.

(ಡಾ: ಶಾಲಿನಿ ರಜನೀಶ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಯೋಜನೆ, ಕಾರ್ಯಕ್ರಮ ಸಂಯೋಜನೆ
ಹಾಗೂ ಸಾಂಖ್ಯಿಕ ಇಲಾಖೆ ಹಾಗೂ
ತುಮಕೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯೊಂದ ದಿನಾಂಕ:09-07-2019 ಮತ್ತು 10-07-2019 ರಂದು
ಬರ ಪರಿಸ್ಥಿತಿ ನಿರ್ವಹಣೆ ಹಾಗೂ ಜಿಲ್ಲೆಯ ಪ್ರಗತಿ ಪರಿಶೀಲನಾ ಸಭೆಯ ನಡವಳಿಗಳು:
[ಪ್ರತಿ ತಿಂಗಳು ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ಸಲ್ಲಿಸಬೇಕಾದ ನಮೂನೆ]

<table>
<tr><th>ಕ್ರ.ಸಂ.</th><th>ಅಂಶಗಳು</th><th>ಕಾರ್ಯದರ್ಶಿಗಳ ಷರಾ</th></tr>
<tr><td>1.</td><td>ಜಿಲ್ಲೆ ಹೆಸರು</td><td>ಬಾಗಲಕೋಟ</td></tr>
<tr><td>2.</td><td>ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯ ಹೆಸರು</td><td>ಶ್ರೀ ತುಷಾರ್ ಗಿರಿ ನಾಥ್ ಭಾ.ಆ.ಸೇ</td></tr>
<tr><td>3.</td><td>ಭೇಟಿಯಾದ / ಪ್ರವಾಸದ ದಿನಾಂಕ</td><td>09-07-2019 ಮತ್ತು 10-07-2019</td></tr>
<tr><td>4.</td><td colspan="2">ಮುಖ್ಯವಾಗಿ ಗಮನಿಸಿದ ಅಂಶಗಳು<br><br>ದಿನಾಂಕ: 09-07-2019 ರಂದು ಸ್ಥಳ ಪರಿಶೀಲನಾ ವಿವರ ಹಾಗೂ ನೀಡಿದ ಸೂಚನೆಗಳು:-<br><br>• ಕುಳಗೇರಿ ಕ್ರಾಸ್ [ಖಾನಾಪೂರ ಎಸ್.ಕೆ.] ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಪರಿಶೀಲನೆ ಮಾಡಿದಾಗ, ಆಯುಷ್ ಇಲಾಖೆಯ ವೈದ್ಯರ ಗೈರು ಹಾಜರಿಯನ್ನು ಗಂಭೀರವಾಗಿ ಪರಿಗಣಿಸಿ ಸದರಿಯವರಿಗೆ ನೋಟೀಸ್ ಜಾರಿ ಮಾಡಲು ವೈದ್ಯಾಧಿಕಾರಿಗಳಿಗೆ ಸೂಚಿಸಿದರು. ಈ ಕುರಿತು ತೆಗೆದುಕೊಂಡ ಕ್ರಮದ ಬಗ್ಗೆ ಅನುಪಾಲನೆಯನ್ನು ಸಲ್ಲಿಸಲು ತಿಳಿಸಿದರು.<br>1)ಲೇಬರ ಕೊಠಡಿ, ಓ.ಪಿ.ಡಿ, ಹಾಗೂ ಔಷಧಿಗಳ ವಿತರಣೆ ಕೊಠಡಿ ವೀಕ್ಷಿಸಿದರು, ಜಿಲ್ಲಾ ಆರೋಗ್ಯ ಅಧಿಕಾರಿಗಳಿಗೆ ಸಾಕಷ್ಟು ಪ್ರಮಾಣದ ಆಯುರ್ವೇದಿಕ್ ಔಷಧಿಗಳನ್ನು ಆಸ್ಪತ್ರೆಯಲ್ಲಿ ದಾಸ್ತಾನು ಮಾಡಿಕೊಳ್ಳಲು ತಿಳಿಸಿದರು.<br>2)ಪ್ರಾಥಮಿಕ ಆರೋಗ್ಯ ಕೇಂದ್ರದ ಹಿಂದುಗಡೆ ನಿರ್ಮಿಸಲಾಗುತ್ತಿರುವ ಕಟ್ಟಡವನ್ನು ಬೇಗನೆ ಪೂರ್ಣಗೊಳಿಸಲು ಸೂಚಿಸಿದರು. ಸಾರ್ವಜನಿಕ ವೈದ್ಯರು ಹೊರಗಡೆ ಔಷಧಿಗಳನ್ನು ತೆಗೆದುಕೊಳ್ಳಲು ಚೀಟಿಯನ್ನು ನೀಡುತ್ತಾರೆಂದು ತಿಳಿಸಿದಾಗ, ಈ ಕುರಿತು ಪರಿಶೀಲಿಸಿ ಕ್ರಮ ಕೈಗೊಳ್ಳಲು ಜಿಲ್ಲಾ ಆರೋಗ್ಯ ಅಧಿಕಾರಿಗಳಿಗೆ ಸೂಚಿಸಿದರು.<br>3)ವೈದ್ಯಾಧಿಕಾರಿಗಳಿಗೆ ಎಲ್ಲ ಔಷಧಿಗಳು ತಮ್ಮ ಆಸ್ಪತ್ರೆಯಲ್ಲಿಯೇ ಸಿಗುವ ಕುರಿತು ಬೋರ್ಡನಲ್ಲಿ ಬರೆಯಿಸಿ ಸಾರ್ವಜನಿಕರ ಗಮನಕ್ಕೆ ತರಲು ನಿರ್ದೇಶಿಸಿದರು.<br><br>• ಬಾದಾಮಿ ತಾಲೂಕಿನ ಕಿತ್ತಲಿ ಗ್ರಾಮದಲ್ಲಿ ಮಹಾತ್ಮಾಗಾಂಧಿ ಉದ್ಯೋಗ ಖಾತ್ರಿ ಯೋಜನೆಯಡಿ ಕೃಷಿ ಇಲಾಖೆಯಿಂದ ಕೈಗೊಂಡ ಬದು ನಿರ್ಮಾಣ ಕಾಮಗಾರಿಯನ್ನು ಪರಿಶೀಲನೆಯಲ್ಲಿ ಅಂದಾಜು 300 ಜನ ಕಾರ್ಮಿಕರು ಕೆಲಸವನ್ನು ಮಾಡುತ್ತಿರುವುದು ಕಂಡು ಬಂದಿದ್ದು, ಸದರಿಯವರೊಂದಿಗೆ ಚರ್ಚಿಸಲಾಗಿ, ಪ್ರತಿ ವಾರಕ್ಕೊಮ್ಮೆ ಸರಿಯಾಗಿ ವೇತನ ಪಾವತಿಯಾಗುತ್ತಿರುವ ಬಗ್ಗೆ ಕಾರ್ಮಿಕರು ತಿಳಿಸಿದರು.<br><br>• ಜಾಲಿಹಾಳ ಗ್ರಾಮದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ಪೂರ್ವ ವಸತಿ ನಿಲಯಕ್ಕೆ ಭೇಟಿ ನೀಡಿ ಪರಿಶೀಲಿಸಲಾಗಿ, ವಸತಿ ನಿಲಯದಲ್ಲಿ ಕಂಪ್ಯೂಟರ್ ರೂಮ್ ಉಪಯೋಗಿಸದೇ ಇರುವ ಬಗ್ಗೆ ವಿಷಾದ ವ್ಯಕ್ತಪಡಿಸಿದರು. ಇಲಾಖೆಯವರು ಈ ಕುರಿತು ಕ್ರಮ ಜರುಗಿಸಲು ಸೂಚಿಸಿದರು. ಗ್ರಂಥಾಲಯ ಕೊಠಡಿಯಲ್ಲಿ ದಾಸ್ತಾನು ಮಾಡಲಾದ ಗೋದಿ, ಅಕ್ಕಿ ಚೀಲಗಳನ್ನು ಸ್ಥಳಾಂತರಿಸಲು ತಿಳಿಸಿ ಗ್ರಂಥಾಲಯದಲ್ಲಿ ದಿನಪತ್ರಿಕೆಗಳ ಹಾಗೂ ಪುಸ್ತಕಗಳ ವ್ಯವಸ್ಥೆ ಕಲ್ಪಿಸಲು ನಿರ್ದೇಶಿಸಿದರು. ಶುದ್ಧ ಕುಡಿಯುವ ನೀರಿನ ಆರ್. ಓ. ಯಂತ್ರವನ್ನು ತಕ್ಷಣ ದುರಸ್ತಿಗೊಳಿಸಿ ಉಪಯೋಗಿಸುವಂತೆ ನಿರ್ದೇಶಿಸಿದರು. ಸೋಲಾರ್ ವ್ಯವಸ್ಥೆಯನ್ನು ದುರಸ್ತಿಗೊಳಿಸಿಕೊಂಡು ಉಪಯೋಗಿಸಿಕೊಳ್ಳಲು ನಿರ್ದೇಶಿಸಿದರು. ಈ ಕುರಿತು ಅನುಪಾಲನೆಯನ್ನು ಸಲ್ಲಿಸಲು ಸೂಚಿಸಿದರು. ಊಟದ ಕೊಠಡಿಯಲ್ಲಿ ಸಂಗ್ರಹಿಸಲಾದ ಪೈಪಗಳನ್ನು ತಕ್ಷಣ ಸ್ಥಳಾಂತರಿಸಲು ಸೂಚಿಸಿದರು.<br><br>• ಜಾಲಿಹಾಳ ಗ್ರಾಮದಲ್ಲಿ ನಿರ್ಮಿಸಲಾಗುತ್ತಿರುವ ಅಂಗನವಾಡಿ ಕಟ್ಟಡವನ್ನು ಪರಿಶೀಲಿಸಿ ಸದರಿ ಕಾಮಗಾರಿಯು ಮಂದಗತಿಯಲ್ಲಿ ಸಾಗುತ್ತಿರುವ ಬಗ್ಗೆ ತೀವ್ರ ಆಕ್ಷೇಪಣೆ ವ್ಯಕ್ತಪಡಿಸಿದರು. ಕಾರ್ಯ ನಿರ್ವಾಹಕ ಅಧಿಕಾರಿ, ತಾಲೂಕಾ ಪಂಚಾಯತ, ಬಾದಾಮಿ ಇವರಿಗೆ ಸದರಿ ಕಾಮಗಾರಿಯನ್ನು ಆದ್ಯತೆಯ ಮೇರೆಗೆ ಶೀಘ್ರವಾಗಿ ಪೂರ್ಣಗೊಳಿಸಲು ಸೂಚಿಸಿದರು.<br><br>• ಬಾದಾಮಿ ತಾಲೂಕಿನ ಚೊಳಚಗುಡ್ಡ ಗ್ರಾಮದ ಬನಶಂಕರಿಯಲ್ಲಿರುವ ಸರಸ್ವತಿ ಹಳ್ಳಕ್ಕೆ Multi Arch Check Dam ಮತ್ತು ಹೂಳೆತ್ತುವ ಕಾಮಗಾರಿಗಳನ್ನು ಪರಿಶೀಲಿಸಲಾಗಿ, ಕಾಮಗಾರಿ ಅಂದಾಜಿನಲ್ಲಿ ರೂ.9.00 ಲಕ್ಷ checkdam</td></tr>
</table>

ಬಗುತ್ತದೆ. ಅಂದಾಜಿನಲ್ಲಿ ಇಂತಹ ಮಣ್ಣಿನ ಕಾಮಗಾರಿಯ ಅಂದಾಜನ್ನು ಎಚ್ಚರಿಕೆಯಿಂದ ಮಾಡಲು ಸೂಚಿಸಲಾಯಿತು. ಈ ಕಾಮಗಾರಿಯಲ್ಲಿಯೇ EarthWork ಅಂದಾಜು ಹೆಚ್ಚು ಅನ್ನಿಸುತ್ತದೆ.

- ಬಾದಾಮಿ ಪುರಸಭೆ ವ್ಯಾಪ್ತಿಯಲ್ಲಿನ ಅಮೃತ್ ಯೋಜನೆಯಲ್ಲಿ ವೀರ ಪುಲಕೇಶಿ ಶಾಲೆಯ ಹಿಂದೆ ನಿರ್ಮಿಸಲಾದ ಮಳೆ ನೀರು ಚರಂಡಿ ಕಾಮಗಾರಿಯನ್ನು ಪರಿಶಿಲನೆ ಮಾಡಲಾಯಿತು, ಚರಂಡಿಗೆ ನಿರ್ಮಿಸಲಾದ ಬ್ರಿಡ್ಜ್ ಅಗಲವಾಗಿದ್ದು ಇದಕ್ಕೆ ಅನುಗುಣವಾದ ಗೋಡೆಗೆ ರಂದ್ರಗಳನ್ನು ಮಾಡಲಾಗಿದ್ದು, ಈ ರಂಧ್ರಗಳು Structural Engineer ಅನುಮೋದನೆ ನೀಡಿರುವ design ನಲ್ಲಿ ಇಲ್ಲದೆ ಇರುವುದರಿಂದ ತಕ್ಷಣ Structural Engineer ರನ್ನು ಸಂಪರ್ಕಿಸಿ ರಂಧ್ರದ ಅವಶ್ಯಕತೆ ಇದೆಯೇ ಇಲ್ಲವೇ ಬಗ್ಗೆ ಪರಿಶೀಲಿಸಿ ಅದರಂತೆ ಕ್ರಮ ಕೈಗೊಳ್ಳಲು ಸೂಚಿಸಿದರು. ಈ ರಂಧ್ರಗಳಿಂದ SWD ನಲ್ಲಿ ಪ್ರವಾಹ ಕಡಿಮೆಯಾಗುತ್ತದೆ, ಹೀಗಾಗಿ ಇದರ ಮೇಲೆ ತುರ್ತು ಕ್ರಮಕೈಗೊಳ್ಳಲು ಅತೀ ಅವಶ್ಯವೆಂದು ತಿಳಿಸಲಾಯಿತು.

- ಬಾದಾಮಿ-ಬಾಗಲಕೋಟೆ ರಸ್ತೆಯಲ್ಲಿ ಕೆಶಿಪ ಯೋಜನೆಯಡಿ ಬ್ರಿಡ್ಜ್ ನಿರ್ಮಿಸಲಾದ ಕಾಮಗಾರಿಯು ಪೂರ್ಣಗೊಂಡಿದ್ದು ರಸ್ತೆಯ ಅಗಲ ಹೆಚ್ಚಾಗಿದ್ದು ಬ್ರಿಡ್ಜ್ ಚಿಕ್ಕದಾದ ಕಾರಣ ಮುಂದಿನ ದಿನಗಳಲ್ಲಿ ಈ ಬ್ರಿಡ್ಜ್‌ನ ಅಗಲ ಹೆಚ್ಚಿಸಲು ಕ್ರಮವಹಿಸಲು ಸೂಚಿಸಿದರು.

- ಆಡಗಲ್ ಗ್ರಾಮದಲ್ಲಿ ಟಿಟಿಎಫ್-2 ರಡಿ ಗ್ರಾಮೀಣ ಕುಡಿಯುವ ನೀರಿನ ಕಾಮಗಾರಿಯನ್ನು ಪರಿಶೀಲಿಸಲಾಗಿ, ಇದರಿಂದ ಸಾರ್ವಜನಿಕರಿಗೆ ಅನುಕೂಲ-ವಾಗುತ್ತಿರುವ ಬಗ್ಗೆ ಅನುಪಾಲನೆ ಸಲ್ಲಿಸಲು ಸೂಚಿಸಿದರು.

- ಬಾದಾಮಿ ತಾಲೂಕಿನ ಆಡಗಲ್ ಗ್ರಾಮದ ದಾಳಿಂಬೆ ತೋಟವನ್ನು ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದರು.

- ಗುಳೇದಗುಡ್ಡ ತಾಲೂಕಿನ‌ಲ್ಲಿ ಮೇವು ಬ್ಯಾಂಕ್ ಮೇವು ಬ್ಯಾಂಕಿನಲ್ಲಿ ಮೇವು ಸಂಗ್ರಹಿಸುತ್ತಿದ್ದ ರೈತರನ್ನು ವಿಚಾರಿಸಿದಾಗ, ಅದರ ಅವಶ್ಯಕತೆ ಮತ್ತು ದರ ಕುರಿತು ಪರಿಶೀಲಿಸಿದರು. ರೈತರು ಮೇವು ಉತ್ತಮ ಗುಣಮಟ್ಟದ್ದಾಗಿದೆ. ಮೇವಿನ ದರ ಕೆಜಿಗೆ ರೂ.2-00 ರಂತೆ ಇರುವುದಾಗಿ ತಿಳಿಸಿದರು. ನಂತರ ಸ್ಟಾಕ್ ರಿಕಾರ್ಡನ್ನು ಪರಿಶೀಲಿಸಿ, ಮೆಚ್ಚುಗೆ ವ್ಯಕ್ತಪಡಿಸಿದ್ದು, ಅದನ್ನೇ ಮುಂದುವರೆಸಲು ನಿರ್ದೇಶಿಸಿದರು. ಮೇವಿನ ತೂಕವನ್ನು ಪರೀಕ್ಷಿಸಿ ಮತ್ತು ತೂಕದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಗುಳೇದಗುಡ್ಡದಲ್ಲಿ ಸರ್ಕಾರಿ ಬಾಲಕಿಯರ ಪ್ರಾಥಮಿಕ ಶಾಲೆಗೆ ಪರಿಶೀಲನೆ ಮಾಡಿ ಶಾಲೆಯಲ್ಲಿ ಶೌಚಾಲಯವನ್ನು ನಿರ್ಮಿಸಿಕೊಡಲು ಮುಖ್ಯಾಧಿಕಾರಿಗಳು, ಪುರಸಭೆ, ಗುಳೇದಗುಡ್ಡ ಇವರಿಗೆ ಸೂಚಿಸಿದರು.

- ಕೋಟಿಕಲ್ ಅಂಗನವಾಡಿ ಕೇಂದ್ರಕ್ಕೆ ಬೇಟಿ ನೀಡಿ ಪರಿಶೀಲಿಸಿದರು ಅಂಗನವಾಡಿ ಕೇಂದ್ರದಲ್ಲಿ 27 ಮಕ್ಕಳಿದ್ದು ಅವರಿಗೆ ಶಿಕ್ಷಣ ಮತ್ತು ಪರಿಸರ ಅಭಿವೃದ್ಧಿ ಸಂಸ್ಥೆ ಕೋಟೆಕಲ ಇವರು ವರ್ಕ ಪುಸ್ತಕಗಳನ್ನು ವಿತರಿಸಿದ ಬಗ್ಗೆ ಮೆಚ್ಚಿಗೆ ವ್ಯಕ್ತಪಡಿಸಿದರು. 5 ಜನ ಗರ್ಭಿಣಿಯರು ಹಾಗೂ 5ಜನ ಬಾಣಂತಿಯರು ಊಟಕ್ಕೆ ಬಂದಿದನ್ನು ಗಮನಿಸಿ ಮೇಚ್ಚಿಗೆ ವ್ಯಕ್ತಪಡಿಸಿದರು.

- ಮಾನ್ಯ ಪ್ರವಾಸೋದ್ಯಮ ಇಲಾಖೆಯ ನಿರ್ದೇಶಕರು, ಕೆ.ಎಸ್.ಟಿ.ಡಿ.ಸಿ. ಯಲ್ಲಿನ ಸಭೆಗೆ ಹಾಜರಾಗಿ, ಬಾದಾಮಿಯಲ್ಲಿನ ಎ.ಪಿ.ಎಂ.ಸಿ.ಗೆ ಸಂಬಂಧಿಸಿದ ಜಮೀನನ್ನು ಪ್ರವಾಸೋದ್ಯಮ ಇಲಾಖೆಗೆ ಹಸ್ತಾಂತರಿಸಲು ಸೂಚಿಸಿದರು. ಎ.ಪಿ.ಎಂ.ಸಿ. ಜಮೀನಿನಲ್ಲಿರುವ ಅನಧಿಕೃತ ಕಟ್ಟಡಗಳನ್ನು ತೆರವುಗೊಳಿಸಿ ಜಮೀನನ್ನು ಸರ್ವೆ ಮಾಡಿ ಅಧಿಕೃತ ಮನೆಗಳನ್ನು ಸ್ಥಳಾಂತರಿಸಿ ಪಾರ್ಕಿಂಗ್ ಪ್ಲಾಜಾ ಮಾಡಲು ಕ್ರಮ ಕೈಕೊಳ್ಳಲು ಸೂಚಿಸಿದರು.

- ಅಗಸ್ತ್ಯ ತೀರ್ಥ ಹೊಂಡದ ಮೇಲಿರುವ ಮನೆಗಳನ್ನು ಸ್ಥಳಾಂತರಿಸಲು ತಿಳಿಸಿ ಭೂಸ್ವಾಧೀನ (ಲ್ಯಾಂಡ್ ಅಕ್ವಿಜೇಶನ್) ಮಾಡಲು ಸೂಚಿಸಿದರು.

- ಐಹೊಳೆ ಗ್ರಾಮದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಗುರ್ತಿಸಿರುವ 04-01 ಎಕರೆ ಜಮೀನಿಗೆ ಸಂಬಂಧಿಸಿದಂತೆ ಪ್ರವಾಸೋದ್ಯಮ ಇಲಾಖೆಗೆ ಹಸ್ತಾಂತರಿಸಲು ಕ್ರಮವಹಿಸುವುದು ಹಾಗೂ ಫಾರೆಸ್ಟ್ ಕ್ಲೀಯರನ್ಸ್ ಮಾಡಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಸೂಚಿಸಿದರು.

- ಘನತ್ಯಾಜ್ಯ ವಸ್ತು ನಿರ್ವಹಣೆ ಹಾಗೂ ಚರಂಡಿ ನೀರು ನಿರ್ವಹಣೆ ಕುರಿತು ಮುಖ್ಯಾಧಿಕಾರಿಗಳು ಹಾಗೂ ಯೋಜನಾ ನಿರ್ದೇಶಕರು ಕ್ರಿಯಾ ಯೋಜನೆ ತಯಾರಿಸಿ ನಿಯಮಾನುಸಾರ ವಿಲೇವಾರಿ ಮಾಡಲು ಸೂಚಿಸಿದರು.

## ನಿರ್ದೇಶನಗಳು:

- ಕೃಷಿ ಇಲಾಖೆ: 2019 ಮುಂಗಾರು ಹಂಗಾಮಿನಲ್ಲಿ ರೈತರಿಗೆ ಬೀಜ ಗೊಬ್ಬರ ಕೊರತೆಯಾಗದಂತೆ ಕ್ರಮ ವಹಿಸುವುದು.
- ಪಶು ಸಂಗೋಪನಾ ಇಲಾಖೆ:ಗೋಶಾಲೆಗಳು ಅಗತ್ಯ ಇದ್ದಲ್ಲಿ ಮಾತ್ರ ಪ್ರಾರಂಭಿಸಲು ನಿರ್ದೇಶಿಸಲಾಯಿತು. ಜಿಲ್ಲೆಯಲ್ಲಿ ದೊರಕುವ ಮೇವನ್ನು ದಾಸ್ತಾನುನಲ್ಲಿ ಸಂಗ್ರಹಿಸಿಕೊಂಡು ಮೇವಿನ ಅಲಭ್ಯತೆ ಇದ್ದಲ್ಲಿ ಬಳಸಿಕೊಳ್ಳಲು ಸೂಚಿಸಲಾಯಿತು.
- ಅಕ್ಟೋಬರ ತಿಂಗಳ 2 ನೇ ವಾರದ ಅಂತ್ಯದೊಳಗೆ ಮತ್ತೊಮ್ಮೆ ಜಾನುವಾರುಗಳಿಗೆ ಮೇವು ಲಭ್ಯತೆ ಬಗ್ಗೆ ಜಂಟಿಯಾಗಿ ಸಮೀಕ್ಷೆ ಮಾಡಲು ಸೂಚಿಸಲಾಯಿತು. ಜಾನುವಾರುಗಳ ತೊಟ್ಟಿಗಳನ್ನು ಬಳಕೆಗೆ ಯೋಗ್ಯವಿರುವ ಬಗ್ಗೆ ದುರಸ್ತಿ ಅಗತ್ಯವಿದ್ದಲ್ಲಿ, ನರೇಗಾ ಯೋಜನೆಯಲ್ಲಿ ದುರಸ್ತಿ ಮಾಡಲು ಸೂಚಿಸಲಾಯಿತು.
- ರೈತರಿಗೆ ಮೇವು ಕಿಟ್‌ಗಳು ಈ ಬಾರಿ 43,220 ಕಿಟ್‌ಗಳ ಬೇಡಿಕೆ ಪೂರೈಕೆಯಾದ ಕೂಡಲೇ ರೈತರಿಗೆ ಸಮರ್ಪಕವಾಗಿ ವಿತರಿಸಿ ವರದಿ ನೀಡಲು ಸೂಚಿಸಲಾಯಿತು.
- ಕನಿಷ್ಟ ಪ್ರಮಾಣ ನೋಡಿಕೊಂಡು ಮೇವು ಬ್ಯಾಂಕುಗಳಲ್ಲಿ ಮೇವಿನ ಬಫರ್ ಸ್ಟಾಕ್ ಮಾತ್ರ ಇರಿಸಿಕೊಂಡು ಎಲ್ಲ ತಾಲೂಕುಗಳ ಮೇವು ಬ್ಯಾಂಕುಗಳಲ್ಲಿ ಸರಿಯಾಗಿ ಬಳಸಲು ಸೂಚಿಸಲಾಯಿತು.
- ಜಾನುವಾರುಗಳಿಗೆ ರೋಗ ನಿಯಂತ್ರಣ ಲಸಿಕೆ ಸಮರ್ಪಕವಾಗಿ ಕೈಗೊಳ್ಳಲು ಸೂಚಿಸಲಾಯಿತು.
- ಗ್ರಾಮೀಣ ಕುಡಿಯುವ ನೀರು: ಜಿಲ್ಲೆಯ 36 ಬಹುಗ್ರಾಮ ಕುಡಿಯುವ ನೀರು ಯೋಜನೆಗಳಿದ್ದು, ಇವುಗಳ ಪೈಕಿ 21 ಎಂ.ವ್ಹಿ.ಎಸ್. ಯೋಜನೆಗಳು ಕೃಷ್ಣಾನದಿಗೆ 09 ಎಂ.ವ್ಹಿ.ಎಸ್. ಘಟಪ್ರಭಾ ನದಿಗೆ, 04 ಮಲಪ್ರಭಾ ನದಿಗೆ ಅವಲಂಬಿತವಾಗಿದ್ದು, ಇದರಲ್ಲಿ 04 ಯೋಜನೆಗಳಿಗೆ ಇಂಪೌಂಡಿಂಗ್ ರಿಜರ್ವಾಯರ ಇರುತ್ತವೆ ಎಂದು ಕಾ.ನಿ. ಅಭಿಯಂತರರು, ಆರ್.ಡಬ್ಲು.ಎಸ್. ರವರು ಸಭೆಯಲ್ಲಿ ತಿಳಿಸಿದರು.
- ಅಧ್ಯಕ್ಷರು ಇಂಪೌಂಡಿಂಗ್ ರಿಜರ್ವಾಯರ್ ವಿವರ ಒದಗಿಸಲು ಸೂಚಿಸಿದರು. ಕಾ.ನಿ. ಅಭಿಯಂತರರು ಲೋಕಾಪೂರ, ಲಾಯದಗುಂದಿ, ಕೋಟಿಕಲ್, ಬೇಲೂರ ಎಂದು ಸಭೆಗೆ ವಿವರ ನೀಡಿದರು.
- ಅಕ್ಟೋಬರ್ ತಿಂಗಳವರೆಗೆ ನದಿಯಲ್ಲಿ ನೀರು ಹರಿಯುವಿಕೆಯ ಸಂದರ್ಭದಲ್ಲಿ ಇಂಪೌಂಡಿಂಗ್ ರಿಜರ್ವಾಯರ್ ಭರ್ತಿ ಮಾಡಿ ಇಟ್ಟುಕೊಳ್ಳಲು, ಪಂಪ್ ಹಾಗೂ ಪಂಪ್ ದುರಸ್ತಿ, ಪೈಪ್‌ಲೈನ್ ಸುವ್ಯವಸ್ಥೆಯಲ್ಲಿಟ್ಟುಕೊಂಡು ಮೇ ತಿಂಗಳವರೆಗೆ ಸಾಕಾಗುವಷ್ಟು ನೀರು ಸಂಗ್ರಹಣೆ ಮಾಡಿಕೊಳ್ಳಲು ನಿರ್ದೇಶನ ನೀಡಲಾಯಿತು.
- ನದಿ ಪಾತ್ರದಲ್ಲಿ ನೀರು ಸಂಗ್ರಹಣೆ ಖಾಲಿಯಾದಾಗ, ಜಾಕ್ವೆಲ್ ಇದ್ದಲ್ಲಿ, ಕನಿಷ್ಟ ಮಟ್ಟದಿಂದ ಫ್ಲೋಟಿಂಗ್ ಡೆಕ್‌ನಿಂದ ನೀರು ತರಲು ಯೋಜನೆ ಮಾಡಿಕೊಂಡು ನೀರನ್ನು ಸರಬರಾಜು ಮಾಡುವುದು.
- ಚಿಕ್ಕಪಡಸಲಗಿ ಬ್ಯಾರೇಜಿಗೆ 1.5 ಟಿ.ಎಂ.ಸಿ. ನೀರು ಕುಡಿಯುವುದಕ್ಕಾಗಿಯೇ ಬಳಕೆ ಮಾಡಿಕೊಳ್ಳಲು ಮೀಸಲಿಡಲಾಗಿದೆ. ಫೆಬ್ರುವರಿ ನಂತರ ಯಾವುದೇ ಕಾರಣಕ್ಕೂ ಇತರೆ ಯೋಜನೆಗಳಿಗೆ ಬಳಕೆಯಾಗದಂತೆ ಮುನ್ನೆಚ್ಚರಿಕೆ ವಹಿಸಲು ಸೂಚಿಸಿದರು.
- ಇದೇ ರೀತಿಯಲ್ಲಿ ಜಿಲ್ಲೆಯಲ್ಲಿ ಬರುವ ಎಲ್ಲ ಬ್ಯಾರೇಜುಗಳಲ್ಲಿ ಸೂಕ್ತ ಕ್ರಮ ಕೈಗೊಂಡು ಮುಂಬರುವ ಬೇಸಿಗೆಯಲ್ಲಿ ಕುಡಿಯುವ ನೀರಿನ ಯಾವುದೇ ರೀತಿಯಿಂದ ತೊಂದರೆಯಾಗದಂತೆ ಸೂಕ್ತ ಕ್ರಮ ವಹಿಸುವಂತೆ ನಿರ್ದೇಶಿಸಲಾಯಿತು.
- ಜಿಲ್ಲೆಯಲ್ಲಿ ಸಣ್ಣ ನೀರಾವರಿ ಇಲಾಖೆ ಹಾಗೂ ಜಿಲ್ಲಾ ಪಂಚಾಯತ ವತಿಯಿಂದ ನಿರ್ವಹಣೆ ಮಾಡುತ್ತಿರುವ ಕೆರೆಗಳಲ್ಲಿ ನೀರಿನ ಸಂಗ್ರಹ ಹಾಗೂ ಅದರ ಸದ್ಬಳಕೆ ಮತ್ತು ಪ್ರಮಾಣದ ಕುರಿತು ವರದಿ ಪಡೆಯಲು ಮು.ಕಾ.ನಿ.ಅ. ಜಿ.ಪಂ. ಇವರಿಗೆ ತಿಳಿಸಿದರು.
- ಟಿಟಿಎಫ್-1 & 2, ಸಿ.ಆರ್.ಎಫ್.-1 & 2 ಮತ್ತು 14 ನೇ ಹಣಕಾಸು ಯೋಜನೆ ಸೇರಿ ಒಟ್ಟು 372 ಕಾಮಗಾರಿಗಳಿಗೆ ರೂ.9.54 ಕೋಟಿ ಅನುದಾನ ಬಳಕೆ ಮಾಡಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ.
- ಇವುಗಳ ಪೈಕಿ ಒಟ್ಟು 362 ಕಾಮಗಾರಿಗಳು ಪೂರ್ಣಗೊಂಡಿದ್ದು, 10 ಕಾಮಗಾರಿಗಳನ್ನು [ಟಿಟಿಎಫ್ 1 ರಲ್ಲಿ 2, ಟಿಟಿಎಫ್ 2 ರಲ್ಲಿ 8 ಕಾಮಗಾರಿಗಳು] ಕೈಬಿಡಲಾಗಿದೆ ಎಂದು ಮು.ಕಾ.ನಿ.ಅ. ಜಿ.ಪಂ. ರವರು ವಿವರಿಸಿದರು.

ತಿಳಿಸಿದಾಗ, ಸದರಿ ಮೊತ್ತಕ್ಕೆ ಕೂಡಲೇ ಹಣ ವಿನಿಯೋಗಿತಾ ಪ್ರಮಾಣ ಪತ್ರ ನೀಡಲು ಸೂಚಿಸಿದರು.

- ಬಾಕಿ ಉಳಿದ ಸಿಆರ್‌ಎಫ್ ಅನುದಾನವನ್ನು ಮರಳಿ ಜಿಲ್ಲಾಧಿಕಾರಿಗಳಿಗೆ ಸಲ್ಲಿಸಲು ಹಾಗೂ ಟಿಟಿಎಫ್-1 & 2 ಉಳಿಕೆ ಮೊತ್ತ ರೂ.47.98 ಲಕ್ಷಗಳಲ್ಲಿ ಎನ್.ಆರ್.ಡಿ. ಡಬ್ಲ್ಯೂ.ಪಿ. ಯೋಜನೆಯಡಿಯಲ್ಲಿ ಕೈಗೆತ್ತಿಕೊಂಡಿರುವ 51 ಕಾಮಗಾರಿಗಳಿಗೆ ಕೊಳವೆ ಭಾವಿ ಕೊರೆಯಿಸಲು ಉಪಯೋಗಿಸಲು ಸೂಚಿಸಲಾಯಿತು.
- ಟಿಟಿಎಫ್-3 ರಡಿ ಒಟ್ಟು 143 ಕಾಮಗಾರಿಗಳನ್ನು ರೂ.348.40 ಲಕ್ಷಗಳಿಗೆ ಕೈಗೆತ್ತಿಕೊಂಡಿದ್ದು, ಇವುಗಳ ಪೈಕಿ 112 ಕಾಮಗಾರಿಗಳಿಗೆ ರೂ.257.35 ಲಕ್ಷ ಅನುದಾನ ಖರ್ಚಾಗುತ್ತಿದ್ದು, ಉಳಿದ ಅನುದಾನ ರೂ.91.05 ಲಕ್ಷ ಉಳಿಕೆಯಾಗಿದೆ ಎಂದು ಮು.ಕಾ.ನಿ.ಅ. ಜಿ.ಪಂ. ರವರು ವಿವರಿಸಿದರು. ಉಳಿದ ಮೊತ್ತವನ್ನು ಎನ್.ಆರ್.ಡಿ.ಡಬ್ಲ್ಯೂ.ಪಿ. ಯೋಜನೆಯಡಿಯಲ್ಲಿ ಕೈಗೆತ್ತಿಕೊಂಡಿರುವ 51 ಕಾಮಗಾರಿಗಳಿಗೆ ಕೊಳವೆ ಭಾವಿ ಕೊರೆಯಿಸಲು ಉಪಯೋಗಿಸಲು ಸೂಚಿಸಲಾಯಿತು.
- ಟ್ಯಾಂಕರ್ ಮೂಲಕ ನೀರು ಸರಬರಾಜು: ಜಿಲ್ಲೆಯ 20 ಗ್ರಾಮಗಳಿಗೆ 21 ಟ್ಯಾಂಕರ್‌ಗಳ ಮುಖಾಂತರ 67 ಟ್ರಿಪ್‌ಗಳಲ್ಲಿ ನೀರು ಸರಬರಾಜು ಮಾಡಲಾಗುತ್ತಿದೆ ಎಂದು ಕಾ.ನಿ. ಅಭಿಯಂತರರು, ಆರ್.ಡಬ್ಲ್ಯು.ಎಸ್. ರವರು ಸಭೆಯಲ್ಲಿ ತಿಳಿಸಿದರು.
- ಸದರಿ 20 ಗ್ರಾಮಗಳಿಗೆ ಶಾಶ್ವತ ನೀರು ಪೂರೈಕೆ ಸಲುವಾಗಿ ಎನ್.ಆರ್.ಡಿ. ಡಬ್ಲ್ಯೂ.ಪಿ. ಯೋಜನೆಯಡಿಯಲ್ಲಿ ಸೇರಿಸಲಾಗಿದೆಯೇ ಎಂದು ಅಧ್ಯಕ್ಷರು ಕೇಳಿದಾಗ, ಸೇರಿಸಿಕೊಳ್ಳಲಾಗಿದೆ ಎಂದು ಕಾ.ನಿ. ಅಭಿಯಂತರರು, ಆರ್.ಡಬ್ಲ್ಯು.ಎಸ್. ರವರು ಸಭೆಯಲ್ಲಿ ತಿಳಿಸಿದರು.
- ದಿನಾಂಕ:30-06-2019 ರವರೆಗೆ ಗ್ರಾಮೀಣ ಪ್ರದೇಶಗಳಲ್ಲಿ ನೀರು ಸರಬರಾಜು ಮಾಡಿದ ಟ್ಯಾಂಕರಗಳ ಮಾಲಿಕರಿಗೆ ಹಣ ಪಾವತಿ ಮಾಡಲಾಗಿದೆ ಎಂದು ತಿಳಿಸಿದರು.
- ಸದರಿ ಹಣ ಪಾವತಿಸಿದ ಮೊತ್ತಕ್ಕೆ ಹಣ ವಿನಿಯೋಗಿತಾ ಪ್ರಮಾಣ ಪತ್ರ ನೀಡಲು ಸೂಚಿಸಿದರು.
- ನಗರ ಪ್ರದೇಶ: ಪುರಸಭೆ, ಪ.ಪಂ.ಗಳಲ್ಲಿ ಪ್ರಸ್ತುತ 24 ವಾರ್ಡಗಳಲ್ಲಿ 10 ಟ್ಯಾಂಕರ್‌ಗಳ ಮೂಲಕ ಪ್ರತಿದಿನ 44 ಟ್ರಿಪ್‌ಗಳ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ ಎಂದು ತಿಳಿಸಿದರು.
- ಸನ್ 2018-19 ನೇ ಸಾಲಿನಲ್ಲಿ 162 ಕಾಮಗಾರಿಗಳಿಗೆ ರೂ.513.00 ಲಕ್ಷ ಬಿಡುಗಡೆಯಾಗಿದ್ದು, 142 ಕಾಮಗಾರಿಗಳು ಪೂರ್ಣಗೊಂಡಿದ್ದು, 15 ಕಾಮಗಾರಿಗಳು ಪ್ರಗತಿಯಲ್ಲಿವೆ ಎಂದು ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಬಾಗಲಕೋಟೆ ರವರು ಸಭೆಗೆ ತಿಳಿಸಿದರು. ಕೂಡಲೇ ಕಾಮಗಾರಿಗಳನ್ನು ಪೂರ್ಣಗೊಳಿಸಿ ವೆಚ್ಚ ಭರಿಸಲು ಅಧ್ಯಕ್ಷರು ಸೂಚಿಸಿದರು.
- ಸನ್ 2019-20 ನೇ ಸಾಲಿನಲ್ಲಿ ರೂ.240.00 ಲಕ್ಷಗಳ ಅನುದಾನಕ್ಕೆ ಕ್ರಿಯಾ ಯೋಜನೆಗೆ ಅನುಮೋದನೆ ನೀಡಿದ್ದು, ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಯಲ್ಲಿರುತ್ತವೆ.
- ಈ ಮೇಲ್ಕಂಡ ಅನುದಾನಗಳಿಗೆ ಪೈಪ್‌ಲೈನ್ ವಿಸ್ತರಣೆ ಮತ್ತು ಮೋಟಾರ್ ದುರಸ್ತಿಗೆ ಅನುದಾನದ ಅವಶ್ಯಕತೆ ಇದ್ದಲ್ಲಿ, ಸಿ.ಆರ್.ಎಫ್.ನಲ್ಲಿ ಪ್ರಸ್ತಾವನೆ ಸಲ್ಲಿಸಿ, ಜಿಲ್ಲಾಧಿಕಾರಿಗಳಿಂದ ಅನುದಾನ ಪಡೆಯಲು ಸೂಚಿಸಿದರು.
- ದಿನಾಂಕ:30-06-2019 ರ ವರೆಗೆ ರಬಕವಿ-ಬನಹಟ್ಟಿ, ಜಮಖಂಡಿ ಮತ್ತು ಕೆರೂರು ನಲ್ಲಿ ಒಟ್ಟು ಮೊತ್ತ ರೂ.26,48,400-00 ಗಳನ್ನು ಬಾಡಿಗೆ ಟ್ಯಾಂಕರಗಳಿಗೆ ಪಾವತಿಸಬೇಕಾಗಿದ್ದು, ಅದರಂತೆ ಸದರಿ ಮೊತ್ತವನ್ನು ಒಂದು ವಾರದೊಳಗಾಗಿ ಪಾವತಿಸಲು ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಲಾಯಿತು.
- ಅದರಲ್ಲಿ ಈಗಾಗಲೇ ರಬಕವಿ-ಬನಹಟ್ಟಿ, ಕೆರೂರು ಮತ್ತು ಬಾದಾಮಿ ನಗರ ಸ್ಥಳೀಯ ಸಂಸ್ಥೆಗಳಿಗೆ ನೇರವಾಗಿ ಈಗಾಗಲೇ ರೂ.22.00 ಲಕ್ಷ ಅನುದಾನವನ್ನು ಸಿಆರ್‌ಎಫ್ ನಿಂದ ಬಿಡುಗಡೆ ಮಾಡಿರುವುದಾಗಿ ಯೋಜನಾ ನಿರ್ದೇಶಕರು ತಿಳಿಸಿದಂತೆ ಅಧ್ಯಕ್ಷರು ಸದರಿ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಿ, ಬಿಲ್ ಪಾವತಿಸಿ, ಹಣ ವಿನಿಯೋಗಿತಾ ಪ್ರಮಾಣ ಪತ್ರ ನೀಡಲು ಸೂಚಿಸಿದರು.
- ಜಿಲ್ಲೆಯಲ್ಲಿ ಬರುವ ಎಲ್ಲ 15 ಸ್ಥಳೀಯ ಸಂಸ್ಥೆಗಳ ಅಭಿವೃದ್ಧಿಗಾಗಿ ಬೇಕಾಗುವ ಭೂಮಿಯನ್ನು ಗುರ್ತಿಸಿ ಸ್ಥೂಲಾಭಿವೃದ್ಧಿ ಯೋಜನೆ [ಮಾಸ್ಟರ್ ಪ್ಲಾನ್] ಕಾಯ್ದಿರಿಸಿಕೊಳ್ಳಲು ಸೂಚಿಸಿದರು.
- ನಗರ, ಪುರ, ಪಟ್ಟಣ ಪಂಚಾಯತಿಗಳ ಅಭಿವೃದ್ಧಿಗಾಗಿ ಜಿಲ್ಲಾ ಯೋಜನಾ ಸಮಿತಿಯ ಸಭೆ ಕರೆಯಲು ಸೂಚಿಸಿದರು.

ಮು.ಕಾ.ನಿ.ಅ. ಜಿ.ಪಂ. ರವರು ಸಭೆಯಲ್ಲಿ ತಿಳಿಸಿದರು.

- ದಿನಾಂಕ:09-7-2019 ರಂದು ಕಿತ್ತಲಿ ಗ್ರಾಮದ ನರೇಗಾ ಕಾಮಗಾರಿ ಪರಿಶೀಲನೆ ಮಾಡಿದಾಗ, ಕಪ್ಪು ಮಣ್ಣು ಭೂಮಿಯನ್ನು ಕಾಮಗಾರಿ ಕೈಗೆತ್ತಿಕೊಳ್ಳುವಾಗ, ಮುಂಜಾಗ್ರತೆ ವಹಿಸದಿರುವುದು ಕಂಡು ಬಂದಿತು. ಕೈಗೆತ್ತಿಕೊಂಡ ಕಾಮಗಾರಿ ಒಳ್ಳೆಯ ಗುಣಮಟ್ಟದ್ದಾಗಿದ್ದು, ದೀರ್ಘಕಾಲ-ದವರೆಗೆ ಸಾರ್ವಜನಿಕರಿಗೆ ಉಪಯೋಗವಾಗುವಂತಿರಬೇಕು ಎಂದು ಸೂಚಿಸಿದರು.

- ಕಳೆದ 3 ಸಾಲಿನಲ್ಲಿ ವಾಟರ್ ಶೆಡ್ ಅಭಿವೃದ್ಧಿಗಾಗಿ ಒಟ್ಟಾರೆ ತೆಗೆದುಕೊಂಡ ಕಾಮಗಾರಿಗಳ ಆಡಿಟ್ ವರದಿ ಹಾಗೂ ವಾಸ್ತವಿಕ ವಿವರ ಸಲ್ಲಿಸಲು ಸೂಚಿಸಿದರು.

- ಗ್ರಾಮೀಣ ವಸತಿ: ಗ್ರಾಮೀಣ ವಸತಿ ಎಂಪಿಕ್ ಗುರಿ 3255 ಇದ್ದು, ಕೇವಲ 1050 ಮನೆಗಳು ಪೂರ್ಣಗೊಳಿಸಿರುವದಕ್ಕೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಅಸಮಾದಾನ ವ್ಯಕ್ತಪಡಿಸಿ, ವಸತಿ ಪ್ರಗತಿ ಜಿಲ್ಲೆಯಲ್ಲಿ ಕುಂಠಿತಗೊಂಡಿದ್ದು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ವಸತಿ ಯೋಜನೆಗೆ ಸಂಬಂಧಪಟ್ಟ ಪಂಚಾಯತ ಅಭಿವೃದ್ಧಿ ಅಧಿಕಾರಿಗಳು ಮತ್ತು ಕಾರ್ಯನಿರ್ವಾಹಕ ಅಧಿಕಾರಿಗಳ ಸಭೆ ಕರೆದು ವರ್ಷವಾರು, ಶ್ರೇಣಿವಾರು ಪ್ರಗತಿ ಪರಿಶೀಲಿಸಿ ಎಂಪಿಕ್ ಗುರಿಯ ಪ್ರಕಾರ ಮೇಲ್ಛಾವಣಿ ಮಟ್ಟದಲ್ಲಿ ಇರುವ ಮನೆಗಳನ್ನು 3 ತಿಂಗಳೊಳಗಾಗಿ ಲಿಂಟಲ್ ಮಟ್ಟದಲ್ಲಿರುವ ಮನೆಗಳನ್ನು 6 ತಿಂಗಳೊಳಗಾಗಿ ಮತ್ತು ತಳಪಾಯ ಹಂತದಲ್ಲಿರುವ ಮನೆಗಳನ್ನು 9 ತಿಂಗಳೊಳಗಾಗಿ ಪೂರ್ಣಗೊಳಿಸಲು ಪಂಚಾಯತ ಅಭಿವೃದ್ಧಿ ಅಧಿಕಾರಿಗಳಿಗೆ ನಿರ್ದೇಶನ ನೀಡುವದು.ಇನ್ನೂ ಪ್ರಾರಂಭವಾಗದೇ ಇರುವ ಮನೆಗಳನ್ನು ಪ್ರಾರಂಭಿಸಿ ಒಂದು ವರ್ಷದೊಳಗಾಗಿ ಪೂರ್ಣಗೊಳಿಸುವದು.

- ಜುಲೈ 31 ರೊಳಗಾಗಿ ನಿವೇಶನ ರಹಿತರು ಹಾಗೂ ನಿವೇಶನ ಹೊಂದದ ಫಲಾನುಭವಿಗಳ ಸಮೀಕ್ಷೆ ಮಾಡುವುದು ಹಾಗೂ ಎಲ್ಲ ಫಲಾನುಭವಿಗಳ ಆಯ್ಕೆಯನ್ನು ಗ್ರಾಮ ಸಭೆಗಳಲ್ಲಿ ಮಾಡಿ ಜಾಗೃತ ಸಮಿತಿಗೆ ಕಳುಹಿಸಿಕೊಡಲು ಸೂಚಿಸಿದರು. ಗ್ರಾಮ ಪಂಚಾಯತ ಅಭಿವೃದ್ಧಿ ಅಧಿಕಾರಿಗಳ ಸಭೆ ಕರೆದು ವರ್ಷವಾರು ಹಾಗೂ ಯೋಜನೆವಾರು ಪರಿಶೀಲನೆ ಮಾಡಲು ಮು.ಕಾ.ನಿ. ರವರಿಗೆ ತಿಳಿಸಿದರು. ಅದರಂತೆ ನಗರ, ಪಟ್ಟಣಗಳಿಗೆ ಸಂಬಂಧಿಸಿದ ವಸತಿ ಯೋಜನೆಗಳ ಕುರಿತು ಸಭೆ ಕರೆದು ಪ್ರಗತಿ ಪರಿಶೀಲನೆ ಮಾಡಲು ಜಿಲ್ಲಾಧಿಕಾರಿಗಳಿಗೆ ತಿಳಿಸಿದರು.

- ಭೂ ಮಂಜೂರಾತಿ: ಹಿಂದುಳಿದ ವರ್ಗದ ವಸತಿ ನಿಲಯಗಳಿಗೆ ಬಿ.ಟಿ.ಡಿ.ಎ. ದಿಂದ 09 ನಿವೇಶನಗಳನ್ನು ವರ್ಗಾಯಿಸಲು ಸಭೆಯಲ್ಲಿ ಹಾಜರಿದ್ದ ಬಿ.ಟಿ.ಡಿ.ಎ. ಅಧಿಕಾರಿಗಳಿಗೆ ಸೂಚಿಸಲಾಯಿತು.

- ಸಮಾಜ ಕಲ್ಯಾಣ ಇಲಾಖೆಯ ಬಾದಾಮಿಯಲ್ಲಿ ಎರಡು ವಸತಿ ನಿಲಯಗಳಿಗೆ ನಿವೇಶನಗಳನ್ನು ಮಂಜೂರಿಸಲು ಜಿಲ್ಲಾಧಿಕಾರಿಗಳಿಗೆ ಸೂಚಿಸಿದರು.

- ಹೆಸ್ಕಾಂ: ಗಂಗಾ ಕಲ್ಯಾಣ ಯೋಜನೆಯಡಿ ಪ.ಜಾ./ಪ.ಪಂ. ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಡಿ ಮಂಜೂರಾದ ಬೋರವೆಲ್‌ಗಳಿಗೆ ಹೆಸ್ಕಾಂದಲ್ಲಿ 66 ಪ್ರಕರಣಗಳು ಬಾಕಿ ಇದ್ದು, ಗ್ರಾಮೀಣ ಕುಡಿಯುವ ನೀರಿನ ಇಲಾಖೆಯ 30 ಕೊಳವೆ ಭಾವಿಗಳ ವಿದ್ಯುತ್ತೀಕರಣ ಬಾಕಿ ಇದ್ದು, ಕೂಡಲೇ ವಿದ್ಯುತ್ತೀಕರಣ ಮಾಡಲು ಹೆಸ್ಕಾಂ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಹಾಗೂ ಮು.ಕಾ.ನಿ. ಅಧಿಕಾರಿಗಳು, ಜಿ.ಪಂ. ಇವರು ಪ್ರಗತಿ ಪರಿಶೀಲನೆ ಮಾಡಲು ಸೂಚಿಸಿದರು.

- ಶಿಕ್ಷಣ ಇಲಾಖೆ: ಮಕ್ಕಳ ಕಲಿಕಾ ಸಾಮರ್ಥ್ಯ ಹೆಚ್ಚಿಸಲು ತೆಗೆದುಕೊಂಡಿರುವ ಫಲಿತಾಂಶದ ಕುರಿತು ಉಪನಿರ್ದೇಶಕರು, ಸಾ.ಶಿ.ಇ. ಇವರಿಗೆ ಕೇಳಿದರು. ಪ್ರತಿಯೊಂದು ಶಾಲೆಯಲ್ಲಿ ಯಾವ ಮಗು ಯಾವ ವಿಷಯದಲ್ಲಿ ಕಲಿಕೆಯಲ್ಲಿ ಹಿಂದುಳಿದಿದೆ ಎಂಬುದಕ್ಕೆ ಏನು ಕಾರ್ಯಕ್ರಮಗಳನ್ನು ಹಾಕಿಕೊಂಡಿರುವ ಬಗ್ಗೆ ಈ ಹಿಂದಿನ ಸಭೆಗಳಲ್ಲಿ ನಿರ್ದೇಶನ ನೀಡಿದ್ದಾಗ್ಯೂ, ಸ್ಪಷ್ಟವಾದ ಯೋಜನೆ ರೂಪಿಸದಿರುವುದು ಕಂಡು ಬರುತ್ತಿದೆ. ಶನಿವಾರ ಮತ್ತು ರವಿವಾರ ವಿಶೇಷ ತರಗತಿಗಳನ್ನು 5, 7 ಮತ್ತು 9 ನೇ ವರ್ಗದ ಮಕ್ಕಳಿಗೆ ಆಂಗ್ಲ ಭಾಷೆ, ಗಣಿತ ಮತ್ತು ವಿಜ್ಞಾನ ವಿಷಯಗಳಿಗೆ ಪರಿಣಿತ ತಜ್ಞರಿಂದ ತರಬೇತಿ ಹಮ್ಮಿಕೊಳ್ಳಲು ಸೂಚಿಸಿದರು.

- ನಿವೃತ್ತ ಶಿಕ್ಷಕರು, ಪರಿಣಿತ ಹೊಂದಿದ ವಿಷಯ ಶಿಕ್ಷಕರು, ಉತ್ತಮ ಎನ್.ಜಿ.ಓ. ಹಾಗೂ ಉದ್ದಿಮೆದಾರರಿಂದ ಸಹಕಾರ ಪಡೆದು ಕಲಿಕಾ ಮಟ್ಟವನ್ನು ಹೆಚ್ಚಿಸಲು ಕ್ರಮ ಕೈಗೊಳ್ಳಲು ಸೂಚಿಸಿದರು.

- ಪ್ರತಿಯೊಂದು ತಾಲೂಕಿನಲ್ಲಿ 5 ಶಾಲೆಗಳಲ್ಲಿ ಕಲಿಕೆ ಹೆಚ್ಚಿಸಲು ವಿಶೇಷ ಯೋಜನೆಗಳನ್ನು ರೂಪಿಸಿ ನುರಿತ ಮತ್ತು ಸಂಪನ್ಮೂಲ ಶಿಕ್ಷಕರಿಂದ ತರಬೇತಿಯನ್ನು ಹಮ್ಮಿಕೊಳ್ಳುವುದು.

- ವಸತಿ ನಿಲಯಗಳು: ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ

ವರೆಗೆ ಭೇಟಿ ನೀಡಿ ಬೇಕಾಗುವ ಮೂಲ ಸೌಕರ್ಯಗಳ ಪಟ್ಟಿ ಒದಗಿಸಲು ನಿರ್ದೇಶನ ನೀಡಿದರು.

- ಕ್ರೀಡಾ ಇಲಾಖೆ: ಬಾದಾಮಿ ಪಟ್ಟಣದಲ್ಲಿ ಕ್ರೀಡಾಂಗಣ ಅವಶ್ಯಕತೆ ಇದ್ದು, ಕ್ರೀಡಾಂಗಣಕ್ಕಾಗಿ ಭೂಸ್ವಾಧೀನ ಮಾಡಿಕೊಳ್ಳಲು ಸೂಕ್ತವಾದ ಜಮೀನು ಗುರ್ತಿಸಿ, ಮುಂದಿನ ಕ್ರಮ ಕೈಕೊಳ್ಳಲು ತಹಶೀಲದಾರರಿಗೆ ಹಾಗೂ ಉಪನಿರ್ದೇಶಕರು, ಕ್ರೀಡಾ ಇಲಾಖೆಯವರಿಗೆ ಸೂಚಿಸಿದರು.
- ಆರೋಗ್ಯ ಇಲಾಖೆ: ಸರಕಾರಿ ಆಸ್ಪತ್ರೆಗಳಲ್ಲಿ ಹೆಚ್ಚಿನ ಶಸ್ತ್ರ ಚಿಕಿತ್ಸೆ ಕೈಗೊಳ್ಳಲು ಸೂಚಿಸಿದರು. ಎಲ್ಲ ಆಶಾ ಕಾರ್ಯಕರ್ತರಿಗೆ ಕಟ್ಟು ನಿಟ್ಟಾಗಿ ಹೆರಿಗೆಗೆ ಸರಕಾರಿ ಆಸ್ಪತ್ರೆಗೆ ಕರೆತರಲು ಕ್ರಮ ವಹಿಸಲು ಸೂಚಿಸಿದರು.
- ಸರಕಾರಿ ಆಸ್ಪತ್ರೆಗಳಲ್ಲಿ ಎಲ್ಲ ಔಷಧಿಗಳು ತಮ್ಮ ಆಸ್ಪತ್ರೆಯಲ್ಲಿಯೇ ಸಿಗುವ ಕುರಿತು ಬೋರ್ಡನಲ್ಲಿ ಬರೆಯಿಸಿ ಸಾರ್ವಜನಿಕರ ಗಮನಕ್ಕೆ ತರಲು ನಿರ್ದೇಶಿಸಿದರು.
- ಕುಳಗೇರಿ ಪ್ರಾಥಮಿಕ ಆರೋಗ್ಯ ಕೇಂದ್ರದ ಆಯುಷ್ ವೈದ್ಯರು ಹೊರಗಡೆ ಚೀಟಿ ಬರೆದುಕೊಟ್ಟಿದ್ದು ಗಮನಕ್ಕೆ ಬಂದಾಗ, ಸದರಿ ವೈದ್ಯರ ಮೇಲೆ ಸೂಕ್ತ ತನಿಖೆ ನಡೆಸಿ ಕ್ರಮ ಕೈಗೊಳ್ಳಲು ಸೂಚಿಸಿದರು.
- ಜಿಲ್ಲಾ ಆರೋಗ್ಯ ಕುಟುಂಬ ಕಲ್ಯಾಣ ಅಧಿಕಾರಿಗಳಿಗೆ, ಕಾರ್ಯಕ್ರಮ ಅಧಿಕಾರಿಗಳಿಗೆ ಮತ್ತು ತಾಲೂಕಾ ಅಧಿಕಾರಿಗಳಿಗೆ ಎಲ್ಲ ಆರೋಗ್ಯ ಕೇಂದ್ರಗಳಿಗೆ ಭೇಟಿ ನೀಡಿ ಕ್ರಮ ಕೈಗೊಳ್ಳಲು ಸೂಚಿಸಿದರು.
- ವಿಶೇಷ ಸೂಚನೆಗಳು: ಜಿಲ್ಲಾಧಿಕಾರಿಗಳು, ಕಛೇರಿಯ ಪ್ರತಿಯೊಂದು ವಿಷಯ ನಿರ್ವಾಹಕರು ನಿರ್ವಹಿಸುವ ಸಂಕಲನಗಳನ್ನು, ಮುಖ್ಯವಾಗಿ ತಮ್ಮ ಅಧೀನದಲ್ಲಿ ಬರುವ ಕಛೇರಿಗಳಲ್ಲಿ ಕೋರ್ಟ ಕೇಸ್, ಭೂ ಪರಿವರ್ತನೆ ಮತ್ತು ಭೂ ಮಂಜೂರಾತಿ ವಿಷಯಗಳ ಕುರಿತು ಟೇಬಲ್ ತಪಾಸಣೆ ಮಾಡಿ, ಎಷ್ಟು ಕಡತಗಳು ಚಾಲ್ತಿಯಲ್ಲಿವೆ ಹಾಗೂ ಎಷ್ಟು ಕಡತಗಳು ಬಾಕಿ ಇವೆ ಎಂಬುದರ ಬಗ್ಗೆ ಕಾಲಕಾಲಕ್ಕೆ ಪರಿಶೀಲಿಸಿ, ಕಡತ ವಿಲೇವಾರಿಯನ್ನು ಶೀಘ್ರವಾಗಿ ಮಾಡಲು ಸೂಚಿಸಿದರು.

ಸರ್ಕಾರದ ಮಟ್ಟದಲ್ಲಿ ಸಮನ್ವಯ ಸಾಧಿಸಬೇಕಾದ ವಿಷಯಗಳು:-

- ಮೊರಾರ್ಜಿ ದೇಸಾಯಿ ವಸತಿ ಶಾಲೆ, ಕಂದಗಲ್, ಹುನಗುಂದ ಮತ್ತು ಕಿತ್ತೂರ ರಾಣಿ ಚೆನ್ನಮ್ಮ ವಸತಿ ಶಾಲೆ ಸೂಳೇಭಾವಿ, ಹುನಗುಂದ ಕಟ್ಟಡ ನಿರ್ಮಾಣಕ್ಕಾಗಿ ಅನುದಾನ ಬಿಡುಗಡೆ ಮಾಡಲು ಪ್ರಸ್ತಾವನೆ ಸಲ್ಲಿಸಲಾಗಿದ್ದು, ಬೇಗ ಅನುದಾನ ಬಿಡುಗಡೆ ಮಾಡಿಸುವಂತೆ ಸರ್ಕಾರದ ಕಾರ್ಯದರ್ಶಿಗಳಲ್ಲಿ ಕೋರಲಾಯಿತು.

( [illegible] )

614271/2019/O/o PS-WRD

ದೂರವಾಣಿ: 080 : 22257064
080 : 22034710

ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಕಛೇರಿ
ಜಲ ಸಂಪನ್ಮೂಲ ಇಲಾಖೆ ಹಾಗೂ
ಬೆಳಗಾವಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ

ಸಂಖ್ಯೆ:ಪ್ರಕಾ/ಆಶಾ/76/2019

ಕರ್ನಾಟಕ ಸರ್ಕಾರದ ಸಚಿವಾಲಯ
ಕೊಠಡಿ ಸಂಖ್ಯೆ:307
ವಿಕಾಸಸೌಧ, ಬೆಂಗಳೂರು
ದಿನಾಂಕ: 30/07/2019

---

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಜಲಸಂಪನ್ಮೂಲ ಇಲಾಖೆ ಹಾಗೂ ಬೆಳಗಾವಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ತಮ್ಮ ಅಧ್ಯಕ್ಷತೆಯಲ್ಲಿ ದಿನಾಂಕ: 22/06/2019 ಮತ್ತು ದಿನಾಂಕ: 09/07/2019 ರಂದು ಬೆಳಗಾವಿಯಲ್ಲಿ ಬರಗಾಲ ಪರಿಸ್ಥಿತಿಯ ಕುರಿತು ನಡೆಸಿದ ಜೂನ್ ಮತ್ತು ಜುಲೈ ತಿಂಗಳ ಪರಿಶೀಲನಾ ಸಭೆಯ ನಡವಳಿಗಳನ್ನು ಇದರೊಂದಿಗೆ ಲಗತ್ತಿಸಿ ಮಾಹಿತಿಗಾಗಿ ಕಳುಹಿಸಲಾಗಿದೆ.

30/7/19
(ಸಿ.ಸುಶೀಲ)
ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ
ಜಲ ಸಂಪನ್ಮೂಲ ಇಲಾಖೆ

1. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಆಡಳಿತ ಸುಧಾರಣೆ) ಬಹುಮಹಡಿ ಕಟ್ಟಡ, ಬೆಂಗಳೂರು.
3. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಜಲಸಂಪನ್ಮೂಲ ಇಲಾಖೆ ಹಾಗೂ ಬೆಳಗಾವಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಇವರ ಅಧ್ಯಕ್ಷತೆಯಲ್ಲಿ ದಿನಾಂಕ:22.06.2019 ರಂದು ಮುಂಜಾನೆ 11.00 ಗಂಟೆಗೆ ಬರಗಾಲ ಪರಿಸ್ಥಿತಿಯ ಕುರಿತು ಪರಿಶೀಲನಾ ಸಭೆಯ ನಡಾವಳಿಗಳು.

ಸಭೆಗೆ ಹಾಜರಿದ್ದ ಅಧಿಕಾರಿಗಳು:

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ ಬೆಳಗಾವಿ.
2. ಅಪರ ಜಿಲ್ಲಾಧಿಕಾರಿಗಳು, ಬೆಳಗಾವಿ
3. ಆಯುಕ್ತರು, ಮಹಾನಗರ ಪಾಲಿಕೆ, ಬೆಳಗಾವಿ
4. ಯೋಜನಾ ನಿರ್ದೇಶಕರು, ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬೆಳಗಾವಿ.
5. ಉಪವಿಭಾಗಾಧಿಕಾರಿಗಳು, ಬೆಳಗಾವಿ, ಬೈಲಹೊಂಗಲ, ಚಿಕ್ಕೋಡಿ.
6. ಅಧೀಕ್ಷಕ ಅಭಿಯಂತರರು, ಹೆಸ್ಕಾಂ ಬೆಳಗಾವಿ,ಚಿಕ್ಕೋಡಿ.
7. ಜಂಟಿ ಕೃಷಿ ನಿರ್ದೇಶಕರು, ಬೆಳಗಾವಿ.
8. ಉಪ-ನಿರ್ದೇಶಕರು, ಪಶು ಪಾಲನೆ ಇಲಾಖೆ, ಬೆಳಗಾವಿ.
9. ಉಪ-ನಿರ್ದೇಶಕರು, ಆಹಾರ ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಇಲಾಖೆ, ಬೆಳಗಾವಿ.
10. ಜಿಲ್ಲಾ ಆರೋಗ್ಯ ಕುಟುಂಬ ಕಲ್ಯಾಣ ಅಧಿಕಾರಿಗಳು, ಬೆಳಗಾವಿ .
11. ಅಪರ ಜಿಲ್ಲಾ ಆರೋಗ್ಯ ಕುಟುಂಬ ಕಲ್ಯಾಣ ಅಧಿಕಾರಿಗಳು, ಚಿಕ್ಕೋಡಿ
12. ಉಪ-ನಿರ್ದೇಶಕರು ತೋಟಗಾರಿಕೆ ಬೆಳಗಾವಿ.
13. ಉಪ-ನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆ ಬೆಳಗಾವಿ.
14. ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು ಬೆಳಗಾವಿ.
15. ಉಪ-ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ಬೆಳಗಾವಿ, ಚಿಕ್ಕೋಡಿ.
16. ಉಪ-ನಿರ್ದೇಶಕರು ವಾರ್ತಾ ಮತ್ತು ಪ್ರಚಾರ ಇಲಾಖೆ ಬೆಳಗಾವಿ.
17. ಅಧೀಕ್ಷಕ ಅಭಿಯಂತರರು, ಕನೀನಿನಿ ಜಿಆರ್‌ಬಿಸಿ ವೃತ್ತ ಹಿಡಕಲ್ ಡ್ಯಾಂ.
18. ಅಧೀಕ್ಷಕ ಅಭಿಯಂತರರು, ಕನೀನಿನಿ ಜಿಆರ್‌ಬಿಸಿ ವೃತ್ತ ನವಿಲುತೀರ್ಥ .
19. ಕಾರ್ಯನಿರ್ವಾಹಕ ಅಭಿಯಂತರು, ಗ್ರಾಕುನೀ& ನೈರ್ಮಲ್ಯ ವಿಭಾಗ, ಬೆಳಗಾವಿ, ಚಿಕ್ಕೋಡಿ.
20. ತಹಶೀಲ್ದಾರರು, ಬೆಳಗಾವಿ, ಖಾನಾಪೂರ, ಹುಕ್ಕೇರಿ, ಬೈಲಹೊಂಗಲ, ಕಿತ್ತೂರು, ಸವದತ್ತಿ, ರಾಮದುರ್ಗ, ಗೋಕಾಕ, ಚಿಕ್ಕೋಡಿ, ರಾಯಬಾಗ, ಅಥಣಿ, ಮೂಡಲಗಿ, ಕಾಗವಾಡ, ನಿಪ್ಪಾಣಿ

ಸಭೆಯ ಪ್ರಾರಂಭದಲ್ಲಿ ಹಾಜರಿದ್ದ ಎಲ್ಲ ಅಧಿಕಾರಿಗಳವರನ್ನು ಅಪರ ಜಿಲ್ಲಾಧಿಕಾರಿಗಳು ಬೆಳಗಾವಿ ಇವರು ಅಭಿನಂದಿಸಿ ಸಭೆಯನ್ನು ಪ್ರಾರಂಭಿಸಿದರು. ಬೆಳಗಾವಿ ಜಿಲ್ಲೆಯ ಕುರಿತು ಸಾಮಾನ್ಯ ಮಾಹಿತಿ ಹಾಗೂ ಋತುಮಾನ ಪರಿಸ್ಥಿತಿಯ ಬಗ್ಗೆ ಸಭೆಗೆ ಮಾಹಿತಿಯನ್ನು ನೀಡಿದರು.

ಜಿಲ್ಲೆಯಲ್ಲಿ ಆಗಿರುವ ಮಳೆಯ ವಿವರವನ್ನು ಜಂಟಿ ಕೃಷಿ ನಿರ್ದೇಶಕರು, ಬೆಳಗಾವಿ ಇವರು ಜನೇವರಿ 2019 ರಿಂದ ಮೇ 2019ರವರೆಗೆ 107.3ಮಿಮೀ ವಾಡಿಕೆ ಮಳೆಯಾಗಿದ್ದು, 31.2ಮಿಮೀ ವಾಸ್ತವಿಕ ಮಳೆ ಆಗಿರುತ್ತದೆ. ಶೇ-70.9ರಷ್ಟು ಕೊರತೆಯಿರುತ್ತದೆ. ಜೂನ್ 2019ರಲ್ಲಿ 107.3ಮಿಮೀ ವಾಡಿಕೆ ಮಳೆಯಾಗಿದ್ದು, 9.7 ಮಿಮೀ ವಾಸ್ತವಿಕ ಮಳೆ ಆಗಿರುತ್ತದೆ. ಶೇ-67.7ರಷ್ಟು ಕೊರತೆಯಿರುತ್ತದೆ. ಒಟ್ಟಾರೆಯಾಗಿ ಜನೇವರಿ 2019 ರಿಂದ ಜೂನ್ 2019ರವರೆಗೆ 186.1 ಮಿಮೀ ವಾಡಿಕೆ ಮಳೆಯ ಪೈಕಿ 81.2 ಮಿಮೀ ವಾಸ್ತವಿಕ

ಮಳೆ ಆಗಿರುತ್ತದೆ. ಶೇ-56.4ರಷ್ಟು ಮಳೆಯು ಕೊರತೆಯಿರುತ್ತದೆ. ಸರ್ಕಾರವು ಘೋಷಿಸಿರುವ 2018-19ನೇ ಸಾಲಿನ ಮುಂಗಾರು ಹಂಗಾಮಿನ ರಾಮದುರ್ಗ, ಸವದತ್ತಿ, ಅಥಣಿ ಹಾಗೂ ಕಾಗವಾಡ ತಾಲೂಕುಗಳಲ್ಲಿ ಬರ ಪರಿಸ್ಥಿತಿಯಿಂದಾಗಿ ಬೆಳೆ ಹಾನಿಯಾದ ಬಗ್ಗೆ ಕೃಷಿ, ಕಂದಾಯ, ತೋಟಗಾರಿಕೆ ಇಲಾಖೆಗಳ ಜಂಟಿ ಸಮೀಕ್ಷಾ ಕಾರ್ಯವನ್ನು ಪೂರ್ಣಗೊಳಿಸಿ ರಾಮದುರ್ಗ ತಾಲೂಕಿನಲ್ಲಿ 34,294ಹೆಕ್ಟೇರ್, ಸವದತ್ತಿ ತಾಲೂಕಿನಲ್ಲಿ 18358.77ಹೆಕ್ಟೇರ್, ಅಥಣಿ ತಾಲೂಕಿನಲ್ಲಿ 27895 ಹೆಕ್ಟೇರ್ ಹೀಗೆ ಒಟ್ಟು 80547.77 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಗಳು ಹಾನಿಯಾಗಿರುವುದಾಗಿ ವರದಿಯನ್ನು ಈಗಾಗಲೇ ಸರ್ಕಾರಕ್ಕೆ ಸಲ್ಲಿಸಲಾಗಿದೆ. 2018-19ನೇ ಸಾಲಿನ ಹಿಂಗಾರು ಹಂಗಾಮಿನಲ್ಲಿ 3.32ಲಕ್ಷ ಹೆ.ಪ್ರದೇಶ ಬಿತ್ತನೆಯಾಗಬೇಕಿದ್ದು ಇದುವರೆಗೆ 2.92 ಲಕ್ಷ ಹೆ.ಪ್ರದೇಶದಲ್ಲಿ ಬಿತ್ತನೆಯಾಗಿರುತ್ತದೆ. ಒಟ್ಟು 87.8% ರಷ್ಟು ಬಿತ್ತನೆಯಾಗಿದೆ. ಹಿಂಗಾರು ಹಂಗಾಮಿನಲ್ಲಿ ಜಿಲ್ಲೆಯ ಎಲ್ಲ ತಾಲೂಕುಗಳನ್ನು ಬರಪೀಡಿತ ತಾಲೂಕುಗಳು ಎಂದು ಮಾನ್ಯ ಸರ್ಕಾರದವರು ಘೋಷಣೆ ಮಾಡಿರುತ್ತಾರೆ. ಸದರಿ ವಿಷಯದ ಕುರಿತು ಬರ ಪರಿಸ್ಥಿತಿಯಿಂದಾಗಿ ಬೆಳೆ ಹಾನಿಯಾದ ಬಗ್ಗೆ ಕೃಷಿ, ಕಂದಾಯ, ತೋಟಗಾರಿಕೆ ಇಲಾಖೆಗಳ ಜಂಟಿ ಸಮೀಕ್ಷಾ ಕಾರ್ಯ ಪೂರ್ಣಗೊಳಿಸಿ, 124126 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಗಳು ಹಾನಿಯಾಗಿರುವುದಾಗಿ ವರದಿಯನ್ನು ಈಗಾಗಲೇ ಸರ್ಕಾರಕ್ಕೆ ಸಲ್ಲಿಸಲಾಗಿದೆ ಎಂದು ಸಭೆಗೆ ತಿಳಿಸಿದರು.

ಉಪನಿರ್ದೇಶಕರು, ಪಶು ಪಾಲನೆ & ಪಶುವೈದ್ಯಕೀಯ ಸೇವಾ ಇಲಾಖೆ ಬೆಳಗಾವಿ ಇವರು ಬೆಳಗಾವಿ ಜಿಲ್ಲೆಯಲ್ಲಿ 2012ರ ಜಾನುವಾರುಗಳ ಗಣತಿಯಂತೆ ಒಟ್ಟು 14.22ಲಕ್ಷ ಜಾನುವಾರುಗಳಿದ್ದು, ರೈತರಲ್ಲಿ ಅಂದಾಜು 06ವಾರಗಳಿಗೆ ಸಾಕಾಗುವಷ್ಟು ಮೇವು ಲಭ್ಯತೆಯಿರುತ್ತದೆ. ಪ್ರಸ್ತುತ ಜಿಲ್ಲೆಯಲ್ಲಿ ಅಥಣಿ ತಾಲೂಕಿನ 28 ಗ್ರಾಮಗಳಲ್ಲಿ ಹಾಗೂ ಚಿಕ್ಕೋಡಿ ತಾಲೂಕಿನ 07 ಗ್ರಾಮಗಳು, ರಾಯಬಾಗ ತಾಲೂಕಿನಲ್ಲಿ 03 ಗ್ರಾಮಗಳಲ್ಲಿ, ಹುಕ್ಕೇರಿ ತಾಲೂಕಿನಲ್ಲಿ 02 ಗ್ರಾಮಗಳಲ್ಲಿ ಮತ್ತು ನಿಪ್ಪಾಣಿ, ಬೈಲಹೊಂಗಲ, ರಾಮದುರ್ಗ, ಖಾನಾಪೂರ, ಗೋಕಾಕ, ಬೆಳಗಾವಿ, ಮೂಡಲಗಿ ತಾಲೂಕುಗಳಲ್ಲಿ ತಲಾ ಒಂದರಂತೆ -07 ಗ್ರಾಮಗಳಲ್ಲಿ ಹೀಗೆ ಒಟ್ಟು 47ಗ್ರಾಮಗಳಲ್ಲಿ ಮೇವು ಬ್ಯಾಂಕುಗಳನ್ನು ತೆರೆಯಲಾಗಿದೆ. ಮುಂಬರುವ ದಿನಗಳಲ್ಲಿ ಮೇವಿನ ಸಮಸ್ಯೆ ಎದುರಾದಲ್ಲಿ ಜಿಲ್ಲೆಯ ಬರಪೀಡಿತ ತಾಲೂಕುಗಳಲ್ಲಿ ಯಾವ ಯಾವ ಸ್ಥಳಗಳಲ್ಲಿ ಮೇವು ಬ್ಯಾಂಕುಗಳನ್ನು ತೆರೆಯಬೇಕು ಎನ್ನುವ ಕುರಿತು ಸ್ಥಳವನ್ನು ಗುರುತಿಸಿ ಕ್ರಿಯಾ ಯೋಜನೆಯನ್ನು ರೂಪಿಸಲಾಗಿದೆ ಎಂದು ತಿಳಿಸಿದರು. ಜಿಲ್ಲೆಯ ರೈತರಲ್ಲಿ ಮೇವಿನ ಲಭ್ಯತೆಯನ್ನು ಹೆಚ್ಚಿಸುವ ಹಿನ್ನೆಲೆಯಲ್ಲಿ ನೀರಾವರಿ ಸೌಲಭ್ಯ ಹೊಂದಿದ ರೈತರಿಗೆ ಒಟ್ಟು 124967 ಮೇವಿನ ಕಿಟ್‌ಗಳನ್ನು ಹಂಚಿಕೆ ಮಾಡಿದ್ದು, ಪೂರೈಕೆಯಾದ ಮೇವಿನ ಮಿನಿಕಿಟ್ಟಗಳಿಂದ ಮೇವು 04 ವಾರಗಳವರೆಗೆ ಸಾಕಾಗಬಹುದು ಎಂದು ಅಧ್ಯಕ್ಷರಿಗೆ ತಿಳಿಸಿದರು. ಜಿಲ್ಲಾಧಿಕಾರಿಗಳು ಮಾತನಾಡಿ 2018-19ನೇ ಸಾಲಿನಲ್ಲಿ ಮುಂಗಾರು & ಹಿಂಗಾರು ಮಳೆಯು ನಿರೀಕ್ಷಿತ ಪ್ರಮಾಣದಲ್ಲಿ ಮಳೆಯಾಗದೇ ಇರುವುದರಿಂದ ಮೇವು ಆಧಾರಿತ ಬಿತ್ತನೆ ಕ್ಷೇತ್ರವು ಕುಂಠಿತವಾಗಿರುವುದರಿಂದ ಮುಂದಿನ ದಿನಗಳಲ್ಲಿ ಜಿಲ್ಲೆಯ ಜಾನುವಾರುಗಳಿಗೆ ಆಂತರಿಕ ಮೇವಿನ ಪ್ರಮಾಣವನ್ನು ಸರಿದೂಗಿಸುವ ಹಿತದೃಷ್ಟಿಯಿಂದ ಮತ್ತು ಜಿಲ್ಲೆಯಿಂದ ಹೊರ ರಾಜ್ಯಗಳಿಗೆ ಮೇವು ಸಾಗಾಣಿಕೆ ಮಾಡುವುದನ್ನು ಹಾಗೂ ಒಣ ಮೇವನ್ನು ಯಾವುದೇ ರೂಪದಲ್ಲಿ ಸಂಸ್ಕರಿಸಿ ಸಾಗಾಣಿಕೆ ಮಾಡುವುದನ್ನು, ಮಾನ್ಯ ಸರ್ಕಾರದ ಆದೇಶದ ದಿನಾಂಕ:23.12.2018 ರನ್ವಯ ಜಿಲ್ಲೆಯಾದ್ಯಾಂತ ಮೇವು ಸಾಗಾಣಿಕೆಯನ್ನು ನಿಷೇಧಿಸಿ ಆದೇಶಿಸಲಾಗಿದೆ ಎಂದು ಸಭೆಗೆ ವಿವರಿಸಿದರು.

ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ ಚಿಕ್ಕೋಡಿ, ಬೆಳಗಾವಿ ಇವರು ಮಾತನಾಡಿ ಪ್ರಸ್ತುತವಾಗಿ ಜಿಲ್ಲೆಯ ಅಥಣಿ ತಾಲೂಕಿನ 74 ಗ್ರಾಮಗಳು, ಚಿಕ್ಕೋಡಿ ತಾಲೂಕಿನ 37 ಗ್ರಾಮಗಳು, ನಿಪ್ಪಾಣಿ ತಾಲೂಕಿನ 06 ಗ್ರಾಮಗಳು ರಾಯಬಾಗ ತಾಲೂಕಿನ 26 ಗ್ರಾಮಗಳು, ರಾಮದುರ್ಗ ತಾಲೂಕಿನ 12 ಗ್ರಾಮಗಳು, ಬೈಲಹೊಂಗಲ ತಾಲೂಕಿನ 10 ಗ್ರಾಮಗಳು, ಸವದತ್ತಿ ತಾಲೂಕಿನ 03 ಗ್ರಾಮಗಳು, ಕಿತ್ತೂರ ತಾಲೂಕಿನ 07 ಗ್ರಾಮಗಳು, ಗೋಕಾಕ ತಾಲೂಕಿನ 03 ಗ್ರಾಮಗಳು, ಬೆಳಗಾವಿ ತಾಲೂಕಿನ 12 ಗ್ರಾಮಗಳು ಹಾಗೂ ಹುಕ್ಕೇರಿ ತಾಲೂಕಿನ 07 ಗ್ರಾಮಗಳು ಹೀಗೆ ಒಟ್ಟು 197 ಗ್ರಾಮಗಳು/ ತೋಟದ ವಸತಿಗಳಿಗೆ ಟ್ಯಾಂಕರ ಮೂಲಕ ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತಿದೆ. ರಾಮದುರ್ಗ ತಾಲೂಕಿನ 05 ಗ್ರಾಮಗಳು, ಬೈಲಹೊಂಗಲ ತಾಲೂಕಿನ 09 ಗ್ರಾಮಗಳು, ಸವದತ್ತಿ ತಾಲೂಕಿನ 03 ಗ್ರಾಮಗಳು, ಕಿತ್ತೂರ ತಾಲೂಕಿನ 09 ಗ್ರಾಮಗಳು, ಗೋಕಾಕ ತಾಲೂಕಿನ 03 ಗ್ರಾಮಗಳು, ಹಾಗೂ ಖಾನಾಪೂರ ತಾಲೂಕಿನ 07 ಗ್ರಾಮಗಳು, ಒಟ್ಟು 36 ಗ್ರಾಮಗಳಲ್ಲಿ ಖಾಸಗಿ ಕೊಳವೆ ಬಾವಿಗಳಿಂದ ಕುಡಿಯುವ ನೀರನ್ನು ಪಡೆದು ಪೂರೈಸಲಾಗುತ್ತಿದೆ ಎಂದು ಸಭೆಗೆ ವಿವರಿಸಿದರು.

ಮುಂದುವರೆದು ಕಾರ್ಯನಿರ್ವಾಹಕ ಅಭಿಯಂತರರು ಗ್ರಾ.ಕು.ನೀ & ನೈ ವಿಭಾಗ ಬೆಳಗಾವಿ ಇವರು ಮಾತನಾಡಿ ಮುಂಬರುವ ದಿನಗಳಲ್ಲಿ ಜಿಲ್ಲೆಯಾದ್ಯಂತ ಟ್ಯಾಂಕರ ಮೂಲಕ ಕುಡಿಯುವ ನೀರು ಸರಬರಾಜು ಮಾಡಬಹುದಾದ ಸಮಸ್ಯಾತ್ಮಕ ಗ್ರಾಮಗಳನ್ನು ಗುರುತಿಸಿ, 150 ದಿನಗಳ ಕ್ರಿಯಾ ಯೋಜನೆಯನ್ನು ತಯಾರಿಸಲಾಗಿದೆ ಹಾಗೂ ಪ್ರತಿಯೊಂದು ಗ್ರಾಮದಲ್ಲಿ ಲಭ್ಯವಿರುವ ಹಾಗೂ ತುರ್ತು ಸಂದರ್ಭದಲ್ಲಿ ಬಾಡಿಗೆ ಆಧಾರದಲ್ಲಿ ತೆಗೆದುಕೊಳ್ಳಬಹುದಾದ ಖಾಸಗಿ ಕೊಳವೆ ಭಾವಿಗಳನ್ನು ಗುರುತಿಸಲಾಗಿದೆ ಎಂದು ತಿಳಿಸಿದರು.

ಸಿ.ಆರ್.ಎಫ್ ಅಡಿಯಲ್ಲಿ ಈಗಾಗಲೇ ರೂ.488.80 ಲಕ್ಷಗಳ ಅಂದಾಜು ಮೊತ್ತದಲ್ಲಿ ಒಟ್ಟು 361 ಕಾಮಗಾರಿಗಳನ್ನು ಅನುಮೋದನೆಯನ್ನು ನೀಡಿ, ಶೇ 75ರಷ್ಟು ಅನುದಾನವನ್ನು ಅನುಷ್ಠಾನಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿದೆ. ಈ ಪೈಕಿ 106 ಕಾಮಗಾರಿಗಳು ಪೂರ್ಣಗೊಂಡಿರುತ್ತವೆ ಹಾಗೂ 210 ಕಾಮಗಾರಿಗಳು ಪ್ರಗತಿಯಲ್ಲಿದ್ದು, 45 ಕಾಮಗಾರಿಗಳನ್ನು ಪ್ರಾರಂಭಿಸಬೇಕಾಗಿರುತ್ತದೆ ಎಂದು ತಿಳಿಸಿದರು. ತುರ್ತು ಕಾಮಗಾರಿಗಳ (ಟಾಸ್ಕ ಫೋರ್ಸ)ಯೋಜನೆಯಡಿ ರೂ.975.00ಲಕ್ಷಗಳ ಅಂದಾಜು ಮೊತ್ತದಲ್ಲಿ 523 ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದ್ದು ಈ ಪೈಕಿ 387 ಕಾಮಗಾರಿಗಳು ಪೂರ್ಣಗೊಂಡಿದ್ದು, ಉಳಿದ ಕಾಮಗಾರಿಗಳು ಪ್ರಗತಿಯಲ್ಲಿವೆ ಎಂದು ತಿಳಿಸಿದರು.

ಮಾನ್ಯ ಜಿಲ್ಲಾಧಿಕಾರಿಗಳು ಬೆಳಗಾವಿ ಇವರು ಮಾತನಾಡಿ, ಮುಂದಿನ ದಿನಗಳಲ್ಲಿ ಜಿಲ್ಲೆಯಲ್ಲಿ ಜನ-ಜಾನುವಾರುಗಳಿಗೆ ಕುಡಿಯುವ ನೀರು ಸರಬರಾಜಿಗೆ ಸಮಸ್ಯೆಯಾಗದಂತೆ ನೊಡಿಕೊಳ್ಳಲು ಜಿಲ್ಲಾಡಳಿತ ಸರ್ವರೀತಿ ಸನ್ನದ್ಧವಾಗಿದೆ. ಚಿಕ್ಕೋಡಿ ತಾಲೂಕಿನಲ್ಲಿ 22 ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಗಳಿಂದ 96 ಗ್ರಾಮ/ತೋಟದ ವಸತಿಗಳು, ರಾಯಬಾಗ ತಾಲೂಕಿನಲ್ಲಿ 05 ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಗಳಿಂದ 31 ಗ್ರಾಮ/ತೋಟದ ವಸತಿಗಳು, ಅಥಣಿ ತಾಲೂಕಿನಲ್ಲಿ 06 ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಗಳಿಂದ 82 ಗ್ರಾಮ/ತೋಟದ ವಸತಿಗಳು ಹೀಗೆ ಒಟ್ಟು 33 ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಗಳಿಂದ 209 ಗ್ರಾಮ/ತೋಟದ ವಸತಿಗಳಿಗೆ ಕುಡಿಯುವ ನೀರನ್ನು ಪೂರೈಕೆ ಮಾಡಲಾಗುತ್ತಿದೆ. ಸಧ್ಯಕ್ಕೆ ಬರಗಾಲದ ತೀವ್ರತೆಯಿಂದ ಕೃಷ್ಣಾ ನದಿಯಲ್ಲಿ ನೀರಿನ ಪ್ರಮಾಣ ದಿನೇ ದಿನೇ ಕಡಿಮೆಯಾಗುತ್ತಿದ್ದು ಇದರಿಂದ ಮುಂದಿನ 3 ರಿಂದ 4 ತಿಂಗಳುಗಳವರೆಗೆ ನೀರು ಇಲ್ಲದೇ ಜನ ಜಾನುವಾರುಗಳಿಗೆ ತುಂಬಾ ಉಂಟಾಗುವ ಸಾಧ್ಯತೆಗಳು ಇರುತ್ತವೆ. ಈಗಾಗಲೇ ಅಥಣಿ ತಾಲೂಕಿನ 13 ಗ್ರಾಮಗಳ ತೋಟದ ವಸತಿಗಳು ಹಾಗು ಚಿಕ್ಕೋಡಿ ತಾಲೂಕಿನ 05 ಗ್ರಾಮಗಳ ತೋಟದ ವಸತಿಗಳಿಗೆ ಕುಡಿಯುವ ನೀರನ್ನು ಟ್ಯಾಂಕರ ಮೂಲಕ ಪೂರೈಕೆ ಮಾಡಲಾಗುತ್ತಿದೆ. ಇದೇ ರೀತಿ

ಸಮಸ್ಯೆ ಮುಂದುವರೆದಲ್ಲಿ ಮುಂಬರುವ ದಿನಗಳಲ್ಲಿ ಮೇಲಿನ ಗ್ರಾಮಗಳ್ನು ಹೊರತುಪಡಿಸಿ ಇನ್ನೂಳಿದ ಗ್ರಾಮ/ತೋಟದ ವಸತಿಗಳಿಗೆ ಕುಡಿಯುವ ನೀರನ್ನು ಟ್ಯಾಂಕರ ಮೂಲಕ ಪೂರೈಸಲು ಪ್ರಾರಂಭಿಸಬೇಕಾಗುತ್ತದೆ ಮುಂಬರುವ ದಿನಗಳಲ್ಲಿ ಚಿಕ್ಕೋಡಿ, ರಾಯಬಾಗ, ಅಥಣಿ ಹಾಗೂ ಕಾಗವಾಡ ತಾಲೂಕುಗಳಲ್ಲಿ ಉಂಟಾಗಬಹುದಾದ ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹರಿಸಲು ಮಹಾರಾಷ್ಟ್ರ ರಾಜ್ಯದ ಕೊಯ್ನಾ ಜಲಾಶಯದಿಂದ ಕೃಷ್ಣಾ ನದಿಗೆ 2 ಟಿಎಂಸಿ ನೀರು ಬಿಡುಗಡೆ ಮಾಡಲು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ ಎಂದು ತಿಳಿಸಿದರು.

ಮುಂದುವರೆದು ಜಿಲ್ಲೆಯ ಕೆಲವು ಭಾಗದಲ್ಲಿ ಮಳೆಗಾಳಿ, ಸಿಡಿಲು ಬಡಿತದಂತ ಪ್ರಕೃತಿ ವಿಕೋಪ ಘಟನೆಗಳು ಜರುಗಿರುತ್ತವೆ. ಇದರಿಂದಾಗಿ ಸಿಡಿಲು ಬಡಿತದಿಂದ 01 ಮಾನವ ಜೀವ ಹಾನಿಯಾಗಿದ್ದು, ಈಗಾಗಲೇ ರೂ.5.00ಲಕ್ಷಗಳ ಪರಿಹಾರ ಧನವನ್ನು ನೀಡಲಾಗಿದೆ. 32 ಜಾನುವಾರುಗಳು ಸಿಡಿಲು ಬಡಿತದಿಂದ ಮೃತಪಟ್ಟಿವೆ. ಇವುಗಳಲ್ಲಿ ಮೃತಪಟ್ಟ 04 ಜಾನುವಾರುಗಳ ಮಾಲೀಕರಿಗೆ ರೂ.1.20ಲಕ್ಷ, 215 ಮನೆಗಳು ಭಾಗಶಃ ಹಾನಿಯಾಗಿರುತ್ತವೆ ಇವುಗಳಲ್ಲಿ 06 ಮನೆಗಳಿಗೆ ರೂ.0.25ಲಕ್ಷ ಸಂದಾಯ ಮಾಡಿದೆ. ಉಳಿದ ಪ್ರಕರಣಗಳನ್ನು ಇತ್ಯರ್ಥಪಡಿಸಲು ಸಂಬಂಧಿಸಿದ ತಹಶೀಲ್ದಾರರಿಗೆ/ಉಪವಿಭಾಗಾಧಿಕಾರಿಗಳಿಗೆ ನಿರ್ದೇಶನವನ್ನು ನೀಡಲಾಗಿದೆ ಎಂದು ಜಿಲ್ಲಾಧಿಕಾರಿಗಳು ಸಭೆಗೆ ವಿವರಿಸಿದರು.

ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಜಲಸಂಪನ್ಮೂಲ ಇಲಾಖೆ ಹಾಗೂ ಬೆಳಗಾವಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಇವರು ಮಾತನಾಡಿ ಮುಂಜಾಗ್ರತಾ ಕ್ರಮ ಹಾಗೂ ಅನಾವೃಷ್ಟಿಯ ಕುರಿತು ಈ ಕೆಳಕಂಡ ಕ್ರಮಗಳನ್ನು ಕೈಕೊಳ್ಳುವಂತೆ ಸಭೆಗೆ ಹಾಜರಿದ್ದ ಎಲ್ಲ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ನಿರ್ದೇಶನವನ್ನು ನೀಡಿದರು

1. ಮಾನ್ಯ ಸರ್ಕಾರವು 2018-19ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಬೆಳಗಾವಿ ಜಿಲ್ಲೆಯ ಸವದತ್ತಿ, ರಾಮದುರ್ಗ, ಅಥಣಿ ತಾಲೂಕುಗಳನ್ನು ಬರಪೀಡಿತ ತಾಲೂಕುಗಳೆಂದು ಘೋಷಿಸಿರುತ್ತದೆ. ಹಾಗೂ ಹಿಂಗಾರಿ ಹಂಗಾಮಿನಲ್ಲಿ ಜಿಲ್ಲೆಯ ಎಲ್ಲ ತಾಲೂಕುಗಳನ್ನು ಬರಪೀಡಿತ ತಾಲೂಕುಗಳೆಂದು ಘೋಷಿಸಿರುತ್ತದೆ. ಈ ತಾಲೂಕುಗಳಲ್ಲಿ ಕುಡಿಯುವ ನೀರಿನ ಸಮಸ್ಯೆ, ಮೇವಿನ ಸಮಸ್ಯೆ ಉಂಟಾಗದಂತೆ ಸಂಬಂಧಿಸಿದ ಕಂದಾಯ, ಪಂಚಾಯತರಾಜ್ ಹಾಗೂ ಗ್ರಾಮೀಣಾಬಿವೃದ್ಧಿ ಪಶುಪಾಲನೆ ಇಲಾಖೆಗಳ ಸಹಯೋಗದಲ್ಲಿ ಎಲ್ಲ ಮುನ್ನೇಚ್ಚರಿಕೆಯ ಕ್ರಮಗಳನ್ನು ಕೈಗೊಳ್ಳತಕ್ಕದ್ದು.
2. ಸಧ್ಯಕ್ಕೆ ಜಿಲ್ಲೆಯ ಅಥಣಿ ತಾಲೂಕಿನ 74 ಗ್ರಾಮಗಳು, ಚಿಕ್ಕೋಡಿ ತಾಲೂಕಿನ 37 ಗ್ರಾಮಗಳು, ನಿಪ್ಪಾಣಿ ತಾಲೂಕಿನ 06 ಗ್ರಾಮಗಳು ರಾಯಬಾಗ ತಾಲೂಕಿನ 26 ಗ್ರಾಮಗಳು, ರಾಮದುರ್ಗ ತಾಲೂಕಿನ 12 ಗ್ರಾಮಗಳು, ಬೈಲಹೊಂಗಲ ತಾಲೂಕಿನ 10 ಗ್ರಾಮಗಳು, ಸವದತ್ತಿ ತಾಲೂಕಿನ 03 ಗ್ರಾಮಗಳು, ಕಿತ್ತೂರ ತಾಲೂಕಿನ 07 ಗ್ರಾಮಗಳು, ಗೋಕಾಕ ತಾಲೂಕಿನ 03 ಗ್ರಾಮಗಳು, ಬೆಳಗಾವಿ ತಾಲೂಕಿನ 12 ಗ್ರಾಮಗಳು ಹಾಗೂ ಹುಕ್ಕೇರಿ ತಾಲೂಕಿನ 07 ಗ್ರಾಮಗಳು ಹೀಗೆ ಒಟ್ಟು 197 ಗ್ರಾಮಗಳು/ ತೋಟದ ವಸತಿಗಳಿಗೆ ಟ್ಯಾಂಕರ ಮೂಲಕ ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತಿದೆ. ರಾಮದುರ್ಗ ತಾಲೂಕಿನ 05 ಗ್ರಾಮಗಳು, ಬೈಲಹೊಂಗಲ ತಾಲೂಕಿನ 09 ಗ್ರಾಮಗಳು, ಸವದತ್ತಿ ತಾಲೂಕಿನ 03 ಗ್ರಾಮಗಳು, ಕಿತ್ತೂರ ತಾಲೂಕಿನ 09 ಗ್ರಾಮಗಳು, ಗೋಕಾಕ ತಾಲೂಕಿನ 03 ಗ್ರಾಮಗಳು & ಖಾನಾಪೂರ ತಾಲೂಕಿನ 07 ಗ್ರಾಮಗಳು, ಒಟ್ಟು 36 ಗ್ರಾಮಗಳಲ್ಲಿ ಖಾಸಗಿ ಕೊಳವೆ ಬಾವಿಗಳಿಂದ ಕುಡಿಯುವ ನೀರನ್ನು ಪಡೆದು ಪೂರೈಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ಕುಡಿಯುವ ನೀರಿನ ಸಮಸ್ಯೆ

ಎದುರಿಸಬಹುದಾದ ಗ್ರಾಮಗಳನ್ನು ಗುರುತಿಸಿ, ಅಲ್ಲಿನ ಸಮಸ್ಯೆಗಳಿಗೆ ಶಾಶ್ವತ ಕ್ರಮಗಳನ್ನು ಕೈಗೊಳ್ಳಲು ಒಂದು ಕ್ರಿಯಾ ಯೋಜನೆಯನ್ನು ರೂಪಿಸಬೇಕು. ಸದರಿ ಕ್ರಿಯಾ ಯೋಜನೆಗೆ ಅನುಮೋದನೆ ಪಡೆದು ಕಾಮಗಾರಿಗಳನ್ನು ಕೈಗೊಂಡು ಸಮಸ್ಯೆಗಳು ಬರದಂತೆ ಕ್ರಮಗಳನ್ನು ಜರುಗಿಸಬೇಕು. ಕುಡಿಯುವ ನೀರಿನ ಸಮಸ್ಯೆ ಪರಿಹಾರಕ್ಕಾಗಿ ಎಲ್ಲ ಕೈಗೊಂಡ ಕ್ರಮಗಳು ವಿಫಲವಾದ ನಂತರವೇ ಕೊನೆಯ ಪರಿಹಾರದ ಕ್ರಮವಾಗಿ ಟ್ಯಾಂಕರ ಮೂಲಕ ಕುಡಿಯುವ ನೀರನ್ನು ಪೂರೈಕೆ ಮಾಡಬೇಕು ಎಂದು ಸಭೆಯಲ್ಲಿದ್ದ ಯೋಜನಾ ನಿರ್ದೇಶಕರು ನಗರಾಭಿವೃದ್ಧಿ. ಕೋಶ ಬೆಳಗಾವಿ ಮತ್ತು ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ ಬೆಳಗಾವಿ, ಚಿಕ್ಕೋಡಿ ಇವರಿಗೆ ಸೂಚನೆಗಳನ್ನು ನೀಡಿದರು.

3. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಬರಪೀಡಿತ ತಾಲೂಕುಗಳಲ್ಲಿ ಹೆಚ್ಚಿನ ಮಾನವ ದಿನಗಳನ್ನು ಸೃಜನೆಯನ್ನು ಮಾಡಿ ಉದ್ಯೋಗ ಕೇಳಿಕೊಂಡು ಬರುವ ಜನರಿಗೆ ಉದ್ಯೋಗವನ್ನು ಒದಗಿಸಬೇಕು. ಜನರು ಉದ್ಯೋಗವಿಲ್ಲದೇ ಬೇರೆ ಕಡೆಗೆ ವಲಸೆ ಹೋಗದಂತೆ ಹಾಗೂ ಯಾವುದೇ ದೂರಗಳು ಬರದಂತೆ ಎಚ್ಚರಿಕೆಯನ್ನು ವಹಿಸಬೇಕು ಎಂದು ನಿರ್ದೇಶನಗಳನ್ನು ನೀಡಲಾಯಿತು.

4. ಕಾರ್ಯನಿರ್ವಾಹಕ ಅಭಿಯಂತರು, ಗ್ರಾಕುನೀ& ನೈರ್ಮಲ್ಯ ವಿಭಾಗ, ಬೆಳಗಾವಿ. ಚಿಕ್ಕೋಡಿ ಇವರಿಗೆ ಸಿಆರ್‌ಎಫ್‌ನಡಿ ಈಗಾಗಲೇ ಅನುಮೋದನೆ ನೀಡಿದ ಎಲ್ಲ ಕಾಮಗಾರಿಗಳನ್ನು ಪೂರ್ಣಗೊಳಿಸಿ, ಉಳಿದ ಶೇ25 ರಷ್ಟು ಅನುದಾನದ ಬಿಡುಗಡೆಗಾಗಿ ಸೂಕ್ತ ದಾಖಲಾತಿಗಳೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸತಕ್ಕದ್ದು.

5. ಕಾರ್ಯನಿರ್ವಾಹಕ ಅಭಿಯಂತರು, ಗ್ರಾಕುನೀ& ನೈರ್ಮಲ್ಯ ವಿಭಾಗ. ಬೆಳಗಾವಿ, ಚಿಕ್ಕೋಡಿ ಇವರು ಟಾಸ್ಕ್‌ಪೋರ್ಸ, ಎನ್‌ಆರ್‌ಡಿಡಬ್ಲುಪಿ, ಎಮ್‌ವ್ಹಿಎಸ್ ನಲ್ಲಿನ ಎಲ್ಲ ಕಾಮಗಾರಿಗಳನ್ನು ಆದಷ್ಟು ಬೇಗನೆ ಪೂರ್ಣಗೊಳಿಸಿ ಮುಂಬರುವ ಬೇಸಿಗೆಯಲ್ಲಿ ಜನ-ಜಾನುವಾರುಗಳಿಗೆ ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ಅವಶ್ಯಕವಿರುವ ಎಲ್ಲ ಕ್ರಮಗಳನ್ನು ಕೈಗೊಳ್ಳತಕ್ಕದ್ದು, ಅನವಶ್ಯಕವಾಗಿ ಟ್ಯಾಂಕರ ಮೂಲಕ ನೀರು ಪೂರೈಕೆ ಮಾಡುವುದನ್ನು ತಪ್ಪಿಸಲು ಮುನ್ನೇಚ್ಚರಿಕೆ ಕ್ರಮಗಳನ್ನು ಜರುಗಿಸಬೇಕು.

6. ನಗರ ಪ್ರದೇಶಗಳಿಗೆ ಸಂಬಂಧಿಸಿದಂತೆ ಯೋಜನಾ ನಿರ್ದೇಶಕರು ನಗರಾಭಿವೃದ್ಧಿ, ಕೋಶ ಬೆಳಗಾವಿ ಇವರು ಕುಡಿಯುವ ನೀರು ಕಾಮಗಾರಿಗಳಿಗೆ ಸಂಬಂಧಿಸಿದಂತೆ ಸರ್ಕಾರದಿಂದ ಬಿಡುಗಡೆಯಾದ ಅನುದಾನವನ್ನು ಸದುಪಯೋಗ ಪಡಿಸಿಕೊಂಡು ಕಾಮಗಾರಿಯನ್ನು ಆದಷ್ಟು ಬೇಗನೆ ಪೂರ್ಣಗೊಳಿಸಬೇಕು. ಕುಡಿಯುವ ನೀರಿನ ಸಮಸ್ಯೆಯಾಗದಂತೆ ಅಗತ್ಯ ಕ್ರಮ ಜರುಗಿಸತಕ್ಕದ್ದು.

7. ಇತ್ತೀಚಿಗೆ ಜಿಲ್ಲೆಯ ಕೆಲವು ಭಾಗಗಳಲ್ಲಿ ಗಾಳಿ ಮಳೆಯಿಂದ, ಸಿಡಿಲು ಬಡಿತದಿಂದ ಉಂಟಾದ ಹಾನಿಗಳಿಗೆ ಸಂಬಂಧಿಸಿದಂತೆ, ಪರಿಹಾರ ಧನ ವಿತರಿಸಲು ಬಾಕಿಯಿರುವ ಎಲ್ಲ ಪ್ರಕರಣಗಳನ್ನು

ನಿಯಮಾನುಸಾರ ಇತ್ಯರ್ಥಪಡಿಸಿ, ಸೂಕ್ತ ಪರಿಹಾರ ದನವನ್ನು ವಿತರಿಸಲು ಜಿಲ್ಲೆಯ ಎಲ್ಲಾ ಉಪವಿಭಾಗಾಧಿಕಾರಿಗಳು/ತಹಶೀಲ್ದಾರರು ಕ್ರಮ ಜರುಗಿಸತಕ್ಕದ್ದು.

ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಜಲಸಂಪನ್ಮೂಲ ಇಲಾಖೆ ಹಾಗೂ ಬೆಳಗಾವಿ
ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು
ವಿಭಾಗ,ಬೆಳಗಾವಿ

ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಜಲಸಂಪನ್ಮೂಲ ಇಲಾಖೆ ಹಾಗೂ ಬೆಳಗಾವಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಇವರ ಅಧ್ಯಕ್ಷತೆಯಲ್ಲಿ ದಿನಾಂಕ:09.07.2019 ರಂದು ಮುಂಜಾನೆ 11.00 ಗಂಟೆಗೆ ಬರಗಾಲ ಪರಿಸ್ಥಿತಿಯ ಕುರಿತು ಪರಿಶೀಲನಾ ಸಭೆಯ ನಡುವಳಿಗಳು.

ಸಭೆಗೆ ಹಾಜರಿದ್ದ ಅಧಿಕಾರಿಗಳು:

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ ಬೆಳಗಾವಿ.
2. ಅಪರ ಜಿಲ್ಲಾಧಿಕಾರಿಗಳು, ಬೆಳಗಾವಿ
3. ಆಯುಕ್ತರು, ಮಹಾನಗರ ಪಾಲಿಕೆ, ಬೆಳಗಾವಿ
4. ಯೋಜನಾ ನಿರ್ದೇಶಕರು, ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬೆಳಗಾವಿ.
5. ಉಪವಿಭಾಗಾಧಿಕಾರಿಗಳು, ಬೆಳಗಾವಿ, ಬೈಲಹೊಂಗಲ, ಚಿಕ್ಕೋಡಿ.
6. ಅಧೀಕ್ಷಕ ಅಭಿಯಂತರರು, ಹೆಸ್ಕಾಂ ಬೆಳಗಾವಿ,ಚಿಕ್ಕೋಡಿ.
7. ಜಂಟಿ ಕೃಷಿ ನಿರ್ದೇಶಕರು, ಬೆಳಗಾವಿ.
8. ಉಪ-ನಿರ್ದೇಶಕರು, ಪಶು ಪಾಲನೆ ಇಲಾಖೆ, ಬೆಳಗಾವಿ.
9. ಉಪ-ನಿರ್ದೇಶಕರು, ಆಹಾರ ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಇಲಾಖೆ, ಬೆಳಗಾವಿ.
10. ಜಿಲ್ಲಾ ಆರೋಗ್ಯ ಕುಟುಂಬ ಕಲ್ಯಾಣ ಅಧಿಕಾರಿಗಳು, ಬೆಳಗಾವಿ .
11. ಅಪರ ಜಿಲ್ಲಾ ಆರೋಗ್ಯ ಕುಟುಂಬ ಕಲ್ಯಾಣ ಅಧಿಕಾರಿಗಳು, ಚಿಕ್ಕೋಡಿ
12. ಉಪ-ನಿರ್ದೇಶಕರು ತೋಟಗಾರಿಕೆ ಬೆಳಗಾವಿ.
13. ಉಪ-ನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆ ಬೆಳಗಾವಿ.
14. ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು ಬೆಳಗಾವಿ.
15. ಉಪ-ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ಬೆಳಗಾವಿ, ಚಿಕ್ಕೋಡಿ.
16. ಉಪ-ನಿರ್ದೇಶಕರು ವಾರ್ತಾ ಮತ್ತು ಪ್ರಚಾರ ಇಲಾಖೆ ಬೆಳಗಾವಿ.
17. ಅಧೀಕ್ಷಕ ಅಭಿಯಂತರರು, ಕನೀನಿನಿ ಜಿಆರ್‌ಬಿಸಿಸಿ ವೃತ್ತ ಹಿಡಕಲ್ ಡ್ಯಾಂ
18. ಅಧೀಕ್ಷಕ ಅಭಿಯಂತರರು, ಕನೀನಿನಿ ಜಿಆರ್‌ಬಿಸಿಸಿ ವೃತ್ತ ನವಿಲುತೀರ್ಥ .
19. ಕಾರ್ಯನಿರ್ವಾಹಕ ಅಭಿಯಂತರು, ಗ್ರಾಕುನೀ& ನೈರ್ಮಲ್ಯ ವಿಭಾಗ, ಬೆಳಗಾವಿ, ಚಿಕ್ಕೋಡಿ.
20. ತಹಶೀಲ್ದಾರರು, ಬೆಳಗಾವಿ, ಖಾನಾಪೂರ, ಹುಕ್ಕೇರಿ, ಬೈಲಹೊಂಗಲ, ಕಿತ್ತೂರು, ಸವದತ್ತಿ, ರಾಮದುರ್ಗ, ಗೋಕಾಕ, ಚಿಕ್ಕೋಡಿ, ರಾಯಬಾಗ, ಅಥಣಿ, ಮೂಡಲಗಿ, ಕಾಗವಾಡ, ನಿಪ್ಪಾಣಿ.

ಸಭೆಯ ಪ್ರಾರಂಭದಲ್ಲಿ ಹಾಜರಿದ್ದ ಎಲ್ಲ ಅಧಿಕಾರಿಗಳವರನ್ನು ಅಪರ ಜಿಲ್ಲಾಧಿಕಾರಿಗಳು ಬೆಳಗಾವಿ ಇವರು ಅಭಿನಂದಿಸಿ ಸಭೆಯನ್ನು ಪ್ರಾರಂಭಿಸಿದರು. ಬೆಳಗಾವಿ ಜಿಲ್ಲೆಯ ಕುರಿತು ಸಾಮಾನ್ಯ ಮಾಹಿತಿ ಹಾಗೂ ಋತುಮಾನ ಪರಿಸ್ಥಿತಿಯ ಬಗ್ಗೆ ಸಭೆಗೆ ಮಾಹಿತಿಯನ್ನು ನೀಡಿದರು.

ಜಿಲ್ಲೆಯಲ್ಲಿ ಆಗಿರುವ ಮಳೆಯ ವಿವರವನ್ನು ಜಂಟಿ ಕೃಷಿ ನಿರ್ದೇಶಕರು, ಬೆಳಗಾವಿ ಇವರು ಮಾರ್ಚ 2019 ರಿಂದ ಮೇ 2019ರವರೆಗೆ 105.9 ಮಿಮೀ ವಾಡಿಕೆ ಮಳೆಯಾಗಿದ್ದು, 30.9ಮಿಮೀ ವಾಸ್ತವಿಕ ಮಳೆ ಆಗಿರುತ್ತದೆ. ಶೇ-71ರಷ್ಟು ಕೊರತೆಯಿರುತ್ತದೆ. ಜೂನ್ 2019ರಿಂದ ಜುಲೈ 2019ವರೆಗೆ 168.00 ಮಿಮೀ ವಾಡಿಕೆ ಮಳೆಯಾಗಿದ್ದು, 165.00 ಮಿಮೀ ವಾಸ್ತವಿಕ ಮಳೆ ಆಗಿರುತ್ತದೆ. ಶೇ-2ರಷ್ಟು ಕೊರತೆಯಿರುತ್ತದೆ. 2019ನೇ ಮುಂಗಾರು ಹಂಗಾಮಿನಲ್ಲಿ 718351 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಗುರಿ ಹೊಂದಿದ್ದು, ಇದರಲ್ಲಿ

408640 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿದ್ದು, 56.9% ರಷ್ಟು ಬಿತ್ತನೆ ಆಗಿದೆ ಎಂದು ಸಭೆಗೆ ತಿಳಿಸಿದರು. ಉಪನಿರ್ದೇಶಕರು ತೋಟಗಾರಿಕೆ ಇಲಾಖೆ ಬೆಳಗಾವಿ ಇವರು 9428 ಹೆಕ್ಟೇರ್ ಪ್ರದೇಶ ಬಿತ್ತನೆ ಗುರಿ ಹೊಂದಿದ್ದು, 2062 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿದೆ ಎಂದು ಸಭೆಗೆ ವಿವರಿಸಿದರು. ಜಂಟಿ ಕೃಷಿ ನಿರ್ದೇಶಕರು, ಬೆಳಗಾವಿ ಇವರು ದಿನಾಂಕ:01.04.2018 ರಿಂದ 31.05.2019ರವರೆಗೆ 104 ರೈತರ ಆತ್ಮಹತ್ಯೆ ಪ್ರಕರಣಗಳಾಗಿದ್ದು, ಇದರಲ್ಲಿ 80 ಪ್ರಕರಣಗಳನ್ನು ಅಂಗೀಕರಿಸಲಾಗಿದೆ. 17 ಪ್ರಕರಣಗಳನ್ನು ತಿರಸ್ಕರಿಸಲಾಗಿದೆ. 7 ಪ್ರಕರಣಗಳನ್ನು ಇತ್ಯರ್ಥಪಡಿಸಬೇಕಾಗಿರುತ್ತದೆ. ಅಂಗೀಕೃತವಾದ 80 ಪ್ರಕರಣಗಳಲ್ಲಿ ಪರಿಹಾರವನ್ನು ನೀಡಲಾಗಿದೆ ಎಂದು ಸಭೆಗೆ ವಿವರಿಸಿದರು

ಉಪನಿರ್ದೇಶಕರು, ಪಶು ಪಾಲನೆ & ಪಶುವೈದ್ಯಕೀಯ ಸೇವಾ ಇಲಾಖೆ ಬೆಳಗಾವಿ ಇವರು ಬೆಳಗಾವಿ ಜಿಲ್ಲೆಯಲ್ಲಿ 2012ರ ಜಾನುವಾರುಗಳ ಗಣತಿಯಂತೆ ಒಟ್ಟು 14.22ಲಕ್ಷ ಜಾನುವಾರುಗಳಿದ್ದು, ರೈತರಲ್ಲಿ ಅಂದಾಜು 06ವಾರಗಳಿಗೆ ಸಾಕಾಗುವಷ್ಟು ಮೇವು ಲಭ್ಯತೆಯಿರುತ್ತದೆ. ಪ್ರಸ್ತುತ ಜಿಲ್ಲೆಯಲ್ಲಿ ಅಥಣಿ ತಾಲೂಕಿನ 28 ಗ್ರಾಮಗಳಲ್ಲಿ ಹಾಗೂ ಚಿಕ್ಕೋಡಿ ತಾಲೂಕಿನ 07 ಗ್ರಾಮಗಳು, ಹುಕ್ಕೇರಿ ತಾಲೂಕಿನಲ್ಲಿ 02 ಗ್ರಾಮಗಳಲ್ಲಿ ಮತ್ತು ನಿಪ್ಪಾಣಿ, ಬೈಲಹೊಂಗಲ, ರಾಮದುರ್ಗ, ಖಾನಾಪೂರ, ಗೋಕಾಕ, ಬೆಳಗಾವಿ, ಮೂಡಲಗಿ ತಾಲೂಕುಗಳಲ್ಲಿ ತಲಾ ಒಂದರಂತೆ -07 ಗ್ರಾಮಗಳಲ್ಲಿ ಹೀಗೆ ಒಟ್ಟು 44 ಗ್ರಾಮಗಳಲ್ಲಿ ಮೇವು ಬ್ಯಾಂಕುಗಳನ್ನು ತೆರೆಯಲಾಗಿದೆ.

ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ ಚಿಕ್ಕೋಡಿ. ಬೆಳಗಾವಿ ಇವರು ಮಾತನಾಡಿ ಪ್ರಸ್ತುತವಾಗಿ ಜಿಲ್ಲೆಯ ಅಥಣಿ ತಾಲೂಕಿನ 35 ಗ್ರಾಮಗಳು, ಚಿಕ್ಕೋಡಿ ತಾಲೂಕಿನ 05 ಗ್ರಾಮಗಳು, ರಾಯಬಾಗ ತಾಲೂಕಿನ 06 ಗ್ರಾಮಗಳು, ರಾಮದುರ್ಗ ತಾಲೂಕಿನ 09 ಗ್ರಾಮಗಳು, ಬೈಲಹೊಂಗಲ ತಾಲೂಕಿನ 12 ಗ್ರಾಮಗಳು, ಸವದತ್ತಿ ತಾಲೂಕಿನ 03 ಗ್ರಾಮಗಳು, ಕಿತ್ತೂರ ತಾಲೂಕಿನ 07 ಗ್ರಾಮಗಳು, ಗೋಕಾಕ ತಾಲೂಕಿನ 03 ಗ್ರಾಮಗಳು, ಹಾಗೂ ಹುಕ್ಕೇರಿ ತಾಲೂಕಿನ 08 ಗ್ರಾಮಗಳು ಹೀಗೆ ಒಟ್ಟು 88 ಗ್ರಾಮಗಳು/ ತೋಟದ ವಸತಿಗಳಿಗೆ ಟ್ಯಾಂಕರ ಮೂಲಕ ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತಿದೆ. ರಾಮದುರ್ಗ ತಾಲೂಕಿನ 03 ಗ್ರಾಮಗಳು, ಬೈಲಹೊಂಗಲ ತಾಲೂಕಿನ 09 ಗ್ರಾಮಗಳು, ಸವದತ್ತಿ ತಾಲೂಕಿನ 03 ಗ್ರಾಮಗಳು, ಕಿತ್ತೂರ ತಾಲೂಕಿನ 09 ಗ್ರಾಮಗಳು, ಗೋಕಾಕ ತಾಲೂಕಿನ 03 ಗ್ರಾಮಗಳು, ಹಾಗೂ ಖಾನಾಪೂರ ತಾಲೂಕಿನ 07 ಗ್ರಾಮಗಳು, ಒಟ್ಟು 34 ಗ್ರಾಮಗಳಲ್ಲಿ ಖಾಸಗಿ ಕೊಳವೆ ಬಾವಿಗಳಿಂದ ಕುಡಿಯುವ ನೀರನ್ನು ಪಡೆದು ಪೂರೈಸಲಾಗುತ್ತಿದೆ ಎಂದು ಸಭೆಗೆ ವಿವರಿಸಿದರು.

ಮುಂದುವರೆದು ಕಾರ್ಯನಿರ್ವಾಹಕ ಅಭಿಯಂತರರು ಗ್ರಾ.ಕು.ನೀ & ನೈ ವಿಭಾಗ ಬೆಳಗಾವಿ ಇವರು ಮಾತನಾಡಿ ಮುಂಬರುವ ದಿನಗಳಲ್ಲಿ ಜಿಲ್ಲೆಯಾದ್ಯಂತ ಟ್ಯಾಂಕರ ಮೂಲಕ ಕುಡಿಯುವ ನೀರು ಸರಬರಾಜು ಮಾಡಬಹುದಾದ ಸಮಸ್ಯಾತ್ಮಕ ಗ್ರಾಮಗಳನ್ನು ಗುರುತಿಸಿ, 150 ದಿನಗಳ ಕ್ರಿಯಾ ಯೋಜನೆಯನ್ನು ತಯಾರಿಸಲಾಗಿದೆ ಹಾಗೂ ಪ್ರತಿಯೊಂದು ಗ್ರಾಮದಲ್ಲಿ ಲಭ್ಯವಿರುವ ಹಾಗೂ ತುರ್ತು ಸಂದರ್ಭದಲ್ಲಿ ಬಾಡಿಗೆ ಆಧಾರದಲ್ಲಿ ತೆಗೆದುಕೊಳ್ಳಬಹುದಾದ ಖಾಸಗಿ ಕೊಳವೆ ಭಾವಿಗಳನ್ನು ಗುರುತಿಸಲಾಗಿದೆ ಎಂದು ತಿಳಿಸಿದರು.

ಸಿ.ಆರ್.ಎಫ್ ಅಡಿಯಲ್ಲಿ ಈಗಾಗಲೇ ರೂ.488.80 ಲಕ್ಷಗಳ ಅಂದಾಜು ಮೊತ್ತದಲ್ಲಿ ಒಟ್ಟು 361 ಕಾಮಗಾರಿಗಳನ್ನು ಅನುಮೋದನೆಯನ್ನು ನೀಡಿ, ಶೇ 75ರಷ್ಟು ಅನುದಾನವನ್ನು ಅನುಷ್ಠಾನಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿದೆ. ಈ ಪೈಕಿ 257 ಕಾಮಗಾರಿಗಳು ಪೂರ್ಣಗೊಂಡಿರುತ್ತವೆ ಹಾಗೂ 94

ಕಾಮಗಾರಿಗಳು ಪ್ರಗತಿಯಲ್ಲಿವೆ. ತುರ್ತು ಕಾಮಗಾರಿಗಳ (ಟಾಸ್ಕ್ ಫೋರ್ಸ್) ಯೋಜನೆಯಡಿ ರೂ.975.00 ಲಕ್ಷಗಳ ಅಂದಾಜು ಮೊತ್ತದಲ್ಲಿ 523 ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದ್ದು ಈ ಪೈಕಿ 507 ಕಾಮಗಾರಿಗಳು ಪೂರ್ಣಗೊಂಡಿದ್ದು, ಉಳಿದ ಕಾಮಗಾರಿಗಳು ಪ್ರಗತಿಯಲ್ಲಿವೆ ಎಂದು ತಿಳಿಸಿದರು. ಯೋಜನಾ ನಿರ್ದೇಶಕರು, ನಗರಾಭಿವೃದ್ಧಿ ಕೋಶ ಇವರು ಮಾತನಾಡಿ ಕುಡಿಯುವ ನೀರು ಸರಬರಾಜು ಕುರಿತು ಒಟ್ಟು ರೂ2098.09ಲಕ್ಷ ಅನುದಾನ ಲಭ್ಯವಿರುತ್ತದೆ ಇದರಲ್ಲಿ ಈವರೆಗೆ ರೂ 102.62 ಲಕ್ಷಗಳನ್ನು ಖರ್ಚು ಮಾಡಲಾಗಿದೆ ಎಂದು ವಿವರಿಸಿದರು.

ಮುಂದುವರೆದು ಜಿಲ್ಲೆಯ ಕೆಲವು ಭಾಗದಲ್ಲಿ ಮಳೆಗಾಳಿ. ಸಿಡಿಲು ಬಡಿತದಂತ ಪ್ರಕೃತಿ ವಿಕೋಪ ಘಟನೆಗಳು ಜರುಗಿರುತ್ತವೆ. ಇದರಿಂದಾಗಿ ಸಿಡಿಲು ಬಡಿತದಿಂದ 01 ಮಾನವ ಜೀವ ಹಾನಿಯಾಗಿದ್ದು, ಈಗಾಗಲೇ ರೂ.5.00ಲಕ್ಷಗಳ ಪರಿಹಾರ ಧನವನ್ನು ನೀಡಲಾಗಿದೆ. 32 ಜಾನುವಾರುಗಳು ಸಿಡಿಲು ಬಡಿತದಿಂದ ಮೃತಪಟ್ಟಿವೆ. ಇವುಗಳಲ್ಲಿ ಮೃತಪಟ್ಟ 04 ಜಾನುವಾರುಗಳ ಮಾಲೀಕರಿಗೆ ರೂ.1.20ಲಕ್ಷ, 215 ಮನೆಗಳು ಭಾಗಶ: ಹಾನಿಯಾಗಿರುತ್ತವೆ. ಇವುಗಳಲ್ಲಿ 06 ಮನೆಗಳಿಗೆ ರೂ.0.25ಲಕ್ಷ ಸಂದಾಯ ಮಾಡಿದೆ. ಉಳಿದ ಪ್ರಕರಣಗಳನ್ನು ಇತ್ಯರ್ಥಪಡಿಸಲು ಸಂಬಂಧಿಸಿದ ತಹಶೀಲ್ದಾರರಿಗೆ/ಉಪವಿಭಾಗಾಧಿಕಾರಿಗಳಿಗೆ ನಿರ್ದೇಶನವನ್ನು ನೀಡಲಾಗಿದೆ ಎಂದು ಜಿಲ್ಲಾಧಿಕಾರಿಗಳು ಸಭೆಗೆ ವಿವರಿಸಿದರು.

ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಜಲಸಂಪನ್ಮೂಲ ಇಲಾಖೆ ಹಾಗೂ ಬೆಳಗಾವಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಇವರು ಮಾತನಾಡಿ ಮುಂಜಾಗೃತಾ ಕ್ರಮ ಹಾಗೂ ಅನಾವೃಷ್ಠಿಯ ಕುರಿತು ಈ ಕೆಳಕಂಡ ಕ್ರಮಗಳನ್ನು ಕೈಕೊಳ್ಳುವಂತೆ ಸಭೆಗೆ ಹಾಜರಿದ್ದ ಎಲ್ಲ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ನಿರ್ದೇಶನವನ್ನು ನೀಡಿದರು.

1. ಮಾನ್ಯ ಸರ್ಕಾರವು 2018-19ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಬೆಳಗಾವಿ ಜಿಲ್ಲೆಯ ಸವದತ್ತಿ, ರಾಮದುರ್ಗ, ಅಥಣಿ ತಾಲೂಕುಗಳನ್ನು ಬರಪೀಡಿತ ತಾಲೂಕುಗಳೆಂದು ಘೋಷಿಸಿರುತ್ತದೆ. ಹಾಗೂ ಹಿಂಗಾರಿ ಹಂಗಾಮಿನಲ್ಲಿ ಜಿಲ್ಲೆಯ ಎಲ್ಲ ತಾಲೂಕುಗಳನ್ನು ಬರಪೀಡಿತ ತಾಲೂಕುಗಳೆಂದು ಘೋಷಿಸಿರುತ್ತದೆ. ಈ ತಾಲೂಕುಗಳಲ್ಲಿ ಕುಡಿಯುವ ನೀರಿನ ಸಮಸ್ಯೆ, ಮೇವಿನ ಸಮಸ್ಯೆ ಉಂಟಾಗದಂತೆ ಸಂಬಂಧಿಸಿದ ಕಂದಾಯ, ಪಂಚಾಯತರಾಜ್ ಹಾಗೂ ಗ್ರಾಮೀಣಾಭಿವೃದ್ಧಿ ಪಶುಪಾಲನೆ ಇಲಾಖೆಗಳ ಸಹಯೋಗದಲ್ಲಿ ಎಲ್ಲ ಮುನ್ನೆಚ್ಚರಿಕೆಯ ಕ್ರಮಗಳನ್ನು ಕೈಗೊಳ್ಳತಕ್ಕದ್ದು.
2. ಸಧ್ಯಕ್ಕೆ ಜಿಲ್ಲೆಯ ಅಥಣಿ ತಾಲೂಕಿನ 35 ಗ್ರಾಮಗಳು, ಚಿಕ್ಕೋಡಿ ತಾಲೂಕಿನ 05 ಗ್ರಾಮಗಳು, ರಾಯಬಾಗ ತಾಲೂಕಿನ 06 ಗ್ರಾಮಗಳು, ರಾಮದುರ್ಗ ತಾಲೂಕಿನ 09 ಗ್ರಾಮಗಳು, ಬೈಲಹೊಂಗಲ ತಾಲೂಕಿನ 12 ಗ್ರಾಮಗಳು, ಸವದತ್ತಿ ತಾಲೂಕಿನ 03 ಗ್ರಾಮಗಳು, ಕಿತ್ತೂರ ತಾಲೂಕಿನ 07 ಗ್ರಾಮಗಳು, ಗೋಕಾಕ ತಾಲೂಕಿನ 03 ಗ್ರಾಮಗಳು, ಹಾಗೂ ಹುಕ್ಕೇರಿ ತಾಲೂಕಿನ 08 ಗ್ರಾಮಗಳು ಹೀಗೆ ಒಟ್ಟು 88 ಗ್ರಾಮಗಳು/ ತೋಟದ ವಸತಿಗಳಿಗೆ ಟ್ಯಾಂಕರ ಮೂಲಕ ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತಿದೆ. ರಾಮದುರ್ಗ ತಾಲೂಕಿನ 03 ಗ್ರಾಮಗಳು, ಬೈಲಹೊಂಗಲ ತಾಲೂಕಿನ 09 ಗ್ರಾಮಗಳು, ಸವದತ್ತಿ ತಾಲೂಕಿನ 03 ಗ್ರಾಮಗಳು, ಕಿತ್ತೂರ ತಾಲೂಕಿನ 09 ಗ್ರಾಮಗಳು, ಗೋಕಾಕ ತಾಲೂಕಿನ 03 ಗ್ರಾಮಗಳು, ಹಾಗೂ ಖಾನಾಪೂರ ತಾಲೂಕಿನ 07 ಗ್ರಾಮಗಳು, ಒಟ್ಟು 34 ಗ್ರಾಮಗಳಲ್ಲಿ ಖಾಸಗಿ ಕೊಳವೆ ಬಾವಿಗಳಿಂದ ಕುಡಿಯುವ ನೀರನ್ನು ಪಡೆದು ಪೂರೈಸಲಾಗುತ್ತಿದೆ. ಮುಂದಿನ ದಿನಗಳಲ್ಲಿ

ಕುಡಿಯುವ ನೀರಿನ ಸಮಸ್ಯೆ ಎದುರಿಸಬಹುದಾದ ಗ್ರಾಮಗಳನ್ನು ಗುರುತಿಸಿ, ಅಲ್ಲಿನ ಸಮಸ್ಯೆಗಳಿಗೆ ಶಾಶ್ವತ ಕ್ರಮಗಳನ್ನು ಕೈಗೊಳ್ಳಲು ಒಂದು ಕ್ರಿಯಾ ಯೋಜನೆಯನ್ನು ರೂಪಿಸಬೇಕು. ಸದರಿ ಕ್ರಿಯಾ ಯೋಜನೆಗೆ ಅನುಮೋದನೆ ಪಡೆದು ಕಾಮಗಾರಿಗಳನ್ನು ಕೈಗೊಂಡು ಸಮಸ್ಯೆಗಳು ಬರದಂತ ಕ್ರಮಗಳನ್ನು ಜರುಗಿಸಬೇಕು. ಕುಡಿಯುವ ನೀರಿನ ಸಮಸ್ಯೆ ಪರಿಹಾರಕ್ಕಾಗಿ ಎಲ್ಲ ಕೈಗೊಂಡ ಕ್ರಮಗಳು ವಿಫಲವಾದ ನಂತರವೇ ಕೊನೆಯ ಪರಿಹಾರದ ಕ್ರಮವಾಗಿ ಟ್ಯಾಂಕರ ಮೂಲಕ ಕುಡಿಯುವ ನೀರನ್ನು ಪೂರೈಕೆ ಮಾಡಬೇಕು ಎಂದು ಸಭೆಯಲ್ಲಿದ್ದ ಯೋಜನಾ ನಿರ್ದೇಶಕರು ನಗರಾಭಿವೃದ್ಧಿ, ಕೋಶ ಬೆಳಗಾವಿ ಮತ್ತು ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ ಬೆಳಗಾವಿ, ಚಿಕ್ಕೋಡಿ ಇವರಿಗೆ ಸೂಚನೆಗಳನ್ನು ನೀಡಿದರು.

3. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಬರಪೀಡಿತ ತಾಲೂಕುಗಳಲ್ಲಿ ಹೆಚ್ಚಿನ ಮಾನವ ದಿನಗಳನ್ನು ಸೃಜನೆಯನ್ನು ಮಾಡಿ ಉದ್ಯೋಗ ಕೇಳಿಕೊಂಡು ಬರುವ ಜನರಿಗೆ ಉದ್ಯೋಗವನ್ನು ಒದಗಿಸಬೇಕು. ಜನರು ಉದ್ಯೋಗವಿಲ್ಲದೇ ಬೇರೆ ಕಡೆಗೆ ವಲಸೆ ಹೋಗದಂತೆ ಹಾಗೂ ಯಾವುದೇ ದೂರಗಳು ಬರದಂತೆ ಎಚ್ಚರಿಕೆಯನ್ನು ವಹಿಸಬೇಕು ಎಂದು ನಿರ್ದೇಶನಗಳನ್ನು ನೀಡಲಾಯಿತು.

4. ಕಾರ್ಯನಿರ್ವಾಹಕ ಅಭಿಯಂತರು, ಗ್ರಾಕುನೀ& ನೈರ್ಮಲ್ಯ ವಿಭಾಗ, ಬೆಳಗಾವಿ, ಚಿಕ್ಕೋಡಿ ಇವರಿಗೆ ಸಿಆರ್‌ಎಫ್‌ನಡಿ ಈಗಾಗಲೇ ಅನುಮೋದನೆ ನೀಡಿದ ಎಲ್ಲ ಕಾಮಗಾರಿಗಳನ್ನು ಪೂರ್ಣಗೊಳಿಸಿ, ಉಳಿದ ಶೇ25 ರಷ್ಟು ಅನುದಾನದ ಬಿಡುಗಡೆಗಾಗಿ ಸೂಕ್ತ ದಾಖಲಾತಿಗಳೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸತಕ್ಕದ್ದು.

5. ಕಾರ್ಯನಿರ್ವಾಹಕ ಅಭಿಯಂತರು, ಗ್ರಾಕುನೀ& ನೈರ್ಮಲ್ಯ ವಿಭಾಗ, ಬೆಳಗಾವಿ, ಚಿಕ್ಕೋಡಿ ಇವರು ಟಾಸ್ಕ್‌ಫೋರ್ಸ್, ಎನ್‌ಆರ್‌ಡಿಡಬ್ಲುಪಿ, ಎಮ್‌ವ್ಹಿಎಸ್ ನಲ್ಲಿನ ಎಲ್ಲ ಕಾಮಗಾರಿಗಳನ್ನು ಆದಷ್ಟು ಬೇಗನೆ ಪೂರ್ಣಗೊಳಿಸಿ ಮುಂಬರುವ ಬೇಸಿಗೆಯಲ್ಲಿ ಜನ-ಜಾನುವಾರುಗಳಿಗೆ ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ಅವಶ್ಯಕವಿರುವ ಎಲ್ಲ ಕ್ರಮಗಳನ್ನು ಕೈಗೊಳ್ಳತಕ್ಕದ್ದು, ಅನವಶ್ಯಕವಾಗಿ ಟ್ಯಾಂಕರ ಮೂಲಕ ನೀರು ಪೂರೈಕೆ ಮಾಡುವುದನ್ನು ತಪ್ಪಿಸಲು ಮುನ್ನೆಚ್ಚರಿಕೆ ಕ್ರಮಗಳನ್ನು ಜರುಗಿಸಬೇಕು.

6. ನಗರ ಪ್ರದೇಶಗಳಿಗೆ ಸಂಬಂಧಿಸಿದಂತೆ ಯೋಜನಾ ನಿರ್ದೇಶಕರು ನಗರಾಭಿವೃದ್ಧಿ, ಕೋಶ ಬೆಳಗಾವಿ ಇವರು ಕುಡಿಯುವ ನೀರು ಕಾಮಗಾರಿಗಳಿಗೆ ಸಂಬಂಧಿಸಿದಂತೆ ಸರ್ಕಾರದಿಂದ ಬಿಡುಗಡೆಯಾದ ಅನುದಾನವನ್ನು ಸದುಪಯೋಗ ಪಡಿಸಿಕೊಂಡು ಕಾಮಗಾರಿಯನ್ನು ಆದಷ್ಟು ಬೇಗನೆ ಪೂರ್ಣಗೊಳಿಸಬೇಕು. ಕುಡಿಯುವ ನೀರಿನ ಸಮಸ್ಯೆಯಾಗದಂತೆ ಅಗತ್ಯ ಕ್ರಮ ಜರುಗಿಸತಕ್ಕದ್ದು.

7. ಇತ್ತೀಚೆಗೆ ಜಿಲ್ಲೆಯ ಕೆಲವು ಭಾಗಗಳಲ್ಲಿ ಗಾಳಿ ಮಳೆಯಿಂದ, ಸಿಡಿಲು ಬಡಿತದಿಂದ ಉಂಟಾದ ಹಾನಿಗಳಿಗೆ ಸಂಬಂಧಿಸಿದಂತೆ, ಪರಿಹಾರ ಧನ ವಿತರಿಸಲು ಬಾಕಿಯಿರುವ ಎಲ್ಲ ಪ್ರಕರಣಗಳನ್ನು

ನಿಯಮಾನುಸಾರ ಇತ್ಯರ್ಥಪಡಿಸಿ, ಸೂಕ್ತ ಪರಿಹಾರ ಧನವನ್ನು ವಿತರಿಸಲು ಜಿಲ್ಲೆಯ ಎಲ್ಲ ಉಪವಿಭಾಗಾಧಿಕಾರಿಗಳು/ತಹಶೀಲ್ದಾರರು ಕ್ರಮ ಜರುಗಿಸತಕ್ಕದ್ದು.

ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಜಲಸಂಪನ್ಮೂಲ ಇಲಾಖೆ ಹಾಗೂ ಬೆಳಗಾವಿ
ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು
ವಿಭಾಗ,ಬೆಳಗಾವಿ

**ಚಿಕ್ಕಮಗಳೂರು ಜಿಲ್ಲೆಯ ಹವಾಮಾನ ಸ್ಥಿತಿ, ಕೃಷಿ, ತೋಟಗಾರಿಕೆ ಬೆಳೆಗಳ ಸ್ಥಿತಿ, ಮೇವು ಸ್ಥಿತಿ, ಪಿ.ಎಂ.ಕಿಸಾನ್ ಪ್ರಗತಿ ಹಾಗೂ ಪ್ರಕೃತಿ ವಿಕೋಪ ಪರಿಹಾರ ವಿಷಯಗಳ ಕುರಿತು ನಡೆಸಲಾದ ಸಭಾ ನಡವಳಿಗಳು**

---

**ಅಧ್ಯಕ್ಷತೆ**

**ಶ್ರೀ ರಾಜೀವ್ ಚಾವ್ಲಾ, ಭಾ ಆ ಸೇ.,**
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಸಿ.ಆ.ಸು.ಇ (ಇ-ಆಡಳಿತ), ಮಿಷನ್ ನಿರ್ದೇಶಕರು ಸಕಾಲ
ಹಾಗೂ ಚಿಕ್ಕಮಗಳೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು

**ಸ್ಥಳ**

**ಜಿಲ್ಲಾಧಿಕಾರಿಗಳ ಕಚೇರಿ**
**ಸಭಾಂಗಣ, ಚಿಕ್ಕಮಗಳೂರು**

**ದಿನಾಂಕ: 10.07.2019**
**ಬೆಳಿಗ್ಗೆ 11.00 ಗಂಟೆ**

**ಉಪಸ್ಥಿತಿ**

**ಡಾ:ಬಗಾದಿ ಗೌತಮ್, ಭಾ ಆ ಸೇ.,**
ಜಿಲ್ಲಾಧಿಕಾರಿ,
ಚಿಕ್ಕಮಗಳೂರು ಜಿಲ್ಲೆ,
ಚಿಕ್ಕಮಗಳೂರು

**ಶ್ರೀಮತಿ ಎಸ್.ಅಶ್ವತಿ, ಭಾ ಆ ಸೇ.,** ಮುಖ್ಯ
ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾಪಂಚಾಯ್ತಿ,
ಚಿಕ್ಕಮಗಳೂರು

**ಹಾಜರಿದ್ದವರು:**

1. ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಮಗಳೂರು
2. ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಮಗಳೂರು
3. ಕಾರ್ಯಪಾಲಕ ಅಭಿಯಂತರರು, ಮೆಸ್ಕಾಂ, ಚಿಕ್ಕಮಗಳೂರು
4. ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ಚಿಕ್ಕಮಗಳೂರು
5. ಉಪನಿರ್ದೇಶಕರು, ತೋಟಗಾರಿಕಾ ಇಲಾಖೆ, ಚಿಕ್ಕಮಗಳೂರು
6. ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಛೇರಿ, ಚಿಕ್ಕಮಗಳೂರು
7. ಸಹಾಯಕ ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ ಇಲಾಖೆ, ಚಿಕ್ಕಮಗಳೂರು
8. ಕಾರ್ಯಪಾಲಕ ಅಭಿಯಂತರರು, ಕೆ.ಆರ್.ಐ.ಡಿ.ಎಲ್., ಚಿಕ್ಕಮಗಳೂರು
9. ಉಪನಿರ್ದೇಶಕರು, ಪಶುಪಾಲನೆ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ಚಿಕ್ಕಮಗಳೂರು
10. ಉಪನಿರ್ದೇಶಕರು, ಕಾಫಿ ಬೋರ್ಡ್, ಚಿಕ್ಕಮಗಳೂರು
11. ಉಪನಿರ್ದೇಶಕರು, ರೇಷ್ಮೆ ಇಲಾಖೆ, ಚಿಕ್ಕಮಗಳೂರು
12. ಉಪವಿಭಾಗಾಧಿಕಾರಿ, ಕಂದಾಯ ಉಪವಿಭಾಗ, ಚಿಕ್ಕಮಗಳೂರು ಹಾಗೂ ತರೀಕೆರೆ
13. ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಚಿಕ್ಕಮಗಳೂರು
14. ಜನರಲ್ ಮ್ಯಾನೇಜರ್, ಬಿ.ಎಸ್.ಎನ್.ಎಲ್., ಚಿಕ್ಕಮಗಳೂರು
15. ಉಪನಿರ್ದೇಶಕರು, ಕೃಷಿ ಇಲಾಖೆ, ಚಿಕ್ಕಮಗಳೂರು
16. ಜಿಲ್ಲೆಯ ಎಲ್ಲಾ ತಹಸೀಲ್ದಾರರು, ಚಿಕ್ಕಮಗಳೂರು ಜಿಲ್ಲೆ
17. ಹಿರಿಯ ಸಹಾಯಕ ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಚಿಕ್ಕಮಗಳೂರು
18. ವ್ಯವಸ್ಥಾಪಕರು, ಲೀಡ್ ಬ್ಯಾಂಕ್, ಚಿಕ್ಕಮಗಳೂರು

***

ಪ್ರಥಮವಾಗಿ ಅಪರ ಜಿಲ್ಲಾಧಿಕಾರಿಗಳು ಸಭಾಧ್ಯಕ್ಷರು ಹಾಗೂ ಎಲ್ಲಾ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸುತ್ತಾ ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು ಸಭೆಯನ್ನು ನಡೆಸಿಕೊಡುವಂತೆ ವಿನಂತಿಸಿದರು.

**1. ಸಾಮಾನ್ಯ ಮಾಹಿತಿ:**

ಜಿಲ್ಲಾಧಿಕಾರಿಗಳು ಚಿಕ್ಕಮಗಳೂರು ಜಿಲ್ಲೆಯ ಸಾಮಾನ್ಯ ಅಂಕಿ ಅಂಶಗಳ ಮಾಹಿತಿಯನ್ನು ಮಾನ್ಯ ಅಧ್ಯಕ್ಷರ ಗಮನಕ್ಕೆ ವಿವರಿಸಿದರು.

## 2. ಮಳೆ ವರದಿ

ದಿನಾಂಕ: 01.01.2019 ರಿಂದ 08.07.2019ರವರೆಗಿನ ಜಿಲ್ಲೆಯ ಮಳೆ ಅಂಕಿ-ಅಂಶವನ್ನು ತಾಲ್ಲೂಕುವಾರು ಈ ಕೆಳಗಿನಂತೆ ತಿಳಿಸಿದರು.

| ತಾಲ್ಲೂಕು | 01.01.2019 ರಿಂದ 08.07.2019ರವರೆಗಿನ ವಾಡಿಕೆ | 01.01.2019 ರಿಂದ 08.07.2019ರವರೆಗಿನ ವಾಸ್ತವಿಕ ಮಳೆ | ಶೇಕಡ (%) |
|---|---|---|---|
| ಚಿಕ್ಕಮಗಳೂರು | 511.0 | 332.0 | -35 |
| ಮೂಡಿಗೆರೆ | 1183.0 | 820.0 | -31 |
| ಶೃಂಗೇರಿ | 1427.0 | 952.0 | -33 |
| ಕೊಪ್ಪ | 1059.0 | 616.0 | -42 |
| ನ.ರಾ.ಪುರ | 659.0 | 362.0 | -45 |
| ತರೀಕೆರೆ | 271.0 | 183.0 | -32 |
| ಕಡೂರು | 219.0 | 204.0 | -7 |
| | **637.0** | **423.0** | **-34** |

ಒಟ್ಟಾರೆಯಾಗಿ ಜಿಲ್ಲೆಯಾದ್ಯಂತ ಶೇ 34 ರಷ್ಟು ಮಳೆಯ ಕೊರತೆ ಉಂಟಾಗಿದೆಯೆಂದು ಜಿಲ್ಲಾಧಿಕಾರಿಗಳು ಸಭೆಗೆ ತಿಳಿಸಿದರು.

ಈ ಬಗ್ಗೆ ಉಪವಿಭಾಗಾಧಿಕಾರಿಗಳು ಹಾಗೂ ತಹಸೀಲ್ದಾರರು ಪರಿಸ್ಥಿತಿಯನ್ನು ಗಮನಿಸಿ ಸೂಕ್ತ ಮುಂಜಾಗ್ರತಾ ಕ್ರಮಗಳನ್ನು ಮತ್ತು ಪರಿಹಾರಾತ್ಮಕ ವರದಿಗಳನ್ನು ಕಾಲಕಾಲಕ್ಕೆ ನೀಡಲು ಸೂಚಿಸಲಾಯಿತು.

**(ಕ್ರಮ: ಎಲ್ಲಾ ಉಪವಿಭಾಗಾಧಿಕಾರಿಗಳು ಹಾಗೂ ತಹಸೀಲ್ದಾರರುಗಳು)**

## 3. ವಲ್ನರಬಲ್ ಪ್ರದೇಶ ಮಾಹಿತಿ:

2019-20ನೇ ಸಾಲಿನಲ್ಲಿ ತೀವ್ರ ಮಳೆಯಿಂದ ಅತೀವೃಷ್ಠಿ ಸಂಭವಿಸುವುದಾದಲ್ಲಿ, ಈ ಹಿಂದಿನ ಸಾಲುಗಳ ಪರಿಣಾಮಗಳನ್ನು ಆಧರಿಸಿ, ಜಿಲ್ಲೆಯಾದ್ಯಂತ ಒಟ್ಟು 82 ಪ್ರದೇಶಗಳು ವಲ್ನರಬಲ್ ವ್ಯಾಪ್ತಿಗೆ ಬರುವುದೆಂದು ಗುರುತಿಸಲಾಗಿದೆಯೆಂದು ಜಿಲ್ಲಾಧಿಕಾರಿಗಳು ಸಭೆಗೆ ತಿಳಿಸುತ್ತಾ, ಈ ಬಗ್ಗೆ ಮುಂಜಾಗ್ರತಾ ಕ್ರಮವಹಿಸುವ ನಿಟ್ಟಿನಲ್ಲಿ ಅಯಾ ತಾಲ್ಲೂಕುಗಳ ರಾಜಸ್ವ ನಿರೀಕ್ಷಕರು, ಗ್ರಾಮಲೆಕ್ಕಾಧಿಕಾರಿಗಳು ಹಾಗೂ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಗಳಿಗೆ ತರಬೇತಿಯನ್ನು ನೀಡಲಾಗಿದೆಯೆಂದು ತಿಳಿಸಿದರು. ಮುಂದುವರೆದು ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ ಪರಿಹಾರಾತ್ಮಕ ಕ್ರಮಗಳಿಗೆ ಬೇಕಾಗುವ ದೋಣಿ ಇತ್ಯಾದಿ ಸಲಕರಣೆ ಗಳನ್ನು ಖರೀದಿಸಲು ಅಂದಾಜು ರೂ 33.00ಲಕ್ಷಗಳಿಗೆ ಆಡಳಿತ ಮಂಜೂರಿ ನೀಡಿ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಚಿಕ್ಕಮಗಳೂರು ರವರಿಗೆ ಖರೀದಿ ಕ್ರಮಕ್ಕಾಗಿ ಕಳುಹಿಸಲಾಗಿದ್ದು, ಅದರಂತೆ ಖರೀದಿ ಕ್ರಮವಾಗಿರುತ್ತದೆ. ಸದರಿ ಸಲಕರಣೆಗಳನ್ನು ಅವಶ್ಯಾನುಸಾರ ಅಯಾ ತಹಸೀಲ್ದಾರರುಗಳಿಗೆ ವಿತರಿಸಲಾಗುವುದೆಂದು ತಹಸೀಲ್ದಾರರುಗಳು ಸದರಿ ಸಲಕರಣೆಗಳನ್ನು ಸೂಕ್ತಾನುಸಾರ ದಾಸ್ತಾನಿಗೆ ತೆಗೆದುಕೊಂಡು ಅವಶ್ಯಾನುಸಾರ ಬಳಕೆ ಮಾಡಿಕೊಳ್ಳಲು ಸೂಚಿಸಲಾಯಿತು.

**(ಕ್ರಮ: ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಚಿಕ್ಕಮಗಳೂರು ಹಾಗೂ ತಹಸೀಲ್ದಾರರುಗಳು)**

## 4. ಮಾನವ ಹಾನಿ, ಜಾನುವಾರು ಹಾನಿ, ಮನೆಗಳ ಹಾನಿ ಮಾಹಿತಿ:

ಪ್ರಕೃತಿ ವಿಕೋಪದಿಂದ 01.04.2019 ರಿಂದ 30.06.2019ರವರೆಗೆ ಜಿಲ್ಲೆಯಾದ್ಯಂತ ಸಂಭವಿಸಿದ ಹಾನಿಗಳ ಮಾಹಿತಿಯು ಈ ಕೆಳಗಿನಂತಿರುವುದನ್ನು ಜಿಲ್ಲಾಧಿಕಾರಿಗಳು ಸಭೆಯ ಗಮನಕ್ಕೆ ತಂದರು.

| ಮಾನವ ಹಾನಿ | | ಜಾನುವಾರು ಹಾನಿ | | ಮನೆ ಹಾನಿ (ಪಕ್ಕಾ) | | ಮನೆ ಹಾನಿ (ಕಚ್ಛಾ) | |
|---|---|---|---|---|---|---|---|
| ಸಂಖ್ಯೆ | ಪರಿಹಾರ ಮೊತ್ತ | ಸಂಖ್ಯೆ | ಪರಿಹಾರ ಮೊತ್ತ | ಸಂಖ್ಯೆ | ಪರಿಹಾರ ಮೊತ್ತ | ಸಂಖ್ಯೆ | ಪರಿಹಾರ ಮೊತ್ತ |
| 3 | 15-00 | 5 | 1-00 | 6 | 1-05 | 18 | 3-41 |

ಪ್ರಕೃತಿ ವಿಕೋಪದಿಂದ ಉಂಟಾಗುವ ಹಾನಿಗಳ ಬಗ್ಗೆ ತ್ವರಿತವಾಗಿ ಮಾರ್ಗಸೂಚಿಗೆ ಅನುಗುಣವಾಗಿ ಪರಿಹಾರ ಕ್ರಮವಹಿಸಲು ಉಪವಿಭಾಗಾಧಿಕಾರಿಗಳು ಹಾಗೂ ತಹಸೀಲ್ದಾರರುಗಳಿಗೆ ಸೂಚಿಸಲಾಯಿತು ವಿಳಂಬಕ್ಕೆ ಅವಕಾಶ ನೀಡಬಾರದಾಗಿ ತಿಳಿಸಲಾಯಿತು.

**(ಕ್ರಮ: ಎಲ್ಲಾ ಉಪವಿಭಾಗಾಧಿಕಾರಿಗಳು ಹಾಗೂ ತಹಸೀಲ್ದಾರರುಗಳು)**

**5. ಪ್ರಕೃತಿ ವಿಕೋಪ ಅನುದಾನ:**

ಪ್ರಕೃತಿ ವಿಕೋಪದಿಂದ ಉಂಟಾಗುವ ಹಾನಿಗಳಿಗೆ ತ್ವರಿತವಾಗಿ ಮಾರ್ಗಸೂಚಿಯಂತೆ ಪರಿಹಾರ ನೀಡುವ ದೃಷ್ಟಿಯಿಂದ ಜಿಲ್ಲೆಯ ಎಲ್ಲಾ ತಹಸೀಲ್ದಾರರುಗಳಿಗೆ 2019-20ನೇ ಸಾಲಿನಲ್ಲಿ ಹಿಂದಿನ ಬಾಕಿ ಸೇರಿ ಒಟ್ಟು ರೂ 419.43ಲಕ್ಷ ಅನುದಾನವನ್ನು ಜಿಲ್ಲಾಧಿಕಾರಿಗಳಿಂದ ನೀಡಲಾಗಿದ್ದು, ಆ ಪೈಕಿ ತಹಸೀಲ್ದಾರರುಗಳಲ್ಲಿ ದಿನಾಂಕ: 30.06.2019ರ ಅಂತ್ಯಕ್ಕೆ ರೂ 409.27 ಲಕ್ಷ ಮೊತ್ತ ಬಾಕಿ ಇರುತ್ತದೆ ಎಂಬ ಅಂಶವನ್ನು ಜಿಲ್ಲಾಧಿಕಾರಿಗಳು ಸಭೆಯ ಗಮನಕ್ಕೆ ವಿವರಿಸಿದರು.

ಈ ಬಗ್ಗೆ ಅನುದಾನವನ್ನು ಎಸ್ ಡಿ ಆರ್ ಎಫ್ / ಎನ್ ಡಿ ಆರ್ ಎಫ್ ಮಾರ್ಗಸೂಚಿ ಯಂತೆ ವೈಯಕ್ತಿಕ ಪರಿಹಾರ ಬಾಬ್ತು ವಿನಿಯೋಗಿಸಲು, ಅನುದಾನದ ಅವಶ್ಯಕತೆ ಬಿದ್ದಲ್ಲಿ ಜಿಲ್ಲಾಧಿಕಾರಿಗಳಿಗೆ ತಿಳಿಸಲು ಸೂಚಿಸಲಾಯಿತು.

**(ಕ್ರಮ: ಎಲ್ಲಾ ಉಪವಿಭಾಗಾಧಿಕಾರಿಗಳು ಹಾಗೂ ತಹಸೀಲ್ದಾರರುಗಳು)**

**6. ಬೆಳೆ ಪರಿಸ್ಥಿತಿ (ಕೃಷಿ ಇಲಾಖೆ):**

2019-20ನೇ ಸಾಲಿನ ಮುಂಗಾರು ಮತ್ತು ಹಿಂಗಾರು ಬಿತ್ತನೆ ಗುರಿ ಹಾಗೂ ವಾಸ್ತವಿಕ ಬಿತ್ತನೆ ವಿವರವನ್ನು ಈ ಕೆಳಗಿನಂತೆ ಜಂಟಿ ಕೃಷಿ ನಿರ್ದೇಶಕರು ಸಭೆಗೆ ತಿಳಿಸಿದರು.

| ತಾಲ್ಲೂಕು | ಗುರಿ (ಹೆಕ್ಟೇರ್ | | ಬಿತ್ತನೆ | | ಶೇಕಡ | |
|---|---|---|---|---|---|---|
| | ಮುಂಗಾರು | ಹಿಂಗಾರು | ಮುಂಗಾರು | ಹಿಂಗಾರು | ಮುಂಗಾರು | ಹಿಂಗಾರು |
| ಚಿಕ್ಕಮಗಳೂರು | 16680 | 2750 | 2379 | - | 14.3 | - |
| ಮೂಡಿಗೆರೆ | 5200 | - | - | - | - | - |
| ಶೃಂಗೇರಿ | 2000 | - | - | - | - | - |
| ಕೊಪ್ಪ | 3500 | - | - | - | - | - |
| ತರೀಕೆರೆ | 32800 | 15000 | 6270 | - | 19.1 | - |
| ಕಡೂರು | 69070 | 15000 | 9519 | - | 13.8 | - |
| ನ.ರಾ.ಪುರ | 3100 | - | - | - | - | - |
| ಅಜ್ಜಂಪುರ | - | - | - | - | - | - |
| | **132350** | **32750** | **18168** | **-** | **13.7** | |

**ಬೆಳೆವಾರು ಬಿತ್ತನೆ ವಿವರ:**

| ಬೆಳೆ | ಗುರಿ(ಮುಂಗಾರು) | ಸಾಧನೆ | ಶೇಕಡ |
|---|---|---|---|
| ಏಕದಳ | 97260 | 11937 | 12.3 |
| ದ್ವಿದಳ | 13450 | 1660 | 12.3 |

ಮುಂದುವರೆದು ಅಕಾಲಿಕ ಮಳೆ ಮತ್ತು ಮಳೆಯ ಕೊರತೆಯಿಂದ ಬಿತ್ತನೆ ಪ್ರಗತಿಯಲ್ಲಿ ಗುರಿ ಮುಟ್ಟಲು ಸಾಧ್ಯವಾಗಿಲ್ಲವೆಂದು ಸಭೆಗೆ ತಿಳಿಸಿದರು.

ಮಾಹಿತಿಯನ್ನು ಗಮನಿಸಿದ ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು ಮುಂಗಾರು ಬೆಳೆಗಳಲ್ಲಿ ಪ್ರಧಾನ ಮಂತ್ರಿ ಫಸಲ್ ಬೀಮಾ ಯೋಜನೆಗೆ ಒಳಪಡುವ ಬೆಳೆಗಳ ಬಗ್ಗೆ ರೈತರುಗಳು ವಿಮಾ ಯೋಜನೆಗೆ ನೊಂದಾಯಿಸಲು ಕಾಲಾವಕಾಶವಿದೆಯೇ ಎಂಬುದನ್ನು ಕೇಳಲಾಗಿ, ಆಗಸ್ಟ್ 2019ರವರೆಗೆ ಕಾಲಾವಕಾಶವಿದೆಯೆಂದು ಜಂಟಿ ಕೃಷಿ ನಿರ್ದೇಶಕರು ತಿಳಿಸಿದರು. ಆದಕಾರಣ ಈ ಬಗ್ಗೆ ಕೃಷಿ ಇಲಾಖೆಯ ಎಲ್ಲಾ ಅಧಿಕಾರಿಗಳು, ವಿಮಾ ಯೋಜನೆ ವಿಚಾರವನ್ನು ರೈತರ ಗಮನಕ್ಕೆ ಸಕಾಲಕ್ಕೆ ತರುವುದಲ್ಲದೆ, ಹೆಚ್ಚಿನ ಅರ್ಹ ರೈತರು ವಿಮಾ ಯೋಜನೆಯ ಸದುಪಯೋಗ ಪಡೆದುಕೊಳ್ಳಲು ಅನುವಾಗುವಂತೆ ಈ ಕೂಡಲೇ ನೋಂದಣಿ ಕ್ರಮ ಕೈಗೊಳ್ಳುವಂತೆ ಯಾವುದೇ ಅರ್ಹ ರೈತ ಫಲಾನುಭವಿಗಳು ವಿಮಾ ಯೋಜನೆಯ ಅನುಕೂಲದಿಂದ ವಂಚಿತರಾಗದಂತೆ ನಿಗಾವಹಿಸಲು ಸೂಚಿಸಿದರು, ನಂತರ ಮುಂಗಾರು ಬಿತ್ತನೆಯ ಹಾಗೂ ಬೆಳೆಯ ಸ್ಥಿತಿಯನ್ನು ಗಮನಿಸಲು ಕೆಲವು ಫೋಟೋಗಳನ್ನು ನೀಡಲು ಸೂಚಿಸಿದರು.

**(ಕ್ರಮ: ಜಂಟಿ ಕೃಷಿ ನಿರ್ದೇಶಕರು, ಚಿಕ್ಕಮಗಳೂರು)**

**7. ಬಿತ್ತನೆ ಬೀಜ ವಿತರಣೆ:**

ಬಿತ್ತನೆ ಬೀಜವನ್ನು ರೈತರಿಗೆ ವಿತರಣೆ ಮಾಡಿರುವ ಮಾಹಿತಿಯನ್ನು ಜಂಟಿ ಕೃಷಿ ನಿರ್ದೇಶಕರು ಈ ಕೆಳಗಿನಂತೆ ಸಭೆಯ ಗಮನಕ್ಕೆ ತಂದರು.

| ಋತು | ಬೇಡಿಕೆ | ವಿತರಣೆ | ದಾಸ್ತಾನು |
|---|---|---|---|
| ಮುಂಗಾರು | 11011 | 3461.72 | 2680.23 |

ವಿತರಣೆಯು ಪ್ರಗತಿಯಲ್ಲಿದೆಯೆಂದು ಈ ಬಗ್ಗೆ ಕೊರತೆ ಇಲ್ಲವೆಂದು ತಿಳಿಸಿದರು.

ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಲು ಈ ಬಗ್ಗೆ ಮಾತನಾಡುತ್ತಾ ಬಿತ್ತನೆ ಬೀಜ ಪಡೆದವರ ಮಾಹಿತಿಯನ್ನು ಸಾರ್ವಜನಿಕವಾಗಿ ನೀಡುವುದು ಅವಶ್ಯವಿರುವುದರಿಂದ, ಬಿತ್ತನೆ ಬೀಜ ಪಡೆದ [illegible] ಫಲಾನುಭವಿಯ ಹೆಸರು, ಗ್ರಾಮ, ಸರ್ವೆ ನಂಬರ್, ಬೆಳೆ ಹೆಸರು ಇತ್ಯಾದಿ ವಿವರದ ಮಾಹಿತಿಯನ್ನು ಗಣಕೀಕರಣಗೊಳಿಸಿ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾಪಂಚಾಯ್ತಿ ವೆಬ್ ಸೈಟ್ ನಲ್ಲಿ ಅಳವಡಿಸಲು ಸೂಚಿಸಿದರು. ಅದೇ ರೀತಿ ಬಿತ್ತನೆ ಬೀಜದ ಸಂಬಂಧ ದರ, ಸಬ್ಸಿಡಿ ಹಾಗೂ ಹೊರ ಮಾರುಕಟ್ಟೆಯ ದರದ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿ, ಸರ್ಕಾರದ ದರಕ್ಕಿಂತ ಹೊರ ಮಾರುಕಟ್ಟೆ ಬೆಲೆ ಕಡಿಮೆ ಇರುತ್ತದೆಂದು, ಆದರೆ ಸರ್ಕಾರದ ಸರಬರಾಜು ಬೀಜವು ಸಂಸ್ಕರಣೆಯಿಂದ ಕೂಡಿದ್ದು, ದೃಢೀಕೃತವಾಗಿರುವುದೆಂದು ಇದರಿಂದಾಗಿ ದರದಲ್ಲಿ ವ್ಯತ್ಯಾಸ ಇರುವುದಾಗಿ ಕೃಷಿ ಅಧಿಕಾರಿಗಳು ಸ್ಪಷ್ಟಪಡಿಸಿದರು.

ಸದರಿ ಫಲಾನುಭವಿಗಳ ಪಟ್ಟಿಯನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾಪಂಚಾಯ್ತಿ ರವರಿಗೆ ನೀಡುವಂತೆ ತಿಳಿಸಿದರು. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಯವರು ಈ ಬಗ್ಗೆ ಆಯ್ದ R S K ಗಳಲ್ಲಿ

ಫಲಾನುಭವಿ ಬಿತ್ತನೆ ಬೀಜ ಪಡೆದಿರುವರೇ ಎಂಬುದನ್ನು ಪರಿಶೀಲಿಸಿ ಖಚಿತಪಡಿಸಿಕೊಳ್ಳಲು ಸಹ ಸೂಚನೆ ನೀಡಿರುತ್ತಾರೆ.

**(ಕ್ರಮ: ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾಪಂಚಾಯಿ ಚಿಕ್ಕಮಗಳೂರು, ಜಂಟಿ ಕೃಷಿ ನಿರ್ದೇಶಕರು, ಚಿಕ್ಕಮಗಳೂರು)**

**8. <u>ರಸಗೊಬ್ಬರ ಮಾಹಿತಿ:</u>**

ದಿನಾಂಕ 30.06.2019ರ ಅಂತ್ಯಕ್ಕೆ ರಸಗೊಬ್ಬರದ ದಾಸ್ತಾನು ಹಾಗೂ ವಿತರಣೆಯ ಮಾಹಿತಿಯನ್ನು ಜಂಟಿ ಕೃಷಿ ನಿರ್ದೇಶಕರು ಈ ಕೆಳಗಿನಂತೆ ಸಭೆಗೆ ತಿಳಿಸಿದರು.

| ಗೊಬ್ಬರ | ಬೇಡಿಕೆ | ವಿತರಣೆ |
|---|---|---|
| DAP | 8000 | 5996 |
| ಕಾಂಪ್ಲೆಕ್ಸ್ | 21500 | 12119 |
| MOP | 9850 | 9060 |
| ಯೂರಿಯಾ | 15750 | 10925 |
| ಸೂಪರ್ | 542 | 444 |

ರಸಗೊಬ್ಬರದ ಕೊರತೆ ಇಲ್ಲವೆಂದು ಸಭೆಗೆ ತಿಳಿಸಿರುತ್ತಾರೆ.

ಈ ಬಗ್ಗೆ ಅಪರ ಮುಖ್ಯ ಕಾರ್ಯದರ್ಶಿಗಳು ಮಾತನಾಡುತ್ತಾ, ರೈತರುಗಳು ಗೊಬ್ಬರವನ್ನು ಪಡೆದುಕೊಂಡವರುಗಳ ವಿವರಗಳನ್ನು ಇಲಾಖೆಯಲ್ಲಿ ಆಯಾ ಕಾಲಕ್ಕೆ ಸಂಗ್ರಹಿಸಿ ಕ್ರೋಢೀಕರಿಸಲಾಗಿದೆಯೇ ಎಂಬುದನ್ನು ವಿಚಾರಿಸಲಾಗಿ, ಸದರಿ ಮಾಹಿತಿಯು ಇಲಾಖೆಯಲ್ಲಿ ಲಭ್ಯವಾಗುವುದಿಲ್ಲವೆಂದು ಕೃಷಿ ಅಧಿಕಾರಿ ತಿಳಿಸಿದರು.

ಆದಕಾರಣ ಈ ಬಗ್ಗೆ ಗೊಬ್ಬರ ವಿತರಣಾ ಕೇಂದ್ರಗಳವಾರು ಪ್ರತೀ ರೈತರ ಹೆಸರು, ತಾಲ್ಲೂಕು, ಹೋಬಳಿ, ಗ್ರಾಮ, ಸರ್ವೆ ನಂಬರ್ ಇತ್ಯಾದಿ ಮಾಹಿತಿಯನ್ನು ತಯಾರಿಸಿ, ಜಿಲ್ಲಾ ವೆಬ್ ಸೈಟ್ ನಲ್ಲಿ ಪ್ರಕಟಿಸಲು ನಂತರ ಸದರಿ ಪಟ್ಟಿಯನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾಪಂಚಾಯ್ತಿ, ಚಿಕ್ಕಮಗಳೂರು ಇವರಿಗೆ ನೀಡಿ ಅವರು ಫಲಾನುಭವಿಗಳು ಗೊಬ್ಬರ ಪಡೆದಿರುವ ಮಾಹಿತಿಯನ್ನು ಪರಿಶೀಲಿಸಿ ಖಚಿತಪಡಿಸಿಕೊಳ್ಳಲು ಸೂಚಿಸಿದರು.

**(<u>ಕ್ರಮ:</u> ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾಪಂಚಾಯ್ತಿ ಚಿಕ್ಕಮಗಳೂರು, ಜಂಟಿ ಕೃಷಿ ನಿರ್ದೇಶಕರು, ಚಿಕ್ಕಮಗಳೂರು)**

**<u>9. ಬಿತ್ತನೆ ವಿವರ (ತೋಟಗಾರಿಕೆ ಇಲಾಖೆ):</u>**

ದಿನಾಂಕ: 30.06.2019ರವರೆಗಿನ ಬಿತ್ತನೆ ವಿವರವನ್ನು ಹಿರಿಯ ತೋಟಗಾರಿಕಾ ನಿರ್ದೇಶಕರು ಈ ಕೆಳಗಿನಂತೆ ಸಭೆಯ ಗಮನಕ್ಕೆ ತಂದರು.

| ಬೆಳೆ | ಗುರಿ (ಹೆಕ್ಟೇರ್) | ಸಾಧನೆ (ಹೆಕ್ಟೇರ್) | ಶೇಕಡ |
|---|---|---|---|
| ಆಲೂಗೆಡ್ಡೆ | 5604 | 2515 | 44.88 |
| ಟೊಮ್ಯಾಟೋ | 1973 | 553 | 28.03 |
| ಈರುಳ್ಳಿ | 8138 | 6150 | 75.57 |
| ಹಸಿಮೆಣಸಿನಕಾಯಿ | 2218 | 195 | 8.79 |

ಈ ಬಗ್ಗೆ ಅಪರ ಮುಖ್ಯ ಕಾರ್ಯದರ್ಶಿಗಳು ಪ್ರಗತಿಯನ್ನು ಗಮನಿಸುತ್ತಾ, ಈ ಬೆಳೆಗಳಲ್ಲಿ ಪ್ರಧಾನಮಂತ್ರಿ ಫಸಲ್ ಭೀಮಾ ಯೋಜನೆಗೆ ಒಳಪಡುವ ರೈತರುಗಳು ಯೋಜನೆಯಡಿ ನೋಂದಾಯಿಸಲು ತೋಟಗಾರಿಕಾ ಅಧಿಕಾರಿಗಳು ಅಗತ್ಯ ಕ್ರಮವಹಿಸಿ, ರೈತರಿಗೆ ವಿಮಾ ಯೋಜನೆ ಅನುಕೂಲ ಪಡೆಯಲು ಸಹಕಾರಿಯಾಗುವಂತೆ ಕಾರ್ಯನಿರ್ವಹಿಸಿಲ್ಲವೆಂದು, ಅರ್ಹ ರೈತರುಗಳು ವಿಮಾ ಯೋಜನೆಯ ಅನುಕೂಲ ಪಡೆಯುವುದು ಸರ್ಕಾರದ ಆಶಯವಾಗಿದ್ದು, ಈ ಬಗ್ಗೆ ಅಧಿಕಾರಿಗಳು ರೈತಪರವಾಗಿ ಕಾರ್ಯನಿರ್ವಹಿಸದೇ ಇರುವುದು ವಿಷಾದನೀಯವೆಂದು ತಿಳಿಸಿದರು.

ವಿಮಾ ಯೋಜನೆಯ ಕಾಲಾವಧಿಯೊಳಗೆ ಎಲ್ಲಾ ಅರ್ಹ ರೈತರು ಯೋಜನೆಯ ಅನುಕೂಲ ಪಡೆಯುವಂತೆ ತೋಟಗಾರಿಕೆ ಅಧಿಕಾರಿ ಕ್ರಮವಹಿಸತಕ್ಕದ್ದೆಂದು, ತಪ್ಪಿದಲ್ಲಿ ಅಧಿಕಾರಿಯ ವಿರುದ್ಧ ಗಂಭೀರ ಕ್ರಮವಹಿಸುವುದು ಅನಿವಾರ್ಯವಿದೆಯೆಂದು ಅಪರ ಮುಖ್ಯ ಕಾರ್ಯದರ್ಶಿಗಳು ತಿಳಿಸಿದರು.

ಆದ್ದರಿಂದ ಹೆಚ್ಚಿನ ನಿಗಾವಹಿಸಿ ಫಲಕಾರಿಯಾಗಿ ಕಾರ್ಯನಿರ್ವಹಿಸಲು ಸೂಚಿಸಿದರು.

**(<u>ಕ್ರಮ:</u> ಹಿರಿಯ ತೋಟಗಾರಿಕೆ ನಿರ್ದೇಶಕರು, ಚಿಕ್ಕಮಗಳೂರು)**

**<u>10. ರೈತರ ಆತ್ಮಹತ್ಯೆ:</u>**

ದಿನಾಂಕ: 30.06.2019ರವರೆಗಿನ ರೈತರ ಆತ್ಮಹತ್ಯೆ ಪ್ರಕರಣಗಳ ಅಂಕಿ-ಅಂಶಗಳಂತೆ ಪರಿಶೀಲಿಸಲಾಗಿ, ಚಿಕ್ಕಮಗಳೂರು ತಾಲ್ಲೂಕಿನಲ್ಲಿ 5 ಪ್ರಕರಣ ಹಾಗೂ ಕಡೂರು ತಾಲ್ಲೂಕಿನಲ್ಲಿ 1 ಪ್ರಕರಣ ಇತ್ಯರ್ಥಕ್ಕೆ ಬಾಕಿ ಇರುವುದನ್ನು ಜಿಲ್ಲಾಧಿಕಾರಿಗಳು ಸಭೆಗೆ ತಿಳಿಸಿದರು. ಈ ಪ್ರಕರಣಗಳ ಬಗ್ಗೆ ಕೃಷಿ ಅಧಿಕಾರಿಗಳು ನಿಯಮಾನುಸಾರ ಪರಿಶೀಲಿಸಿ ಪ್ರಸ್ತಾವನೆ ತಯಾರಿಸಿ ಉಪವಿಭಾಗದ ಸಮಿತಿ ಮುಂದೆ ಮಂಡಿಸಿ ತ್ವರಿತವಾಗಿ ಇತ್ಯರ್ಥಪಡಿಸಲು ಸೂಚಿಸಲಾಯಿತು.

**(<u>ಕ್ರಮ:</u> ಸಹಾಯಕ ಕೃಷಿ ನಿರ್ದೇಶಕರು, ಕಡೂರು, ಉಪವಿಭಾಗಾಧಿಕಾರಿ, ಚಿಕ್ಕಮಗಳೂರು, ತರೀಕೆರೆ)**

**<u>11. ಮೇವು ಪೂರೈಕೆ:</u>**

ಚಿಕ್ಕಮಗಳೂರು ಜಿಲ್ಲೆಯ ಮೇವು ಪೂರೈಕೆ ಬಗ್ಗೆ ಕಡೂರು ತಾಲ್ಲೂಕಿನಲ್ಲಿ 1 ವಾರ ಮತ್ತು ತರೀಕೆರೆ ತಾಲ್ಲೂಕಿನಲ್ಲಿ 4 ವಾರಗಳಿಗೆ ಅವಶ್ಯವಿರುವಷ್ಟು ಮೇವು ಲಭ್ಯವಿದೆಯೆಂದು, ಪಶುಪಾಲನಾಧಿಕಾರಿಗಳು ನೀಡಿರುವ ಮಾಹಿತಿಯನ್ನು ಜಿಲ್ಲಾಧಿಕಾರಿಗಳು ಸಭೆಗೆ ತಿಳಿಸಿದರು.

ಆದ್ದರಿಂದ ಈ ಬಗ್ಗೆ ಉಪನಿರ್ದೇಶಕರು ಹಾಗೂ ಸಹಾಯಕ ನಿರ್ದೇಶಕರು ಪಶುಪಾಲನಾ ಇಲಾಖೆ, ತಹಸೀಲ್ದಾರರುಗಳು ಖುದ್ದು ಸ್ಥಳ ಪರಿಶೀಲಿಸಿ ಪರಿಸ್ಥಿತಿಯನ್ನು ಮನನ ಮಾಡಿಕೊಂಡು, ಸೂಕ್ತ ಪರಿಹಾರ ಕ್ರಮ ಕೈಗೊಳ್ಳಲು ಸೂಚಿಸಿದರು.

ಮೇವು ಮಿನಿಕಿಟ್ ಗಳ ಬಗ್ಗೆ ಚರ್ಚಿಸಲಾಗಿ, ಮುನ್ನೆಚ್ಚರಿಕೆಯಾಗಿ ಮೇವು ಪೂರೈಕೆಗೆ ಒಟ್ಟು 44602 ಸಂಖ್ಯೆಯ ಮಿನಿಕಿಟ್ ಗಳನ್ನು ರೈತರಿಗೆ ನೀಡಲಾಗಿದೆಯೆಂದು, ಉಪನಿರ್ದೇಶಕರು ಸಭೆಗೆ ತಿಳಿಸಿದರು. ಈ ಮಿನಿಕಿಟ್ ಗಳನ್ನು ವಿತರಿಸಿದ ಫಲಾನುಭವಿಗಳ ವಿವರಗಳು ಅವಶ್ಯವಿದೆಯೆಂದು, ಆದಕಾರಣ ಫಲಾನುಭವಿ ಹೆಸರು, ವಿಳಾಸ, ಸರ್ವೆ ನಂಬರ್, ಮಿನಿಕಿಟ್ ನೀಡಿದ ಪ್ರಮಾಣ ಇತ್ಯಾದಿ ಪೂರಕ ಮಾಹಿತಿಯ ಪಟ್ಟಿಯನ್ನು ಜಿಲ್ಲಾ ವೆಬ್ ಸೈಟ್ ನಲ್ಲಿ ಪ್ರಕಟಿಸಲು ಸೂಚಿಸಲಾಯಿತು.

**12. ಪಿ.ಎಂ.ಕಿಸಾನ್:**

ತಾಲ್ಲೂಕುವಾರು ಪಿ.ಎಂ.ಕಿಸಾನ್ ಯೋಜನೆಯ ಮಾಹಿತಿಯನ್ನು ಈ ಕೆಳಗಿನಂತೆ ಜಿಲ್ಲಾಧಿಕಾರಿಗಳು ಸಭೆಗೆ ತಿಳಿಸಿದರು.

| ತಾಲ್ಲೂಕು | ರೈತರ ಸಂಖ್ಯೆ | ಡಿಕ್ಲರೇಷನ್ ಸ್ವೀಕೃತಿ | ಅರ್ಜಿ ಸಂಗ್ರಹಣೆಗೆ ಬಾಕಿ |
|---|---|---|---|
| ಚಿಕ್ಕಮಗಳೂರು | 48157 | 24701 | 20956 |
| ಕಡೂರು | 77378 | 34685 | 41193 |
| ಕೊಪ್ಪ | 11832 | 7627 | 3755 |
| ಮೂಡಿಗೆರೆ | 23365 | 11494 | 9651 |
| ನ.ರಾ.ಪುರ | 8214 | 5730 | 2028 |
| ಶೃಂಗೇರಿ | 6022 | 4687 | 1185 |
| ತರೀಕೆರೆ | 53692 | 12890 | 39302 |
| ಅಜ್ಜಂಪುರ | - | 13855 | - |
| ಒಟ್ಟು | **228660** | **115675** | **118070** |

ಮೇಲ್ಕಂಡ ಪ್ರಗತಿಯಂತೆ ಶೃಂಗೇರಿ, ನರಸಿಂಹರಾಜುರ ಹಾಗೂ ಕೊಪ್ಪ ತಾಲ್ಲೂಕಿನಲ್ಲಿ ಪ್ರಗತಿ ತೃಪ್ತಿಕರವಾಗಿದ್ದು, ಕಡೂರು, ತರೀಕೆರೆ ಹಾಗೂ ಚಿಕ್ಕಮಗಳೂರು ತಾಲ್ಲೂಕಿನಲ್ಲಿ ಪ್ರಗತಿ ತೀರಾ ಕ್ಷೀಣವಾಗಿದೆಯೆಂದು ಈ ಬಗ್ಗೆ ತಹಸೀಲ್ದಾರರುಗಳು ಆದ್ಯತೆ ನೀಡದೇ ಪ್ರಗತಿಯನ್ನು ಪ್ರತಿದಿನ ಪರಿಶೀಲಿಸದೇ ಇರುವುದು ಕಾರಣವಾಗಿದೆಯೆಂದು, ಈ ಬಗ್ಗೆ ಪ್ರತಿ ವಾರ ಪ್ರಗತಿ ಪರಿಶೀಲನೆಗೆ ನಿರ್ದೇಶನ ನೀಡಿದಾಗ್ಯೂ ತಹಸೀಲ್ದಾರರುಗಳು ನಿಗಾವಹಿಸಿ ಪ್ರಗತಿ ಸಾಧಿಸದೇ ಇರುವುದನ್ನು ಜಿಲ್ಲಾಧಿಕಾರಿಗಳು ಸಭೆಗೆ ತಿಳಿಸಿದರು.

ಆದಕಾರಣ ಈ ಬಗ್ಗೆ ತಹಸೀಲ್ದಾರ್, ಚಿಕ್ಕಮಗಳೂರು, ಮೂಡಿಗೆರೆ , ಕಡೂರು, ತರೀಕೆರೆ ರವರು ಆದ್ಯತೆ ನೀಡಿ, ಶೇ 80 ರಷ್ಟು ಪ್ರಗತಿ ಸಾಧಿಸುವುದು ಕಡ್ಡಾಯವಿದೆಯೆಂದು ಯಾವುದೇ ವಿನಾಯ್ತಿ ಇಲ್ಲವೆಂದು ಅಪರ ಮುಖ್ಯ ಕಾರ್ಯದರ್ಶಿಗಳು ತಹಸೀಲ್ದಾರರುಗಳಿಗೆ ಸೂಚಿಸಿದರು. ತಪ್ಪಿದಲ್ಲಿ ವಿಚಾರವನ್ನು ಗಂಭೀರವಾಗಿ ಪರಿಗಣಿಸ ಲಾಗುವುದೆಂದು ತಿಳಿಸಿದರು.

**(ಕ್ರಮ: ತಹಸೀಲ್ದಾರ್, ಚಿಕ್ಕಮಗಳೂರು, ಮೂಡಿಗೆರೆ, ಕಡೂರು, ತರೀಕೆರೆ)**

**13. ಪ್ರಕೃತಿ ವಿಕೋಪ ಪರಿಹಾರ ಕಾಮಗಾರಿಗಳು:**

2018-19ನೇ ಸಾಲಿನಲ್ಲಿ ಮೊದಲನೇ ಹಂತದಲ್ಲಿ ಒಟ್ಟು 339 ಪರಿಹಾರ ಕಾಮಗಾರಿಗಳ ಬಾಬ್ತು ರೂ 1926.00 ಲಕ್ಷ ಮೊತ್ತದ ಕಾಮಗಾರಿಗಳಿಗೆ ಅನುಮೋದನೆ ನೀಡಿ ಆ ಪೈಕಿ ರೂ 1536.39 ಲಕ್ಷ ಮೊತ್ತವನ್ನು ಬಿಡುಗಡೆ ಮಾಡಲಾಗಿದೆಯೆಂದು, ನಂತರ 2ನೇ ಹಂತದಲ್ಲಿ 184 ಕಾಮಗಾರಿಗಳು ಅಂದಾಜು ರೂ 1298.00ಲಕ್ಷ ಮೊತ್ತಕ್ಕೆ ಕಾಮಗಾರಿ ಅನುಮೋದನೆಯಾಗಿದೆಯೆಂದು ಈ ಬಾಬ್ತು ರೂ 973.50ಲಕ್ಷ ಮೊತ್ತವನ್ನು ನೀಡಲಾಗಿದೆಯೆಂದು ಜಿಲ್ಲಾಧಿಕಾರಿಗಳು ಸಭೆಗೆ ತಿಳಿಸಿದರು.

ಈ ಬಗ್ಗೆ ಪ್ರತಿವಾರ ಪ್ರಗತಿ ಪರಿಶೀಲಿಸಲಾಗುತ್ತಿದ್ದು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಪ್ರಗತಿ ತೃಪ್ತಿದಾಯಕವಾಗಿಲ್ಲವೆಂದು, ಆದಕಾರಣ ಅನುಷ್ಠಾನಾಧಿಕಾರಿಗಳು ಆದ್ಯತೆ ಮೇಲೆ ಕಾಮಗಾರಿಗಳನ್ನು ಪೂರ್ಣಗೊಳಿಸಿ ಅಂತಿಮ ಬಿಲ್ ಸಲ್ಲಿಸಲು ಸೂಚಿಸಲಾಯಿತು.

**(ಕ್ರಮ: ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಸಣ್ಣ ನೀರಾವರಿ, ಡಿಯುಡಿಸಿ)**

**14. ಟ್ಯಾಂಕರ್ ಮೂಲಕ ನೀರು ಸರಬರಾಜು ಹಾಗೂ ಖಾಸಗಿ ಬೋರ್ ವೆಲ್ ಬಾಡಿಗೆ:**

ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡುತ್ತಿರುವ ಮಾಹಿತಿಯನ್ನು ಜಿಲ್ಲಾಧಿಕಾರಿಗಳು ಈ ಕೆಳಗಿನಂತೆ ಸಭೆಗೆ ತಿಳಿಸಿದರು.

| ತಾಲ್ಲೂಕು | ಗ್ರಾಮಗಳ/ವಾರ್ಡ್ ಸಂಖ್ಯೆ | ಪ್ರಕೃತಿ ವಿಕೋಪ ನಿಧಿಯಿಂದ ನೀಡಿದ ಮೊತ್ತ | ಬಾಡಿಗೆ ಪಡೆದಿರುವ ಖಾಸಗಿ ಬೋರ್ ವೆಲ್ |
|---|---|---|---|
| ಚಿಕ್ಕಮಗಳೂರು | 33 | 131.94 ಲಕ್ಷ | 5 |
| ಕಡೂರು | 46 | 182.89 ಲಕ್ಷ | 6 |
| ತರೀಕೆರೆ | 04 | 2.21 ಲಕ್ಷ | 6 |
| ಚಿಕ್ಕಮಗಳೂರು ನಗರ | 08 | - | - |

ಈ ಬಗ್ಗೆ ತಹಸೀಲ್ದಾರರು ಖುದ್ದಾಗಿ ಪರಿಶೀಲಿಸಿ, ಸದರಿ ಗ್ರಾಮಗಳಲ್ಲಿ ಟ್ಯಾಂಕರ್ ಮೂಲಕ ನೀರು ಸರಬರಾಜು ಮುಂದುವರೆಸುವ ಅವಶ್ಯಕತೆ ಇದೆಯೇ? ಎಂಬುದನ್ನು ಮನನ ಮಾಡಿಕೊಂಡು ಸೂಕ್ತಾನುಸಾರ ಕ್ರಮವಹಿಸಲು ಸೂಚಿಸಲಾಯಿತು.

**(ಕ್ರಮ: ತಹಸೀಲ್ದಾರ್, ಚಿಕ್ಕಮಗಳೂರು, ಕಡೂರು, ತರೀಕೆರೆ, ಗ್ರಾಮೀಣ ನೀರು ಸರಬರಾಜು ಇಲಾಖೆ, ಡಿಯುಡಿಸಿ)**

**15. ಕುಡಿಯುವ ನೀರಿನ ಕಾಮಗಾರಿಗಳ ಮಾಹಿತಿ:**

2018-19 ಹಾಗೂ 2019-20ನೇ ಸಾಲಿನಲ್ಲಿ ಪ್ರಕೃತಿ ವಿಕೋಪ ಪರಿಹಾರ ಅನುದಾನದಲ್ಲಿ ಈ ಕೆಳಗಿನಂತೆ ಕುಡಿಯುವ ನೀರಿನ ಕಾಮಗಾರಿಗಳನ್ನು ತೆಗೆದುಕೊಂಡಿರುವುದಾಗಿ ಜಿಲ್ಲಾಧಿಕಾರಿಗಳು ಸಭೆಗೆ ತಿಳಿಸಿದರು.

| ತಾಲ್ಲೂಕು | ಗ್ರಾಮೀಣ | | ನಗರ | |
|---|---|---|---|---|
| | ಸಂಖ್ಯೆ | ಅಂದಾಜು (ಲಕ್ಷಗಳಲ್ಲಿ) | ಸಂಖ್ಯೆ | ಅಂದಾಜು(ಲಕ್ಷಗಳಲ್ಲಿ) |
| ಚಿಕ್ಕಮಗಳೂರು | 51 | 75.00 | 21 | 45.00 |
| ಕಡೂರು | 85 | 150.00 | 11 | 72.00 |
| ಕೊಪ್ಪ | 46 | 75.00 | 2 | 27.00 |
| ಮೂಡಿಗೆರೆ | 37 | 75.00 | 7 | 27.00 |
| ನ.ರಾಪುರ | 73 | 75.00 | 13 | 27.00 |
| ಶೃಂಗೇರಿ | 48 | 75.00 | 2 | 27.00 |
| ತರೀಕೆರೆ | 64 | 75.00 | 10 | 36.00 |
| **ಒಟ್ಟು** | **404** | **600** | **66** | **261.00** |

ಮೇಲ್ಕಂಡಂತೆ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಲು ಸೂಚಿಸಲಾಯಿತು.

**(ಕ್ರಮ: ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಚಿಕ್ಕಮಗಳೂರು ಮತ್ತು ಯೋಜನಾ ನಿರ್ದೇಶಕರು, ಡಿಯುಡಿಸಿ)**

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಅಪರ ಮುಖ್ಯ ಕಾರ್ಯದರ್ಶಿಗಳು,
ಸಿ.ಆ.ಸು.ಇ (ಇ-ಆಡಳಿತ),
ಮಿಷನ್ ನಿರ್ದೇಶಕರು ಸಕಾಲ ಹಾಗೂ
ಚಿಕ್ಕಮಗಳೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು

ನಂ ಸಿಎಎಲ್ (ಜಿಲ್ಲಾ ಕಾರ್ಯ) 2019
ದಿನಾಂಕ: 10.07.2019

**ಪ್ರತಿಯನ್ನು ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ ಈ ಕೆಳಕಂಡವರಿಗೆ ಕಳುಹಿಸಿದೆ.**

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾಪಂಚಾಯ್ತಿ, ಚಿಕ್ಕಮಗಳೂರು

2. ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಮಗಳೂರು
3. ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಮಗಳೂರು
4. ಕಾರ್ಯಪಾಲಕ ಅಭಿಯಂತರರು, ಮೆಸ್ಕಾಂ, ಚಿಕ್ಕಮಗಳೂರು
5. ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ಚಿಕ್ಕಮಗಳೂರು
6. ಉಪನಿರ್ದೇಶಕರು, ತೋಟಗಾರಿಕಾ ಇಲಾಖೆ, ಚಿಕ್ಕಮಗಳೂರು
7. ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಛೇರಿ, ಚಿಕ್ಕಮಗಳೂರು
8. ಸಹಾಯಕ ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ ಇಲಾಖೆ, ಚಿಕ್ಕಮಗಳೂರು
9. ಕಾರ್ಯಪಾಲಕ ಅಭಿಯಂತರರು, ಕೆ.ಆರ್.ಐ.ಡಿ.ಎಲ್., ಚಿಕ್ಕಮಗಳೂರು
10. ಉಪನಿರ್ದೇಶಕರು, ಪಶುಪಾಲನೆ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ಚಿಕ್ಕಮಗಳೂರು
11. ಉಪನಿರ್ದೇಶಕರು, ಕಾಫಿ ಬೋರ್ಡ್, ಚಿಕ್ಕಮಗಳೂರು
12. ಉಪನಿರ್ದೇಶಕರು, ರೇಷ್ಮೆ ಇಲಾಖೆ, ಚಿಕ್ಕಮಗಳೂರು
13. ಉಪವಿಭಾಗಾಧಿಕಾರಿ, ಕಂದಾಯ ಉಪವಿಭಾಗ, ಚಿಕ್ಕಮಗಳೂರು ಹಾಗೂ ತರೀಕೆರೆ
14. ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಚಿಕ್ಕಮಗಳೂರು
15. ಜನರಲ್ ಮ್ಯಾನೇಜರ್, ಬಿ.ಎಸ್.ಎನ್.ಎಲ್., ಚಿಕ್ಕಮಗಳೂರು
16. ಉಪನಿರ್ದೇಶಕರು, ಕೃಷಿ ಇಲಾಖೆ, ಚಿಕ್ಕಮಗಳೂರು
17. ಜಿಲ್ಲೆಯ ಎಲ್ಲಾ ತಹಸೀಲ್ದಾರರು, ಚಿಕ್ಕಮಗಳೂರು ಜಿಲ್ಲೆ
18. ಹಿರಿಯ ಸಹಾಯಕ ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಚಿಕ್ಕಮಗಳೂರು
19. ವ್ಯವಸ್ಥಾಪಕರು, ಲೀಡ್ ಬ್ಯಾಂಕ್, ಚಿಕ್ಕಮಗಳೂರು

# ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರ ಜಿಲ್ಲಾ ಪ್ರಗತಿ ಪರಿಶೀಲನಾ ವರದಿ:-

| ಕ್ರ. ಸಂ. | ಅಂಶಗಳು | ಕಾರ್ಯದರ್ಶಿಗಳ ಷರಾ |
|---|---|---|
| 1 | ಜಿಲ್ಲೆಯ ಹೆಸರು | ಕೊಡಗು |
| 2 | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯ ಹೆಸರು | ವಿ. ಅನ್ಬುಕುಮಾರ್ ಭಾ.ಆ.ಸೇ |
| 3 | ಭೇಟಿಯಾದ/ಪ್ರವಾಸದ ದಿನಾಂಕ | ಆಗಸ್ಟ್ -2019<br>ದಿನಾಂಕ:08.08.2019 ರಿಂದ<br>ದಿನಾಂಕ: 11.08.2019 |
| 4 | ಮುಖ್ಯವಾಗಿ ಗಮನಿಸಿದ ಅಂಶಗಳು ಹಾಗೂ ಸಲಹೆಗಳು | ಈ ಕೆಳಗಿನಂತಿದೆ. |

ಆಗಸ್ಟ್-2019 ದಿನಾಂಕ:08.08.2019 ರಿಂದ ದಿನಾಂಕ: 11.08.2019ರವರೆಗೆ ಕೊಡಗು ಜಿಲ್ಲೆಗೆ ಭೇಟಿ ನೀಡಿ ಭೌತಿಕ ಪರಿಶೀಲನೆ ನಡೆಸಲಾಗಿದೆ. ವಿವರ ಈ ಕೆಳಗಿನಂತಿದೆ.

**ಸಂಕ್ಷಿಪ್ತ ಮಾಹಿತಿ:-**

2019ನೇ ಸಾಲಿನಲ್ಲಿ ಕೊಡಗು ಜಿಲ್ಲೆಯಲ್ಲಿ ಮುಂಗಾರು ಮಳೆ ಚುರುಕುಗೊಂಡಿದ್ದು, ಭಾರೀ ಮಳೆಯಾಗುತ್ತಿರುವುದು ಕಂಡು ಬಂದಿರುತ್ತದೆ. ದಿನಾಂಕ:05-08-2019 ರಿಂದ 07-08-2019ರ ಬೆಳಿಗ್ಗಿನವರೆಗೆ ಜಿಲ್ಲೆಯಲ್ಲಿ ಆರೆಂಜ್ ಅಲರ್ಟ್ ಮತ್ತು ದಿನಾಂಕ:07-08-2019ರ ಸಂಜೆಯಿಂದ ದಿನಾಂಕ: 11-08-2019ರ ಬೆಳಿಗ್ಗಿನವರೆಗೆ ರೆಡ್ ಅಲರ್ಟ್ ಘೋಷಣೆ ಮಾಡಲಾಗಿದ್ದು ನಂತರ ದಿನಗಳಲ್ಲಿ ಮಳೆಯ ಪ್ರಮಾಣ ಕಡಿಮೆಯಾಗಿದ್ದು, ಮುಂದಿನ 5 ದಿನಗಳವರೆಗೆ ಜಿಲ್ಲೆಯಲ್ಲಿ ಸಾಮಾನ್ಯ ಮಳೆ ಬೀಳುವುದಾಗಿ ಮತ್ತು ಒಳನಾಡು ಪ್ರದೇಶಗಳಲ್ಲಿ ಅಲ್ಲಲ್ಲಿ ಭಾರಿ ಮಳೆಯಾಗಲಿದೆ ಎಂದು ಭಾರತೀಯ ಹವಮಾನ ಇಲಾಖೆ ತಿಳಿಸಿದೆ.

ಜಿಲ್ಲೆಗೆ ಜನವರಿ-2019ರ ಮಾಹೆಯಿಂದ ಈವರೆವಿಗೆ 1961.03ಮಿ.ಮೀ. ಮಳೆಯಾಗಿರುತ್ತದೆ. ಕಳೆದ ವರ್ಷ ಇದೇ ಅವಧಿಗೆ 2970.51 ಮಿ.ಮೀ. ಮಳೆಯಾಗಿತ್ತು. ಕಳೆದ ವರ್ಷಕ್ಕೆ ಹೋಲಿಸಿದರೆ ಜಿಲ್ಲೆಯಲ್ಲಿ ಮಳೆಯ ಪ್ರಮಾಣ ಶೇ.66.01 ರಷ್ಟಿರುತ್ತದೆ. ದಿನಾಂಕ:13-08-2019ರ ಬೆಳಿಗ್ಗೆವರೆಗೆ ಜಿಲ್ಲೆಯಲ್ಲಿ 20.59 ಮಿ.ಮೀ.ಸರಾಸರಿ ಮಳೆಯಾಗಿರುತ್ತದೆ. ಜಿಲ್ಲೆಯ ಎಲ್ಲಾ ನದಿಗಳು ತುಂಬಿ ಹರಿಯುತ್ತಿದ್ದು, ಹಾರಂಗಿ ಜಲಾಶಯದಿಂದ ನೀರನ್ನು ಹೊರ ಬಿಡಲಾಗುತ್ತಿದೆ.

**ಮಾನವ ಜೀವಹಾನಿ:**

| ಕ್ರ. ಸಂ | ತಾಲ್ಲೂಕು | ಗ್ರಾಮ | ಮೃತಪಟ್ಟವರ ಸಂಖ್ಯೆ | ಕಾರಣ |
|---|---|---|---|---|
| 1 | ವಿರಾಜಪೇಟೆ | ತೋರ | 04 | ಭೂಕುಸಿತ |
| 2 | ಮಡಿಕೇರಿ | ಕೋರಂಗಾಲ | 05 | ಭೂಕುಸಿತ |
| 3 | ಮಡಿಕೇರಿ | ಕಟ್ಟೆಮಾಡು ಪರಂಬು ಪೈಸಾರಿ | 01 | ಪ್ರವಾಹ |
| ಒಟ್ಟು | | | 10 | |

- ಭಾಗಮಂಡಲ ಕೊರಂಗಾಲ ಪ್ರದೇಶದಲ್ಲಿ 5 ಜನ ದುರ್ಮರಣ ಹೊಂದಿದ್ದು ಸದರಿ ಪ್ರದೇಶಕ್ಕೆ ಭೇಟಿ ನೀಡಿದ ಛಾಯಚಿತ್ರಗಳು:















**ಕಾಣೆಯಾದವರ ಬಗ್ಗೆ ಮಾಹಿತಿ:** ವಿರಾಜಪೇಟೆ ತಾಲ್ಲೂಕಿನ ಹೆಗ್ಗಳ ಗ್ರಾಮದ ತೋರ ಪ್ರದೇಶದ ಒಟ್ಟು 07 ಜನ ಕಾಣೆಯಾಗಿದ್ದು, ಎನ್‌ಡಿಆರ್‌ಎಫ್, ಗರುಡ ಫೋರ್ಸ್ ಮತ್ತು ಪೊಲೀಸ್ ಇಲಾಖೆ ತಂಡಗಳಿಂದ ಶೋಧ ಕಾರ್ಯ ಮುಂದುವರೆಸಲಾಗುತ್ತಿದೆ.

**ಮನೆಹಾನಿ ವಿವರ:**

| ಕ್ರ.ಸಂ | ತಾಲ್ಲೂಕು | ಭಾಗಶ: ಹಾನಿ | ಪೂರ್ಣ ಹಾನಿ |
|---|---|---|---|
| 1 | ಮಡಿಕೇರಿ | 32 | 15 |
| 2 | ವಿರಾಜಪೇಟೆ | 42 | 120 |
| 3 | ಸೋಮವಾಪೇಟೆ | 262 | 78 |
| | ಒಟ್ಟು | 336 | 153 |

**ಪ್ರವಾಹ ಸ್ಥಳಗಳು:**

ಜಿಲ್ಲೆಯಲ್ಲಿ ಅತಿವೃಷ್ಠಿಯಿಂದ ಕೆಲವು ಪ್ರದೇಶಗಳಲ್ಲಿ ಪ್ರವಾಹ ಪರಿಸ್ಥಿತಿ ಉಂಟಾಗಿದ್ದು, ಜಿಲ್ಲಾಡಳಿತದಿಂದ ಪರಿಹಾರ ಕೇಂದ್ರಗಳನ್ನು ತೆರೆಯಲಾಗಿದೆ. ಕೆಲವು ಸ್ಥಳಗಳಲ್ಲಿ ಬರೆಗಳು ಜರಿದು ರಸ್ತೆ ಸಂಚಾರ ಅಸ್ತವ್ಯಸ್ತವಾಗಿದ್ದು, ತೆರವುಗೊಳಿಸಲು ಕ್ರಮ ವಹಿಸಲಾಗಿದೆ.

**ಜಿಲ್ಲೆಯ ಒಟ್ಟು 79 ಪ್ರದೇಶಗಳಲ್ಲಿ ಪ್ರವಾಹ ಉಂಟಾಗಿದ್ದು, ವಿವರ ಕೆಳಕಂಡಂತಿದೆ.**

| ತಾಲ್ಲೂಕು/ಸ್ಥಳೀಯ ಸಂಸ್ಥೆ | ಪ್ರವಾಹ ಪೀಡಿತ ಗ್ರಾಮಗಳು | ಒಟ್ಟು ಸಂಖ್ಯೆ |
|---|---|---|
| ಮಡಿಕೇರಿ | ಕಟ್ಟೆಮಾಡು ಪರಂಬು ಪೈಸಾರಿ, ಹೊದವಾಡ, ವಾಟೆಕಾಡು, ಐಕೊಳ, ನಾಪೋಕ್ಲು, ಬೇತು, ಕಾಲೂರು, ಪಾರಾಣೆ, ಕೊಂಡಂಗೇರಿ, ಕಕ್ಕಬ್ಬೆ, ನಾಲಡಿ, ಬಲಮುರಿ, ಬಲ್ಲಮಾವಟಿ, ಪೇರೂರು, ಯವಕಪಾಡಿ, ಮರಂದೋಡ, ಚೇಲಾವರ, ಚೆಯ್ಯಂಡಾಣೆ, ಕಿರುಂದಾಡು, ಎಮ್ಮೆಮಾಡು, ನೆಲಜಿ, ಸಣ್ಣಪುಲಿಕೋಟು, ದೊಡ್ಡಪುಲಿಕೋಟು,<br>ಅರಪಟ್ಟು, ಕಡಂಗ, ಭಾಗಮಂಡಲ, ಅಯ್ಯಂಗೇರಿ, ಗಾಳಿಬೀಡು, ಕೋರಂಗಾಲ, ಕೊಟ್ಟಮುಡಿ | 30 |
| ವಿರಾಜಪೇಟೆ | ನಿಡುಗುಂಬ, ಕಾನೂರು, ಬೆಕ್ಕೆಸೊಡ್ಲೂರು, ಅರ್ವತ್ತೊಕ್ಲು, ಕೈಕೇರಿ, ಹಾತೂರು, ಕುಂದ, ಹಳ್ಳಿಗಟ್ಟು, ಬಾಳೆಲೆ, ನಿಟ್ಟೂರು, ಕೊಟ್ಟಗೇರಿ, ಚೇನಿವಾಡ, ತೆರಾಲು, ಟಿ.ಶೆಟ್ಟಿಗೇರಿ, ಕರಡಿಗೋಡು, ಗುಹ್ಯ, ನೆಲ್ಲಿಹುದಿಕೇರಿ, ಆರ್ಜಿ, ಕದನೂರು, ಗೋಣಿಕೊಪ್ಪ, ಪೊನ್ನಂಪೇಟೆ, ಬಿರುನಾಣಿ, ಕಣಿವೆ, ಶ್ರೀಮಂಗಲ, ಕೊಡಂಬೂರು, ತೋರ, ಚೆನ್ನಂಗೊಲಿ, ಬೇತ್ರಿ, ಹೆಗ್ಗಳ, ನಾಂಗಲ, ಬರಡಿ, ಹಚ್ಚಿನಾಡು | 32 |
| ಸೋಮವಾರಪೇಟೆ | ಕುಂಬಾರಗುಂಡಿ, ಬೆಟ್ಟದ ಕಾಡು, ವಾಲ್ನೂರು ತ್ಯಾಗತ್ತೂರು, ಕೂಡಿಗೆ | 04 |
| ಪಟ್ಟಣ ಪಂಚಾಯತಿ ಕುಶಾಲನಗರ | ಸಾಯಿ ಬಡಾವಣೆ, ಕುವೆಂಪು ಬಡಾವಣೆ, ತಮ್ಮಣ್ಣಶೆಟ್ಟಿ ಬಡಾವಣೆ, ಇಂದಿರಾ ಬಡಾವಣೆ, ನಿಜಾಮುದ್ದೀನ್ ಬಡಾವಣೆ, | 05 |
| ಪಟ್ಟಣ ಪಂಚಾಯತಿ, ವಿರಾಜಪೇಟೆ | ಅರಸು ನಗರ, ನೆಹರು ನಗರ, ಮಲೆತಿರಿಕೆ ಬೆಟ್ಟ, ಮೊಗರಗಲ್ಲಿ, ಸುಂಕದಕಟ್ಟೆ, ಅಪ್ಪಯ್ಯಸ್ವಾಮಿ ರಸ್ತೆ, ಸುಭಾಶ್ ನಗರ, ವಿಜಯನಗರ | 08 |
| ಒಟ್ಟು ಪ್ರವಾಹ ಪೀಡಿತ ಪ್ರದೇಶಗಳು | | 79 |

**ಸಂತ್ರಸ್ಥರ ರಕ್ಷಣೆ:** ಈವರೆಗೆ ಜಿಲ್ಲೆಯಲ್ಲಿ ಒಟ್ಟು 1507 ಜನ ಮತ್ತು 19 ಜಾನುವಾರುಗಳನ್ನು ರಕ್ಷಿಸಲಾಗಿದೆ. ವಿವರ ಕೆಳಕಂಡಂತಿದೆ. ಇನ್ನೂ ಕೆಲವು ಭಾಗಗಳಿಗೆ ರಕ್ಷಣೆಗಾಗಿ ಭಾರತೀಯ ಸೇನೆ, ಎನ್.ಡಿ.ಆರ್.ಎಫ್ ಪೊಲೀಸ್ ಇಲಾಖಾ ತಂಡಗಳು ತೆರಳಿದ್ದು, ಮಾಹಿತಿ ಇನ್ನಷ್ಟೇ ಲಭ್ಯವಾಗಬೇಕಾಗಿದೆ. (ವಿವರ ಅನುಬಂಧ-1ರಲ್ಲಿ ಲಗತ್ತಿಸಿದೆ)

**ಜಿಲ್ಲೆಯಲ್ಲಿ ತೆರೆಯಲಾದ ಪರಿಹಾರ ಕೇಂದ್ರಗಳು:**

ಜಿಲ್ಲಾಯಲ್ಲಿ ಒಟ್ಟಾರೆ 44 ಪರಿಹಾರ ಕೇಂದ್ರಗಳನ್ನು ತೆರೆಯಲಾಗಿದ್ದು, ಒಟ್ಟು 7470 ಸಂತ್ರಸ್ಥರು ಆಶ್ರಯ ಪಡೆಯುತ್ತಿದಾರೆ. ಸದರಿ ಪರಿಹಾರ ಕೇಂದ್ರಗಳಿಗೆ ನೋಡಲ್ ಅಧಿಕಾರಿ ಮತ್ತು ಮೇಲ್ವಿಚಾರಕರನ್ನು ನೇಮಿಸಿದ್ದು, ಸಂತ್ರಸ್ಥರಿಗೆ ಎಲ್ಲಾ ರೀತಿಯ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಕ್ರಮ ವಹಿಸಲಾಗಿದೆ. (ವಿವರ ಅನುಬಂಧ-2ರಲ್ಲಿ ಲಗತ್ತಿಸಿದೆ)

**ಭೂಕುಸಿತ ಮತ್ತು ಪ್ರವಾಹದಿಂದ ಬಂದ್ ಆದ ರಸ್ತೆಗಳ ವಿವರ:**

ಜಿಲ್ಲೆಯ ವಿವಿಧ ಭಾಗಗಳಲ್ಲಿ ಬರೆ ಜರಿದು ರಸ್ತೆ ಸಂಚಾರಕ್ಕೆ ಅಡಚಣೆ ಮತ್ತು ಮರ ಬಿದ್ದು ಅಡಚಣೆ ಉಂಟಾಗಿದ್ದು ತುರ್ತಾಗಿ ಕ್ರಮ ವಹಿಸಬಹುದಾದ ಕಡೆಗಳಲ್ಲಿ ಸಂಬಂಧಪಟ್ಟ ಇಲಾಖೆಗಳಿಂದ ತುರ್ತು ಕ್ರಮ ವಹಿಸಿ ರಸ್ತೆಗಳನ್ನು ಸಾರ್ವಜನಿಕ ಸಂಚಾರಕ್ಕೆ ಮುಕ್ತಗೊಳಿಸಲಾಗಿದೆ. ಜಿಲ್ಲೆಯ ಒಟ್ಟು 02 ರಸ್ತೆಗಳು ಭೂಕುಸಿತದಿಂದ ಬಂದ್ ಆಗಿರುತ್ತವೆ. ವಿವರ ಕೆಳಕಂಡಂತಿದೆ.

- **ಮಡಿಕೇರಿ-ವಿರಾಜಪೇಟೆ-ಮಾಕುಟ್ಟ ರಸ್ತೆ**
- **ಗಾಳಿಬೀಡು-ಪಾಟಿ-ಕಾಲೂರು ರಸ್ತೆ**

ಅತೀವೃಷ್ಠಿಯಿಂದ ಆಗಬಹುದಾದ ತೊಂದರೆಗಳನ್ನು ಎದುರಿಸಲು ಜಿಲ್ಲಾಡಳಿತವು ಎಲ್ಲಾ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಂಡಿದ್ದು, ಜಿಲ್ಲೆಯಾದ್ಯಂತ ಅಧಿಕಾರಿಗಳು ಕಾರ್ಯಪ್ರವೃತ್ತರಾಗಿರುತ್ತಾರೆ. ಯಾವುದೇ ತುರ್ತು ಸಂದರ್ಭಗಳನ್ನು ಎದುರಿಸಲು ಜಿಲ್ಲಾಡಳಿತ ಸಜ್ಜಾಗಿದ್ದು, ಜನರು ಯಾವುದೇ ಆತಂಕ ಪಡುವ ಅಗತ್ಯವಿರುವುದಿಲ್ಲ. ಜಿಲ್ಲೆಯ ಮಡಿಕೇರಿ ಮತ್ತು ವಿರಾಜಪೇಟೆ ತಾಲ್ಲೂಕಿನಲ್ಲಿ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆಗಳು ಮೊಕ್ಕಾಂ ಹೂಡಿದ್ದು, ತುರ್ತು ಸಂದರ್ಭದಲ್ಲಿ ನೆರವಿಗೆ ಬರಲಿವೆ. ಅಲ್ಲದೆ ಜಿಲ್ಲಾಧಿಕಾರಿಗಳ ಕಚೇರಿ ಸೇರಿದಂತೆ ಜಿಲ್ಲೆಯ ಎಲ್ಲಾ ತಾಲ್ಲೂಕು ಕಚೇರಿಗಳಲ್ಲಿ 24ಥ7 ನಿಯಂತ್ರಣಾ ಕೊಠಡಿಗಳು ಕಾರ್ಯನಿರ್ವಹಿಸುತ್ತಿವೆ. ಹಾಗೆಯೇ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ವಾಟ್ಸಪ್‌ನಲ್ಲಿ ಸಹ ಪ್ರಕೃತಿ ವಿಕೋಪ ಸಂಬಂಧಿತ ದೂರುಗಳನ್ನು ಸ್ವೀಕರಿಸಲಾಗುತ್ತಿದ್ದು, ತುರ್ತು ಕ್ರಮ ವಹಿಸಲಾಗುತ್ತಿದೆ.

**ಪರಿಹಾರ ಕೇಂದ್ರಗಳಿಗೆ ಭೇಟಿ ನೀಡಿದ ಛಾಯಚಿತ್ರಗಳು:**













ಪ್ರವಾಹ ಮತ್ತು ಭೂ ಕುಸಿತದಿಂದ ಅಳಾದ ಪ್ರದೇಶಗಳ ಛಾಯಚಿತ್ರಗಳು:-




REDMI NOTE 5 PRO
MI DUAL CAMERA



## ತುಮಕೂರು ಉಸ್ತುವಾರಿ ಜಿಲ್ಲೆಗೆ ದಿನಾಂಕ: 11.07.2019 ರಂದು ಭೇಟಿ ನೀಡಿದ ವಿವರ

ದಿನಾಂಕ: 11.07.2019 ರಂದು ನಾನು ಜಿಲ್ಲಾಧಿಕಾರಿಯವರ ಕಛೇರಿಯಲ್ಲಿ ಮಾನ್ಯ ಮುಖ್ಯ ಕಾರ್ಯದರ್ಶಿಗಳ ಆದೇಶದಂತೆ ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯ (KLLADs) ಪ್ರಗತಿ ಪರಿಶೀಲನೆಯನ್ನು ಮಾಡಿರುತ್ತೇನೆ. ಜಿಲ್ಲಾಧಿಕಾರಿಗಳು, ತುಮಕೂರುರವರು ಒಂದು ವಾರದ ಒಳಗಡೆ 2018 ಕ್ಕಿಂತ ಮುಂಚೆ ಇರುವ ಎಲ್ಲಾ Ongoing Works (ಕಾಮಗಾರಿಗಳ) ವಿವರವನ್ನು Worksoft ತಂತ್ರಾಂಶದಲ್ಲಿ ಭರ್ತಿ ಮಾಡಲು ಒಪ್ಪಿರುತ್ತಾರೆ. **ಆದರೆ ಸಂಬಂಧಪಟ್ಟ ಸಂಸ್ಥೆಗಳಿಂದ ವಿಶೇಷವಾಗಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದಿಂದ ಪ್ರಗತಿ ತುಂಬಾ ಕುಂಠಿತವಾಗಿದ್ದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಪ್ರತಿ ತಿಂಗಳು ಅಭಿಯಂತರರ ಸಭೆಯಲ್ಲಿ ಪರಿಶೀಲಿಸಲು ಸೂಚಿಸಲಾಗಿದೆ.**

ಜಿಲ್ಲಾಧಿಕಾರಿಗಳು ಸಂಬಂಧಪಟ್ಟ **ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ಪಂಚಾಯತ್, ಲೋಕೋಪಯೋಗಿ, ಕೆ.ಆರ್.ಐ.ಡಿ.ಎಲ್, ಅವರುಗಳು ಯಾವಾಗಲೂ ಸಭೆಗಳನ್ನು ಕರೆದಾಗ ಲಭ್ಯವಿರುವುದಿಲ್ಲವೆಂದು ವಿಷಾಧಿಸಿರುತ್ತಾರೆ.** ಆದುದರಿಂದ **ಬೆಂಗಳೂರಿನಲ್ಲಿ ಆಗಿಂದ್ದಾಗ್ಗೆ ಅವರ ಸಭೆಗಳನ್ನು ಕರೆಯುವುದನ್ನು ಕಡಿಮೆಗೊಳಿಸಬೇಕೆಂದು ಕೋರಿರುತ್ತಾರೆ.**

ಪ್ರಗತಿ ಪರಿಶೀಲನೆ ನಂತರ ಎಲ್ಲಾ ಅಭಿಯಂತರರಿಗೆ ಹೊಸ ತಾಂತ್ರಿಕತೆಯನ್ನು ಅಳವಡಿಸಿ, ಕಾಮಗಾರಿಗಳನ್ನು ತುರ್ತಾಗಿ ಪೂರ್ಣಗೊಳಿಸಲು ಸೂಚಿಸಲಾಯಿತು. ಉದಾಹರಣೆಗೆ: **ಎಲ್ಲಾ ಸಹಾಯಕ ಕಾರ್ಯಪಾಲಕ ಅಭಿಯಂತರುಗಳು ಉಚಿತವಾಗಿ ಲಭ್ಯವಿರುವ CADCAM ತಂತ್ರಾಂಶವನ್ನು ತಮ್ಮ ಗಣಕಯಂತ್ರದಲ್ಲಿ download ಮಾಡಿ ಅಂಗನವಾಡಿ, ಶಾಲೆ, ಆಸ್ಪತ್ರೆ, ಸಮುದಾಯ ಭವನ, ಇತ್ಯಾದಿ ಕಾಮಗಾರಿಗಳಿಗೆ Type Design ನ್ನು ಉಪಯೋಗಿಸಿ,** ಸ್ಥಳದ Soil Testing ಮಾಡಿದ ತಕ್ಷಣ ಆನ್‌ಲೈನ್ ಮೂಲಕ ತಾಂತ್ರಿಕ ಅನುಮೋದನೆಯನ್ನು ನೀಡತಕ್ಕದ್ದು. Soil Testing Laboratory ಗಳನ್ನು ಪ್ರತಿಯೊಂದು

ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿಯಲ್ಲಿ ಸ್ಥಾಪಿಸಲು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಸೂಚಿಸಲಾಯಿತು. **ಇದರಿಂದ ಮಣ್ಣು ಪರೀಕ್ಷೆಗಾಗಿ ಇಂಜಿನೀಯರಿಂಗ್ ಕಾಲೇಜಿಗೆ ಮಾದರಿಗಳನ್ನು ಕಳುಹಿಸಿ ನಿರೀಕ್ಷಿಸದಂತೆ ಸಮಯವನ್ನು ವ್ಯರ್ಥವಾಗದಂತೆ ನೋಡಿಕೊಳ್ಳಬಹುದಾಗಿದೆ.**

KLLADs ಮಾರ್ಗಸೂಚಿಯಂತೆ ಶಾಸಕರ ಸ್ವೀಕರಿಸಿ, ಜಿಲ್ಲಾಧಿಕಾರಿಗಳು ಪ್ರಸ್ತಾವನೆಗಳನ್ನು ಆಡಳಿತಾತ್ಮಕವಾಗಿ 30 ದಿವಸಗಳೊಳಗಾಗಿ ಅನುಮೋದನೆ ನೀಡಬೇಕಾಗಿದೆ. **ನಂತರ ಸಂಬಂಧಪಟ್ಟ ಇಂಜಿನೀಯರಿಂಗ್ ಇಲಾಖೆಗಳು ಕಾಲಮಿತಿಯನ್ನು ಅನುಸರಿಸಬೇಕಾಗಿ ಮಾರ್ಗಸೂಚಿ** ಇಲ್ಲದೆ ಇರುವುದರಿಂದ, ಸಕಾಲದ ಮಾದರಿಯಲ್ಲಿ ಕಾಲಮಿತಿಗಳನ್ನು ಪ್ರತಿ ಹಂತಕ್ಕೆ ನಿಗದಿಪಡಿಸಲು ಜಿಲ್ಲಾಧಿಕಾರಿಗಳು ಶಿಫಾರಸ್ಸು ಮಾಡಿರುತ್ತಾರೆ.

ತಿಪಟೂರಿನ ಶಾಸಕರು ತಮ್ಮ KLLADs ಅನುದಾನವನ್ನು ನರೇಗಾ ಜೊತೆಗೆ ಕೂಡಿಸಿರುವುದರಿಂದ ಉತ್ತಮ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳಲು ಸಾಧ್ಯವಾಗುವುದೆಂದು ಜಿಲ್ಲಾಧಿಕಾರಿಗಳು ಸಹಕರಿಸಲು ಹಾಗೂ ಉಳಿದ ಶಾಸಕರಿಗೂ ಸಹ ಈ ರೀತಿ ಕ್ರಮಕೈಗೊಳ್ಳಬೇಕೆಂದು ಸಲಹೆ ನೀಡಿರುತ್ತಾರೆ.

ಜಿಲ್ಲಾ ಪಂಚಾಯತ್ ಕಛೇರಿಯಲ್ಲಿ ಎಂಜಿನರೇಗಾ (MGNREGA) ಪ್ರಗತಿ ಪೈಕಿ Line Department ಗಳಾದ ಕೃಷಿ, ತೋಟಗಾರಿಕೆ, ಅರಣ್ಯ, ರೇಷ್ಮೆ ಹಾಗೂ ಪಶುಸಂಗೋಪನೆ ಇಲಖೆಗಳ ಪ್ರಗತಿ ಕುಂಠಿತವಾಗಿರುವುದರಿಂದ, ಜಿಲ್ಲಾಮಟ್ಟದ ಅಧಿಕಾರಿಗಳ ಜೊತೆಗೆ ವಿಮರ್ಶೆ ಮಾಡಿದೆ. **ಈ ಬಗ್ಗೆ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಂಟಿ ನಿರ್ದೇಶಕರು, ಕೃಷಿ ಹಾಗೂ Deputy Conservator of Forest, Territorial Social Forestry ರವರು ಎಷ್ಟು ಸಲ ಸಭೆಗಳಿಗೆ ಕರೆದರೂ ಸಹ ಬರುವುದಿಲ್ಲವೆಂದು ವಿಷಾಧಿಸಿದರು.** ಇದರಿಂದ ರಾಷ್ಟ್ರೀಯ ಕಾರ್ಯಕ್ರಮದ ಪ್ರಗತಿಗೆ ಧಕ್ಕೆಯಾಗಿದೆ ಎಂದು ತಿಳಿಸಿ, ಸಂಬಂಧಪಟ್ಟ ಇಲಾಖೆಯ















**ದಿನಪತ್ರಿಕೆಗಳ ವರದಿ:-**

# ಅತಿವೃಷ್ಟಿ : ಕೂಡಲೇ ಪರಿಹಾರ ನೀಡಲು ವಿ.ಅನ್ಬುಕುಮಾರ್ ಸೂಚನೆ



ಮಡಿಕೇರಿ : ಕಳೆದ ಒಂದು ವಾರದಿಂದ ಸುರಿದ ಧಾರಾಕಾರ ಮಳೆಯಿಂದ ಭೂ ಕುಸಿತಕ್ಕೊಳಗಾಗಿ 7 ಮಂದಿ ಜೀವ ಕಳೆದುಕೊಂಡಿದ್ದು, ಅವರ ಕುಟುಂಬದವರಿಗೆ ತಕ್ಷಣವೇ ಪರಿಹಾರ ನೀಡುವಂತೆ ಕೊಡಗು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ವಿ.ಅನ್ಬುಕುಮಾರ್ ಅವರು ಮಡಿಕೇರಿ ಉಪ ವಿಭಾಗಾಧಿಕಾರಿಯವರಿಗೆ ಸೂಚನೆ ನೀಡಿದರು.

ಮಳೆ ಹಾನಿ ಪರಿಹಾರ ಸಂಬಂಧ ನಗರದ ಜಿಲ್ಲಾಧಿಕಾರಿ ಕಚೇರಿಯಲ್ಲಿ ಭಾನುವಾರ ಜಿಲ್ಲಾಧಿಕಾರಿ ಅನೀಸ್ ಕಣ್ಮಣಿ ಜಾಯ್, ಜಿ.ಪಂ.ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಲಕ್ಷ್ಮಿಪ್ರಿಯ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸುಮನ್ ಡಿ.ಪೆನ್ನೇಕರ್ ಮತ್ತಿತರರ ಉಪಸ್ಥಿತಿಯಲ್ಲಿ ನಡೆದ ಸಭೆಯ ಅಧ್ಯಕ್ಷತೆವಹಿಸಿ ಅವರು ಮಾತನಾಡಿದರು.

ಪ್ರಕೃತಿ ವಿಕೋಪ ಮಾರ್ಗಸೂಚಿಯಂತೆ ದಿನಬಳಕೆ ಸಾಮಗ್ರಿಗಳನ್ನು ಕಳೆದುಕೊಂಡ ಕುಟುಂಬದವರಿಗೆ 3800 ರೂ. ಪರಿಹಾರ ಒದಗಿಸುವಂತೆ ನಿರ್ದೇಶನ ನೀಡಿದ ಅವರು, ಮಳೆಗಾಲದ ಸಂದರ್ಭದಲ್ಲಿ ಅತ್ಯಗತ್ಯವಾಗಿ ಬೇಕಿರುವ ಬೋಟ್ ಹಾಗೂ ರ್‍ಯಾಫ್ಟ್‌ಗಳನ್ನು ಹೆಚ್ಚುವರಿಯಾಗಿ ತರಿಸಿಕೊಳ್ಳುವುದು. ಮತ್ತು ಅಗತ್ಯ ವಾಹನಗಳನ್ನು ವ್ಯವಸ್ಥೆ ಮಾಡಿಕೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಕೃಷಿ, ತೋಟಗಾರಿಕೆ ಕಾಫಿ ಮತ್ತಿತ್ತರ ಬೆಳೆ ನಷ್ಟದ ಅಂದಾಜು ಪಟ್ಟಿ ಸಲ್ಲಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

ಭೂ ಕುಸಿತದಿಂದ ಜೀವ ಕಳೆದುಕೊಂಡ ಕುಟುಂಬಗಳಿಗೆತಲಾ 5 ಲಕ್ಷರೂ. ಪರಿಹಾರಜೊತೆಗೆ ಪ್ರಧಾನಮಂತ್ರಿಯವರ ಪರಿಹಾರ ನಿಧಿಯಿಂದ 2 ಲಕ್ಷ ರೂ ಪರಿಹಾರ ನೀಡಲಾಗುತ್ತದೆ. ಈ ಪರಿಹಾರ ಕಲ್ಪಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು. ಹಾಗೆಯೇ ಗಾಯಗೊಂಡವರಿಗೆ ಪರಿಹಾರ ಒದಗಿಸಲು ಅವಕಾಶವಿದ್ದು, ಅಗತ್ಯ ಕ್ರಮಕೈಗೊಳ್ಳುವಂತೆ ಕಂದಾಯ ಅಧಿಕಾರಿಗಳಿಗೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ನಿರ್ದೇಶನ ನೀಡಿದರು.

ಜಿಲ್ಲಾಧಿಕಾರಿ ಅನೀಸ್ ಕಣ್ಮಣಿ ಜಾಯ್ ಅವರು ಪರಿಹಾರ ಕೇಂದ್ರದಲ್ಲಿನ ಸಂತ್ರಸ್ತರಿಗೆ ಆಹಾರ ಕಿಟ್ ವಿತರಣೆ, ಮತ್ತಿತರ ಬಗ್ಗೆ ಹಲವು ಮಾಹಿತಿ ನೀಡಿದರು.

ಅಪರ ಜಿಲ್ಲಾಧಿಕಾರಿ ಡಾ.ಸಿ.ವಿ ಸ್ನೇಹಾ, ಉಪ ವಿಭಾಗಾಧಿಕಾರಿ ಟಿ.ಜವರೇಗೌಡ, ಕೃಷಿ ಇಲಾಖೆಯ ಜಂಟಿ ನಿರ್ದೇಶಕ ರಾಜು, ತೋಟಗಾರಿಕೆ ಇಲಾಖೆಯ ಉಪ ನಿರ್ದೇಶಕ ಚಂದ್ರಶೇಖರ್, ಕಾಫಿ ಮಂಡಳಿಯ ಉಪ ನಿರ್ದೇಶಕರಾದ ಶಿವಕುಮಾರ ಸ್ವಾಮಿ (ಮಡಿಕೇರಿ), ಸತೀಶ್ ಚಂದ್ರ (ವೀರಾಜಪೇಟೆ), ಪಿ.ಶಿವಪ್ರಸಾದ್ (ಚೆಟ್ಟಳ್ಳಿ), ಐಎಎಸ್ ಮತ್ತು ಕೆಎಎಸ್ ಪ್ರೊಬೆಷನರಿ ಅಧಿಕಾರಿಗಳು ಇತರರು ಇದ್ದರು.

# ನಿರಾಶ್ರಿತರಿಗೆ ತಕ್ಷಣ ಪರಿಹಾರ ನೀಡಿ

## ಮಳೆ ಹಾನಿ ಪರಿಹಾರ ಸಭೆಯಲ್ಲಿ ಉಸ್ತುವಾರಿ ಕಾರ್ಯದರ್ಶಿ ಅನ್ಬುಕುಮಾರ್ ಸೂಚನೆ

**ಮಡಿಕೇರಿ :** ಮಳೆ ಹಾನಿ ಪರಿಹಾರ ಸಂಬಂಧ ಕೊಡಗು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ವಿ.ಅನ್ಬುಕುಮಾರ್ ಅಧ್ಯಕ್ಷತೆಯಲ್ಲಿ, ಜಿಲ್ಲಾಧಿಕಾರಿ ಅನೀಸ್ ಕಣ್ಮಣಿ ಜಾಯ್, ಜಿ.ಪಂ.ಸಿಇಒ ಕೆ.ಲಕ್ಷ್ಮಿಪ್ರಿಯ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸುಮನ್ ಡಿ.ಪೆನ್ನೇಕರ್ ಉಪಸ್ಥಿತಿಯಲ್ಲಿ ಭಾನುವಾರ ಸಭೆ ನಡೆಯಿತು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ, ಕಳೆದ ಒಂದು ವಾರದಿಂದ ಸುರಿದ ಧಾರಾಕಾರ ಮಳೆಯಿಂದ ಭೂ ಕುಸಿತ ಉಂಟಾಗಿ 7 ಮಂದಿ ಜೀವ ಕಳೆದುಕೊಂಡಿದ್ದಾರೆ. ಇವರ ಕುಟುಂಬದವರಿಗೆ ತಕ್ಷಣವೇ ಪರಿಹಾರ ನೀಡುವಂತೆ ಉಪ ವಿಭಾಗಾಧಿಕಾರಿ ಅವರಿಗೆ ಸೂಚಿಸಿದರು.

ಪ್ರಕೃತಿ ವಿಕೋಪ ಮಾರ್ಗಸೂಚಿಯಂತೆ ದಿನಬಳಕೆ ಸಾಮಗ್ರಿಗಳನ್ನು ಕಳೆದುಕೊಂಡ ಕುಟುಂಬದವರಿಗೆ 3,800 ರು. ಪರಿಹಾರ ಒದಗಿಸುವಂತೆ ವಿ.ಅನ್ಬುಕುಮಾರ್ ನಿರ್ದೇಶನ ನೀಡಿದರು.

ಕೃಷಿ, ತೋಟಗಾರಿಕೆ ಕಾಫಿ ಮತ್ತಿತರ ಬೆಳೆ ನಷ್ಟದ ಅಂದಾಜು ಪಟ್ಟಿ ಸಲ್ಲಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

ಭೂ ಕುಸಿತದಿಂದ ಜೀವ ಕಳೆದುಕೊಂಡ ಕುಟುಂಬಗಳಿಗೆ ತಲಾ 5 ಲಕ್ಷ ರು. ಪರಿಹಾರ ಜೊತೆಗೆ ಪ್ರಧಾನಮಂತ್ರಿಯವರ ಪರಿಹಾರ ನಿಧಿಯಿಂದ 2 ಲಕ್ಷ ರು. ಪರಿಹಾರ ನೀಡಲಾಗುತ್ತದೆ. ಈ ಪರಿಹಾರ ಕಲ್ಪಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು. ಹಾಗೆಯೇ ಗಾಯಗೊಂಡವರಿಗೆ ಪರಿಹಾರ ಒದಗಿಸಲು ಅವಕಾಶವಿದ್ದು, ಅಗತ್ಯ ಕ್ರಮಕ್ಕೆಗೊಳ್ಳುವಂತೆ ಕಂದಾಯ ಅಧಿಕಾರಿಗಳಿಗೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಸೂಚಿಸಿದರು.

ಜಿಲ್ಲಾಧಿಕಾರಿ ಅನೀಸ್ ಕಣ್ಮಣಿ ಜಾಯ್ ಪರಿಹಾರ ಕೇಂದ್ರದಲ್ಲಿನ ಸಂತ್ರಸ್ತರಿಗೆ ಆಹಾರ ಕಿಟ್ ವಿತರಣೆ ಮತ್ತಿತರ ಬಗ್ಗೆ ಹಲವು ಮಾಹಿತಿ ನೀಡಿದರು.

ಎಡಿಸಿ ಡಾ.ಸಿ.ವಿ ಸ್ನೇಹಾ, ಉಪ ವಿಭಾಗಾಧಿಕಾರಿ ಟಿ.ಜವರೇಗೌಡ, ಕೃಷಿ ಇಲಾಖೆಯ ಜಂಟಿ ನಿರ್ದೇಶಕ ರಾಜು, ತೋಟಗಾರಿಕೆ ಇಲಾಖೆಯ ಉಪ ನಿರ್ದೇಶಕ ಚಂದ್ರಶೇಖರ್, ಕಾಫಿಮಂಡಳಿಯ ಉಪ ನಿರ್ದೇಶಕ ಶಿವಕುಮಾರ ಸ್ವಾಮಿ (ಮಡಿಕೇರಿ), ಸತೀಶ್ ಚಂದ್ರ, (ವಿರಾಜಪೇಟೆ), ಪಿ.ಶಿವಪ್ರಸಾದ್ (ಚೆಟ್ಟಳ್ಳಿ), ಐಎಎಸ್ ಮತ್ತು ಕೆಎಎಸ್ ಪ್ರೊಬೇಷನರಿ ಅಧಿಕಾರಿಗಳು ಇತರರು ಇದ್ದರು.

KP



ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಅನ್ಬುಕುಮಾರ್ ಕುಶಾಲನಗರದ ವಾಸವಿ ಭವನ ಪರಿಹಾರ ಕೇಂದ್ರಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

---

# ಪುನರ್ವಸತಿ ಕೇಂದ್ರಗಳಿಗೆ ಅಧಿಕಾರಿ, ಸಿಬ್ಬಂದಿ ನಿಯೋಜನೆ

ಪ್ರಜಾವಾಣಿ ವಾರ್ತೆ

**ಮಡಿಕೇರಿ:** ಪ್ರಕೃತಿ ವಿಕೋಪ ಸಂತ್ರಸ್ತರಾದವರನ್ನು ಪುನರ್ವಸತಿ ಕೇಂದ್ರಕ್ಕೆ ಸ್ಥಳಾಂತರಿಸಲಾಗಿದ್ದು, ಸಂತಸ್ತರಿಗೆ ಮೂಲ ಸೌಕರ್ಯ ಉತ್ತಮ ರೀತಿಯಲ್ಲಿ ಒದಗಿಸುವ ಹಾಗೂ ನಿರ್ವಹಿಸುವ ನಿಟ್ಟಿನಲ್ಲಿ ಪುನರ್ವಸತಿ ಕೇಂದ್ರಗಳಿಗೆ ಅಧಿಕಾರಿ ಹಾಗೂ ಸಿಬ್ಬಂದಿಯನ್ನು ಜಿಲ್ಲಾಡಳಿತ ನಿಯೋಜಿಸಿದೆ.

ಮಡಿಕೇರಿ ತಾಲ್ಲೂಕು: ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಐಕೊಳ ರವಿಶಂಕರ್ (ಮೊಬೈಲ್:94817 72925), ಅಕ್ಷತಾ ಬಿ.ಶೆಟ್ಟಿ, (77950 68886), ಮಡಿಕೇರಿಯ ತಾಲ್ಲೂಕು ಪಂಚಾಯಿತಿ ಸಾಮರ್ಥ್ಯ ಸೌಧಕ್ಕೆ ಪಣೀಂದ್ರ (87224 75697), ಸುಬ್ರಮಣ್ಯ (70190 95463), ಮಡಿಕೇರಿ ಜಿಲ್ಲಾ ಪಂಚಾಯ್ತಿ ಸಂಪನ್ಮೂಲ ಕೇಂದ್ರ ಬಿ.ಯು.ಜಯಣ್ಣ(95358 57212) ಶಿವಕುಮಾರ್(95358 57026), ಮಡಿಕೇರಿ ಕೇಂದ್ರೀಯ ವಿದ್ಯಾಲಯ ಸಿ.ಎನ್.ರಘು(98456 84671).

ವಾಟೆಕಾಡು ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆ, ಪ್ರಶಾಂತ್ (99800 60146), ಹೊದವಾಡ ಸರ್ಕಾರಿ ಪ್ರೌಢ ಶಾಲೆಗೆ ರೇಷ್ಮಾ(97407 59899), ಪಾರಾಣೆ ಎಚ್.ಬಿ.ರವಿಕುಮಾರ್ (81050 90185), ನಾಪೋಕ್ಲು ಸರ್ಕಾರಿ ಪದವಿ ಪೂರ್ವ ಕಾಲೇಜಿಗೆ ಎಂ.ಎಸ್.ಚೋಂದಕ್ಕಿ (94817 73022), ಮರಗೋಡು ಭಾರತಿ ಸಂಯುಕ್ತ ಪದವಿ ಪೂರ್ವ ಕಾಲೇಜು, ಗಿರೀಶ್(94494 75965), ಭಾಗಮಂಡಲಕ್ಕೆ ಸುರೇಶ್ (91643 81313), ಶಮೀಲಾ (97415 67670).

**ಸೋಮವಾರಪೇಟೆ:** ಮಾದಾಪುರ ಚೆನ್ನಮ್ಮ ಕಾಲೇಜು ಗಣೇಶ್(94837 51306), ಪ್ರಸಾದ್ (94819 51460), ಕುಶಾಲನಗರ ವಾಲ್ಮೀಕಿ ಭವನಕ್ಕೆ ಮಲ್ಲೇಸ್ವಾಮಿ(94809 84722), ನೆಲ್ಲಿಹುದಿಕೇರಿ ಬೆಟ್ಟದಕಾಡು ಅಂಗನವಾಡಿ ಕೇಂದ್ರಕ್ಕೆ ಕುಮಾರ್ (9964 48105), ಸಂತೋಷ್ (97391 96929), ನೆಲ್ಲಿಹುದಿಕೇರಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ದೇವಾನಂದ್(9482192252), ವಾಲ್ನೂರು ತ್ಯಾಗತ್ತೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹರೀಶ್ಚಂದ್ರ(94483 25811), ಮುಳ್ಳುಸೋಗೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕೇಶವ್(97415 11562).

**ವಿರಾಜಪೇಟೆ:** ಕರಡಿಗೋಡು ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆಗೆ ಶಿವಮೂರ್ತಿ(99010 36367) ಕರಡಿಗೋಡು ಬಸವೇಶ್ವರ ಸಮುದಾಯ ಭವನ ಶಿವರಾಜು (89046 73536), ಕೊಂಡಂಗೇರಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಎಂ.ಎಸ್.ಮೋಹನ್ (9449183761).

ಗೋಣಿಕೊಪ್ಪ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆ, ಸೀತಾಲಕ್ಷ್ಮಿ ಟಿ.ಎಸ್. (91088 10782), ಶ್ರೀಮಂಗಲ, ವಿ.ಎಸ್.ಎಸ್.ಎನ್. ಬ್ಯಾಂಕ್, ಯತಿರಾಜ್(91081 55321), ಬೇಗೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಹುದಿಕೇರಿ ಜೀವನ್(7349 064886), ಸಿದ್ದಾಪುರ ಜಿ.ಎಂ.ಪಿ.ಶಾಲೆ, ಪ್ರೇಮಕುಮಾರಿ(94499 71796), ಸಿದ್ದಾಪುರ ಬಿ.ಜಿ.ಎಸ್. ಪ್ರೌಢ ಶಾಲೆ, ಗುಹ್ಯ ಬಾಬು ನಾಯಕ್(81052 15560), ಚೋರಿಕಾಡು ಪ್ರಾಥಮಿಕ ಶಾಲೆ ಕೆ.ಎಂ.ಸೋಮಯ್ಯ (94487 20487), ಹಗ್ಗಳ ಸರ್ಕಾರಿ ಪ್ರೌಢ ಶಾಲೆ, ನವೀನ್ (87620 22319), ಸುಧೀರ್ ಅಮ್ಮತ್ತಿ ಕಳತ್ಮಾಡು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಟಿ.ಎಸ್. ವಿನೋದ್ (94493 34707) ಅವರನ್ನು ನಿಯೋಜಿಸಲಾಗಿದೆ ಎಂದು ಜಿಲ್ಲಾಧಿಕಾರಿ ಅನೀಸ್ ಕಣ್ಮಣಿ ಜಾಯ್ ತಿಳಿಸಿದ್ದಾರೆ.

### ಕತ್ತಲೆಯಲ್ಲೇ ಬದುಕು...

ಮಡಿಕೇರಿ: ಜಿಲ್ಲೆಯ ಕರಿಕೆ, ಮಾಂದಲ್ಪಟ್ಟಿ, ಗಾಳಿಬೀಡು, ಭಾಗಮಂಡಲ ಸುತ್ತಮುತ್ತಲಿನ ಗ್ರಾಮಗಳಲ್ಲಿ 5 ದಿನಗಳಿಂದ ವಿದ್ಯುತ್ ಕಡಿತಗೊಂಡಿದೆ.

ಮೊಬೈಲ್ ಫೋನ್‌ಗಳು ಸ್ತಬ್ಧವಾಗಿವೆ. ಈ ಭಾಗದ ಜನರ ಬದುಕಿನಲ್ಲಿ ಕಾರ್ಗತ್ತಲು ಆವರಿಸಿದೆ. ವಿದ್ಯುತ್ ದುರಸ್ತಿ ಕಾರ್ಯಕ್ಕೂ ಗಾಳಿ- ಮಳೆ ಅಡ್ಡಿಯಾಗುತ್ತಿದೆ. ಬೆಳಕು ಮೂಡಲು ಇನ್ನೆಷ್ಟು ದಿನ ಬೇಕೋ ಗೊತ್ತಿಲ್ಲ ಎಂದು ಜನತೆ ಚಿಂತಿತರಾಗಿದ್ದಾರೆ.

---

# ಕೊಡಗಿನ ಮಳೆ ವಿವರ

ಪ್ರಜಾವಾಣಿ ವಾರ್ತೆ

ಮಡಿಕೇರಿ: ಭಾನುವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡಂತೆ ಕಳೆದ 24 ಗಂಟೆಗಳ ಅವಧಿಯಲ್ಲಿ ಜಿಲ್ಲೆಯಲ್ಲಿ ಸರಾಸರಿ 60.68 ಮಿ.ಮೀ ಮಳೆಯಾಗಿದೆ. ಜನವರಿಯಿಂದ ಇದುವರೆಗೆ 1,915.68 ಮಿ.ಮೀ ಮಳೆಯಾಗಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ 2,839.32 ಮಿ.ಮೀ ಮಳೆಯಾಗಿತ್ತು.

ಮಡಿಕೇರಿ ತಾಲ್ಲೂಕಿನಲ್ಲಿ 93.80 ಮಿ.ಮೀ, ವಿರಾಜಪೇಟೆ ತಾಲ್ಲೂಕಿನಲ್ಲಿ 48.82 ಮಿ.ಮೀ, ಸೋಮವಾರಪೇಟೆ ಯಲ್ಲಿ 39.43 ಮಿ.ಮೀ ಮಳೆಯಾಗಿದೆ.

ಹೋಬಳಿವಾರು ಮಳೆ: ಮಡಿಕೇರಿ ಕಸಬಾ 102.60, ನಾಪೋಕ್ಲು 71.20, ಸಂಪಾಜೆ 100.20, ಭಾಗಮಂಡಲ 101.20, ವಿರಾಜಪೇಟೆ ಕಸಬಾ 66.40, ಹುದಿಕೇರಿ 72.90, ಶ್ರೀಮಂಗಲ 29, ಪೊನ್ನಂಪೇಟೆ 34.60, ಅಮ್ಮತ್ತಿ 29, ಬಾಳೆಲೆ 61, ಸೋಮವಾರಪೇಟೆ ಕಸಬಾ 34.80, ಶನಿವಾರಸಂತೆ 23.20, ಶಾಂತಳ್ಳಿ 89.40, ಕೊಡ್ಲಿಪೇಟೆ 31.20, ಕುಶಾಲನಗರ 21, ಸುಂಟಿಕೊಪ್ಪ 37 ಮಿ.ಮೀ ಮಳೆಯಾಗಿದೆ.

---

## ಸಭೆಯಲ್ಲಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ವಿ. ಅನ್ಬುಕುಮಾರ್ ಸೂಚನೆ

# ನಿರಾಶ್ರಿತರಿಗೆ ತಕ್ಷಣವೇ ₹ 3,800 ಪರಿಹಾರ



ಮಡಿಕೇರಿಯ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಭಾನುವಾರ ನಡೆದ ಸಭೆಯಲ್ಲಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ವಿ.ಅನ್ಬುಕುಮಾರ್ ಮಾತನಾಡಿದರು

ಮಡಿಕೇರಿ: ಭೂಕುಸಿತ ಉಂಟಾಗಿ 7 ಮಂದಿ ಜೀವ ಕಳೆದುಕೊಂಡ ಕುಟುಂಬದವರಿಗೆ ತಕ್ಷಣವೇ ಪರಿಹಾರ ನೀಡಬೇಕು ಎಂದು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ವಿ. ಅನ್ಬುಕುಮಾರ್ ಸೂಚಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಭಾನುವಾರ ನಡೆದ ಸಭೆಯಲ್ಲಿ ಮಾತನಾಡಿದ ಅವರು, 'ಪ್ರಕೃತಿ ವಿಕೋಪ ಮಾರ್ಗಸೂಚಿಯಂತೆ ದಿನಬಳಕೆ ಸಾಮಗ್ರಿಗಳನ್ನು ಕಳೆದುಕೊಂಡ ಕುಟುಂಬದವರಿಗೆ ತಾತ್ಕಾಲಿಕವಾಗಿ ₹ 3,800 ಪರಿಹಾರವನ್ನು ತ್ವರಿತವಾಗಿ ಒದಗಿಸಬೇಕು' ಎಂದು ಸೂಚಿಸಿದರು.

ಮಳೆಗಾಲದ ಸಂದರ್ಭದಲ್ಲಿ ಅತ್ಯಗತ್ಯವಾಗಿ ಬೇಕಿರುವ ಬೋಟ್ ಹಾಗೂ ರ‍್ಯಾಫ್ಟ್‌ಗಳನ್ನು ಹೆಚ್ಚುವರಿಯಾಗಿ ತರಿಸಿಕೊಳ್ಳುವುದು. ಮತ್ತು ಅಗತ್ಯ ವಾಹನಗಳನ್ನು ವ್ಯವಸ್ಥೆ ಮಾಡಿಕೊಳ್ಳಲು ಸೂಚಿಸಿದರು.

ಮಳೆ ಹಾನಿ ಪರಿಹಾರ ಸಂಬಂಧ ಕೊಡಗು ಅವರ ಅಧ್ಯಕ್ಷತೆಯಲ್ಲಿ, ಜಿಲ್ಲಾಧಿಕಾರಿ ಅನೀಸ್ ಕಣ್ಮಣಿ ಜಾಯ್, ಜಿ.ಪಂ.ಸಿಇಒ. ಕೆ.ಲಕ್ಷ್ಮಿಪ್ರಿಯಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸುಮನ್ ಡಿ. ಪೆನ್ನೇಕರ್ ಇದ್ದರು.

*–*–*–*–*–*–*

**ದಿನಾಂಕ: 06-07-2019 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ ಹಾಗೂ ಬೆಂಗಳೂರು ನಗರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ಶ್ರೀ ಅಂಜುಮ್ ಪರ್ವೇಜ್ ರವರ ಅಧ್ಯಕ್ಷತೆಯಲ್ಲಿ ಜರುಗಿದ ಬೆಂಗಳೂರು ನಗರ ಜಿಲ್ಲೆಯ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಗತಿ ಪರಿಶೀಲನಾ ಸಭೆಯ ನಡವಳಿ.**

**ಹಾಜರಿದ್ದವರು: ಅನುಬಂಧ 1 ರಲ್ಲಿ ಲಗತ್ತಿಸಲಾಗಿದೆ.**

ಪ್ರಥಮವಾಗಿ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ ಹಾಗೂ ಬೆಂಗಳೂರು ನಗರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರನ್ನು, ಸಭೆಯಲ್ಲಿ ಉಪಸ್ಥಿತರಿದ್ದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳನ್ನು ಹಾಗೂ ಸಭೆಗೆ ಹಾಜರಿದ್ದ ಎಲ್ಲಾ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳನ್ನು ಅಪರ ಜಿಲ್ಲಾಧಿಕಾರಿಗಳ್ಳು, ಬೆಂಗಳೂರು ನಗರ ಜಿಲ್ಲೆ ರವರು ಸಭೆಗೆ ಸ್ವಾಗತಿಸಿ, ಸಭೆಯನ್ನು ನಡೆಸಿಕೊಡುವಂತೆ ಅಧ್ಯಕ್ಷರನ್ನು ಕೋರಿದರು. ನಂತರ ಅಧ್ಯಕ್ಷರು ಈ ಕೆಳಕಂಡಂತೆ ಇಲಾಖಾ ಕಾರ್ಯಕ್ರಮಗಳ ಪ್ರಗತಿಯನ್ನು ಪರಿಶೀಲಿಸಿದರು.

1. ಕೃಷಿ ಇಲಾಖೆ:-

ಮಳೆ ವಿವರಗಳು:-

1. ಮಳೆ ವಿವರಗಳು :-
2. 2018 ರಲ್ಲಿ ಜನವರಿ 01.01.2018 ರಿಂದ 31.12.2018 ರವರೆಗೆ 855ಮಿ.ಮೀ. ವಾಡಿಕೆ ಮಳೆಗೆ 768 ಮಿ.ಮೀ. (ಶೇ.-10) ವಾಸ್ತವ ಮಳೆ ಪಡೆಯಲಾಗಿದೆ.
3. 2019 ರಲ್ಲಿ ಜನವರಿ 01.01.2019 ರಿಂದ 22.07.2019 ರವರೆಗೆ 297 ಮಿ.ಮೀ. ವಾಡಿಕೆ ಮಳೆಗೆ 275 ಮಿ.ಮೀ. ವಾಸ್ತವ ಮಳೆ ಪಡೆಯಲಾಗಿದೆ. (ಶೇ.-7) ವಾಸ್ತವ ಮಳೆ ಪಡೆಯಲಾಗಿದೆ.
4. ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು ಮುಂದಿನ 15 ದಿನಗಳಲ್ಲಿ ಮಳೆಯೂ ಯಾವ ರೀತಿ ಬರಲಿದೆ ಎಂದು ತಿಳಿದುಕೊಂಡು ಮಾಹಿತಿಯನ್ನು ಸಂಗ್ರಹಿಸಲು ತಿಳಿಸಿದರು ಹಾಗೂ ಜಿಲ್ಲೆಯ ಎಲ್ಲಾ ರೈತರ ಮೊಬೈಲ್ ಸಂಖ್ಯೆಯನ್ನು ಪಡೆದುಕೊಳ್ಳುವಂತೆ ತಿಳಿಸಿದರು.

5. ಬೆಳೆ ವಿಸ್ತೀರ್ಣ :-

- 2018-19ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ವಿವಿಧ ಬೆಳೆಗಳನ್ನೊಳಗೊಂಡಂತೆ ಒಟ್ಟಾರೆ 23025 ಹೆ.ವಿಸ್ತೀರ್ಣದ ಗುರಿಗೆ 14734 ಹೆ.ವಿಸ್ತೀರ್ಣದಲ್ಲಿ (ಶೇ.64%) ಮುಖ್ಯವಾಗಿ ರಾಗಿ ಬೆಳೆಯಲ್ಲಿ 11705 ಹೆ. ತೊಗರಿ ಬೆಳೆಯಲ್ಲಿ 593 ಹೆ. ಮುಸುಕಿನ ಜೋಳ ಬೆಳೆಯಲ್ಲಿ 708 ಹೆ. ಅಲಸಂದೆ ಬೆಳೆಯಲ್ಲಿ 206 ಹೆ ಹಾಗೂ ಎಣ್ಣೆ ಕಾಳು ಬೆಳೆಗಳಲ್ಲಿ 277 ಹೆ. ಪ್ರದೇಶದಲ್ಲಿ ಬಿತ್ತನೆಯಾಗಿರುತ್ತದೆ.
- 2019-20ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ವಿವಿಧ ಬೆಳೆಗಳನ್ನೊಳಗೊಂಡಂತೆ ಒಟ್ಟಾರೆ 20154 ಹೆ.ವಿಸ್ತೀರ್ಣದ ಗುರಿಗೆ 478 ಹೆ.ವಿಸ್ತೀರ್ಣದಲ್ಲಿ (ಶೇ.4%) ಬಿತ್ತನೆಯಾಗಿರುತ್ತದೆ. ಮುಖ್ಯವಾಗಿ ಆಹಾರ ಧಾನ್ಯ ಬೆಳೆಯಲ್ಲಿ 429 ಹೆ. ದ್ವಿದಾಳ ಧಾನ್ಯ 231 ಹೆ. ಎಣ್ಣೆಕಾಳು ಬೆಳೆಯಲ್ಲಿ 48 ಹೆ. ಪ್ರದೇಶದಲ್ಲಿ ಬಿತ್ತನೆಯಾಗಿರುತ್ತದೆ.
- ಆಗಸ್ಟ್, ಸೆಪ್ಟಂಬರ್, ಅಕ್ಟೋಬರ್ ಮತ್ತು ನವೆಂಬರ್ ಮಾಹೆಗಳಲ್ಲಿ ಗಣನೀಯವಾಗಿ ಶೇ.37,2,57, ಮತ್ತು 92ರಷ್ಟು ಕಡಿಮೆ ಮಳೆಯನ್ನು ಪಡೆದಿದ್ದು, ತೇವಾಂಶದ ಕೊರತೆಯಿಂದ ಬೆಳೆ ಕುಂಠಿತವಾಗಿದ್ದು, ಸರ್ಕಾರದ ಆದೇಶ ಸಂಖ್ಯೆ: ಕಂಇ/186 ಟಿ.ಎನ್.ಆರ್.2018 ದಿನಾಂಕ: 25.09.2018 ಹಾಗೂ ದಿನಾಂಕ: 12.10.2018 ರಂದು ನಡೆದ ಸಚಿವ ಸಂಪುಟದ ಉಪ ಸಮಿತಿ ಸಭೆಯ ತೀರ್ಮಾನದಂತೆ ಆನೇಕಲ್ ತಾಲ್ಲೂಕನ್ನು ಬರಪೀಡಿತ ಪ್ರದೇಶವೆಂದು

ಘೋಷಿಸಿದ್ದು, ದಿನಾಂಕ: 14.11.2018 ರಂತೆ ಆನೇಕಲ್ ತಾಲ್ಲೂಕಿನಲ್ಲಿ 1457 ಹೆ. ನಷ್ಟು ವಿಸ್ತೀರ್ಣದಲ್ಲಿ ಬೆಳೆ ನಷ್ಟವಾಗಿರುವ ಬಗ್ಗೆ ಜಂಟಿ ಸಮೀಕ್ಷೆ ಕೈಗೊಂಡು ವರದಿ ಮಾಡಲಾಗಿರುತ್ತದೆ.

- ಮುಂದುವರೆದು ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ಅಕ್ಟೋಬರ್ ಮಾಹೆಯಲ್ಲಿ ಶೇ.34 ರಷ್ಟು ಕಡಿಮೆ ಮಳೆಯನ್ನು ಪಡೆದಿದ್ದು, ತೇವಾಂಶದ ಕೊರತೆಯಿಂದ ಬೆಳೆಯು ಬಾಡುತ್ತಿದ್ದು, 2690 ಹೆ. ವಿಸ್ತೀರ್ಣದಲ್ಲಿ ರಾಗಿ ಬೆಳೆಯು ಶೇ.50ಕ್ಕಿಂತ ಹೆಚ್ಚು ಬೆಳೆ ನಷ್ಟವಾಗಿರುವುದು ಕಂಡು ಬಂದಿದೆ.

**ಹಿಂಗಾರು ಬೆಳೆ ವಿಸ್ತೀರ್ಣ:**-2018-19ನೇ ಸಾಲಿನಲ್ಲಿ ಹಿಂಗಾರಿನಲ್ಲಿ ಒಟ್ಟು 704 ವಿಸ್ತೀರ್ಣದ ಗುರಿ ಇದ್ದು, ಇದುವರೆಗೂ 589.33 ಹೆ. ಪ್ರದೇಶದಲ್ಲಿ ಬಿತ್ತನೆಯಾಗಿರುತ್ತದೆ. (ಮುಂಗಾರು ಹಂಗಾಮಿನ ಲೇಟ್ ಖರೀಫ್ ನ ಹುರುಳಿ ವಿಸ್ತೀರ್ಣವೂ ಸೇರುದಂತೆ)

- **ಹಿಂಗಾರು ಹಂಗಾಮಿನಲ್ಲಿ ಜಿಲ್ಲೆಯ 4 ತಾಲ್ಲೂಕುಗಳನ್ನ ಸರ್ಕಾರದ ಆದೇಶ ಸಂ. ಕೃಇ/186 ಟಿಎನ್‌ಆರ್ 2018, ದಿನಾಂಕ 25.09.2018 (Part-1), ದಿನಾಂಕ 12.10.2018 ರಲ್ಲಿ ಬರ ಪೀಡಿತ ಪ್ರದೇಶವೆಂದು ಘೋಷಿಸಿರುವ ಹಿನ್ನೆಲೆಯಲ್ಲಿ ಶೇ.10ರಷ್ಟು ಬರಪೀಡಿತ ಪ್ರದೇಶದಲ್ಲಿ ground truthing ಕ್ರಮ ಕೈಗೊಂಡು, ಒಟ್ಟಾರೆ ಬರಪೀಡಿತ ಪ್ರದೇಶದಲ್ಲಿ 471.69 ಹೆ ಹುರುಳಿ ಬೆಳೆ ನಷ್ಟದ ಬಗ್ಗೆ ಸರ್ಕಾರಕ್ಕೆ ವರದಿ ಮಾಡಲಾಗಿದೆ.**

- ಕೃಷಿ ಪರಿಕರ:

2018 ನೇ ಮುಂಗಾರು ಹಂಗಾಮಿನಲ್ಲಿ ತೀವ್ರ ಬರಪೀಡಿತ ತಾಲ್ಲೂಕು ಎಂದು ಘೋಷಣೆಯಾಗಿರುವ ಆನೇಕಲ್ ತಾಲ್ಲೂಕಿನಲ್ಲಿ ಒಟ್ಟು 84 ಹಳ್ಳಿಗಳಲ್ಲಿ ಮಳೆಯಾಶ್ರಿತ ರಾಗಿ ಬೆಳೆ ನಷ್ಟದ ಮಾಹಿತಿಯನ್ನು **Crop loss Module** ಅಳವಡಿಸಲಾಗಿದ್ದು, ಸದರಿ ಹಳ್ಳಿಗಳಿಗೆ ಅನುಗುಣವಾಗಿ ಒಟ್ಟು 4671 ಫಲಾನುಭವಿಗಳಿರುತ್ತಾರೆ. ಇದುವರೆವಿಗೂ ದಿನಾಂಕ: 15-05-2019 ರವರೆಗೆ 831 ಫಲಾನುಭವಿಗಳಿಗೆ ಒಟ್ಟು ರೂ.10.07 ಲಕ್ಷಗಳ ಅನುದಾನವನ್ನು ಪರಿಹಾರ ತಂತ್ರಾಂಶದಿಂದ ವರ್ಗಾಯಿಸಲಾಗಿದೆ ಎಂದು ತಿಳಿಸಿದರು.

ರಸಗೊಬ್ಬರಗಳ ಮಾಹಿತಿ

- 2019-20ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಜೂನ್-2019ರ ಮಾಹೆಯವರೆಗೆ ಬೇಡಿಕೆಯು 6563 ಮೆ.ಟನ್ ಇದ್ದು, 7030 ಮೆ.ಟನ್ ಸರಬರಾಜಾಗಿದ್ದು, 6390 ಮೆ.ಟನ್ ರಷ್ಟು ವಿತರಣೆಯಾಗಿದ್ದು, ಒಟ್ಟಾರೆ ಹಿಂದಿನ ಸಾಲಿನ ಉಳಿಕೆಯೂ ಸೇರಿದಂತೆ 5164 ಮೆ.ಟನ್ ಇದ್ದು ಯಾವುದೇ ಕೊರತೆ ಇರುವುದಿಲ್ಲ.
- ಕಾಪು ದಾಸ್ತಾನು ಅಡಿಯಲ್ಲಿ ಒಟ್ಟು 1165 ಮೆ.ಟನ್ ರಸಗೊಬ್ಬರ ದಾಸ್ತಾನು ಇರುತ್ತದೆ. ಅಭಾವದ ಸಂದರ್ಭದಲ್ಲಿ ಮಾತ್ರ ವಿತರಿಸಲು ಕ್ರಮ ವಹಿಸಲಾಗುವುದು.
- ಬೀಜಗಳ ಪೂರೈಕೆ :- 2019-20ನೇ ಸಾಲಿನಲ್ಲಿ ಮುಂಗಾರು ಹಂಗಾಮಿನಲ್ಲಿ ವಿವಿಧ ಬಿತ್ತನೆ ಬೀಜಗಳ 1174 ಕ್ವಿಂ. ಬೇಡಿಕೆಗೆ 393ಕ್ವಿಂ. ಸರಬರಾಜು ಆಗಿ, 131.92ಕ್ವಿಂ ವಿತರಣೆಯಾಗಿರುತ್ತದೆ, ಬೇಸಿಗೆಯಲ್ಲಿ ಭತ್ತ ಬಿತ್ತನೆ ಬೀಜ 15 ಕ್ವಿಂ ಬೇಡಿಕೆಗೆ 4ಕ್ವಿಂ, ಸರಬರಾಜು ಆಗಿ, 2.75 ಕ್ವಿಂ ವಿತರಣೆಯಾಗಿರುತ್ತದೆ.
- ಕೇಂದ್ರ ಸರ್ಕಾರದ ಪಿ.ಎಂ.ಕಿಸಾನ್ ಯೋಜನೆಯಲ್ಲಿ ಬೆಂಗಳೂರು ನಗರ ಜಿಲ್ಲೆಗೆ ಒಟ್ಟು 107234 ಗುರಿ ನೀಡಲಾಗಿದ್ದು, 34225 ರೈತರ ಮಾಹಿತಿಯನ್ನು ಪಡೆಯಲಾಗಿದ್ದು, 33437 ಅರ್ಜಿಗಳನ್ನು ತಂತ್ರಾಂಶದಲ್ಲಿ ಅಳವಡಿಸಲಾಗಿರುತ್ತದೆ. ಬಾಕಿ 788 ಅರ್ಜಿಗಳು ಇದ್ದು, ತಂತ್ರಾಂಶದಲ್ಲಿ ಅಳವಡಿಸುವ ಕಾರ್ಯ ಪ್ರಗತಿಯಲ್ಲಿ ಇರುತ್ತದೆ.

- ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಸಬ್‌ಸಿಡಿ ಅನುದಾನವು ರೈತರ ಖಾತೆಗೆ ಜಮ ಮಾಡಲಾಗುತ್ತಿದೆಯೇ ಎಂದು ಮಾಹಿತಿ ಕೋರಲಾಗಿ, ಜಂಟಿ ಕೃಷಿ ನಿರ್ದೇಶಕರು, ಯೂರಿಯಾ/ಕಾಂಪ್ಲೆಕ್ಸ್ ಹಾಗೂ ಆರ್ಗಾನಿಕ್ ಮ್ಯನೂರ್ ರಸಗೊಬ್ಬರಗಳನ್ನು ರಿಯಾಯಿತಿ ದರದಲ್ಲಿ ವಿತರಿಸಲಾಗುತ್ತಿದೆ ಎಂದು ತಿಳಿಸಿದರು, ಜಿಲ್ಲೆಯಲ್ಲಿ ಒಟ್ಟು 11 ರೈತ ಸಂಪರ್ಕ ಕೇಂದ್ರಗಳು ಕಾರ್ಯನಿರ್ವಹಿಸುತ್ತಿರುವುದಾಗಿ ಆನೇಕಲ್ ತಾಲ್ಲೂಕಿನಲ್ಲಿ 07 ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ 04 ಇರುವುದಾಗಿ ತಿಳಿಸಿದರು.

(ಕ್ರಮ: ಜಂಟಿ ಕೃಷಿ ನಿರ್ದೇಶಕರು, ಬೆಂಗಳೂರು ಜಿಲ್ಲೆ)

**ಪಶು ಸಂಗೋಪನೆ ಇಲಾಖೆ:**

ಜಾನುವಾರುಗಳಿಗೆ ಹಮ್ಮಿಕೊಂಡಿರುವ ಲಸಿಕೆ ಕಾರ್ಯಕ್ರಮ ಹಾಗೂ ಮೇವಿನ ಲಭ್ಯತೆ ಬಗ್ಗೆ ಸಭೆಯಲ್ಲಿ ಪರಿಶೀಲಿಸಿದಾಗ, ಜಿಲ್ಲೆಯಲ್ಲಿ 2007ರ ಜಾನುವಾರು ಗಣತಿ ಪ್ರಕಾರ ಒಟ್ಟು 1.38 ಲಕ್ಷ ಜಾನುವಾರುಗಳಿದ್ದು, ಈ ಪೈಕಿ 96.65% ರಷ್ಟು ಜಾನುವಾರುಗಳಿಗೆ ಈಗಾಗಲೇ ಲಸಿಕೆಗಳನ್ನು ಹಾಕಲಾಗಿದ್ದು, 7ನೇ ಸುತ್ತಿನ ಲಸಿಕೆ ಕಾರ್ಯಕ್ರಮವನ್ನು ಆಗಸ್ಟ್ ಮಾಹೆಯಲ್ಲಿ ಹಮ್ಮಿಕೊಳ್ಳಲಾಗುವುದೆಂದು ಜಿಲ್ಲಾ ಮಟ್ಟದ ಅಧಿಕಾರಿಗಳು ಸಭೆಗೆ ತಿಳಿಸಿದಾಗ ಲಸಿಕಾ ಕಾರ್ಯಕ್ರಮದಲ್ಲಿ ಶೇ.100ರಷ್ಟು ಪ್ರಗತಿ ಸಾಧಿಸುವಂತೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸೂಚಿಸಿದರು.

ಮುಂದುವರೆದು, ಉಪ ನಿರ್ದೇಶಕರು ಉತ್ತರಿಸುತ್ತಾ, 2013-14ನೇ ಸಾಲಿನಲ್ಲಿ ಕಾಲು ಬಾಯಿ ಜ್ವರದಿಂದ ಮರಣ ಹೊಂದಿದ 542 ಜಾನುವಾರುಗಳಿಗೆ ಸಂಬಂದಿಸಿದಂತೆ ಒಟ್ಟು 81.10 ಲಕ್ಷ ರೂ.ಗಳ ಪರಿಹಾರ ಧನವನ್ನು ಮರಣ ಹೊಂದಿದ ಜಾನುವಾರುಗಳ ಮಾಲೀಕರಿಗೆ ನೀಡಲಾಗಿದೆ ಎಂದು ಸಹ ಸಭೆಗೆ ತಿಳಿಸಿದರು.

ಜಿಲ್ಲೆಯಲ್ಲಿ ಲಭ್ಯವಿರುವ ಮೇವಿನ ಲಭ್ಯತೆಯನ್ನು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಪರಿಶೀಲಿಸಿದಾಗ **ದಿನಾಂಕ: 05-07-2019ಕ್ಕೆ ಒಟ್ಟು 99990 ಮೆ.ಟನ್** ಮೇವು ಲಭ್ಯವಿದ್ದು, ಇದು ಇನ್ನೂ 15 ವಾರಗಳಿಗೆ ಸಾಕಾಗುತ್ತಿದ್ದು ಸದ್ಯಕ್ಕೆ ಯಾವುದೇ ಮೇವಿನ ಕೊರತೆ ಇರುವುದಿಲ್ಲವೆಂದು ಸಭೆಗೆ ತಿಳಿಸಿದರು. ಮುಂದುವರೆದು, 2018ನೇ ಸಾಲಿನಲ್ಲಿ ಜಿಲ್ಲೆಗೆ ಒಟ್ಟು 3522 ಮಿನಿ ಕಿಟ್ಟುಗಳನ್ನು ವಿತರಿಸುವುದಾಗಿ ಹಾಗೂ 2019ನೇ ಸಾಲಿನಲ್ಲಿ 1580 ಮಿನಿ ಕಿಟ್ಟುಗಳನ್ನು ರೈತರಿಗೆ ವಿತರಿಸಿರುವುದಾಗಿ ತಿಳಿಸಿದರು. ಇದರಿಂದ 814 ಎಕರೆ ಪ್ರದೇಶದಲ್ಲಿ ಮೇವು ಬೆಳಸಲಾಗುತ್ತದೆ. ಇದರಿಂದ ಜಾನುವಾರುಗಳಿಗೆ ಮೇವಿನ ಕೊರತೆಯಾಗುವುದಿಲ್ಲವೆಂದು ಜಿಲ್ಲಾ ಮಟ್ಟದ ಅಧಿಕಾರಿಗಳು ತಿಳಿಸಿದರು.

(ಕ್ರಮ: ಉಪ ನಿರ್ದೇಶಕರು, ಪಶು ಸಂಗೋಪನಾ ಇಲಾಖೆ, ಬೆಂಗಳೂರು ಜಿಲ್ಲೆ)

**ಕುಡಿಯುವ ನೀರು:**

ಜಿಲ್ಲೆಯಲ್ಲಿ ಆನೇಕಲ್ ತಾಲ್ಲೂಕಿನಲ್ಲಿ 11 ಗ್ರಾಮಗಳಿಗೆ 17 ಟ್ಯಾಂಕರ್‌ಗಳ ಮೂಲಕ ದಿನಂಪ್ರತಿ ಒಟ್ಟು 43 ಟ್ರಿಪ್‌ಗಳ ಮೂಲಕ ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತಿದೆ ಎಂದು ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ರವರು ತಿಳಿಸಿದರು. ಈ ಬಗ್ಗೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಪರಿಶೀಲಿಸಿ ಇಂತಹ ಸಮಸ್ಯಾತ್ಮಕ ಗ್ರಾಮಗಳಿಗೆ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ರವರು ಭೇಟಿ ನೀಡಿ ಸಮಸ್ಯೆಯನ್ನು ಬಗೆಹರಿಸಬೇಕೆಂದು ತಿಳಿಸಿದರು. ಜಿಲ್ಲೆಯಲ್ಲಿ ಒಂದು ವೇಳೆ ಸಕಾಲದಲ್ಲಿ ಮಳೆಯಾಗದಿದ್ದರೆ ಈಗ ಟ್ಯಾಂಕರ್ ಮೂಲಕ ಕುಡಿಯುವ ನೀರು ಸರಬರಾಜು ಮಾಡುತ್ತಿರುವ 11 ಗ್ರಾಮಗಳ ಸಂಖ್ಯೆಯು ಹೆಚ್ಚಾಗುವ ಸಾಧ್ಯತೆ ಇದೆ. ಅದ್ದರಿಂದ, ಮಳೆ ಕೊರತೆಯಿಂದ ಉದ್ಭವವಾಗುವ ನೀರಿನ ಸಮಸ್ಯೆಯನ್ನು ಬಗೆಹರಿಸಲು ಮುಂಜಾಗ್ರತೆ ಕ್ರಮ ತೆಗೆದುಕೊಳ್ಳಲು ಸೂಚನೆ ನೀಡಲಾಯಿತು.

ಮುಂದುವರೆದು, ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು ಜಿಲ್ಲೆಯ ಎಲ್ಲಾ ಬೋರ್‌ವೆಲ್‌ಗಳ ನಂಬರಿಂಗ್ ಮಾಡಲು ಮತ್ತು ಮ್ಯಾಪಿಂಗ್ ಮಾಡಲು ತಿಳಿಸಿದರು. ಜಿ.ಐ.ಎಸ್ ಮ್ಯಾಪ್ ಮೇಲೆ ಪ್ಲಾಟಿಂಗ್ ಮಾಡಬೇಕು ರಿಮೋಟ್ ಸೆಂಸಿಂಗ್ ಏಜೆನ್ಸಿ ಮೂಲಕ ಜಿ.ಐ.ಎಸ್ ಗೆ ಲಿಂಕ್ ಮಾಡಲು ಇವರ ಸಹಕಾರವನ್ನು

ಪಡೆಯಲು ತಿಳಿಸಿದ್ದರು, ಜಿಲ್ಲೆಯಲ್ಲಿ ಎಲ್ಲಾ ಬೋರ್‌ವೆಲ್‌ಗಳ ಮಾಹಿತಿಯನ್ನು ಸಂಗ್ರಹಿಸಲು ತಿಳಿಸಿದರು, ಪ್ರಸಕ್ತ ಸಾಲಿನಲ್ಲಿ ಎಷ್ಟು ಬೋರ್‌ವೆಲ್‌ಗಳಿಗೆ ಪ್ಲಶಿಂಗ್ ಮಾಡಲಾಗಿದೆ ಹಾಗೂ ಡೀಪನಿಂಗ್ ಮಾಡಲಾಗಿದೆ ಎಂದು ಮಾಹಿತಿ ಕೋರಲಾಗಿ 10 ಬೋರ್‌ವೆಲ್‌ಗಳಿಗೆ ಪ್ಲಶಿಂಗ್ ಮಾಡಲಾಗಿದೆ ಹಾಗೂ 20 ಬೋರ್‌ವೆಲ್‌ಗಳಿಗೆ ಡೀಪನಿಂಗ್ ಮಾಡಲಾಗಿದೆ ಎಂದು ಸಭೆಯಲ್ಲಿ ತಿಳಿಸಿದರು. ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಇವರ ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಬೇಸರ ವ್ಯಕ್ತಪಡಿಸಿ ಒಂದು ತಿಂಗಳ ಒಳಗಾಗಿ ವಿಫಲವಾಗಿರುವ ಎಲ್ಲಾ ಕೊಳವೆ ಬಾವಿಗಳ ಮಾಹಿತಿಯನ್ನು ನೀಡಲು ತಿಳಿಸಿದರು. ಬರ ಪರಿಸ್ಥಿತಿ ಮುಂದುವರೆದಿದ್ದಲ್ಲಿ ಖಾಸಗಿ ಬೋರ್‌ವೆಲ್‌ಗಳ ಮಾಲೀಕರೊಂದಿಗೆ ಚರ್ಚಿಸಿ, ಕುಡಿಯುವ ನೀರನ್ನು ಸರಬಾರಜು ಮಾಡಿಕೊಳ್ಳಲು ಕರಾರು ಮಾಡಿಕೊಳ್ಳುವಂತೆ ತಿಳಿಸಿದರು. ವಿಫಲವಾಗಿರುವ ಕೊಳವೆ ಬಾವಿಗಳಲ್ಲಿ ಇರುವ ಪಂಪ್/ಮೋಟರ್‌ಗಳನ್ನು ತೆಗೆದು ಹೊಸದಾಗಿ ಕೊರೆದಿರುವ ಕೊಳವೆ ಬಾವಿಗಳಿಗೆ ಅಳವಡಿಸಲು ಕ್ರಮ ವಹಿಸುವಂತೆ ಹಾಗೂ ಒಂದು ವಹಿಯಲ್ಲಿ ದಾಖಲಿಸಲು ಕ್ರಮ ವಹಿಸಲು ತಿಳಿಸಿದರು. ಸಂಬಂಧಪಟ್ಟ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ ಇವರು Actionplan ಮಾಡಬೇಕು ಅಧ್ಯಕ್ಷರು ರಾಜೀನಾಮೆ ನೀಡಿದ್ದಲ್ಲಿ ಉಪಾಧ್ಯಕ್ಷರು ಸಭೆ ನಡೆಸಿ, Actionplan ಮಾಡಲು ತಿಳಿಸಿದರು.ಮುಂದುವರೆದು ಪ್ರಕೃತಿ ವಿಕೋಪ ಅನುದಾನದಡಿ ಬರ ಪೀಡಿತವೆಂದು ಘೋಷಿಸಿದ ತಾಲ್ಲೂಕುಗಳಲ್ಲಿ ಒಟ್ಟು 66 ಕುಡಿಯುವ ನೀರಿನ ಕಾಮಗಾರಿಗಳನ್ನು ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು, 66 ಕಾಮಗಾರಿಗಳು ಮುಕ್ತಾಯಗೊಳಿಸಲಾಗಿರುತ್ತದೆ ಎಂದು ಸಭೆಯಲ್ಲಿ ತಿಳಿಸಿದರು.

ಟಾಸ್ಕ್‌ಪೋರ್ಸ್ ನಲ್ಲಿ ಒಟ್ಟು 181 ಕಾಮಗಾರಿಗಳನ್ನು ಕೈಗೊಂಡಿದ್ದು, 150 ಹೊಸ ಕೊಳವೆ ಬಾವಿಗಳನ್ನು ಕೊರದಿದ್ದು, 84 ಕೊಳವೆ ಬಾವಿಗಳಲ್ಲಿ ನೀರು ಲಭ್ಯವಿದ್ದು, ಸಂಬಂಧಪಟ್ಟ ಕಾರ್ಯನಿರ್ವಹಕ ಅಧಿಕಾರಿಗಳು ಸ್ಥಳ ತನಿಖೆ ಮಾಡಿ ಸಾರ್ವಜನಿಕರು ಉಪಯೋಗ ಮಾಡುತಿದ್ದಾರೆಯೇ ಎಂಬ ಬಗ್ಗೆ ಪರಿಶೀಲಿಸಿ ವರದಿ ನೀಡಲು ತಿಳಿಸಿದರು. ಜಿಲ್ಲೆಯಲ್ಲಿ ಒಟ್ಟು 624 ಆರ್.ಓ ಪ್ಲಾಂಟ್‌ಗಳು ಅಳವಡಿಸಲಾಗಿದ್ದು, ಈ ಪೈಕಿ 614 ಆರ್.ಓ ಪ್ಲಾಂಟ್ ಗಳು ಕಾರ್ಯನಿರ್ವಹಿಸುತಿದ್ದು, 10 ಆರ್.ಓ.ಪ್ಲಾಂಟ್‌ಗಳು ವಿಫಲಗೊಂಡಿದ್ದು, ತುರ್ತಾಗಿ ಸದರಿ ಕಾಮಗಾರಿಗಳನ್ನು ಕೈಗೊಳ್ಳಲು ಸಂಬಂಧಪಟ್ಟವರಿಗೆ ಸೂಕ್ತ ನಿರ್ದೇಶನ ನೀಡಲು ಸೂಚಿಸಿದರು. ಆರ್.ಓ ಪ್ಲಾಂಟ್‌ನಲ್ಲಿ ಕುಡಿಯುವ ನೀರನ್ನು ಸಾರ್ವಜನಿಕರಿಗೆ ರೂ.2ರಂತೆ ಸಾರ್ವಜನಿಕರಿಗೆ 20 ಲೀಟರ್ ನೀರನ್ನು ಸರಬರಾಜು ಮಾಡಲಾಗುತ್ತಿದ್ದು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಪ್ರತಿ ಮಾಹೆ ಸರಬರಾಜು ಮಾಡುತ್ತಿರುವ ಕುಡಿಯುವ ನೀರಿನ ಸ್ಯಾಂಪಲ್ ಪಡೆದು ಲ್ಯಾಬ್‌ಗೆ ಕಳುಹಿಸಿ, ಪರೀಕ್ಷಿಸಿ ವರದಿ ನೀಡಲು ತಿಳಿಸಿದರು.

(ಕ್ರಮ: ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ,ಬೆಂ.ಜಿಲ್ಲೆ)

<u>ಸಾಮಾಜಿಕ ಭದ್ರತಾ ಯೋಜನೆ:</u>

ವೃದ್ಧಾಪ್ಯ ವೇತನ, ಅಂಗವಿಕಲರ ವೇತನ, ವಿಧವಾ ವೇತನ, ಆದರ್ಶ ವಿವಾಹ, ಮನಸ್ವಿನಿ ಮುಂತಾದ ಯೋಜನೆಗಳ ಪ್ರಗತಿಯನ್ನು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ತಾಲ್ಲೂಕುವಾರು ಪರಿಶೀಲಿಸಿದಾಗ, ತಹಶೀಲ್ದಾರ್‌ಗಳು ಉತ್ತರಿಸುತ್ತಾ ಬಾಕಿ ಇರುವ ಅರ್ಜಿಗಳು With in the due dateನಲ್ಲಿ ಇದ್ದು, ಇವುಗಳನ್ನು ಕೂಡಲೇ ಇತ್ಯರ್ಥಗೊಳಿಸಲಾಗುವುದೆಂದು ಸಭೆಗೆ ತಿಳಿಸಿದರು. ಸಾಮಾಜಿಕ ಭದ್ರತೆ ಯೋಜನೆಗಳ ಯಾವುದೇ ಅರ್ಜಿಗಳು ಬಾಕಿ ಇರದಂತೆ ಸಕಾಲದಲ್ಲಿ ವಿಲೇವಾರಿ ಮಾಡಿ ಅರ್ಹ ಫಲಾನುಭವಿಗಳಿಗೆ ಸೌಲಭ್ಯಗಳನ್ನು ದೊರೆಯುವಂತೆ ಮಾಡಲು ತಿಳಿಸಿದರು.

ಸಕಾಲ ಯೋಜನೆಯಡಿ ಬಾಕಿ ಇರುವ 2,359 ಅರ್ಜಿಗಳನ್ನು ಕೂಡಲೇ ಇತ್ಯರ್ಥಗೊಳಿಸಲು ಸಹ ಸೂಚನೆ ನೀಡಲಾಯಿತು.

ವಿದ್ಯಾರ್ಥಿಗಳು ಶಾಲಾ ಕಾಲೇಜುಗಳಿಗೆ ಪ್ರವೇಶಾವಕಾಶ ಪಡೆಯಲು ಜಾತಿ ಮತ್ತು ಆದಾಯ ಪ್ರಮಾಣಪತ್ರಗಳನ್ನು ನೀಡುವ ಅರ್ಜಿಗಳು ಆನೇಕಲ್ ತಾಲ್ಲೂಕಿನಲ್ಲಿ 450 ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ 98, ಯಲಹಂಕ ತಾಲ್ಲೂಕಿನಲ್ಲಿ 48, ಬೆಂಗಳೂರು ದಕ್ಷಿಣ ತಾಲ್ಲೂಕಿನಲ್ಲಿ 62 ಮತ್ತು ಬೆಂಗಳೂರು ಪೂರ್ವ ತಾಲ್ಲೂಕಿನಲ್ಲಿ 11 ಅರ್ಜಿಗಳು ಬಾಕಿ ಇರುವ ಬಗ್ಗೆ ಪರಿಶೀಲಿಸಿ, ಈಗಾಗಲೇ ಶಾಲೆಗಳು ಮತ್ತು ಕಾಲೇಜುಗಳು

ಪ್ರಾರಂಭವಾಗಿರುವುದರಿಂದ ಕೂಡಲೇ ಜಾತಿ ಮತ್ತು ಆದಾಯ ಪ್ರಮಾಣಪತ್ರಗಳನ್ನು ನೀಡುವಂತೆ ಎಲ್ಲಾ ತಹಶೀಲ್ದಾರರುಗಳಿಗೆ ಸೂಚನೆ ನೀಡಲಾಯಿತು.

(ಕ್ರಮ: ಜಿಲ್ಲೆಯ ಎಲ್ಲಾ ತಹಸೀಲ್ದಾರರುಗಳು)

ಇ-ಜನಸ್ಪಂದನ/ಸಿ.ಎಂ.ಜನತಾ ದರ್ಶನ/ಇ.ಜೆ.ಎಸ್:

ಸನ್ಮಾನ್ಯ ಮುಖ್ಯಮಂತ್ರಿಗಳ ಜನತಾ ದರ್ಶನ/CPGRAMS/EJSನಲ್ಲಿ ಸ್ವೀಕೃತವಾಗಿರುವ ಅರ್ಜಿಗಳ ವಿಲೇವಾರಿ ಬಗ್ಗೆ ಪರಿಶೀಲಿಸಿದಾಗ, ಜಿಲ್ಲೆಯಲ್ಲಿ ಒಟ್ಟು 149 ಅರ್ಜಿಗಳು ಬಾಕಿ ಇದ್ದು, ಈ ಪೈಕಿ ಯಲಹಂಕ ತಾಲ್ಲೂಕಿನಲ್ಲಿ 27, ಉತ್ತರ ತಾಲ್ಲೂಕಿನಲ್ಲಿ 28, ಪೂರ್ವ ತಾಲ್ಲೂಕಿನಲ್ಲಿ 32, ಆನೇಕಲ್ ತಾಲ್ಲೂಕಿನಲ್ಲಿ 27 ಹಾಗೂ ದಕ್ಷಿಣ ತಾಲ್ಲೂಕಿನಲ್ಲಿ 30 ಅರ್ಜಿಗಳು ಬಾಕಿ ಇರುತ್ತವೆ. ಬಾಕಿ ಇರುವ ಅರ್ಜಿಗಳನ್ನು ಕೂಡಲೇ ವಿಲೇವಾರಿ ಮಾಡಲು ಜಿಲ್ಲಾಧಿಕಾರಿಗಳಿಂದ ಪತ್ರವನ್ನು ಕಳುಹಿಸಲು ತಿಳಿಸಲಾಯಿತು.

(ಕ್ರಮ: ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ ಮತ್ತು ಆರಕ್ಷಕ ಅಧೀಕ್ಷಕರು, ಬೆಂಗಳೂರು ಜಿಲ್ಲೆ)

ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ:

ಜಿಲ್ಲೆಯಲ್ಲಿ ಆಹಾರ ಇಲಾಖೆಗೆ ಸಂಬಂಧಿಸಿದಂತೆ, ಅನ್ನಭಾಗ್ಯ ಯೋಜನೆಯಡಿ ಆಧ್ಯತ ಮತ್ತು ಅಂತ್ಯೋದಯ ಪಡಿತರ ಚೀಟಿ ಕುಟುಂಬಗಳಿಗೆ ಉಚಿತವಾಗಿ ಆಹಾರ ದಾನ್ಯಗಳನ್ನು ಮತ್ತು ರಿಯಾಯಿತಿ ದರದಲ್ಲಿ ವಿತರಿಸಲಾಗುತ್ತಿದೆ. ಜಿಲ್ಲೆಯಲ್ಲಿ ಒಟ್ಟು 518563 ಪಡಿತರ ಚೀಟಿಗಳಿದ್ದು, ಈ ಪೈಕಿ, ಎಎವೈ 6144, ಬಿಪಿಎಲ್(ಆದ್ಯತಾ ಕುಟುಂಬ) 494907 ಹಾಗೂ ಎಪಿಎಲ್(ಆದ್ಯತೇತರ ಕುಟುಂಬ) 17512 ಪಡಿತರ ಚೀಟಿಗಳಿರುತ್ತವೆ. ಜಿಲ್ಲೆಯಲ್ಲಿ ಒಟ್ಟು 550 ನ್ಯಾಯಬೆಲೆ ಅಂಗಡಿಗಳು, 08 ಆಹಾರ ಸಗಟು ಮಳಿಗೆಗಳು ಕಾರ್ಯನಿರ್ವಹಿಸುತ್ತಿದೆ. ಸ್ವೀಕರಿಸಲಾದ ಅರ್ಜಿಗಳ ವಿಲೇವಾರಿಯ ಬಗ್ಗೆ ಪರಿಶೀಲಿಸಿದಾಗ, ಒಟ್ಟು 126145 ಆನ್‌ಲೈನ್ ನಲ್ಲಿ ಹೊಸ ಪಡಿತರ ಚೀಟಗಳ ಅರ್ಜಿಗಳು ಸ್ವೀಕೃತಿಯಾಗಿದ್ದು, 115908 ವಿಲೇವಾರಿಯಾಗಿದ್ದು, 10237 ಬಾಕಿ ಇರುತ್ತವೆ. ಬಾಕಿ ಇರುವ ಅರ್ಜಿಗಳನ್ನು ಶೀರ್ಘವಾಗಿ ವಿಲೇವಾರಿ ಮಾಡಲು ಕಾರ್ಯನಿರ್ವಾಹಕ ಸಿಬ್ಬಂದಿಗಳಿಗೆ ಕಟ್ಟುನಿಟ್ಟಿನ ಸೂಚನೆಗಳನ್ನು ನೀಡಲು ಜಂಟಿ ನಿರ್ದೇಶಕರು ಆಹಾರ ಇಲಾಖೆ ಇವರಿಗೆ ಸೂಚಿಸಿದರು. ಪಡಿತರ ವಿತರಣೆಯಲ್ಲಿ ಯಾವುದೇ ಸಮಸ್ಯೆ ಇರುವುದಿಲ್ಲವೆಂದು ಸಭೆಗೆ ತಿಳಿಸಿದರು. ಪಡಿತರ ಚೀಟಿ ವಿತರಣೆಯಲ್ಲಿ ಯಾವುದೇ ದೂರುಗಳು ಬರದಂತೆ ಕ್ರಮವಹಿಸಲು ಸೂಚನೆ ನೀಡಲಾಯಿತು.

(ಕ್ರಮ: ಜಂಟಿ ನಿರ್ದೇಶಕರು, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ, ಬೆಂ.ನಗರ ಜಿಲ್ಲೆ)

ಸಮಾಜ ಕಲ್ಯಾಣ ಇಲಾಖೆ:

ಸಮಾಜ ಕಲ್ಯಾಣ ಇಲಾಖೆಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳ ಮಾಹಿತಿಯನ್ನು ಒಳಗೊಂಡ ಡೇಟಾಬೇಸ್‌ನ್ನು ತಯಾರಿಸಲು ತಿಳಿಸಿದರು. ವಿದ್ಯಾರ್ಥಿಗಳ ಕೋರ್ಸ್ ಮೆರಿಟ್ ಕಾಲೇಜು ಇಲ್ಯಾದಿಗಳನ್ನು ಸ್ಟೂಡೆಂಟ್ ಮಾನಿಟರಿಂಗ್ ಸಿಸ್ಟಂನ್ನು ಅಳವಡಿಸಿಕೊಳ್ಳಲು ತಿಳಿಸಿದರು ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳಲ್ಲಿ ವಿದ್ಯಾರ್ಥಿಗಳ ಪ್ರವೇಶಾತಿಯನ್ನು ಹೆಚ್ಚಿಸಲು ಸೂಕ್ತ ಕ್ರಮ ವಹಿಸಲು ತಿಳಿಸಲಾಯಿತು. ಜಿಲ್ಲೆಯಲ್ಲಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳಿಗೆ ದಾಖಲಾಗಿರುವ ವಿದ್ಯಾರ್ಥಿಗಳ ವಿವರ ಈ ಕೆಳಕಂಡಂತಿದೆ. ಒಟ್ಟು 2,200 ಮಂಜೂರಾತಿಯಾಗಿದ್ದು, 1,114 ವಿದ್ಯಾರ್ಥಿಗಳು ದಾಖಲಾಗಿರುತ್ತಾರೆ. ಮುಂದುವರೆದು ಮೆಟ್ರಿಕ್ ವಿದ್ಯಾರ್ಥಿನಿಲಯಗಳಲ್ಲಿ ಒಟ್ಟು 3,504 ಮಂಜೂರಾತಿಯಾಗಿದ್ದು, 2,746 ವಿದ್ಯಾರ್ಥಿಗಳು ದಾಖಲಾಗಿರುತ್ತಾರೆ. ಗ್ರಾಮೀಣ ಭಾಗದಲ್ಲಿ ಹೆಚ್ಚುವ ವಿದ್ಯಾರ್ಥಿಗಳು ದಾಖಲಾತಿ ಮಾಡಿಕೊಳ್ಳಲು ಹಾಗೂ ಪ್ರಚಾರ ಮಾಡಲು ತಿಳಿಸಿದರು ಹಾಗೂ ಹಾಸ್ಟಲ್‌ಗಳಿಗೆ ರಾತ್ರಿ ಪಾಳಯದಲ್ಲಿ ಅನಿರೀಕ್ಷಿತವಾಗಿ ಬೇಟಿಮಾಡಿ ಅನಧಿಕೃತ ವ್ಯಕ್ತಿಗಳು ಕೊಠಡಿಗಳಲ್ಲಿ ತಂಗಿದ್ದಲ್ಲಿ ಅವರ ವಿರುದ್ಧ ಕಾನೂನು ರೀತಿ ಸೂಕ್ತ ಕ್ರಮ ಕೈಗೊಳ್ಳಲು ತಿಳಿಸಿದರು. ಮುಂದುವರೆದು ಹಾಸ್ಟಲ್‌ಗಳಲ್ಲಿ ವಿತರಿಸಲಾಗುತ್ತಿರುವ ಆಹಾರದ ಗುಣಮಟ್ಟದ ಬಗ್ಗೆ ಪರಿಶೀಲಿಸಿ, ಯಾವುದೇ ದೂರುಗಳು

ಬಾರದಂತೆ ಕ್ರಮ ವಹಿಸಲು ತಿಳಿಸಿದರು. ಜಂಟಿ ನಿರ್ದೇಶಕರು ಮಾತನಾಡುತ್ತಾ, ಮಾನ್ಯ ಆಯುಕ್ತರು ಸಮಾಜ ಕಲ್ಯಾಣ ಇಲಾಖೆ ರವರ ನಿರ್ದೇಶನದಂತೆ ಮೆಟ್ರಿಕ್ ವಸತಿ ಶಾಲೆಯ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿಗಳ ಮೆನುಚಾರ್ಟ್‌ನ್ನು ನೀಡಿದ್ದು, ಅದರಂತೆ ಪ್ರತಿ ದಿನ ವಿವಿಧ ರೀತಿಯಾ ಉಪಹಾರ/ಮಧ್ಯಹ್ನಾದ ಊಟ ಹಾಗೂ ರಾತ್ರಿ ಊಟವನ್ನು ವಿತರಿಸಲಾಗುತ್ತಿದೆ ಎಂದು ಸಭೆಯಲ್ಲಿ ತಿಳಿಸಲಾಗಿರುತ್ತದೆ.

2014-15ನೇ ಸಾಲಿಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳಲ್ಲಿ 1942 ವಿಧ್ಯಾರ್ಥಿಗಳನ್ನು ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಲ್ಲಿ 1223 ವಿದ್ಯಾರ್ಥಿಗಳನ್ನು ಹೊಸದಾಗಿ ದಾಖಲಾತಿ ಮಾಡಿಕೊಳ್ಳಲು ವಿದ್ಯಾರ್ಥಿಗಳಿಂದ ಅರ್ಜಿ ಸ್ವೀಕರಿಸಲು ದಿನಾಂಕ: 18-07-2014 ಕೊನೆಯ ದಿನಾಂಕವಾಗಿರುತ್ತದೆಂದು ಜಿಲ್ಲಾ ಮಟ್ಟದ ಅಧಿಕಾರಿಗಳು ಸಭೆಗೆ ತಿಳಿಸಿದಾಗ, ಈಗಾಗಲೇ ಶೈಕ್ಷಣಿಕ ವರ್ಷ ಪ್ರಾರಂಭವಾಗಿ ಒಂದು ತಿಂಗಳು ಮುಗಿದಿರುವುದರಿಂದ ಕೂಡಲೇ ಶಾಸಕರ ಅಧ್ಯಕ್ಷತೆಯಲ್ಲಿ ಸಭೆ ಕರೆದು ಹೊಸ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳಲು ಸೂಚನೆ ನೀಡಲಾಯಿತು.

(ಕ್ರಮ: ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು, ಬೆಂಗಳೂರು ಜಿಲ್ಲೆ)

<u>ಲೋಕ ಶಿಕ್ಷಣ ಇಲಾಖೆ, ಜಿಲ್ಲಾ ಸಾಕ್ಷರತಾ ಸಮಿತಿ</u>

**2018-19**ನೇ ಸಾಲಿನಲ್ಲಿ ಬೆಂಗಳೂರು ನಗರ ಜಿಲ್ಲಾ ಪಂಚಾಯತ್, ಜಿಲ್ಲಾ ಸಾಕ್ಷರತಾ ಸಮಿತಿ ವತಿಯಿಂದ ಬೆಂಗಳೂರು ನಗರ ಜಿಲ್ಲೆಯ ಬೆಂಗಳೂರು ಉತ್ತರ/ದಕ್ಷಿಣ ಮತ್ತು ಆನೇಕಲ್ ತಾಲ್ಲೂಕುಗಳಲ್ಲಿ **12** ಗ್ರಾಮ ಪಂಚಾಯಿತಿಗಳ **99** ಗ್ರಾಮಗಳಲ್ಲಿನ ಒಟ್ಟು **5500** ಅನಕ್ಷರಸ್ಥರ ಪೈಕಿ **1268 ಪುರುಷ** ಮತ್ತು **4232** ಮಹಿಳಾ ಅನಕ್ಷರಸ್ಥರಿಗೆ (15 ರಿಂದ 50 ವರ್ಷದ ವಯೋಮಿತಿ) **Sri Anjaneya Swamy Educational and Rural Development Society(R.)** ಸ್ವಯಂಸೇವಾ **ಸಂಸ್ಥೆ, ತುಮಕೂರು** ಇವರ ಸಹಯೋಗದೊಂದಿಗೆ 6 ತಿಂಗಳ ಅವಧಿಯಲ್ಲಿ ಕಲಿಕಾರ್ಥಿಗಳ ಬಿಡುವಿನ ವೇಳೆ ಆಧರಿಸಿ ಪ್ರತಿದಿನ 2 ಗಂಟೆಯಂತೆ 550ಕಲಿಕಾ ಕೇಂದ್ರಗಳಲ್ಲಿ 550 ಬೋಧಕರ ಮೂಲಕ **"ಬಾಳಿಗೆ ಬೆಳಕು"** ಪ್ರಾಥಮಿಕೆ ಬಳಸಿಕೊಂಡು "ಓದು-ಬರಹ-ಲೆಕ್ಕಾಚಾರ"ದ ಕಲಿಕಾ ಸಾಮರ್ಥ್ಯವನ್ನು ನೀಡುವುದರ ಮೂಲಕ ಸಾಕ್ಷರರನ್ನಾಗಿಸುವ "ಮೂಲ ಸಾಕ್ಷರತಾ" ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗಿದೆ. 6 ತಿಂಗಳ ಕಲಿಕೆ ಮುಗಿಸಿದ ನಂತರ ಅರ್ಹ ಶೈಕ್ಷಣಿಕ ಸಂಸ್ಥೆಯ ಮೂಲಕ ಬಾಹ್ಯ ಮೌಲ್ಯಮಾಪನ ಮಾಡಿಸಿ ಮೌಲ್ಯಮಾಪನದಲ್ಲಿನ ಓದು-ಬರಹ-ಲೆಕ್ಕಾಚಾರದ ಪ್ರತಿ ವಿಭಾಗದಲ್ಲಿ 50 ಅಂಕಗಳಿಗೆ ಶೇ 40ರಷ್ಟು ಅಂದರೆ 20 ಅಂಕಗಳನ್ನು ಗಳಿಸಿದರೆ ಉತ್ತೀರ್ಣರೆಂದು ಘೋಷಿಸಿ ನವಸಾಕ್ಷರರು ಎಂದು ಪ್ರಮಾಣ ಪತ್ರ ವಿತರಿಸಲಾಗುವುದು. ಕೊನೆಯದಾಗಿ 6ತಿಂಗಳ ಅವಧಿಯಲ್ಲಿ ಒಟ್ಟು ಬೋಧಕರು 10 ಜನ ಅನಕ್ಷರಸ್ಥರಿಗೆ ಕಲಿಸಿದಂತೆ ಉತ್ತೀರ್ಣರಾದವರನ್ನಾಧರಿಸಿ ತಲಾ ರೂ:90/-ರಂತೆ ಒಟ್ಟು ರೂ:900/-ಗಳನ್ನು 6ತಿಂಗಳ ಅವಧಿಗೆ ಪ್ರೋತ್ಸಾಹಧನವಾಗಿ ಬೋಧಕರಿಗೆ DBT ಮೂಲಕ ವಿತರಿಸಲಾಗುವುದು. ಲೋಕ ಶಿಕ್ಷಣ ನಿರ್ದೇಶನಾಲಯ ಹಾಗೂ ರಾಜ್ಯಸಾಕ್ಷರತಾ ಮಿಷನ್ ಪ್ರಾಧಿಕಾರದ ಮಾರ್ಗಸೂಚಿಯಂತೆ ಈ ಕಾರ್ಯಕ್ರಮದಲ್ಲಿ **ರೂ:12.99ಲಕ್ಷ**ಗಳನ್ನು ವೆಚ್ಚ ಮಾಡಲಾಗಿರುತ್ತದೆ ಎಂದು ಸಭೆಯಲ್ಲಿ ತಿಳಿಸಿದರು.

<u>ಶಿಕ್ಷಣ ಇಲಾಖೆ:</u>

<u>ಪಠ್ಯ ಪುಸ್ತಕ ಸರಬರಾಜು:</u>

ಪ್ರಸಕ್ತ ಸಾಲಿಗೆ 61.31 ಲಕ್ಷ ಪಠ್ಯ ಪುಸ್ತಕಗಳ ಬೇಡಿಕೆ ಇದ್ದು, 59.53 ಲಕ್ಷ ಪುಸ್ತಕಗಳು ಸರಬರಾಜಾಗಿದ್ದು, ಸರಬರಾಜಾಗಿದ್ದ ಪೂರ್ಣ ಪುಸ್ತಕಗಳನ್ನು ವಿತರಣೆ ಮಾಡಿ ಶೇ.97.27 ರಷ್ಟು ಪ್ರಗತಿಯನ್ನು ಸಾಧಿಸಲಾದ ಬಗ್ಗೆ ಪರಿಶೀಲಿಸಿ, ಶೇ.3.73ರಷ್ಟು ಪುಸ್ತಕಗಳನ್ನು ಇನ್ನು ಸರಬರಾಜು ಮಾಡದೇ ಇರುವುದಕ್ಕೆ ಪ್ರಶ್ನಿಸಿದರು. ಇದಕ್ಕೆ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ರವರು ಉತ್ತರಿಸುತ್ತಾ, ಮೊದಲನೇ ಸೆಮಿಸ್ಟರ್‌ಗೆ ಸಂಬಂಧಿಸಿದಂತೆ ಎಲ್ಲಾ ಪುಸ್ತಕಗಳು ಸರಬರಾಜಾಗಿದ್ದು, ಎರಡನೇ ಸೆಮಿಸ್ಟರ್‌ಗೆ ಸಂಬಂಧಿಸಿದಂತೆ ಪುಸ್ತಕಗಳು ಸರಬರಾಜಾಗಬೇಕಾಗಿದೆ. ಈ ಪುಸ್ತಕಗಳು ಸರಬರಾಜಾದ ಮೇಲೆ ಮಕ್ಕಳಿಗೆ ವಿತರಣೆ ಮಾಡಲಾಗುವುದೆಂದು ತಿಳಿಸಿದರು.

<u>ಸಮವಸ್ತ್ರ ವಿತರಣೆ:</u>

ಪ್ರಸಕ್ತ ಸಾಲಿಗೆ 1.92ಲಕ್ಷ ವಿದ್ಯಾರ್ಥಿಗಳಿಗೆ ಸಮವಸ್ತ್ರಗಳ ಬೇಡಿಕೆಗೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಈ ಪೈಕಿ 0.77 ಲಕ್ಷ ಸರಬರಾಜಾಗಿದ್ದು, ಸದರಿ ಸಮವಸ್ತ್ರಗಳನ್ನು ವಿದ್ಯಾರ್ಥಿಗಳಿಗೆ ವಿತರಣೆ ಮಾಡಿ ಶೇ.40ರಷ್ಟು ಪ್ರಗತಿಯನ್ನು ಸಾಧಿಸಲಾಗಿದೆಯೆಂದು ಸಭೆಗೆ ತಿಳಿಸಿದಾಗ, ಶೇ.100ರಷ್ಟು ಪ್ರಗತಿ ಸಾಧಿಸಲು ಅಧ್ಯಕ್ಷರು ಸೂಚನೆ ನೀಡಿದರು.

**ಬೈಸಿಕಲ್ ವಿತರಣೆ:**

ಜಿಲ್ಲೆಗೆ 6,390 ಬೈಸಿಕಲ್ ಸರಬರಾಜಾಗಬೇಕಾಗಿದ್ದು, ಇಲ್ಲಿಯವರೆಗೆ ಇವುಗಳು ಸರಬರಾಜು ಆಗಿರುವುದಿಲ್ಲವೆಂದು ಜಿಲ್ಲಾ ಮಟ್ಟದ ಅಧಿಕಾರಿಗಳು ಸಭೆಗೆ ತಿಳಿಸಿದಾಗ, ಈ ಕಾರ್ಯಕ್ರಮವು ಒಂದು ಉತ್ತಮ ಕಾರ್ಯಕ್ರಮವಾಗಿದ್ದು, ಗ್ರಾಮೀಣ ಪ್ರದೇಶದಲ್ಲಿ ವಿದ್ಯಾರ್ಥಿಗಳ ದಾಖಲಾತಿಯನ್ನು ಹೆಚ್ಚಿಸುತ್ತಿರುವುದರಿಂದ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಸೂಚಿಸಿದರು, ಸಂಬಂದಪಟ್ಟ ಅಧಿಕಾರಿಗಳು ಸದರಿ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿರುವುದರಿಂದ ಬೈಸಿಕಲ್‌ಗಳನ್ನು ವಿತರಿಸಲಾಗಿರುವುದಿಲ್ಲ ಎಂದು ತಿಳಿಸಿದರು.

**ಆರ್.ಟಿ.ಇ:**

2019-20ನೇ ಸಾಲಿಗೆ ಬೆಂಗಳೂರು ಉತ್ತರ ಜಿಲ್ಲೆಗೆ ಶೇ.25% ರಂತೆ ಒಟ್ಟು 484 ಸೀಟುಗಳು ನಿಗದಿಯಾಗಿದ್ದು, ಈ ಪೈಕಿ 44 ವಿದ್ಯಾರ್ಥಿಗಳನ್ನು ದಾಖಲು ಮಾಡಿ, ಶೇ.4.84ರಷ್ಟು ಪ್ರಗತಿಯನ್ನು ಸಾಧಿಸಲಾಗಿದೆ. ಇದೇ ರೀತಿ ಬೆಂಗಳೂರು ದಕ್ಷಿಣ ಜಿಲ್ಲೆಗೆ ಶೇ.25% ಒಟ್ಟು 1,262 ಸೀಟುಗಳು ನಿಗದಿಯಾಗಿದ್ದು, ಈ ಪೈಕಿ 544 ವಿದ್ಯಾರ್ಥಿಗಳನ್ನು ದಾಖಲು ಮಾಡಿ ಶೇ.43.11 ರಷ್ಟು ಪ್ರಗತಿಯನ್ನು ಸಾಧಿಸಿರುವ ಮಾಹಿತಿಯನ್ನು ಸಭೆಯ ಗಮನಕ್ಕೆ ತಂದರು.

(ಕ್ರಮ: ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಉತ್ತರ/ದಕ್ಷಿಣ ಜಿಲ್ಲೆ)

**ಅಕ್ಷರ ದಾಸೋಹ:**

ಈ ಕಾರ್ಯಕ್ರಮದಡಿ ಒಟ್ಟು 2,118 ಶಾಲೆಗಳಲ್ಲಿ ಅಕ್ಷರ ದಾಸೋಹ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಿ, 3.28 ಲಕ್ಷ ಮಕ್ಕಳಿಗೆ ಬಿಸಿಯೂಟವನ್ನು ಸರಬರಾಜು ಮಾಡಲಾಗುತ್ತಿದೆ. ಈ ಒಟ್ಟು ಶಾಲೆಗಳ ಪೈಕಿ 2,009 ಶಾಲೆಯ 3.18 ಲಕ್ಷ ಮಕ್ಕಳಿಗೆ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಹಾಗೂ 109 ಶಾಲೆಗಳಲ್ಲಿನ 10,172 ಮಕ್ಕಳಿಗೆ ಅಡಿಗೆ ಕೇಂದ್ರಗಳ ಮೂಲಕ ಬಿಸಿಯೂಟವನ್ನು ಸರಬರಾಜು ಮಾಡಲಾಗುತ್ತಿದ್ದು, ಯಾವುದೇ ಸಮಸ್ಯೆ ಇರುವುದಿಲ್ಲವೆಂದು ಜಿಲ್ಲಾ ಮಟ್ಟದ ಅಧಿಕಾರಿಗಳು ಸಭೆಯ ಗಮನಕ್ಕೆ ತಂದರು. ಈ ಬಗ್ಗೆ ಜಿಲ್ಲಾ ಮಟ್ಟದ ಅಧಿಕಾರಿಗಳು ಶಾಲೆಗಳಿಗೆ ಭೇಟಿ ನೀಡಿ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಆಹಾರವನ್ನು ಸರಬರಾಜು ಮಾಡುತ್ತಿರುವ ಬಗ್ಗೆ ಖಚಿತಪಡಿಸಿಕೊಳ್ಳಲು ಸೂಚನೆ ನೀಡಿದರು.

**ಕ್ಷೀರ ಭಾಗ್ಯ:**

ಈ ಯೋಜನೆಯನ್ನು ಎಲ್ಲಾ ಶಾಲೆಯಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆಯೇ ಎಂಬುದರ ಬಗ್ಗೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಪ್ರಶ್ನಿಸಿದಾಗ, ಎಲ್ಲಾ 2227 ಶಾಲೆಗಳಲ್ಲಿನ 2.75 ಲಕ್ಷ ಮಕ್ಕಳಿಗೆ ಸಕ್ಕರೆ ಸಹಿತ ಬಿಸಿ ಹಾಲನ್ನು ಯಾವುದೇ ಸಮಸ್ಯೆ ಇಲ್ಲದೆ ಸರಬರಾಜು ಮಾಡಲಾಗುತ್ತಿದೆ ಎಂದು ಜಿಲ್ಲಾ ಅಕ್ಷರ ದಾಸೋಹ ಅಧಿಕಾರಿಗಳು ಸಭೆಗೆ ತಿಳಿಸಿದರು.

(ಕ್ರಮ: ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲೆ ಹಾಗೂ ಶಿಕ್ಷಣಾಧಿಕಾರಿಗಳು, ಅಕ್ಷರ ದಾಸೋಹ, ಬೆಂಗಳೂರು ಜಿಲ್ಲೆ)

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ:**

ಜಿಲ್ಲೆಯಲ್ಲಿ ಚಿಕನ್ ಗೂನ್ಯ ಮತ್ತು ಡೆಂಗ್ಯೂ ಕಾಯಿಲೆಗಳನ್ನು ನಿಯಂತ್ರಿಸಲು ತೆಗೆದುಕೊಂಡ ಕ್ರಮದ ಬಗ್ಗೆ ಪರಿಶೀಲಿಸಿದಾಗ, 2019-20ನೇ ಸಾಲಿನ ಅವಧಿಯಲ್ಲಿ 17 ಡೆಂಗ್ಯೂ ಪ್ರಕರಣಗಳು 63 ದಾಖಲಾಗಿರುತ್ತವೆ. ಇವುಗಳನ್ನು ಡೆತ್ ಆಡಿಟ್ ಮಾಡಬೇಕಾಗಿದೆ. ಮುಂದುವರೆದು, ಈ ಕಾಯಿಲೆಯನ್ನು ನಿಯಂತ್ರಿಸಲು ಸುಮಾರು 11.45 ಲಕ್ಷ ಮನೆಗಳನ್ನು ಸರ್ವೆ ಮಾಡಲಾಗಿದ್ದು, ಈ ಪೈಕಿ 20435 ಮನೆಗಳಲ್ಲಿ ಲಾರ್ವ ಕಂಡು ಬಂದಿರುತ್ತದೆ. ಲಾರ್ವ ಕಂಡು ಬಂದು ನೀರಿನ ಸಂಗ್ರಹಗಳನ್ನು ಖಾಲಿ ಮಾಡಲು ಒಪ್ಪದ ಕುಟುಂಬಗಳ ಮನೆಗಳ ಬಾಗಿಲಿನ ಮೇಲೆ " **ಈ ಮನೆಯಲ್ಲಿ ಈಡಿಸ್ ಲಾರ್ವ ಹಾಗೂ ಸೊಳ್ಳೆ ಕಂಡು ಬಂದಿರುತ್ತದೆ**"ಎಂಬ ಸ್ಟಿಕ್ಕರ್‌ನ್ನು ಅಂಟಿಸಿ

ಅರಿವು ಮೂಡಿಸಲಾಗಿರುತ್ತದೆ. ತಾಲ್ಲೂಕು ಮಟ್ಟದಲ್ಲಿ ತ್ವರಿತ ಕ್ರಿಯಾ ತಂಡಗಳನ್ನು ರಚಿಸಿ ಈಡಿಸ್ ಲಾರ್ವ ಸಮೀಕ್ಷೆಯನ್ನು ಮಾಡಲಾಗುತ್ತಿದೆ ಎಂದು ಸಹ ಸಭೆಗೆ ತಿಳಿಸಿದರು.

ಡೆಂಗ್ಯೂ ನಿಯಂತ್ರಣಕ್ಕೆ ಗ್ರಾಮ ಪಂಚಾಯತಿ ಮಟ್ಟದಲ್ಲಿ ತೆಗೆದುಕೊಂಡ ಕ್ರಮದ ಬಗ್ಗೆ ಪರಿಶೀಲಿಸಿದಾಗ, ಡೆಂಗ್ಯೂ ಕಾಯಿಲೆಗೆ ಸಂಬಂಧಿಸಿದ ಸೊಳ್ಳೆಯು ಉತ್ಪತ್ತಿಯಾಗುವ ಕೇಂದ್ರಗಳನ್ನು ಗುರುತಿಸಿ ಸದರಿ ಕೇಂದ್ರಗಳ ಫೋಟೋಗಳನ್ನು ಆಲ್ಬಂ ರೂಪದಲ್ಲಿ ಸಿದ್ದಪಡಿಸಿ ಎಲ್ಲಾ ಗ್ರಾಮ ಪಂಚಾಯತಿಗಳಿಗೆ ಕಳುಹಿಸಿಕೊಡಲಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಸಭೆಗೆ ತಿಳಿಸಿದರು. ಈ ಕಾಯಿಲೆಯನ್ನು ನಿಯಂತ್ರಿಸಲು ಗ್ರಾಮ ಪಂಚಾಯತಿಗಳು ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಒಂದು ಪ್ರಸ್ತಾವನೆಯನ್ನು/ಕ್ರಿಯಾ ಯೋಜನೆಯನ್ನು ಜಿಲ್ಲಾ ಆರೋಗ್ಯ ಕುಟುಂಬ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಸಿದ್ಧಪಡಿಸಿ ಮುಖ್ಯ ಕಾರ್ಯನಿರ್ವಾಹಕ

ಅಧಿಕಾರಿಗಳ ಮೂಲಕ ತಾಲ್ಲೂಕು ಪಂಚಾಯತಿಗಳಿಗೆ ಕಳುಹಿಸಿಕೊಡಲು ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಕಳುಹಿಸಿಕೊಟ್ಟಿರುವ ಆಲ್ಬಂ ಆಧಾರದ ಮೇಲೆ ಡೆಂಗ್ಯೂ ಕಾಯಿಲೆಯನ್ನು ಗ್ರಾಮ ಪಂಚಾಯತಿ ಮಟ್ಟದಲ್ಲಿ ನಿಯಂತ್ರಿಸಲು ಜನರಲ್ಲಿ ಅರಿವು ಮೂಡಿಸಲು ಕ್ರಮವಹಿಸುವಂತೆ ಎಲ್ಲಾ ತಾಲ್ಲೂಕು ಪಂಚಾಯತಿಯ ಕಾರ್ಯ ನಿರ್ವಾಹಕ ಅಧಿಕಾರಿಗಳಿಗೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸೂಚನೆ ನೀಡಿದರು.

ಜಿಲ್ಲೆಯಲ್ಲಿ 58 ತಜ್ಞ ವೈದ್ಯರ ಹುದ್ದೆಗಳ ಪೈಕಿ 2 ಹುದ್ದೆಗಳು ಖಾಲಿ ಇರುವ ಬಗ್ಗೆ ಪರಿಶೀಲಿಸಿದಾಗ, ವೈದ್ಯರುಗಳನ್ನು ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಲಾಗುತ್ತಿದೆ. ಆದರೆ ಸದರಿ ಹುದ್ದೆಗಳಿಗೆ ಎದುರಾಗಿ ಸರ್ಕಾರದಿಂದ ನೇಮಕಾತಿ/ವರ್ಗಾವಣೆ ಮೂಲಕ ನೇಮಕ ಮಾಡಲಾಗುತ್ತಿದ್ದು, ನೇಮಕ ಮಾಡಿದ ಕೂಡಲೇ ಗುತ್ತಿಗೆ ಆಧಾರದ ವೈದ್ಯರು ಬಿಡುಗಡೆಯಾಗಬೇಕಾಗಿದೆ. ಇದರಿಂದ ವೈದ್ಯರು ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸಲು ಮುಂದೆ ಬರುತ್ತಿಲ್ಲವೆಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ತಿಳಿಸಿದರು. ಈ ಬಗ್ಗೆ ಒಂದು ಸೂಕ್ತ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಮೂಲಕ ಕಳುಹಿಸಿಕೊಡಲು ಸೂಚಿಸಲಾಯಿತು.

ವಾಹನ ಚಾಲಕರ 19 ಹುದ್ದೆಗಳು ಭರ್ತಿಯಾಗದೆ ಇರುವ ಬಗ್ಗೆ ಪರಿಶೀಲಿಸಿದಾಗ, ಹೊರ ಗುತ್ತಿಗೆ ಆಧಾರದ ಮೇಲೆ ನೇಮಕವಾದ ವಾಹನ ಚಾಲಕರಿಗೆ ರೂ.18000/- ವೇತನವನ್ನು ಪಾವತಿಸಲಾಗುತ್ತಿದೆಯೆಂದು ತಿಳಿಸಿದರು.ಜಿಲ್ಲೆಯಲ್ಲಿ ಆಗುತ್ತಿರುವ ಸಾಂಸ್ಥಿಕ ಪ್ರಸೂತಿಯ ಬಗ್ಗೆ ಪರಿಶೀಲಿಸಿದಾಗ, ಜಿಲ್ಲೆಯಲ್ಲಿ ಶೇ.98 ರಷ್ಟು ಸಾಂಸ್ಥಿಕ ಪ್ರಸೂತಿ ಆಗುತ್ತಿದೆಯೆಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ತಿಳಿಸಿದರು.

24/7 ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಹೆರಿಗೆ ಆದ ಪ್ರಕರಣಗಳಿಗೆ ನೀಡಿದ ಬಿ.ಸಿ.ಜಿ. ಮತ್ತು ಝಿರೋ ಡೋಸ್ ಲಸಿಕೆಯನ್ನು ಹೊಂದಾಣಿಕೆ ಮಾಡಲು ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ ಮಕ್ಕಳಿಗೆ ನೀಡುವ ಬಿ.ಸಿ.ಜಿ. ಮತ್ತು ಝಿರೋ ಡೋಸ್ ಲಸಿಕಾ ಕಾರ್ಯಕ್ರಮದ ಮೇಲ್ವಿಚಾರಣೆ ಮಾಡಲು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಿಗೆ ಸೂಚನೆ ನೀಡಲಾಯಿತು.

ಅಪೌಷ್ಠಿಕತೆಯಿಂದ ಬಳಲುತ್ತಿರುವ ಮಕ್ಕಳ Bed Occupancy Rate ಇಂದಿರಾ ಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯಲ್ಲಿ ಬಹಳ ಕಡಿಮೆ ಇರುವ ಬಗ್ಗೆ ಪರಿಶೀಲಿಸಿದಾಗ, ಅಪೌಷ್ಠಿಕ ಮಕ್ಕಳಿಗೆ ತೀವ್ರತರ ಖಾಯಿಲೆ ಇದ್ದಲ್ಲಿ ಮಾತ್ರ ಮಕ್ಕಳನ್ನು ಈ ಆರೋಗ್ಯ ಸಂಸ್ಥೆಯಲ್ಲಿ ದಾಖಲು ಮಾಡಿಕೊಳ್ಳಲಾಗುತ್ತಿದೆಯೆಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಸಭೆಗೆ ತಿಳಿಸಿದರು. ಇಂತಹ ಮಕ್ಕಳನ್ನು ಬೌರಿಂಗ್ ಮತ್ತು ವಾಣಿ ವಿಲಾಸ ಆಸ್ಪತ್ರೆಗಳಲ್ಲಿಯು ಸಹ ದಾಖಲಿಸಲು ಸೂಚನೆ ನೀಡಲಾಯಿತು.

ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಔಷಧಿ ಲಭ್ಯತೆ ಬಗ್ಗೆ ಪರಿಶೀಲಿಸಿದಾಗ, ಯಾವುದೇ ಔಷಧಿ ಕೊರತೆಯಿಲ್ಲವೆಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಸಭೆಗೆ ತಿಳಿಸಿದಾಗ, ನಾಯಿ ಮತ್ತು ಹಾವು ಕಡಿತಕ್ಕೆ ಸಂಬಂಧಿಸಿದ. ಎ.ಆರ್.ವಿ. & ಎ.ಎಸ್.ವಿ. ಔಷಧಿಗಳನ್ನು ಪ್ರತಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಇಟ್ಟುಕೊಳ್ಳಲು ಸೂಚನೆ ನೀಡಲಾಯಿತು.

ಮುಂದುವರೆದು, ರಾಷ್ಟ್ರೀಯ ನಗರ ಆರೋಗ್ಯ ಮಿಷನ್ (NUHM) ಯೋಜನೆಯಡಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕೈಗೊಳ್ಳಲಾದ ಕಾರ್ಯಕ್ರಮಗಳ ಪ್ರಗತಿಯನ್ನು ಪರಿಶೀಲಿಸಲು, ಮುಂದಿನ ಸಭೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಬರುವ ಆರೋಗ್ಯ ಅಧಿಕಾರಿಗಳನ್ನು ಸಹ ಸಭೆಗೆ ಆಹ್ವಾನಿಸುವಂತೆ ಸೂಚಿಸಲಾಯಿತು. ಇದಲ್ಲದೆ, ಪ್ರಾದೇಶಿಕ ಸಾರಿಗೆ ಅಧಿಕಾರಿಗಳನ್ನು ಸಹ ಮುಂದಿನ ಸಭೆಗೆ ಆಹ್ವಾನಿಸಲು ಸೂಚನೆ ನೀಡಲಾಯಿತು.

**(ಕ್ರಮ: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಬೆಂಗಳೂರು ಜಿಲ್ಲೆ)**

ಅಂತಿಮವಾಗಿ, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಅಧಿಕಾರಿಗಳನ್ನು ಉದ್ದೇಶಿಸಿ 2019-20ನೇ ಸಾಲಿಗೆ ಸಂಬಂಧಿಸಿದಂತೆ ಈಗಾಗಲೇ ಆರ್ಥಿಕ ವರ್ಷದ 3 ತಿಂಗಳು ಪೂರ್ಣಗೊಂಡಿದ್ದು, ಜಿಲ್ಲಾ ಮಟ್ಟದ ಅಧಿಕಾರಿಗಳು ನಿಗಧಿಪಡಿಸಿದ ಅನುದಾನಕ್ಕೆ ರೂಪಿಸಿರುವ ಕ್ರಿಯಾ ಯೋಜನೆಗೆ ಅನುಮೋಧನೆಯನ್ನು ಪಡೆದು, ಕಾರ್ಯಕ್ರಮಗಳನ್ನು/ಕಾಮಗಾರಿಗಳನ್ನು ಸಕಾಲದಲ್ಲಿ ಅನುಷ್ಠಾನಗೊಳಿಸಿ, ಪ್ರಗತಿಯನ್ನು ಸಾಧಿಸಲು ಮತ್ತು ಸರ್ಕಾರದ ಅನುಮೋಧನೆ ಅವಶ್ಯಕತೆ ಇದ್ದಲ್ಲಿ ಕೂಡಲೇ ಪ್ರಸ್ತಾವನೆಯನ್ನು ಸಲ್ಲಿಸಿ, ಅನುಮೋಧನೆ ಪಡೆದು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಮತ್ತು ಬಿಡುಗಡೆಯಾದ ಪೂರ್ಣ ಅನುದಾನವನ್ನು ಕಾರ್ಯಕ್ರಮಗಳಿಗೆ/ಕಾಮಗಾರಿಗಳಿಗೆ ವೆಚ್ಚ ಭರಿಸಿ ಶೇ.100ರಷ್ಟು ಪ್ರಗತಿಯನ್ನು ಸಾಧಿಸಲು ಸೂಚಿಸಿದರು.

ಸಭೆಯು ವಂದನಾರ್ಪಣೆಯೊಂದಿಗೆ ಮುಕ್ತಾಯವಾಯಿತು.

[ ಅಂಜುಮ್ ಪರ್ವೇಜ್ ]
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ
ಇಲಾಖೆ ಹಾಗೂ ಬೆಂಗಳೂರು ನಗರ ಜಿಲ್ಲಾ ಉಸ್ತುವಾರಿ
ಕಾರ್ಯದರ್ಶಿಗಳು, ಬೆಂಗಳೂರು ಜಿಲ್ಲೆ.

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯಿಂದ ಪ್ರತಿ ತಿಂಗಳು ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ಸಲ್ಲಿಸಬೇಕಾದ ನಮೂನೆ

-: ಧಾರವಾಡ ಜಿಲ್ಲೆ :-

| ಕ್ರಮ ಸಂ. | ಅಂಶಗಳು | ಕಾರ್ಯದರ್ಶಿಗಳ ಷರಾ |
|---|---|---|
| 01 | ಜಿಲ್ಲೆಯ ಹೆಸರು | ಧಾರವಾಡ |
| 02 | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯ ಹೆಸರು | ವಿ. ಮಂಜುಲ |
| 03 | ಭೇಟಿಯಾದ/ಪ್ರವಾಸದ ದಿನಾಂಕ | 11/07/2019 |
| 13 | ಮುಖ್ಯವಾಗಿ ಗಮನಿಸಿದ ಅಂಶಗಳು ಹಾಗೂ ಸಲಹೆಗಳು | ಸಭೆಯಲ್ಲಿ ಹಾಜರಿದ್ದ ಜಂಟಿ ಕೃಷಿ ನಿರ್ದೇಶಕರು, ಧಾರವಾಡ ಇವರು ಈ ಕೆಳಗಿನಂತೆ ವಿವರಿಸಿದರು.<br>**<u>ಋತಮಾನ ಪರಿಸ್ಥಿತಿ</u>**<br>1) ಧಾರವಾಡ ಜಿಲ್ಲೆಯಲ್ಲಿ ದಿನಾಂಕ:01-01-2019 ರಿಂದ 30-06-2019 ರವರೆಗೆ ಮುಂಗಾರು ಅವಧಿಯಲ್ಲಿ ಜಿಲ್ಲೆಯ ಎಲ್ಲಾ 5 ತಾಲ್ಲೂಕುಗಳಲ್ಲಿ ಶೇ.8 ರಷ್ಟು ಮಳೆಯ ಕೊರತೆ ಉಂಟಾಗಿದ್ದು, ಬಿತ್ತನೆಗಾಗಿ ರೈತರು ಭೂಮಿಯನ್ನು ಹದ ಮಾಡಿಕೊಂಡಿದ್ದು, ಪ್ರಸ್ತುತ ಸತತವಾಗಿ ಮಳೆಯಾಗುತ್ತಿರುವುದರಿಂದ ಬಿತ್ತನೆ ಇನ್ನೂ ಪ್ರಾರಂಭಗೊಂಡಿರುವುದಿಲ್ಲವೆಂದು ತಿಳಿಸಿದರು.<br>2) ಜಿಲ್ಲೆಯಲ್ಲಿ ಮುಖ್ಯವಾಗಿ ಮಳೆ ಆಶ್ರಿತ ಬೆಳೆಗಳಾದ ಸೋಯಾಬಿನ್, ಹೆಸರು, ಗೋವಿನ ಜೋಳ, ಹತ್ತಿ, ಶೇಂಗಾ ಇತ್ಯಾದಿ ಬೆಳೆಯಲಾಗುತ್ತಿದೆ. ಆದರೆ, ಅಳ್ನಾವರ ಮತ್ತು ಕಲಘಟಗಿ ತಾಲ್ಲೂಕುಗಳಲ್ಲಿ ಮಾತ್ರ ಹೆಚ್ಚಾಗಿ ಭತ್ತ ಬೆಳೆಯಲಾಗುತ್ತಿದೆ.<br>3) ಜುಲೈ ಪ್ರಾರಂಭದಿಂದ ಸೋಯಾಬಿನ್, ಗೋವಿನಜೋಳ ಬೆಳೆಯಲು ಅವಕಾಶವಿದ್ದು, ಜಿಲ್ಲೆಯಲ್ಲಿ ಪ್ರಮಾಣಿತ ಬೀಜದ ದಾಸ್ತಾನು ಇರುವುದಾಗಿ ತಿಳಿಸಿದರು. ಅಂದಾಜು 47,000 ಮೆಟ್ರಿಕ್ ಟನ್ ರಸಗೊಬ್ಬರಗಳ ಬೇಡಿಕೆ ಇದ್ದು, ಅದರ ಪೈಕಿ ಈಗಾಗಲೇ 39,000 ಮೆಟ್ರಿಕ್ ಟನ್ ರಸಗೊಬ್ಬರದ ದಾಸ್ತಾನು ಇದೆ ಎಂದು ತಿಳಿಸಿದರು.<br><br>ಮುಂಜಾಗ್ರತೆಯಾಗಿ ಬೀಜ ಹಾಗೂ ರಸಗೊಬ್ಬರದ ದಾಸ್ತಾನು ಇಟ್ಟುಕೊಳ್ಳಲು ಹಾಗೂ ಜನರಿಗೆ ಪರ್ಯಾಯ ಬೆಳೆಗಳ ಬಗ್ಗೆ ಸೂಕ್ತ ತಿಳುವಳಿಕೆಯನ್ನು ನೀಡಿ, ಬಿತ್ತನೆ ಬೀಜ, ರಸಗೊಬ್ಬರಗಳನ್ನು ರೈತರುಗಳಿಗೆ ಸರಿಯಾಗಿ ವಿತರಿಸುವಲ್ಲಿ ಕ್ರಮ ಜರುಗಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಲಾಯಿತು.<br><br>**<u>(ಕ್ರಮ:. ಜಂಟಿ ಕೃಷಿ ನಿರ್ದೇಶಕರು, ಧಾರವಾಡ)</u>**<br><br>**<u>ತೋಟಗಾರಿಕೆ ಇಲಾಖೆ</u>** :- |

ಉಪನಿರ್ದೇಶಕರು, ತೋಟಗಾರಿಕೆ ಇಲಾಖೆ, ಧಾರವಾಡ ಇವರು ಈ ಕೆಳಗಿನಂತೆ ವಿವರಿಸಿದರು.

1. ಜಿಲ್ಲೆಯಲ್ಲಿ ಒಟ್ಟು 1,60,000 ರೈತರುಗಳು ಹಾಗೂ ಒಟ್ಟು 85960 ಹೆಕ್ಟೇರ್ ತೋಟಗಾರಿಕೆ ಬೆಳೆಗಳ ಭೂಮಿ ಇದ್ದು, ಫಸಲ ಭೀಮಾ ಯೋಜನೆಯಡಿ ಒಟ್ಟು 5000 ರೈತರುಗಳು ಯೋಜನೆಯ ಲಾಭ ಪಡೆಯುತ್ತಿದ್ದಾರೆ.
2. ತೋಟಗಾರಿಕೆ ಬೆಳೆಗಳಾದ ಮೆಣಸಿನಕಾಯಿ, ಉಳ್ಳಾಗಡ್ಡಿ, ಆಲೂಗಡ್ಡೆಗಳನ್ನು ಕೃಷಿ ಹೊಂಡಗಳ ಸಹಾಯದಿಂದ ಬೆಳೆಯುತ್ತಿರುವುದಾಗಿ ತಿಳಿಸಿದರು.

ಜಿಲ್ಲೆಯಲ್ಲಿ ಅತಿವೃಷ್ಟಿ/ಅನಾವೃಷ್ಟಿ ಉದ್ಭವಿಸಿದಲ್ಲಿ ಕೃಷಿ ಹೊಂಡಗಳು ಉಪಯೋಗಕ್ಕೆ ಬರುತ್ತವೆ. ಕಾರಣ ಕೃಷಿ ಹೊಂಡಗಳಿಗೆ ಆದ್ಯತೆಯನ್ನು ನೀಡುವಂತೆ ತಿಳಿಸಿದರು. ಕೃಷಿ ಇಲಾಖೆಯ ವತಿಯಿಂದ ಆಹಾರ ಸಂಸ್ಕರಣಾ ಘಟಕಗಳನ್ನು ತೆರೆದು, ಬೆಳೆದ ಬೆಳೆಗಳ ಕುರಿತು ರೈತರಿಗೆ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಿದಲ್ಲಿ ಆಹಾರ ಸಂಸ್ಕರಣಾ ಘಟಕಗಳ ತರಬೇತಿಯಿಂದ ರೈತರ ಹಣಕಾಸಿನ ಪರಿಸ್ಥಿತಿ ಅಭಿವೃದ್ಧಿಯತ್ತ ಸಾಗುವಲ್ಲಿ ಸಹಕಾರಿಯಾಗುವುದಾಗಿ ಸೂಚಿಸಲಾಯಿತು.

**(ಕ್ರಮ: ಉಪನಿರ್ದೇಶಕರು, ತೋಟಗಾರಿಕೆ ಇಲಾಖೆ, ಧಾರವಾಡ/ ಜಂಟಿ ನಿರ್ದೇಶಕರು, ಕೃಷಿ ಹಾಗೂ ಕೈಗಾರಿಕೋದ್ಯಮ ಇಲಾಖೆ, ಧಾರವಾಡ)**

**ರೇಷ್ಮೆ ಇಲಾಖೆ :-**

ಉಪನಿರ್ದೇಶಕರು, ರೇಷ್ಮೆ ಇಲಾಖೆ, ಧಾರವಾಡ ಇವರು 226 ಹೆಕ್ಟೇರ್‌ನಲ್ಲಿ 227 ಜನ ರೈತರು ರೇಷ್ಮೆ ಬೆಳೆಯನ್ನು ಬೆಳೆದಿರುವುದಾಗಿ ತಿಳಿಸಿದರು.

ರೇಷ್ಮೆ ಬೆಳೆಯ ಪ್ರಯೋಜನವನ್ನು ಪಡೆಯಲು ರೈತರಿಗೆ ಹೆಚ್ಚಿನ ತಿಳುವಳಿಕೆ ನೀಡಬೇಕೆಂದು ಸೂಚಿಸಲಾಯಿತು.

**(ಕ್ರಮ: ಉಪನಿರ್ದೇಶಕರು, ರೇಷ್ಮೆ ಇಲಾಖೆ, ಧಾರವಾಡ )**

**ಕೃಷಿ ಇಲಾಖೆ :**

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತಿ, ಧಾರವಾಡ ಇವರು ಈ ಕೆಳಗಿನಂತೆ ತಿಳಿಸಿದರು.

1. ಎಮ್.ಜಿ.ಎನ್.ಆರ್.ಇ.ಜಿ.ಎ ಯೋಜನೆಯಡಿ 22 ಲಕ್ಷಗಳ ಮಾನವ ದಿನಗಳ ವಾರ್ಷಿಕ ಗುರಿ ಇದ್ದು, ಅವುಗಳಲ್ಲಿ 2.8 ಲಕ್ಷಗಳ ಮಾನವ ದಿನಗಳ ಸಂಚಿತ ಸಾಧನೆಯನ್ನು ಮಾಡಿದ್ದು, ಅವುಗಳಲ್ಲಿ 307 ಚೆಕ್ ಡ್ಯಾಂಗಳನ್ನು ನಿರ್ಮಿಸಿರುವುದಾಗಿ ತಿಳಿಸಿದರು.

ಕುಂದಗೋಳ ಹಾಗೂ ಕಲಘಟಗಿ ತಾಲೂಕಿನ ಪ್ರಗತಿಯು ಕಡಿಮೆಯಾಗಿದ್ದು ಒಂದು ವಾರದೊಳಗಾಗಿ ಹೆಚ್ಚಿನ ಪ್ರಗತಿಯನ್ನು ಸಾಧಿಸುವಂತೆ, ಕಾರ್ಮಿಕರಿಗೆ ಒಂದು ವಾರದೊಳಗೆ ವೇತನವನ್ನು ಬಟವಾಡೆ ಮಾಡುವಂತೆ, ಕೃಷಿ ಇಲಾಖೆಯ ಸಮುದಾಯ ಕಾಮಗಾರಿಗಳಿಗೆ ಹೆಚ್ಚಿನ ಆದ್ಯತೆ ನೀಡಿ, ಕೃಷಿ ಹೊಂಡಗಳನ್ನು ಸದುಪಯೋಗಪಡಿಸಿಕೊಳ್ಳುತ್ತಿರುವ ಬಗ್ಗೆ ರೈತರುಗಳ ಪಟ್ಟಿಯನ್ನು ತರಸಿಕೊಂಡು ಕೃಷಿ/ತೋಟಗಾರಿಕೆ/ರೇಷ್ಮೆ ಇಲಾಖೆಯ ಅಧಿಕಾರಿಗಳು ಪರಿಶೀಲಿಸಬೇಕೆಂದು ಸೂಚಿಸಿದರು.

**(ಕ್ರಮ : ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತಿ, ಧಾರವಾಡ)**

| | | |
|---|---|---|
| | | **ಕುಡಿಯುವ ನೀರು:**<br><br>ಹುಬ್ಬಳ್ಳಿ-ಧಾರವಾಡ ಮಹಾನಗರಗಳ 364 ವಾರ್ಡುಗಳಿಗೆ ಮಲಪ್ರಭಾ ಜಲಾಶಯದಿಂದ 160 ಎಂ.ಎಲ್.ಡಿ ನೀರನ್ನು ಪೂರೈಕೆ ಮಾಡುತ್ತಿದ್ದು, ಜಲಾಶಯದ ಸಾಮರ್ಥ್ಯ ಕಡಿಮೆಯಾಗಿರುವುದರಿಂದ ಹುಬ್ಬಳ್ಳಿಯಲ್ಲಿ 6-7 ದಿನಗಳಿಗೊಮ್ಮೆ ಹಾಗೂ ಧಾರವಾಡದಲ್ಲಿ 6-10 ದಿನಗಳಿಗೊಮ್ಮೆ ನೀರನ್ನು ವಿತರಿಸುತ್ತಿರುವುದಾಗಿ ತಿಳಿಸಿದರು. ನೀರಿನ ವಿತರಣೆಯನ್ನು ಹೆಚ್ಚಿಸುವ ಕುರಿತು ರೂ.40.00 ಕೋಟಿಗಳ ಕಾಮಗಾರಿಯನ್ನು ಪ್ರಾರಂಭಿಸಿರುವುದಾಗಿ ತಿಳಿಸಿದರು.<br><br>ಡಿಸೆಂಬರ್-2019ರ ಅಂತ್ಯದೊಳಗಾಗಿ ಕಾಮಗಾರಿಯನ್ನು ಮುಕ್ತಾಯ ಗೊಳಿಸುವಂತೆ, ಅಣ್ಣಿಗೇರಿಯ 70-75 ಎಂ.ಎಲ್.ಡಿ ಸಾಮರ್ಥ್ಯದ ಕಾಮಗಾರಿಯನ್ನು ಮುಂದಿನ ಬೇಸಿಗೆಯೊಳಗಾಗಿ ಮುಗಿಸಿ, ನೀರಸಾಗರ ಕೆರೆಯ ಅತಿಕ್ರಮಣವನ್ನು ತೆರವುಗೊಳಿಸುವಂತೆ ಹಾಗೂ ಸ್ಥಳ ತನಿಖೆಯಿಂದ ಪರಿಶೀಲಿಸಿ ಕೆರೆಯ ಅಭಿವೃದ್ಧಿಗಾಗಿ ನುರಿತ ತಂತ್ರಜ್ಞರನ್ನು ಸಂಪರ್ಕಿಸಲು ಸೂಚಿಸಿದರು.<br><br>**(ಕ್ರಮ: ಕಾರ್ಯನಿರ್ವಾಹಕ ಅಭಿಯಂತರರು, ಕರ್ನಾಟಕ ನಗರ ನೀರು ಸರಬರಾಜು & ಒಳಚರಂಡಿ ಮಂಡಳಿ, ಧಾರವಾಡ/ಹುಬ್ಬಳ್ಳಿ)**<br><br>ಧಾರವಾಡ ಜಿಲ್ಲೆಯ ಗ್ರಾಮೀಣ ಭಾಗದ ಕುಡಿಯುವ ನೀರಿಗಾಗಿ ಇಲ್ಲಿಯವರೆಗೆ ಎನ್‌ಡಿಆರ್‌ಎಫ್/ಎಸ್‌ಡಿಆರ್‌ಎಫ್ ನಡಿ ರೂ.71.41 ಲಕ್ಷಗಳ ವೆಚ್ಚದಲ್ಲಿ ಜಿಲ್ಲೆಯ ಒಟ್ಟು 171 ಪ್ಲಶಿಂಗ್, ಹೈಡ್ರೋಫ್ರಾಕ್ಚರಿಂಗ್, ಡೀಪನಿಂಗ್ ಇತ್ಯಾದಿ ಕಾಮಗಾರಿಗಳಿಗೆ ಅನುದಾನ ಬಿಡುಗಡೆ ಮಾಡಲಾಗಿದೆ ಎಂಬುದಾಗಿ ಜಿಲ್ಲಾಧಿಕಾರಿಗಳು ವಿವರಿಸಿದರು.<br><br>(ಕ್ರಮ : ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಹಾಗೂ ನೈರ್ಮಲ್ಯ ವಿಭಾಗ, ಧಾರವಾಡ/ ಜಿಲ್ಲೆಯ ಸಂಬಂಧಪಟ್ಟ ಅಧಿಕಾರಿಗಳು)<br><br>**ಮೇವು :**<br><br>ಜಿಲ್ಲೆಯಲ್ಲಿ ಒಟ್ಟು 2,73,294 ಜಾನುವಾರುಗಳಿದ್ದು, 68,537 ಮೆ.ಟನ್ ಮೇವಿನ ಲಭ್ಯತೆ ಇದೆ. ಮೇವು ಜಾನುವಾರುಗಳಿಗೆ 7 ವಾರಗಳವರೆಗೆ ಸಾಕಾಗುವುದು. ಸಧ್ಯ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಒಟ್ಟು 9 ಮೇವಿನ ಬ್ಯಾಂಕಗಳನ್ನು ತೆರೆಯಲಾಗಿದೆ. ಇಲ್ಲಿಯವರೆಗೆ ಒಟ್ಟು 347.14 ಟನ್ ಮೇವನ್ನು ರೈತರಿಗೆ ರಿಯಾಯತಿ ದರದಲ್ಲಿ ಪೂರೈಸಿರುವುದಾಗಿ ಉಪನಿರ್ದೇಶಕರು, ಪಶುಸಂಗೋಪನಾ ಇಲಾಖೆ, ಧಾರವಾಡ ಇವರು ತಿಳಿಸಿದರು. ಎಲ್ಲಾ ಜಾನುವಾರುಗಳಿಗೆ ಲಸಿಕೆಯನ್ನು ಹಾಕುವಂತೆ ಸೂಚಿಸಿದರು.<br><br>**(ಕ್ರಮ: ಉಪನಿರ್ದೇಶಕರು, ಪಶುಸಂಗೋಪನಾ ಇಲಾಖೆ, ಧಾರವಾಡ)**<br><br>**ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ:-**<br><br>ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ವತಿಯಿಂದ ಪಂಚಸೂತ್ರದಡಿ ವಿದ್ಯಾರ್ಥಿಗಳಿಗೆ ಸಮವಸ್ತ್ರ/ಬೈಸಿಕಲ್/ಶೂ ಮತ್ತು ಸಾಕ್ಸ್/ಪಠ್ಯಪುಸ್ತಕ/ಮಧ್ಯಾಹ್ನದ ಉಪಹಾರ ಮತ್ತು ಹಾಲು ಪ್ರಯೋಜನವನ್ನು ಪಡೆಯುತ್ತಿರುವ ವಿವರಗಳನ್ನು ಹಾಗೂ ಪಂಚಾಯತ್ ರಾಜ್ ಇಲಾಖೆಯಿಂದ ನಿರ್ಮಿಸಲಾದ/ದುರಸ್ತಿ ಮಾಡಲಾದ ಶಾಲಾ ಕಟ್ಟಡಗಳ ವಿವರಗಳನ್ನು ಸಭೆಗೆ ವಿವರಿಸಿದರು. |

| | | |
|---|---|---|
| | | ಜಿಲ್ಲೆಯ ಪ್ರಗತಿಯನ್ನು ಪರಿಶೀಲಿಸಿ, ಶಿಕ್ಷಣಕ್ಕೆ ಹೆಸರಾಗಿರುವ ಧಾರವಾಡ ಜಿಲ್ಲೆಯು ಮುಂದಿನ ವರ್ಷದಲ್ಲಿ ಎಸ್.ಎಸ್.ಎಲ್.ಸಿ ಹಾಗೂ ಪಿ.ಯು.ಸಿ ಫಲಿತಾಂಶದಲ್ಲಿ ಉತ್ತಮ ಸಾಧನೆ ತೋರಲು ಈಗಿನಿಂದಲೇ ಕಾರ್ಯಕ್ರಮಗಳನ್ನು ಆರಂಭಿಸಬೇಕು ಎಂದು ಉಪನಿರ್ದೇಶಕರಿಗೆ ಸೂಚಿಸಿ, ಈ ಕುರಿತಂತೆ ಸಭೆ ಕರೆದು ಕ್ರಿಯಾ ಯೋಜನೆಗಳನ್ನು ರೂಪಿಸುವಂತೆ ನಿರ್ದೇಶಿಸಲಾಯಿತು.<br><br>(ಕ್ರಮ: ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತಿ, ಧಾರವಾಡ 2) ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಧಾರವಾಡ, 3) ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ)<br><br>**<u>ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಧಾರವಾಡ</u>**<br><br>ಮಾತೃಶ್ರೀ ಯೋಜನೆ, ಅಂಗನವಾಡಿ ಕಾರ್ಯಕರ್ತೆಯರ ಹಾಗೂ ಸಹಾಯಕಿಯರ ನೇಮಕಾತಿ ಪ್ರಗತಿ, ಅಂಗನವಾಡಿ ಕೇಂದ್ರಗಳಿಗೆ ಸಮರ್ಪಕ ಆಹಾರ ವಿತರಣೆ ಹಾಗೂ ಅಂಗನವಾಡಿ ಕಟ್ಟಡಗಳ ವಿವರಗಳನ್ನು ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಧಾರವಾಡ ಇವರು ವಿವರಿಸಿದರು. ಮಾತೃಶ್ರೀ ಹಾಗೂ ಮಾತೃವಂದನ ಯೋಜನೆಗಳಡಿಯಲ್ಲಿ ಸೌಲಭ್ಯ ಪಡೆಯುವ ಫಲಾನುಭವಿಗಳ ಪಟ್ಟಿಯನ್ನು ಮುಂದಿನ ಸಭೆಯಲ್ಲಿ ಒದಗಿಸುವಂತೆ ತಿಳಿಸಿದರು. ಪ್ರತಿ ತಿಂಗಳು ಸಭೆ ಜರುಗಿಸಿ ಮಾತೃಪೂರ್ಣ ಕ್ರಿಯಾ ಯೋಜನೆಯ ವಿವರಗಳನ್ನು ಸಲ್ಲಿಸಬೇಕೆಂದು ಸೂಚಿಸಲಾಯಿತು.<br><br>(ಕ್ರಮ: ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ,ಧಾರವಾಡ)<br><br>**<u>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ:-</u>**<br><br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವತಿಯಿಂದ ರಾಷ್ಟ್ರೀಯ ಆರೋಗ್ಯ ಮಿಷನ್ ಹಾಗೂ ಆರೋಗ್ಯ ಕರ್ನಾಟಕ-ಸಾರ್ವತ್ರಿಕ ಆರೋಗ್ಯ ರಕ್ಷಣಾ ಯೋಜನೆಯ ಪ್ರಗತಿಯನ್ನು ಜಿಲ್ಲಾ ಅರೋಗ್ಯ ಅಧಿಕಾರಿಗಳು ವಿವರಿಸಿದರು.<br><br>ಆರೋಗ್ಯ ಕರ್ನಾಟಕ ಯೋಜನೆಯಡಿ ಸೌಲಭ್ಯಗಳನ್ನು ಖಾಸಗಿ ಆಸ್ಪತ್ರೆಗಳು ನೀಡುವಂತಾಗಬೇಕು. ಜಿಲ್ಲೆಯಲ್ಲಿರುವ ಆಸ್ಪತ್ರೆಗಳಲ್ಲಿ ಮಾರಕ ರೋಗಗಳ ಚಿಕಿತ್ಸೆಗಾಗಿ ನುರಿತ ವೈದ್ಯರುಗಳನ್ನು ಒದಗಿಸಿ ಎಲ್ಲ ಸೌಲಭ್ಯಗಳನ್ನು ಒದಗಿಸಿ, ಡೆಂಗ್ಯೂ ಹಾಗೂ ಚಿಕನ್ ಗುನ್ಯಾದಂತಹ ಸೋಂಕು ರೋಗಗಳ ನಿವಾರಣೆಗಾಗಿ ಎಲ್ಲಾ ವೈದ್ಯರುಗಳು ಜನರಿಗೆ ಔಷಧೋಪಚಾರ ನೀಡುವ ಹಾಗೂ ತಿಳುವಳಿಕೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕೆಂದು ನಿರ್ದೇಶಿಸಲಾಯಿತು.<br><br>(ಕ್ರಮ : ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಧಿಕಾರಿಗಳು, ಧಾರವಾಡ/ ಜಿಲ್ಲಾ ಶಸ್ತ್ರ ಚಿಕಿತ್ಸಕರು, ಧಾರವಾಡ/ ಆಡಳಿತಾಧಿಕಾರಿಗಳು, ಕಿಮ್ಸ್, ಹುಬ್ಬಳ್ಳಿ ) |

| | | |
|---|---|---|
| | | **ವಿದ್ಯಾರ್ಥಿ ನಿಲಯಗಳು:-**<br><br>ಮೆಟ್ರಿಕ್ ಪೂರ್ವ/ನಂತರದ ಬಾಲಕ/ಬಾಲಕಿಯರ ವಿದ್ಯಾರ್ಥಿ ನಿಲಯಗಳಿಗೆ ಲಭ್ಯವಿರುವ ಸರಕಾರಿ ಹಾಗೂ ಭಾಡಿಗೆ ಕಟ್ಟಡಗಳ ವಿವರಗಳನ್ನು ಪಡೆದುಕೊಂಡು, ಭಾಡಿಗೆ ಕಟ್ಟಡಗಳಲ್ಲಿರುವ ಸರ್ಕಾರಿ ನಿಲಯಗಳಿಗೆ ಸ್ವಂತ ಕಟ್ಟಡಗಳನ್ನು ಹೊಂದಲು ನಿವೇಶನಗಳನ್ನು ಖರೀದಿ ಮಾಡಬೇಕು ಹಾಗೂ ಮೆಟ್ರಿಕ ಪೂರ್ವ ವಸತಿ ನಿಲಯಗಳನ್ನು ಸರ್ವೆ ಮಾಡಿ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳನ್ನಾಗಿ ಪರಿವರ್ತಿಸಲು ಕ್ರಮ ಕೈಕೊಳ್ಳಬೇಕೆಂದು, ವಸತಿ ಶಾಲೆಗಳಲ್ಲಿ ವಿತರಿಸುತ್ತಿರುವ ಗುಣಮಟ್ಟದ ಆಹಾರವನ್ನು ಪರಿಶೀಲಿಸಬೇಕೆಂದು ಸೂಚಿಸಲಾಯಿತು.<br><br>(ಕ್ರಮ: ಜಂಟಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಧಾರವಾಡ/ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಅಲ್ಪಸಂಖ್ಯಾತರ ಇಲಾಖೆ, ಧಾರವಾಡ/ ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಇಲಾಖೆ, ಧಾರವಾಡ)<br><br>**ಕೌಶಾಲ್ಯಭಿವೃದ್ಧಿ ಇಲಾಖೆ:-**<br><br>ಕೌಶಲ್ಯ ಅಭಿವೃದ್ಧಿ ಇಲಾಖೆ ವತಿಯಿಂದ ಕೌಶಲ್ಯ ತರಬೇತಿ ಪಡೆಯಲು ಒಟ್ಟು 36,320 ವಿದ್ಯಾರ್ಥಿಗಳು ತಂತ್ರಾಂಶದ ಮೂಲಕ ನೋಂದಾಯಿಸಿದ್ದು, ತರಬೇತಿ ಕುರಿತಂತೆ ಸರ್ಕಾರದ ನಿರ್ದೇಶನಗಳನ್ವಯ ಕ್ರಮ ಜರುಗಿಸಲಾಗುವುದು ಎಂದು ಅಧಿಕಾರಿಗಳು ಸಭೆಗೆ ವಿವರಿಸಿದರು.<br><br>ಅಭ್ಯರ್ಥಿಗಳ ವಿದ್ಯಾರ್ಹತೆಗೆ ಅನುಗುಣವಾಗಿ ವಿಂಗಡಿಸಿ ತರಬೇತಿಯನ್ನು ಆಯೋಜಿಸಲು ಹಾಗೂ ಉದ್ಯೋಗ ಮೇಳಗಳನ್ನು ಆಯೋಜಿಸಲು ಕ್ರಮ ಕೈಕೊಳ್ಳುವಂತೆ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಯಿತು. ಯುವ ಜನಾಂಗದವರಿಗೆ ಉದ್ಯೋಗವನ್ನು ಒದಗಿಸುವ ಕುರಿತು ಕೈಗಾರಿಕೋದ್ಯಮಿಗಳ ಸಭೆ/ಸ್ವಂತ ಉದ್ಯೋಗಗಳಿಗೆ ಸಾಲವನ್ನು ಒದಗಿಸಲು ಬ್ಯಾಂಕ್ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಸಂಬಂಧಪಟ್ಟ ಇಲಾಖೆಯವರು ಕ್ರಮ ಜರುಗಿಸಿದ ಮಾಹಿತಿಯನ್ನು ಸಂಗ್ರಹಿಸಿಟ್ಟುಕೊಂಡು ಮುಂದಿನ ಸಭೆಯಲ್ಲಿ ಮಂಡಿಸಬೇಕೆಂದು ಸೂಚಿಸಿದರು.<br><br>(ಕ್ರಮ: 1) ಜಿಲ್ಲಾಧಿಕಾರಿಗಳು, ಧಾರವಾಡ ಹಾಗೂ 2) ಜಂಟಿ ನಿರ್ದೇಶಕರು, ಕೈಗಾರಿಕಾ ಕೇಂದ್ರ, ಧಾರವಾಡ 3) ಸಹಾಯಕ ನಿರ್ದೇಶಕರು, ಉದ್ಯೋಗ ಮತ್ತು ತರಬೇತಿ ಇಲಾಖೆ, ಧಾರವಾಡ)<br><br>**ವಸತಿ ವಿಷಯಗಳು:-**<br><br>ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ವಿವಿಧ ಕಾರ್ಯಕ್ರಮಗಳಡಿ ಮನೆಗಳ ನಿರ್ಮಾಣಕ್ಕೆ ನಿವೇಶನ ಒದಗಿಸುವ ಪ್ರಗತಿ ವಿವರಗಳನ್ನು ಪರಿಶೀಲಿಸಿದ ಮಾನ್ಯ ಅಧ್ಯಕ್ಷರು ವಾಜಪೇಯಿ ನಗರ ವಸತಿ ಯೋಜನೆ, ಡಾ:ಬಿ.ಆರ್.ಅಂಬೇಡ್ಕರ್ ಯೋಜನೆ, ವಿಶೇಷ ವರ್ಗದ ಯೋಜನೆಗಳಿಗಾಗಿ ಎಲ್ಲಾ ತಹಶೀಲ್ದಾರರು ಹಾಗೂ ಕಾರ್ಯನಿರ್ವಾಹಕ ಅಧಿಕಾರಿಗಳು ಲೇಔಟ ಪ್ಲಾನ್ ಮಾಡಿ ಗ್ರಾಮವಾರು ಸರ್ವೆ ಮಾಡಿ ನಿರ್ಗತಿಕರಿಗೆ ಮನೆಗಳನ್ನು ಒದಗಿಸಬೇಕೆಂದು ಸೂಚಿಸಿ, ಈ ಕುರಿತಂತೆ ಜಮೀನು ಗುರುತಿಸಿದ್ದಲ್ಲಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವಂತೆ ನಿರ್ದೇಶಿಸಲಾಯಿತು. |

ದೇವರಾಜು ಅರಸು ವಸತಿ ಯೋಜನೆಯಡಿ ಕಲಘಟಗಿ ಪಟ್ಟಣ ಪಂಚಾಯತಿಯಲ್ಲಿ ಬಾಕಿ ಇರುವ ಕಾಮಗಾರಿಯನ್ನು ಸ್ಥಳ ತನಿಖೆಯಿಂದ ಪರಿಶೀಲಿಸಿ ವರದಿ ಸಲ್ಲಿಸುವಂತೆ ಸೂಚಿಸಲಾಯಿತು.

(ಕ್ರಮ : ಎಲ್ಲಾ ತಹಶೀಲ್‌ದಾರರು ಹಾಗೂ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲೂಕ್ ಪಂಚಾಯತಿ, ಹುಬ್ಬಳ್ಳಿ,/ಧಾರವಾಡ/ಕಲಘಟಗಿ/ ಕುಂದಗೋಳ/ ನವಲಗುಂದ)

**ಇತರೆ ವಿಷಯಗಳು:-**

ವಿವಿಧ ಇಲಾಖೆಯ ಯೋಜನೆಗಳ ಪ್ರಗತಿಯ ವಿವರಗಳನ್ನು ಗಮನಿಸಿ, ಈ ಕೆಳಗಿನ ನಿರ್ದೇಶನಗಳನ್ನು ನೀಡಲಾಯಿತು.

1) ಬಾಕಿ ಇರುವ 4 ರೈತ ಆತ್ಮಹತ್ಯೆ ಪ್ರಕರಣಗಳನ್ನು ಮುಕ್ತಾಯಗೊಳಿಸುವುದು.
2) 94ಸಿ ಹಾಗೂ 94ಸಿಸಿ ರಡಿಯಲ್ಲಿ ಬಾಕಿ ಇರುವ ಪ್ರಕರಣಗಳಲ್ಲಿ ತಿರಸ್ಕೃತವಾದ ಹಾಗೂ ಪುರಸ್ಕೃತವಾದ ಅರ್ಜಿಗಳನ್ನು ಬೇರ್ಪಡಿಸಿ ತಿರಸ್ಕೃತವಾದ ಅರ್ಜಿಗಳನ್ನು ಮರು ಪರಿಶೀಲನೆಯಿಂದ ಪರಿಶೀಲಿಸಿ ಕ್ರಮ ಕೈಕೊಳ್ಳುವಂತೆ ತಿಳಿಸಿದರು. ಹಾಗೂ ಸರಕಾರಿ ಜಮೀನುಗಳನ್ನು ಒತ್ತುವರಿ ಆಗದ ಹಾಗೆ ರಕ್ಷಿಸಲು ಸರಕಾರಿ ಉದ್ದೇಶಕ್ಕಾಗಿ ಕಾಯ್ದಿಟ್ಟು ಆದೇಶಗಳನ್ನು ನೀಡಿ ಆರ್.ಟಿ.ಸಿ ಯಲ್ಲಿ ನಮೂದು ಮಾಡಬೇಕು.
3) ಹದ್ದುಬಸ್ತು, ಇಸ್ವತ್ತು, ದರಖಾಸ್ತು, ಆರ್.ಟಿ.ಸಿ. ತಿದ್ದುಪಡಿ, ಫಾರ್ಮ-10, 11 ಸ್ಕೆಚ್‌ನಡಿ ಬಾಕಿ ಇರುವ 6,219 ಪ್ರಕರಣಗಳಲ್ಲಿ ಲೈಸನ್ಸ ಸರ್ವೆಯರುಗಳ ಸಹಾಯದಿಂದ 1 ತಿಂಗಳೊಳಗಾಗಿ ವಿಲೇಗೊಳಿಸುವಂತೆ ತಿಳಿಸಲಾಯಿತು. ತಹಶೀಲದಾರ ಹಾಗೂ ಸಹಾಯಕ ನಿರ್ದೇಶಕರುಗಳ ಜೊತೆಗೂಡಿ ಇತ್ಯರ್ಥಪಡಿಸುವುದು.
4) ಅರಣ್ಯ ಹಕ್ಕು ಕಾಯ್ದೆಯಡಿ ತಿರಸ್ಕೃತಗೊಂಡ 1248 ಅರ್ಜಿಗಳನ್ನು ಮರು ಪರಿಶೀಲನೆಯಿಂದ ಪರಿಶೀಲಿಸಿ ಈ ತಿಂಗಳ ಅಂತ್ಯದೊಳಗಾಗಿ ವಿಲೇಗೊಳಿಸುವಂತೆ ತಿಳಿಸಿದರು. (ಕ್ರಮ: ಉಪವಿಭಾಗಾಧಿಕಾರಿಗಳು, ಧಾರವಾಡ)
5) ಸ್ವಚ್ಛ ಭಾರತ ಮಿಷನ್ ಯೋಜನೆಯಡಿಯಲ್ಲಿ ಬಾಕಿ ಉಳಿದಿರುವ 1516 ಕುಟುಂಬಗಳಿಗೆ ಜುಲೈ ಅಂತ್ಯದೊಳಗೆ ಶೌಚಾಲಯ ನಿರ್ಮಿಸಲು ಕ್ರಮ ಕೈಕೊಳ್ಳಬೇಕೆಂದು ತಿಳಿಸಿದರು. ಸಮುದಾಯ ಶೌಚಾಲಯಗಳಿಂದ ಯಾರೂ ಹೊರಗುಳಿಯದಂತೆ ಕ್ರಮ ವಹಿಸಬೇಕು.
6) ಎಸ್.ಎಫ್.ಸಿ ಮುಕ್ತ ನಿಧಿ/14ನೇ ಹಣಕಾಸು ನಿಧಿಯ ಕಾಮಗಾರಿಗಳನ್ನು 2 ತಿಂಗಳೊಳಗಾಗಿ ಮುಗಿಸಬೇಕೆಂದು ತಿಳಿಸಿದರು. ಕಲಘಟಗಿ, ಕುಂದಗೋಳ, ನವಲಗುಂದ ತಾಲೂಕಿನ ಕಾಮಗಾರಿಗಳನ್ನು ಜುಲೈ ತಿಂಗಳ ಅಂತ್ಯದೊಳಗಾಗಿ ಮುಕ್ತಾಯಗೊಳಿಸುವುದು.
7) ಅತಿಕ್ರಮಣವಾದ ಕೆರೆಯ ಜಮೀನುಗಳನ್ನು ಗುರುತಿಸಿ ಕೆರೆ ಹೂಳು ತೆಗೆಯುವುದು/ಅಭಿವೃದ್ಧಿಗೊಳಿಸುವ ಕಾಮಗಾರಿಗಳನ್ನು ಕೈಕೊಳ್ಳುವುದು. ಚೆಕ್ ಡ್ಯಾಂಗಳನ್ನು ನಿರ್ಮಿಸುವ ಕುರಿತು ಕ್ರಿಯಾ ಯೋಜನೆಗಳನ್ನು ಕೈಕೊಳ್ಳಲು ತಿಳಿಸಿದರು.

(ಕ್ರಮ: ಕಾರ್ಯನಿರ್ವಾಹಕ ಅಭಿಯಂತರು, ಗ್ರಾಮೀಣ ಕುಡಿಯುವ ನೀರು ಸರಬರಾಜು ಇಲಾಖೆ, ಧಾರವಾಡ )

| | | |
|---|---|---|
| | | 8) ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆಯಡಿ ಸ್ಥಳೀಯ ಶಾಸಕರುಗಳೊಂದಿಗೆ ಭೇಟಿಯಾಗಿ ಪ್ರತಿ ತಾಲೂಕಿಗೆ ಕ್ರಿಯಾ ಯೋಜನೆಯಗಳನ್ನು ಕೈಕೊಳ್ಳುವುದು.<br>9) ಗಂಗಾಕಲ್ಯಾಣ ಯೋಜನೆಯಲ್ಲಿ ಕೊರೆದ ಬೋರವೆಲ್ಲಗಳಿಗೆ ವಿವಿಧ ಇಲಾಖೆಗಳಲ್ಲಿ ವಿದ್ಯುತ್ತೀಕರಣಗೊಳಿಸಲು ಬಾಕಿ ಇರುವ ಕುರಿತಂತೆ ಪರಿಶೀಲನಾ ಸಭೆಯನ್ನು ಜರುಗಿಸುವಂತೆ ಜಿಲ್ಲಾಧಿಕಾರಿಗಳಿಗೆ ತಿಳಿಸಿದರು. ಮುಂದಿನ ಸಭೆಯಲ್ಲಿ ಇಲಾಖಾವಾರು ವಿವರ ಒದಗಿಸುವುದು.<br>10) ವಕ್ಫ ಆಸ್ತಿಗಳಿಗೆ 2ನೇ ಸರ್ವೆ ಕಾರ್ಯ ಮುಗಿದಿದ್ದು, ಸರ್ಕಾರದ ಅಧಿಸೂಚನೆಯನ್ವಯ ಆರ್.ಟಿ.ಸಿ ಯಲ್ಲಿ ಎಂಟ್ರಿ ಮಾಡುವುದು.<br>11) ಕೈಗಾರಿಕಾ ಪ್ರದೇಶಗಳಲ್ಲಿ ಕೈಗಾರಿಕಾ ಉದ್ದೇಶಗಳಿಗೆ ಮಂಜೂರು ಮಾಡಿದ ಜಮೀನುಗಳಲ್ಲಿ ವರ್ಷಗಳಲ್ಲಿ ಕೈಗಾರಿಕಾ ಪ್ರಾರಂಭಿಸುವಂತೆ ಉತ್ತೇಜಿಸುವುದು.<br>12) ವಿವಿಧ ಇಲಾಖೆಗಳ ಅಧಿಕಾರಿಗಳು ತಮ್ಮ ಇಲಾಖೆಯ ಆವರಣಗಳಲ್ಲಿ ಗಿಡ ನೆಡುವುದಕ್ಕೆ ಮುಂದೆ ಬರಬೇಕೆಂದು ಸೂಚಿಸಲಾಯಿತು. |

(ವಿ.ಮಂಜುಲ)

ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಆ.ಸು)

**ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯಿಂದ ಪ್ರತಿ ತಿಂಗಳು ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ಸಲ್ಲಿಸಬೇಕಾದ ನಮೂನೆ**

| ಕ್ರ.ಸಂ. | ಅಂಶಗಳು | ಕಾರ್ಯದರ್ಶಿಗಳ ಷರಾ |
|---|---|---|
| 01 | ಜಿಲ್ಲೆಯ ಹೆಸರು | ಉಡುಪಿ ಜಿಲ್ಲೆ |
| 02 | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯ ಹೆಸರು | ಎಂ.ಮಹೇಶ್ವರ್ ರಾವ್ |
| 03 | ಭೇಟಿಯಾದ/ ಪ್ರವಾಸದ ದಿನಾಂಕ | 31ನೇ ಜುಲೈ, 2019 |
| 04 | ಮುಖ್ಯವಾಗಿ ಗಮನಿಸಿದ ಅಂಶಗಳು | ಜಿಲ್ಲಾ ಪ್ರಗತಿ ಪರಿಶೀಲನೆ, ಬರಪರಿಸ್ಥಿತಿ ಹಾಗೂ ಇತ್ತೀಚೆಗೆ ಜಿಲ್ಲೆಯಲ್ಲಿ ಸುರಿದ ಮಳೆಯಿಂದ ಹಾನಿಗೊಳಗಾದ ಪ್ರದೇಶಗಳಿಗೆ ಭೇಟಿ ನೀಡಿ ಪರಿಶೀಲಿಸಲಾಯಿತು. ಸದರಿ ವಿಷಯದ ಬಗ್ಗೆ ನಡೆದ ಸಭೆಯ ಸಭಾ ನಡವಳಿಯನ್ನು ಸಹ ಇದರೊಡನೆ ಲಗತ್ತಿಸಿದೆ |

(ಎಂ.ಮಹೇಶ್ವರ್ ರಾವ್)
ಸರ್ಕಾರದ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ
(ಎಂಎಸ್‌ಎಂಇ ಮತ್ತು ಗಣಿ)
ಹಾಗೂ
ಉಡುಪಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ

**ದಿನಾಂಕ:31.07.2019ರಂದು ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಬರ ಹಾಗೂ ಮಳೆಯಿಂದ ಉಂಟಾದ ಹಾನಿಯ ಬಗ್ಗೆ ಅಧಿಕಾರಿಗಳೊಂದಿಗೆ ನಡೆದ ಸಭೆಯ ನಡವಳಿ.**

**ಈ ಕೆಳಕಂಡ ಇಲಾಖೆಯಿಂದ ಅಧಿಕಾರಿಗಳು ಭಾಗವಹಿಸಿದ್ದರು**

- ಜಿಲ್ಲಾಧಿಕಾರಿ, ಉಡುಪಿ ಜಿಲ್ಲೆ ಉಡುಪಿ
- ಜಂಟಿ ಕೃಷಿ ನಿರ್ದೇಶಕರು ಕೃಷಿ ಇಲಾಖೆ ಉಡುಪಿ
- ಉಪ ನಿರ್ದೇಶಕರು ತೋಟಗಾರಿಕೆ ಇಲಾಖೆ ಉಡುಪಿ
- ಉಪ ನಿರ್ದೇಶಕರು ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವೆ ಉಡುಪಿ
- ಹಿರಿಯ ಭೂವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ರಜತಾದ್ರಿ, ಉಡುಪಿ
- ಕಾರ್ಯನಿರ್ವಾಹಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಸರಬರಾಜು ವಿಭಾಗ, ಉಡುಪಿ ಪರವಾಗಿ

***

ಉಡುಪಿ ಜಿಲ್ಲೆಯಲ್ಲಿ ಪ್ರಸಕ್ತ ಮುಂಗಾರು ಮಳೆಯು ಜುಲೈಮಾಹೆಯಲ್ಲಿ ಉತ್ತಮ ರೀತಿಯಲ್ಲಿ ಬರುತ್ತಿದ್ದು, ಇದು ವರೆಗು 2035.0 ಮಿ.ಮಿ ಮಳೆಯಾಗಿದ್ದು (ಶೇಕಡ 25%) ರಷ್ಟು ಕೊರತೆಯಾಗಿರುತ್ತದೆ.

| MONTH | Normal Rainfall | ACTUAL Rainfall | EXCESS | 2018 Rainfall Status |
|---|---|---|---|---|
| March 2019 | 3.0m.m | 1.2m.m | -1.8m.m | 5.1m.m |
| April 2019 | 28.0m.m | 15.9m.m | -12.1m.m | 69.3m.m |
| May 2019 | 170.0m.m | 11.5m.m | -158.5m.m | 357.4m.m |
| June 2019 | 1127.0m.m | 634.0m.m | -493.0m.m | 1075.9m.m |
| July 2019 | 1379.0m.m | 1372.0m.m | -7.0m.m | 1105.0m.m |
| Total | 2707.0m.m | 2035.0m.m | -672.0m.m | 2612.7m.m |
| **ಷರಾ: ಉಡುಪಿ ಜಿಲ್ಲೆಯಲ್ಲಿ 29rd ಜುಲೈ ಅಂತ್ಯಕ್ಕೆ 2035.0ಮಿ.ಮಿ (ಶೇಕಡ -25%)ರಷ್ಟು ಮಳೆ ಕೊರತೆಯಾಗಿರುತ್ತದೆ.** | | | | |

ಜುಲೈ ಮಾಹೆಯಲ್ಲಿ ಉತ್ತಮ ಮಳೆಯಾಗಿದ್ದು ಜಿಲ್ಲೆಯಲ್ಲಿ ಬಿತ್ತನೆಯು ಪ್ರಗತಿಯಲ್ಲಿದ್ದು 36000ಹೇಕ್ಟರ್ ಬಿತ್ತನೆ ಗುರಿಯಿಂದ ಒಟ್ಟು 29155 ಹೇಕ್ಟರ್ ಬಿತ್ತನೆಯಾಗಿರುತ್ತದೆ ಬಿತ್ತನೆ ಬೀಜ ಮತ್ತು ರಸಗೊಬ್ಬರ ಸಾಕಷ್ಟು ಪ್ರಮಾಣದಲ್ಲಿ ದಾಸ್ತಾನು ಇದ್ದು ರೈತರಿಗೆ ಸಕಾಲದಲ್ಲಿ ಪೂರೈಸಲು ವ್ಯವಸ್ಥೆ ಮಾಡಲಾಗಿದೆ. ಕೃಷಿ ಪರಿಕರಗಳ ಪೂರೈಕೆಗೆ ಸಂಬಂಧಿಸಿದಂತೆ ಯಾವುದೇ ಸಮಸ್ಯೆಯಿರುವುದಿಲ್ಲ ಎಂದು ಜಂಟಿ ಕೃಷಿ ನಿರ್ದೇಶಕರು ಕೃಷಿ ಇಲಾಖೆಉಡುಪಿ ಇವರು ತಿಳಿಸಿದರು.

ಇದುವರೆಗೂ ಜಿಲ್ಲೆಯಲ್ಲಿ ಮಳೆಯಿಂದಾಗಿ ಕುಂದಾಪುರ ತಾಲೂಕಿನ ಕುಳಂಜೆ ಗ್ರಾಮದ ಅಮೀತ್ ಅವರು ವರಾಹಿ ನದಿಯ ನೀರಿನಲ್ಲಿ ಕೊಚ್ಚಿಹೋಗಿ ದಿನಾಂಕ:03-07-2019ರಂದು ಮೃತಪಟ್ಟಿದ್ದು, ಮೃತಪಟ್ಟವರ ಕುಟುಂಬದ ಸದಸ್ಯರಿಗೆ NDRF ಮಾರ್ಗಸೂಚಿಯಂತೆ ರೂ.4.00ಲಕ್ಷ ಅನುದಾನ ಪಾವತಿಸಲಾಗಿರುತ್ತದೆ, 4 ಜಾನುವಾರು ಜೀವ ಹಾನಿಗೆ 0.81ಲಕ್ಷ, ತೋಟಗಾರಿಕಾ ಬೆಳೆಹಾನಿಯ 61 ಪ್ರಕರಣಗಳಿಗೆ ರೂ.1.0ಲಕ್ಷ, ವಾಸ್ತವ್ಯದ ಮನೆ ಹಾನಿಯ 257 ಪ್ರಕರಣಗಳಿಗೆ ರೂ.16.28ಲಕ್ಷ, ಒಟ್ಟುಇದುವರೆಗೆ ಮಳೆ ಹಾನಿಯಾದ 328 ಪ್ರಕರಣಗಳಿಗೆ ರೂ.22.70ಲಕ್ಷ ಪರಿಹಾರ ಪಾವತಿಸಲಾಗಿರುತ್ತದೆ. ಮಳೆಯಿಂದ ಹಾನಿಯಾದ ಕೆಲವೊಂದು ಪ್ರದೇಶ ಮತ್ತು ಮನೆಗಳಿಗೆ ಜಿಲ್ಲಾಧಿಕಾರಿ ಹಾಗೂ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಯವರೊಂದಿಗೆ ಖುದ್ದು ಸ್ಥಳಗಳಿಗೆ ಭೇಟಿ ನೀಡಲಾಗಿರುತ್ತದೆ. ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

2019ರ ಮಾನ್ಸೂನ್ ಮಳೆ ಸಂದರ್ಭದಲ್ಲಿ ಅತಿವೃಷ್ಟಿ ಮಳೆಯಿಂದ ಉಂಟಾಗಬಹುದಾದ ಪ್ರವಾಹ, ನೆರೆಹಾವಳಿ, ಬಿರುಗಾಳಿ, ಸಿಡಿಲು, ಇತ್ಯಾದಿಗಳಿಂದಾಗುವ ಸಾರ್ವಜನಿಕರಿಗೆ ಹಾಗೂ ಆಸ್ತಿಪಾಸ್ತಿಗಳಿಗೆ ಉಂಟಾಗುವ ಅನಾಹುತಗಳ ಬಗ್ಗೆ ಮುಂಜಾಗೃತ ಕ್ರಮ ಹಾಗೂ ರಕ್ಷಣಾ ಕ್ರಮಗಳನ್ನು ತೆಗೆದುಕೊಳ್ಳುವ ಕುರಿತು ಇಲಾಖೆಗಳಿಗನುಗುಣವಾಗಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಸೂಕ್ತ ಸಲಹೆ ಹಾಗೂ ನಿರ್ದೇಶನಗಳನ್ನು ಸಂಬಮಧಪಟ್ಟ ಇಲಾಖೆಗಳಿಗೆ ನೀಡಲಾಗಿರುತ್ತದೆ. ಹಾಗೂ ಜಿಲ್ಲಾ

ಮಟ್ಟದಲ್ಲಿ ತುರ್ತು ವಿಪತ್ತು ನಿರ್ವಹಣೆಗಾಗಿ 24 X 7ನಿಯಂತ್ರಣ ಕೊಠಡಿ ಮತ್ತು ಪೋಲಿಸ್ ಇಲಾಖೆ, ಜಿಲ್ಲಾ ಪಂಚಾಯತ್, ಆರೋಗ್ಯ ಇಲಾಖೆ, ಅಗ್ನಿಶಾಮಕ ಇಲಾಖೆ, ನಗರಸಭೆ, ಪುರಸಭೆ ಪಟ್ಟಣ ಪಂಚಾಯತ್, ತಾಲೂಕು ಕಛೇರಿ ಮೆಸ್ಕಾಂ, ತಾಲೂಕು ಪಂಚಾಯತ್ ಕಛೇರಿಗಳಲ್ಲಿ ತುರ್ತು ವಿಪತ್ತು ನಿರ್ವಹಣೆಗಾಗಿ ಕಂಟ್ರೋಲ್ ರೂಮ್ ತೆರೆಯಲಾಗಿದೆ. ತುರ್ತು ನಿರ್ವಹಣೆಗೆ ಗ್ರಾಮ ಮಟ್ಟದಲ್ಲಿ ಸಮಿತಿಯನ್ನು ರಚಿಸಲಾಗಿದೆ, ಮತ್ತು ಜಿಲ್ಲೆಯ ವಿಪತ್ತು ನಿರ್ವಹಣಾ ಕೋಶಕ್ಕೆ ಬೇಕಾದ ರಕ್ಷಣಾ ಸಾಮಾಗ್ರಿಗಳನ್ನು ಖರೀದಿಸಲಾಗಿರುತ್ತದೆ ಎಂದು ಜಿಲ್ಲಾಧಿಕಾರಿಯವರು ತಿಳಿಸಿದರು.

2018-19ನೇ ಸಾಲಿನ ಬರಪರಿಸ್ಥಿತಿ ಹಿನ್ನಲೆಯಲ್ಲಿ ಜಿಲ್ಲೆಯ ಉಡುಪಿ, ಕುಂದಾಪುರ, ಕಾರ್ಕಳ ತಾಲೂಕುಗಳನ್ನು, ಬರಪೀಡಿತ ಪ್ರದೇಶಗಳೆಂದು ಘೋಷಿಸಿದ್ದು ಜಿಲ್ಲೆಯಲ್ಲಿ ಒಟ್ಟು 97 ಗ್ರಾಮ ಪಂಚಾಯತ್ ಗಳ 147 ಗ್ರಾಮಗಳಲ್ಲಿ (ಉಡುಪಿ ತಾಲೂಕಿನ 51 ಗ್ರಾಮ, ಕುಂದಾಪುರ ತಾಲೂಕಿನ 80 ಗ್ರಾಮ ಮತ್ತು ಕಾರ್ಕಳ ತಾಲೂಕಿನ 16 ಗ್ರಾಮ) ವ್ಯಾಪ್ತಿಯಲ್ಲಿ ಒಟ್ಟು 169 ಟ್ಯಾಂಕರ್ ಗಳ ಮೂಲಕ ಇದುವರೆಗೆ ಒಟ್ಟು38748 ಟ್ರಿಫ್ ಟ್ಯಾಂಕರ್ ನೀರು ಸರಬರಾಜು ಮಾಡಲಾಗಿದ್ದು ಜೂನ್ 2 ನೇ ವಾರದಿಂದ ಮುಂಗಾರು ಮಳೆ ಪ್ರಾರಂಭವಾಗಿದ್ದು ಜಲ ಮೂಲಗಳು ಚೇತನಗೊಂಡಿರುವುದರಿಂದ ದಿನಾಂಕ:15-6-2019ರಿಂದ ಜಿಲ್ಲೆಯ ಎಲ್ಲಾ ಕಡೆಗಳಲ್ಲಿ ಟ್ಯಾಂಕರ್ ನೀರು ಸರಬರಾಜು ಮಾಡುವುದನ್ನು ನಿಲ್ಲಿಸಲಾಗಿರುತ್ತೆ ಹಾಗೂ ಜೂನ್ ಮಾಹೆಯವರೆಗಿನ ನೀರು ಸರಬರಾಜು ಮಾಡಿದ ಬಿಲ್ ಗಳ ಮೊತ್ತವನ್ನು ಸಂಬಂಧ ಪಟ್ಟ ನೀರು ಸರಬರಾಜು ಮಾಡಿದ ಗುತ್ತಿಗೆದಾರರಿಗೆ RTGS ಮೂಲಕ ಸಂಬಂಧ ಪಟ್ಟ ತಾಲೂಕು ತಹಶೀಲ್ದಾರರ ಮೂಲಕ ಪಾವತಿಸಲಾಗಿರುತ್ತದೆ. ಇದುವರೆಗು ಟ್ಯಾಂಕರ್ ಬಿಲ್ ಪಾವತಿ ಮಾಡಿರುವ ವಿವರ

| S.NO | ತಾಲೂಕು | ತಹಶೀಲ್ದಾರರಿಗೆ ಬಿಡುಗಡೆ ಮಾಡಿದ ಅನುದಾನ | ಇದುವರೆಗು ಬಿಲ್ ಪಾವತಿಸಿದ ಸಂಖ್ಯೆ | ತಹಶೀಲ್ದಾರರು ಪಾವತಿಸಿದ ಬಿಲ್ ಮೊತ್ತ |
|---|---|---|---|---|
| 1 | KUNDPAURA | 1,05,00,000.00 | 49 | 1,00,98,440.00 |
| 2 | BRHAMVARA | 80,00,000.00 | 57 | 79,88,305.00 |
| 3 | BYNDOOR | 25,00,000.00 | 18 | 25,00,000.00 |
| 4 | UDUPI | 80,00,000.00 | 27 | 53,90,532.00 |
| 5 | KARKAL | 25,00,000.00 | 10 | 24,67,070.00 |
| 6 | KAPU | 35,00,000.00 | 8 | 21,63,076.00 |
| | **TOTAL** | **3,50,00,000.00** | **169** | **3,06,07,423.00** |

ಜಿಲ್ಲೆಯಲ್ಲಿ ಮುಂದಿನ ದಿನಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಬಾರದಂತೆ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಮಳೆನೀರು ಕೊಯ್ಲು ಮತ್ತು ಗಿಡಗಳನ್ನು ನಡುವ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. ಮತ್ತು ಸಾಂಪ್ರದಾಯಿಕ ನೀರು ಸಂಗ್ರಹಣಾ ವ್ಯವಸ್ಥೆಗಳಾದ ಕೆರೆ, ಕುಂಟೆ, ಕಲ್ಯಾಣಿ ಇತ್ಯಾದಿಗಳ ಪುನರುಜ್ಜೀವನದ ಕುರಿತು ಕೆರೆಗಳ ಹೂಳೆತ್ತುವ ಕಾಮಗಾರಿಗಳಿಗೆ ಅನುದಾನ ಬಿಡುಗಡೆ ಮಾಡುವ ಬಗ್ಗೆ ಶಿಫಾರಸ್ಸು ಸರಕಾರಕ್ಕೆ ಪತ್ರ ಬರೆಯಲಾಗಿರುತ್ತದೆ.

ಪ್ರಸ್ತುತ ಜಿಲ್ಲೆಯ ಪ್ರಕೃತಿ ವಿಕೋಪ ಪಿ.ಡಿ ಖಾತೆಯಲ್ಲಿ ರೂ.28.40ಕೋಟಿ ಅನುದಾನ ಲಭ್ಯವಿದ್ದು ಅನುದಾನ ಅಗತ್ಯವಿದಲ್ಲಿ ಸರಕಾರಕ್ಕೆ ಪತ್ರ ಬರೆಯುವಂತೆ ಸೂಚಿಸಿದರು

**ಉಡುಪಿ ಜಿಲ್ಲೆಯಲ್ಲಿ 2017-2019ನೇ ಸಾಲಿನ ವರೆಗೆ ದಾಖಲಾಗಿರುವ ಮಲೇರಿಯಾ/ ಡೆಂಗ್ಯೂ/ ಚಿಕನ್ ಗುನ್ಯಾ ಪ್ರಕರಣಗಳು:**

| VBD (Jan-Jul) | 2017 | 2018 | 2019 |
|---|---|---|---|
| ಮಲೇರಿಯಾ | 234 | 128 | 50 |
| ಡೆಂಗ್ಯೂ | 232 | 150 | 97 |
| ಚಿಕನ್ ಗುನ್ಯಾ | 0 | 22 | 05 |
| ಜೆಇ | 0 | 2 | 1 |

ಉಡುಪಿ ಜಿಲ್ಲೆಯಲ್ಲಿ ಸೊಳ್ಳೆಯಿಂದ ಉಂಟಾಗುವ ರೋಗಗಗಳನ್ನು ತಡೆಗಟ್ಟಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

- ಮೀನುಗಾರಿಕಾ ಬಂದರು ಪ್ರದೇಶದಲ್ಲಿ ಬೋಟ್ ಗಳಲ್ಲಿ ಇರುವ ತೆರೆದ ಟ್ಯಾಂಕ್‌ಗಳನ್ನು ಖಾಲಿಮಾಡಲಾಗಿರುತ್ತದೆ. ರಾಸಾಯನಿಕಗಳನ್ನು ಸಿಂಪಡಿಸಲಾಗಿರುತ್ತದ.
- ಬೋಟುಗಳಲ್ಲಿ ನೀರು ಸಂಗ್ರಹಗೊಳ್ಳಬಹುದಾದಂತಹ ವಸ್ತುಗಳನ್ನು ತೆರವುಗೊಳಿಸಲಾಗಿರುತ್ತದೆ ಹಾಗೂ ಮುಚ್ಚಲಾಗಿರುತ್ತದೆ.
- ಜನವಸತಿ ಪ್ರದೇಶಗಳಲ್ಲಿ (Fogging )ಕ್ರಿಮಿನಾಶಕ ಹೊಗೆಯನ್ನು ಸಿಂಪಡಿಸಲಾಗಿರುತ್ತದೆ.
- ಸಾರ್ವಜನಿಕರಿಗೆ ಗ್ರಾಮ ಪಂಚಾಯತ್ ಸದಸ್ಯರುಗಳಿಗೆ ಸೊಳ್ಳೆ ಉತ್ಪಾದನೆಯಾಗದಂತೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ತಿಳುವಳಿಕೆ ನೀಡಲಾಗಿರುತ್ತದೆ.
- ಮಾಧ್ಯಮಗಳ ಮೂಲಕ ಸಾರ್ವಜನಿಕರಗೆ ಅರಿವು ಮೂಡಿಸಲಾಗಿರುತ್ತದೆ.
- ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಜಿಲ್ಲಾ ಮಟ್ಟದಲ್ಲಿ ಮೆರವಣಿಗೆ ಕಾರ್ಯಾಗಾರಗಳ ಮೂಲಕ ಮಲೇರಿಯಾ ಡೆಂಗ್ಯೂಗಳ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸಲಾಗಿರುತ್ತದೆ.
- ಪ್ರಾಥಮಿಕ ಆರೋಗ್ಯ ಕೇಂದ್ರಗಳ ಮೂಲಕ ಲಾರ್ವ ಸರ್ವೇ ನಡೆಸಲಾಗಿರುತ್ತದೆ. ಈ ಬಗ್ಗೆ ಸ್ವಯಂ ಸೇವಕರುಗಳನ್ನು ಬಳಸಿಕೊಳ್ಳಲಾಗಿರುತ್ತದೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

(ಎಂ.ಮಹೇಶ್ವರ್ ರಾವ್)
ಸರ್ಕಾರದ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಎಂಎಸ್‌ಎಂಇ & ಗಣಿ)
ಹಾಗೂ ಉಡುಪಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ

**ದಿನಾಂಕ: 17.07.2019 ರಂದು ಶ್ರೀ ಹರ್ಷ ಗುಪ್ತ, ಭಾ.ಆ.ಸೇ., ಮಾನ್ಯ ಸರ್ಕಾರದ ಕಾರ್ಯದರ್ಶಿಗಳು ವಸತಿ ಇಲಾಖೆ ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಜರುಗಿದ ಪ್ರಗತಿ ಪರಿಶೀಲನಾ ಸಭೆಯ ನಡವಳಿಗಳು**

---

**ಸಭೆಯಲ್ಲಿ ಉಪಸ್ಥಿತರು:-**

**ಹಾಜರಿ ಪುಸ್ತಕದಂತೆ.**

ಪ್ರಾರಂಭದಲ್ಲಿ ಉಪಕಾರ್ಯದರ್ಶಿಗಳು, ಜಿಲ್ಲಾ ಪಂಚಾಯತ ಕೊಪ್ಪಳ ಇವರು ಇಂದಿನ ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಂಡಿರುವ ಮಾನ್ಯ ಕೊಪ್ಪಳ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಮಾನ್ಯ ಜಿಲ್ಲಾಧಿಕಾರಿಗಳು, ಉಪ ಸಂರಂಕ್ಷಣಾಧಿಕಾರಿಗಳು, ಪ್ರೊಬೇಷನರಿ ಐಎಎಸ್., ಅಧಿಕಾರಿ, ಅಪರ ಜಿಲ್ಲಾಧಿಕಾರಿಗಳು ಹಾಗೂ ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳಿಗೆ ಸ್ವಾಗತ ಕೋರಿದರು. ಇಂದಿನ ಸಭೆಯ ಅಧ್ಯಕ್ಷತೆ ವಹಿಸಿಕೊಂಡಿರುವ ಮಾನ್ಯ ಕಾರ್ಯದರ್ಶಿಯವರಿಗೆ ಸಭೆಯನ್ನು ನಡೆಸಿಕೊಡುವಂತೆ ಕೋರಿದರು.

ಮಾನ್ಯ ಕೊಪ್ಪಳ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸಭೆಯಲ್ಲಿ ಉಪಸ್ಥಿತರಿದ್ದ ಜಿಲ್ಲಾಧಿಕಾರಿಗಳು, ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಸ್ವಾಗತಿಸುತ್ತಾ, ಮೊದಲನೆಯ ಸಲ ಕೊಪ್ಪಳ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯಾಗಿ ಜಿಲ್ಲೆಗೆ ಭೇಟಿ ನೀಡುತ್ತಿದ್ದು, ವಿವರವಾಗಿ ಪ್ರಗತಿ ಪರಿಶೀಲನೆ ಮಾಡದೇ ಜಿಲ್ಲೆಯಲ್ಲಿ ಮುಖ್ಯವಾಗಿ ಸಮಸ್ಯೆಗಳ ಬಗ್ಗೆ ಚರ್ಚಿಸಲು ಹಾಗೂ ಸಲಹೆ ಸೂಚನೆಗಳನ್ನು ಪಡೆದುಕೊಂಡು, ಸರ್ಕಾರದ ಮಟ್ಟದಲ್ಲಿ ಜರುಗುವ ಸಭೆಯಲ್ಲಿ ಸದರಿ ಸಮಸ್ಯೆಗಳನ್ನು ಮಂಡಿಸಿ, ಕ್ರಮ ಕೈಗೊಳ್ಳಲು ಸೂಕ್ತವಾಗಿರುತ್ತದೆ. ಈ ಕುರಿತು ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳಿಗೆ ತಮ್ಮ ಇಲಾಖೆಗೆ ಸಂಬಂಧಿಸಿದಂತೆ ಸರ್ಕಾರದ ಮಟ್ಟದಲ್ಲಿ ನಿರ್ಣಯಿಸಬೇಕಾಗಿರುವ ಅಂಶಗಳು, ಅನುಮೋದನೆಗಾಗಿ ಬಾಕಿ ಇರುವ ಪ್ರಸ್ತಾವನೆಗಳ ವಿವರ ಹಾಗೂ ವಿವಿಧ ಯೋಜನೆಗಳ ಪ್ರಗತಿಯು ಕಡಿಮೆ ಇದ್ದಲ್ಲಿ ಅಂತಹ ವಿಷಯಗಳ ಬಗ್ಗೆ ಯಾವುದೇ ರೀತಿಯ ಆತಂಕ ಇಲ್ಲದೇ ನೇರವಾಗಿ ಸ್ಪಷ್ಟಪಡಿಸುವಂತೆ ಸಭೆಯಲ್ಲಿ ಸೂಚಿಸಿದರು.

**ಬರಗಾಲ:-**

ಜಿಲ್ಲೆಯಲ್ಲಿ ಭೀಕರ ಬರಗಾಲ ಪರಿಸ್ಥಿತಿ ಉದ್ಭವಿಸಿದ್ದು, ಈ ಮೊದಲು ಜಿಲ್ಲೆಯು 4 ತಾಲೂಕುಗಳು ಹೊಂದಿದ್ದು, ಸದ್ಯ 7 ತಾಲೂಕುಗಳು ಇರುತ್ತವೆ. ಸರ್ಕಾರವು ಪ್ರತಿ ತಾಲೂಕು ಬರಗಾಲ ಪೀಡಿತ ಪ್ರದೇಶವೆಂದು ಘೋಷಿಸಲಾಗಿರುತ್ತದೆಂದು ಜಿಲ್ಲಾಧಿಕಾರಿಗಳು ಸಭೆಯಲ್ಲಿ ವಿವರಿಸಿದರು.

**ಕುಡಿಯುವ ನೀರಿನ ಪರಿಸ್ಥಿತಿ:-**

ಜಿಲ್ಲೆಯಲ್ಲಿ ಒಟ್ಟು 17 ಗ್ರಾಮಗಳಲ್ಲಿ ಒಟ್ಟು 21 ಟ್ಯಾಂಕರಗಳ ಮೂಲಕ ಕಳೆದ ಮಾರ್ಚ್ 2019 ರಿಂದ ನೀರು ಸರಬರಾಜು ಮಾಡಲಾಗುತ್ತಿದೆ. 137 ಗ್ರಾಮಗಳಲ್ಲಿ ಒಟ್ಟು 171 ಖಾಸಗಿ ಬೋರವೆಲ್‌ಗಳಿಂದ ನೀರು ಸರಬರಾಜು ಮಾಡಲಾಗುತ್ತಿದೆ. ಭೂಮಿಯಲ್ಲಿ ನೀರಿನ ಪ್ರಮಾಣ ಕುಸಿದಿರುವುದರಿಂದ ಖಾಸಗಿ ಬೋರವೆಲ್ ಹೊಂದಿರುವವರು ನೀರು ಕೊಡಲು ಮುಂದೆ ಬರುತ್ತಿಲ್ಲ. ಈ ಕುರಿತು ಸಭೆಯನ್ನು ಕರೆದು ಜಿಲ್ಲೆಯ ಎಲ್ಲಾ ತಹಶೀಲ್ದಾರರೊಂದಿಗೆ ಚರ್ಚಿಸಿ, ತಮ್ಮ ತಮ್ಮ ತಾಲೂಕಿನಲ್ಲಿ ಖಾಸಗಿ ಬೋರವೆಲ್ ಹೊಂದಿರುವ ಮಾಲೀಕರನ್ನು ಗುರುತಿಸಿ, ಸಾರ್ವಜನಿಕರಿಗೆ ಸಮರ್ಪಕವಾಗಿ ನೀರು ಪೂರೈಸುವಂತೆ ಈಗಾಗಲೇ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳಿಗೂ ಸಹ ನಿರ್ದೇಶನ ನೀಡಲಾಗಿರುತ್ತದೆ. ಕುಷ್ಟಗಿ ತಾಲೂಕಿನ ಗುಡ್ಡದ ದೇವಲಾಪೂರ ಗ್ರಾಮದಲ್ಲಿ ಕಳೆದ ಆಗಸ್ಟ್ ತಿಂಗಳಿನಿಂದ ಟ್ಯಾಂಕರ್ ಮೂಲಕ ನೀರು ಪೂರೈಸುತ್ತಿದ್ದು, ಡಿಸೆಂಬರ್ ತಿಂಗಳಿನಲ್ಲಿ 13 ಟ್ಯಾಂಕರಗಳನ್ನು ಹಾಗೂ ಮಾರ್ಚ್ ತಿಂಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕೇವಲ ಟ್ಯಾಂಕರಗಳ ಮೂಲಕ ನೀರು

ಪೂರೈಸಲಾಗುತ್ತಿದೆ. ಸದರಿ ಗ್ರಾಮದಲ್ಲಿ ನೀರಿನ ಪ್ರಮಾಣ ಕಡಿಮೆ ಇದ್ದು, ಬೋರವೆಲ್ ಕೊರೆಯಿಸಲು ಅವಕಾಶ ಇರುವುದಿಲ್ಲ. ಅದೇ ರೀತಿ ಯಲಬುರ್ಗಾ ತಾಲೂಕಿನಲ್ಲಿ ಹುಣಸಿಹಾಳ ಗ್ರಾಮದಲ್ಲಿಯೂ ಸಹ ಟ್ಯಾಂಕರ್ ಮೂಲಕ ನೀರು ಪೂರೈಸುತ್ತಿದ್ದು, ಗ್ರಾಮದ ಸುತ್ತ ಮುತ್ತ ಸ್ಥಳ ಪರಿಶೀಲನೆ ಮಾಡಲಾಗಿ ಖಾಸಗಿ ಬೋರವೆಲ್ ಕೊರೆಯಿಸಲು ಸಾಕಷ್ಟು ಕಸರತ್ತು ಮಾಡಿದರೂ ಸಹ ನೀರು ಲಭ್ಯ ಇಲ್ಲದೇ ಇರುವುದರಿಂದ ಬೋರವೆಲ್ ಕೊರೆಯಿಸುವುದು ಕಷ್ಟವಾಗಿರುತ್ತದೆ.

ನಗರ ಪ್ರದೇಶದಲ್ಲಿ 6 ವಾರ್ಡಗಳಲ್ಲಿ ಸಮಸ್ಯೆ ಇದ್ದು, ಪೀಕ್ ದಿನಗಳಲ್ಲಿ 3 ಟ್ಯಾಂಕರಗಳ ಮೂಲಕ ನೀರು ಪೂರೈಸಲಾಗುತ್ತಿದೆ. ಎನ್‌ಡಿಆರ್‌ಎಫ್ / ಎಸ್‌ಡಿಆರ್‌ಎಫ್ / ಯುಡಿಡಿ ಯಿಂದ ಜಿಲ್ಲೆಗೆ ಬಿಡುಗಡೆ ಮಾಡಿರುವ ಅನುದಾನವನ್ನು ತಹಶೀಲ್ದಾರರಿಗೆ, ಮುಖ್ಯಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿರುತ್ತದೆಂದು ಜಿಲ್ಲಾಧಿಕಾರಿಗಳು ಸಭೆಯಲ್ಲಿ ವಿವರಿಸಿದರು.

ಪೌರಾಯುಕ್ತರು, ನಗರಸಭೆ ಗಂಗಾವತಿ ಇವರು ಗಂಗಾವತಿ, ತಾವರಗೇರಾ, ಕುಷ್ಟಗಿ, ಭಾಗ್ಯನಗರಕ್ಕೆ ತುಂಗಭದ್ರಾ ಹಾಗೂ ಆಲಮಟ್ಟಿಯಿಂದ ನೀರು ಪೂರೈಕೆಯಾಗುತ್ತಿದ್ದು, ಸದ್ಯ ಆಲಮಟ್ಟಿ ಪ್ರೊಜೆಕ್ಟ್ ಪೂರ್ಣಗೊಳ್ಳದೇ ಇರುವುದರಿಂದ ನೀರು ಪೂರೈಕೆಯಲ್ಲಿ ತೊಂದರೆಯಾಗಿರುತ್ತದೆ. ಕುಷ್ಟಗಿ ನಗರದಲ್ಲಿ ಅಂತರಜಲ ಪುನಭರ್ತಿ [**ಗ್ರೌಂಡ್ ವಾಟರ್ ರೀಚಾರ್ಜ**] ಆಗಿರುವುದಿಲ್ಲವೆಂದು ಸಭೆಯಲ್ಲಿ ವಿವರಿಸಿದರು.

**ಪಶುಸಂಗೋಪನೆ ಇಲಾಖೆ:-**

ಜಿಲ್ಲೆಯಲ್ಲಿ ಅಂದಾಜು 2.83 ಲಕ್ಷ ಜಾನುವಾರುಗಳಿದ್ದು, ಇದರಲ್ಲಿ 4 ಸಾವಿರದಷ್ಟು ಜಾನುವಾರುಗಳಿಗೆ ಗೋಶಾಲೆಯಲ್ಲಿ ಮೇವು ವಿತರಿಸಲಾಗುತ್ತಿದೆ. ಜಾನುವಾರು ಸಂರಕ್ಷಣೆಗಾಗಿ ಮಾರ್ಚ್ ತಿಂಗಳಿನಲ್ಲಿ 4 ಗೋಶಾಲೆಗಳು, ಮೇ ತಿಂಗಳಿನಲ್ಲಿ 3 ಗೋಶಾಲೆಗಳನ್ನು ಪ್ರಾರಂಭಿಸಿದ್ದು, ಸಬ್ಸಿಡಿ ದರದಲ್ಲಿ ಮೇವು ಬ್ಯಾಂಕ್‌ಗಳ ಮೂಲಕ ಮೇವು ಕಲ್ಪಿಸಲಾಗುತ್ತಿದೆ. ಗೋಶಾಲೆಗಳಿಗೆ ಸಮರ್ಪಕವಾಗಿ ಕುಡಿಯುವ ನೀರು, ಮೇವು, ಮೂಲಭೂತ ಸೌಲಭ್ಯಗಳನ್ನು ಒದಗಿಸುತ್ತಿದ್ದು, ಮೇವು ಬ್ಯಾಂಕಗಳಲ್ಲಿ ಪ್ರತಿ ಕೆಜಿಗೆ ರೂ. 2/- ರ ದರದಲ್ಲಿ ಮೇವು ವಿತರಣೆ ಮಾಡಲಾಗುತ್ತಿದೆ. ಜಿಲ್ಲೆಯಲ್ಲಿ ಜಾನುವಾರುಗಳ ಸಂಖ್ಯೆ ಹೆಚ್ಚಿರುವುದರಿಂದ ಎಲ್ಲಾ ಜಾನುವಾರುಗಳಿಗೂ ಮೇವು ವಿತರಿಸಬೇಕು ಮತ್ತು ಇದಕ್ಕಾಗಿ ರೈತರಿಗೆ ಮೇವಿನ ಬೀಜಗಳನ್ನು ಉಚಿತವಾಗಿ ವಿತರಿಸಲಾಗುತ್ತಿದೆಂದು ಪಶುಸಂಗೋಪನೆ ಇಲಾಖೆ ಉಪನಿರ್ದೇಶಕರು ಸಭೆಯ ಗಮನಕ್ಕೆ ತಂದರು.

ಈ ಕುರಿತು ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ ಜಾನುವಾರುಗಳ ಸಂರಕ್ಷಣೆಗಾಗಿ ಸರ್ಕಾರಿ ಜಮೀನು ಗುರುತಿಸಿ ಸದರಿ ಜಮೀನಿನಲ್ಲಿ, ಕೆರೆ ಅಂಗಳದಲ್ಲಿ ಹಸಿರು ಮೇವು ಬೆಳೆಸಲು ಮೂಲ ಸೌಕರ್ಯಗಳನ್ನು ಕಲ್ಪಿಸಿ, ನಿರ್ವಹಣೆಗೆ ಹಾಲು ಉತ್ಪಾದಕ ಸೊಸೈಟಿಗಳಿಗೆ ವಹಿಸುವುದರಿಂದ ಇನ್ನೂ ಪರಿಣಾಮಕಾರಿಯಾಗಿ ನಿರ್ವಹಣೆ ಸಾಧ್ಯವಾಗುತ್ತದೆ. ಅಲ್ಲದೇ ಜಿಲ್ಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಹಸಿರು ಮೇವು ಬೆಳೆಸಲು ಸೂಕ್ತ ಕ್ರಮವಹಿಸಬೇಕು ಮತ್ತು ಇದಕ್ಕೆ ಬೇಕಾಗುವ ಮೂಲಭೂತ ಸೌಕರ್ಯಗಳಾದ ನೀರು, ಶೆಡ್ ನಿರ್ಮಿಸಿ ಆಯಾ ಭಾಗದ ಹಾಲು ಉತ್ಪಾದಕರ ಸೊಸೈಟಿಗಳಿಗೆ ನಿರ್ವಹಣೆಗೆ ಹಾಗೂ ವಿತರಣೆಗೆ ನೀಡುವುದರಿಂದ ಪಾರದರ್ಶಕತೆ ಮತ್ತು ಕಾಯಂ ವ್ಯವಸ್ಥೆ ಕಲ್ಪಿಸಿದಂತಾಗುತ್ತದೆ. ಈಗಾಗಲೇ ಸದರಿ ವ್ಯವಸ್ಥೆಯು ಗುಜರಾತ ರಾಜ್ಯದಲ್ಲಿ ಇರುವುದಾಗಿ ತಿಳಿಸಿದರು.

**ಎಂ.ಜಿ.ಎನ್.ಆರ್.ಇ.ಜಿ:-**

ಉಪ ಕಾರ್ಯದರ್ಶಿಗಳು, ಜಿಲ್ಲಾ ಪಂಚಾಯತ ಕೊಪ್ಪಳ ಇವರು ಮಾತನಾಡಿ ಜಿಲ್ಲೆಗೆ 2018-19ನೇ ಸಾಲಿಗಾಗಿ ರೂ. 36.00 ಲಕ್ಷ ಮಾನವ ದಿನಗಳ ಸೃಜನೆ ಗುರಿಯ ಪೈಕಿ ರೂ. 42.27 ಲಕ್ಷ

ಮಾನವ ದಿನಗಳನನ್ನು ಸೃಜಿಸುವ ಗುರಿ ಸಾಧಿಸಿದ್ದು ಶೇ. 117% ಸಾಧನೆಯಾಗಿರುತ್ತದೆ. ಅದರಂತೆ 2019–20ನೇ ಸಾಲಿಗೆ ರೂ. 44.00 ಲಕ್ಷ ಮಾನವ ದಿನಗಳ ಸೃಜನೆ ಗುರಿ ಪೈಕಿ ದಿನಾಂಕ: 01–04–2019 ರಿಂದ 30–06–2019 ರವರೆಗೆ ರೂ. 14.94 ಲಕ್ಷ ಮಾನವ ದಿನಗಳ ಸೃಜಿಸುವ ಗುರಿ ಸಾಧಿಸಿದ್ದು, ಶೇ. 34% ಸೃಜಿಸಲಾಗಿದೆ. ಜಿಲ್ಲೆಯಲ್ಲಿ ಬರ ಪರಿಸ್ಥಿತಿ ಇರುವುದರಿಂದ ಜನರಿಗೆ ಉದ್ಯೋಗ ಕೊಡಲು ಸಮುದಾಯದ ಕಾಮಗಾರಿ ಕೈಗೊಳ್ಳಲಾಗಿದೆ ಮತ್ತು ಕೆರೆ ಹೂಳೆತ್ತುವ ಕೆಲಸ ಕೈಗೊಳ್ಳಲಾಗಿದೆ. ಇಂತಹ ಕಡೆ 1500 ರಿಂದ 2000 ರ ವರೆಗೆ ಜನರು ಭಾಗವಹಿಸುತ್ತಿರುವುದಾಗಿ ಹಾಗೂ ಕನ್ವರ್ಜನ್ಸ್ ಅಡಿ ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ ಸೇರಿದಂತೆ ವೈಯಕ್ತಿಕ ಕಾಮಗಾರಿಗಳು ಸಹ ಕೈಗೆತ್ತಿಕೊಳ್ಳಲಾಗುತ್ತಿದೆ. ಅಲ್ಲದೇ ಜಿಲ್ಲೆಯಲ್ಲಿ ಈಗಾಗಲೇ ಹೆಚ್ಚಿಗೆಯಿಂದ ಕಡಿಮೆ ಸಾಧನೆ ಮಾಡಿರುವ ಗ್ರಾಮ ಪಂಚಾಯತಿಗಳನ್ನು ಗುರುತಿಸಲಾಗಿದ್ದು, ಈ ಕುರಿತು ಸಂಬಂಧಪಟ್ಟ ತಾಲೂಕು ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿಗಳು, ಗ್ರಾಮ ಪಂಚಾಯತ ಅಭಿವೃದ್ಧಿ ಅಧಿಕಾರಿಗಳೊಂದಿಗೆ ಸಭೆಯನ್ನು ನಡೆಸಲಾಗಿದ್ದು, ಕಡಿಮೆ ಸಾಧನೆ ಮಾಡಿರುವ ತಾಲೂಕಿನ ಅಧಿಕಾರಿಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಮಾನವ ದಿನಗಳನ್ನು ಸೃಷ್ಠಿಸಿ, ಕೂಲಿಗಾರರಿಗೆ ಉದ್ಯೋಗ ಒದಗಿಸಿ ಕೊಡುವಂತೆ ಸೂಚನೆಗಳನ್ನು ನೀಡಲಾಗಿದೆ. ಜಿಲ್ಲೆಯಲ್ಲಿ ಸಾರ್ವಜನಿಕರಿಂದ ದೂರುಗಳು ಸ್ವೀಕೃತವಾಗುತ್ತವೆ, ಆದರೆ ಕುಷ್ಟಗಿ ತಾಲೂಕಿನಲ್ಲಿ ಕಮ್ಯೂನಿಸ್ಟ್ ಪಾರ್ಟಿಯು ತಮ್ಮದೇ ಆದಂತಹ ಒಂದು ಸಂಘ ಕಟ್ಟಿಕೊಂಡು ಪ್ರತಿ 15 ದಿನಗಳಿಗೊಮ್ಮೆ ಕೂಲಿಗಾರರಿಗೆ ಕಾಮಗಾರಿಯು ಅಳತೆಯ ಪ್ರಕಾರ ಹಣ ಬಟವಾಡೆಯಾಗುತ್ತಿಲ್ಲವೆಂದು ಆಪಾದಿಸಿ ಕುಷ್ಟಗಿ ತಹಶೀಲ್ ಕಛೇರಿಯ ಮುಂದೆ ಮುಷ್ಕರ ನಡೆಸುತ್ತಿದ್ದು, ಸಂಬಂಧಪಟ್ಟ ಅಧಿಕಾರಿಗಳು ಧರಣಿನಿರತರಿಗೆ ಇಲಾಖೆಯ ನಿಯಮಗಳ ಬಗ್ಗೆ ಮನವರಿಕೆ ಮಾಡಿ, ಕ್ರಮಕೈಗೊಳ್ಳಲಾಗುತ್ತಿದೆಯೆಂದು ತಿಳಿಸಿದರು. ಕಳೆದ ಸಾಲಿನ ರೂ.14.00 ಕೋಟಿ, ಪ್ರಸಕ್ತ ಸಾಲಿನ ರೂ.30.00 ಕೋಟಿ ಸಾಮಗ್ರಿ ಬಿಲ್ ಹಾಗೂ ರೂ. 1.00 ಕೋಟಿ **ಕೂಲಿಗಾರರಿಗೆ ವಿತರಿಸಬೇಕಾದ ಮೊತ್ತ ಸರ್ಕಾರದಿಂದ ಬಿಡುಗಡೆಯಾಗದೇ ಬಾಕಿ ಉಳಿದಿರುವುದಾಗಿ ಉಪ ಕಾರ್ಯದರ್ಶಿಗಳು, ಜಿಲ್ಲಾ ಪಂಚಾಯತ ಇವರು ಸಭೆಯಲ್ಲಿ ತಿಳಿಸಿದರು.**

ನರೇಗಾ ಯೋಜನೆ ಅಡಿ ಕೃಷಿ ಇಲಾಖೆಯವರು ಎಲ್ಲಾ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದ್ದು, ವರ್ಮಿ ಕಂಪೋಸಿಟ್ ಕಿಟ್‌ಗಳನ್ನು ರೈತರಿಗೆ ವಿತರಿಸಲಾಗುತ್ತಿದೆ. ರೈತರಿಗೆ ವೇತನ ಪಾವತಿಸುವುದು ಬಾಕಿ ಉಳಿದಿದ್ದು, ಮುಂದಿನ 10 ದಿನಗಳೊಳಗಾಗಿ ಪೂರ್ಣಗೊಳಿಸಲಾಗುವುದೆಂದು ಜಂಟಿ ಕೃಷಿ ನಿರ್ದೇಶಕರು ಸಭೆಯಲ್ಲಿ ವಿವರಿಸಿದರು.

ಜಿಲ್ಲೆಯಲ್ಲಿ ನಿರೀಕ್ಷಿತ ಪ್ರಮಾಣದಲ್ಲಿ ಮುಂಗಾರು ಮಳೆ ಆಗದೇ ಇರುವುದರಿಂದ ಭೀಕರ ಬರಗಾಲ ಉಲ್ಬಣಗೊಂಡಿರುತ್ತದೆ. ಆದ್ದರಿಂದ ನರೇಗಾ ಯೋಜನೆಯಡಿ ಮಾನವ ದಿನಗಳನ್ನು ಸೃಷ್ಟಿಸಬೇಕು. ನರೇಗಾದಡಿ ನೋಂದಣಿ ಮಾಡಿಕೊಂಡ ಕೂಲಿಗಾರರಿಗೆ ನಮೂನೆ–6 ನ್ನು ನೀಡಿದ 15 ದಿನಗಳ ಒಳಗಾಗಿ ಕೂಲಿಗಾರರಿಗೆ ಕೆಲಸ ನೀಡಬೇಕು. ಮಾನವ ದಿನಗಳ ಸೃಷ್ಠಿಯಲ್ಲಿ ಇದುವರೆಗೆ ಕಡಿಮೆ ಸಾಧನೆ ಮಾಡಿರುವ ತಾಲೂಕುಗಳಲ್ಲಿ ಆಯಾ ಕಾರ್ಯನಿರ್ವಾಹಕ ಅಧಿಕಾರಿಗಳು, ಗ್ರಾಮ ಪಂಚಾಯತ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ಪಂಚಾಯತಿಯ ಸಿಬ್ಬಂದಿಗಳಿಗೆ ಸೂಕ್ತ ತಿಳುವಳಿಕೆ, ಪ್ರಚಾರ ನೀಡುವುದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಮಾನವ ದಿನಗಳನ್ನು ಸೃಷ್ಠಿಸಿ ಬರಗಾಲದ ಸಂದರ್ಭದಲ್ಲಿ ಜನರಿಗೆ ಉದ್ಯೋಗ ಒದಗಿಸಿ ಅನುಕೂಲ ಮಾಡಿಕೊಡಬೇಕೆಂದು ಸೂಚಿಸಿದರು. ಅದರಂತೆ ತಾಲೂಕುಗಳಲ್ಲಿ ಪ್ರಗತಿಯಲ್ಲಿರುವ ನರೇಗಾ ಕಾಮಗಾರಿಗಳ ಸ್ಥಳಗಳಿಗೆ ಸಂಬಂಧಪಟ್ಟ ತಹಶೀಲ್ದಾರರು ಭೇಟಿ ನೀಡಿ, ಸದರಿ ನರೇಗಾ ಕಾಮನಗಾರಿಗಳ ಪ್ರಗತಿಯನ್ನು ಪರಿಶೀಲಿಸುವಂತೆ ಸೂಚನೆ ನೀಡಿದರು. ಅಲ್ಲದೇ ಸರ್ಕಾರದಿಂದ ಬಿಡುಗಡೆಯಾಗದೇ ಬಾಕಿ ಉಳಿದಿರುವ ಮೊತ್ತವನ್ನು ಕೂಡಲೇ ಬಿಡುಗಡೆಗೊಳಿಸುವಂತೆ ಕ್ರಮಕೈಗೊಳ್ಳಲಾಗುವುದೆಂದು ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು ಸಭೆಯಲ್ಲಿ ತಿಳಿಸಿದರು.

**ಪಿ.ಡಿ.ಖಾತೆ :-**

ಜಿಲ್ಲೆಯಲ್ಲಿನ ಒಟ್ಟು 7 ತಾಲೂಕುಗಳನ್ನು ಬರಗಾಲಪೀಡಿತ ಪ್ರದೇಶಗಳೆಂದು ಸರ್ಕಾರವು ಘೋಷಿಸಿರುವುದರಿಂದ ಆಯಾ ತಾಲೂಕಿನ ತಹಶೀಲ್ದಾರರಿಗೆ, ಅನುಷ್ಠಾನಾಧಿಕಾರಿಗಳಿಗೆ ನಿಯಮಿತವಾಗಿ ಸರ್ಕಾರದಿಂದ ಸ್ವೀಕೃತವಾದ ಅನುದಾನದಲ್ಲಿ ಬಿಡುಗಡೆ ಮಾಡಲಾಗುತ್ತಿದೆ. ದಿನಾಂಕ: 16.07.2019 ರ ಅಂತ್ಯಕ್ಕೆ ಒಟ್ಟು ರೂ. 7.60 ಕೋಟಿ ಅನುದಾನ ಜಿಲ್ಲಾಧಿಕಾರಿಗಳ ಪಿ.ಡಿ.ಖಾತೆಯಲ್ಲಿ ಲಭ್ಯವಿರುವುದಾಗಿ ಜಿಲ್ಲಾಧಿಕಾರಿಗಳು ಸಭೆಯಲ್ಲಿ ವಿವರಿಸಿದರು.

**ಕೃಷಿ ಇಲಾಖೆ:-**

2019-20ನೇ ಸಾಲಿನಲ್ಲಿ ಜಿಲ್ಲೆಯ ವಾಡಿಕೆ ಮಳೆ 189.00 ಮಿ.ಮಿ.ಇದ್ದು, 158.00 ಮಿ.ಮಿ. ಆಗಿದ್ದು, -16% ಮಳೆ ಕೊರತೆಯಾಗಿರುತ್ತದೆ. ಮುಂಗಾರು ಹಂಗಾಮಿಗೆ ವಾಡಿಕೆ ಮಳೆ 108.00 ಮಿ.ಮಿ. ಇದ್ದು, 112.00 ಮಿ.ಮಿ. ಆಗಿರುತ್ತದೆ. 4% ಅಧಿಕ ಮಳೆಯಾಗಿರುತ್ತದೆ. ಜಿಲ್ಲೆಯಲ್ಲಿ ಕುಷ್ಟಗಿ ತಾಲೂಕು ಹೊರತುಪಡಿಸಿ 6 ತಾಲೂಕಿನಲ್ಲಿ ಮಳೆ ಕೊರತೆ ಕಂಡುಬಂದಿರುತ್ತದೆ. ಈ ಸಾಲಿನ ಬಿತ್ತನೆ ಗುರಿ 252500 ಇದ್ದು, ಇದುವರೆಗೂ 89107 ಹೆಕ್ಟೆರ್ ಬಿತ್ತನೆಯಾಗಿದ್ದು, 32.29% ಗುರಿಯನ್ನು ಸಾಧಿಸಲಾಗಿದೆ. ಈ ವರ್ಷ ಪೂರ್ವ ಮುಂಗಾರು ಹಾಗೂ ಮುಂಗಾರು ಮಳೆ ಕೊರತೆಯಾಗಿರುವುದರಿಂದ ಪರ್ಯಾಯ ಬೆಳೆ ಬೆಳೆಯಲು ಯೋಜನೆ ಮಾಡಲಾಗಿದೆ. ಕೇಂದ್ರ ಸರ್ಕಾರದಿಂದ ರೈತರ ಆದಾಯ ವೃದ್ಧಿಸಲು ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ ನಿಧಿ (ಪಿ.ಎಂ.ಕಿಸಾನ) ಎಂಬ ಹೊಸ ಯೋಜನೆಯನ್ನು ಘೋಷಿಸಿದ್ದು, ಸದರಿ ಯೋಜನೆ ಅಡಿ ಎಲ್ಲಾ ರೈತ ವರ್ಗಗಳಿಗೆ ರೂ. 6000/- ವಾರ್ಷಿಕವಾಗಿ 3 ಕಂತಿನಲ್ಲಿ ನೀಡಲಾಗುತ್ತಿದ್ದು, ಈಗಾಗಲೇ ಮೊದಲು ಕಂತು ರೈತರ ಖಾತೆಗೆ ಜಮಾ ಮಾಡಲಾಗಿದೆ. ಅಲ್ಲದೇ ಜಿಲ್ಲೆಯಲ್ಲಿ ಬೀಜ ಮತ್ತು ರಸಗೊಬ್ಬರಗಳ ಕೊರತೆ ಇರುವುದಿಲ್ಲ. ಕೃಷಿ ಇಲಾಖೆಯ ಮುಖ್ಯ ಯೋಜನೆಗಳಾದ ಕೃಷಿ ಭಾಗ್ಯ, ಕರ್ನಾಟಕ ರೈತ ಸುರಕ್ಷ ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆ, ಕೃಷಿ ಯಾಂತ್ರೀಕರಣ ಹಾಗೂ ಸೂಕ್ಷ್ಮ ನೀರಾವರಿ ಯೋಜನೆಗಳ ಅಡಿ 2016-17, 2017-18ನೇ ಸಾಲಿನ ರೈತರ ಖಾತೆಗೆ ಜಮಾ ಮಾಡಲಾಗಿರುತ್ತದೆ. ಕೆಲವೊಂದು ಆಧಾರ ಕಾರ್ಡಗಳು ಲಿಂಕ್ ಆಗದೇ ಇರುವುದರಿಂದ ನೊಂದಣಿಯಾಗದೇ ಬೆಳೆ ವಿಮೆ ಬಂದಿರುವುದಿಲ್ಲ. 2018-19ನೇ ಸಾಲಿನ ಮುಂಗಾರು ಮತ್ತು ಹಿಂಗಾರು ಹಂಗಾಮಿನಲ್ಲಿ ಬೆಳೆ ವಿಮೆ ಮಂಜೂರಾಗುವ ಹಂತದಲ್ಲಿರುತ್ತದೆ. ಪಿಎಂಕೆಎಸ್‌ವೈ ಯೋಜನೆಯ ಅಡಿಯಲ್ಲಿ ನಿರ್ಮಿಸಲಾದ ಗೋಕಟ್ಟೆ, ಚೆಕ್ ಬ್ಯಾಂಗಳು ಹಾಗೂ ಇತರೆ ಕಾರ್ಯಗಳ ಸ್ಥಳ ಪರಿಶೀಲನೆ ಪ್ರಗತಿ ಹಂತದಲ್ಲಿದ್ದು, 2019-20ನೇ ಸಾಲಿನ ಬೆಳೆ ಸಮೀಕ್ಷೆ ಕಾರ್ಯಕ್ರಮ ಪ್ರಾರಂಭಗೊಂಡಿದ್ದು, ಪೂರ್ವ ಮುಂಗಾರು ಬೆಳೆಗಳ ಸಮೀಕ್ಷೆಗೆ ಕಾರ್ಯರೂಪವನ್ನು ರೂಪಿಸಿಕೊಂಡಿದ್ದು, ಬೆಳೆ ಸಮೀಕ್ಷೆ ಕಾರ್ಯವು ನಿಗದಿತ ಸಮಯದಲ್ಲಿ ಪೂರ್ಣಗೊಳಿಸಲಾಗುವುದೆಂದು ಜಂಟಿ ಕೃಷಿ ನಿರ್ದೇಶಕರು ಸಭೆಯಲ್ಲಿ ವಿವರಿಸಿದರು.

ಬೆಳೆ ಸಮೀಕ್ಷೆ ಸಭೆ ಮತ್ತು ತರಬೇತಿಯನ್ನು ಇಂದು ನಿಗದಿಪಡಿಸಲಾಗಿದ್ದು, ಸದರಿ ಸಭೆಯ ನಿಮಿತ್ಯ ಪೂರ್ವನಿಯೋಜಿತ ಸಭೆಯನ್ನು ಮಂದೂಡಲಾಗಿದೆ, ಕೂಡಲೇ ಪುನ: ಸಭೆಯನ್ನು ನಿಗದಿಪಡಿಸಿ ಪೂರ್ಣಗೊಳಿಸಲಾಗುವುದೆಂದು ಜಿಲ್ಲಾಧಿಕಾರಿಗಳು ಸಭೆಯ ಗಮನಕ್ಕೆ ತಂದರು.

**ತೋಟಗಾರಿಕೆ ಬೆಳೆ ವಿವರ:-**

ಜಿಲ್ಲೆಯಲ್ಲಿ ಒಟ್ಟು 14,000 ಹೆಕ್ಟೇರ್ ಪ್ರದೇಶ ಈರುಳ್ಳಿ ಬೆಳೆ ಬೆಳೆದಿದ್ದು, 44,000 ರೈತರು ಜಮೀನುಗಳಿಗೆ ಹಾನಿಯಾಗಿರುತ್ತದೆ. ಈ ಕುರಿತು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು, ಅನುಮೋದನೆಯಾಗಿ ಬಂದ ನಂತರವೇ ಫಲಾನುಭವಿಗಳ ಮಾಹಿತಿ ಸಿಗುತ್ತದೆ. ಸದರಿ ಫಲಾನುಭವಿಗಳ

ಪಟ್ಟಿಯನ್ನು ಕೂಡಲೇ ಸಲ್ಲಿಸಲಾಗುವುದೆಂದು ತೋಟಗಾರಿಕೆ ಇಲಾಖೆಯ ಉಪನಿರ್ದೇಶಕರು ಸಭೆಯಲ್ಲಿ ವಿವರಿಸಿದರು.

2018–19ನೇ ಸಾಲಿನಲ್ಲಿ ಇಂದಿನವರೆಗೆ ಮುಂಗಾರು ಹಂಗಾಮಿನಲ್ಲಿ ಹಾನಿಯಾದ ಬೆಳೆಗಳಿಗೆ ಇದುವರೆಗೆ ಒಟ್ಟು 27,890 ಫಲಾನುಭವಿಗಳಿಗೆ ಪರಿಹಾರ ರೂ. 24.34 ಕೋಟಿ ಪರಿಹಾರ ತಂತ್ರಾಂಶದ ಮೂಲಕ ಪರಿಹಾರ ವಿತರಿಸಲಾಗಿದ್ದು, ಹಾಗೂ ಜಿಲ್ಲೆಯಲ್ಲಿ ಹೆಚ್ಚುವರಿ ಮಳೆಯಿಂದ ಯಾವುದೇ ಹಾನಿಯಾಗಿರುವುದಿಲ್ಲ.

**ರೈತರ ಆತ್ಮಹತ್ಯೆ ಪ್ರಕರಣಗಳ ವಿವರ:–**

ಜಿಲ್ಲೆಯಲ್ಲಿ ಒಟ್ಟು 34 ಪ್ರಕರಣಗಳು ವರದಿಯಾಗಿದ್ದು, 27 ಪ್ರಕರಣಗಳು ಅಂಗೀಕೃತವಾಗಿದ್ದು, 5 ತಿರಸ್ಕೃತಗೊಂಡಿದ್ದು, 2 ಪ್ರಕರಣಗಳು ಇತ್ಯರ್ಥಕ್ಕೆ ಬಾಕಿ ಉಳಿದಿರುತ್ತವೆ. ಒಟ್ಟು 27 ಪ್ರಕರಣಗಳಿಗೆ 5 ಲಕ್ಷ ಪರಿಹಾರ ನೀಡಿದ್ದು, ಒಟ್ಟು 10 ಪ್ರಕರಣಗಳಿಗೆ ಪ್ರಾಥಮಿಕ ಮತ್ತು ಪ್ರೌಢ, ಉನ್ನತ ಶಿಕ್ಷಣ ಪಡೆದ ಸಂತ್ರಸ್ಥ ರೈತ ಮಕ್ಕಳಿಗೆ ಪರಿಹಾರ ನೀಡಲಾಗಿದೆ, ಅವುಗಳನ್ನು ಸಹ ತೀವ್ರಗತಿಯಲ್ಲಿ ಇತ್ಯರ್ಥಪಡಿಸುವುದಾಗಿ ಜಿಲ್ಲಾಧಿಕಾರಿಗಳು ಸಭೆಯಲ್ಲಿ ತಿಳಿಸಿದರು.

**ರೈತರ ಸಾಲ ಮನ್ನಾ ಯೋಜನೆ: [ವಾಣಿಜ್ಯ ಬ್ಯಾಂಕುಗಳ ಬೆಳೆ ಸಾಲ]**

ರೈತರ ಸಾಲ ಮನ್ನಾ ಯೋಜನೆ ಅಡಿ ವಾಣಿಜ್ಯ ಬ್ಯಾಂಕುಗಳಲ್ಲಿ ಒಟ್ಟು 55382 ಲೋನ್‌ಗಳ ಸಂಖ್ಯೆ ಇದ್ದು, ಒಟ್ಟು ಲೋನ್‌ನ ಮೊತ್ತ ರೂ. 1022.09 ಕೋಟಿ ಇದ್ದು, ಜಿಲ್ಲೆಗೆ ಒಟ್ಟು ರೂ. 226.21 ಕೋಟಿ ಬಿಡಗುಡೆಯಾಗಿದ್ದು, ರೂ. 795.88 ಕೋಟಿ ಇನ್ನೂ ಬಿಡುಗಡೆಗೆ ಬಾಕಿಯಿರುವುದಾಗಿ **ವಿವರಗಳನ್ನು ಸಲ್ಲಿಸುತ್ತಾ, ಸದರಿ ಯೋಜನೆ ಅಡಿ ರೆಗ್ಯೂಲರ್ ಪೇಮೆಂಟ್ ಇರುವವರಿಗೆ ರೂ. 25,000/– ಇನ್‌ಸೆಂಟಿವ್ ಹಾಗೂ ಇತರರಿಗೆ ರೂ. 2.00 ಲಕ್ಷಗಳ ವರೆಗೆ ಸಾಲ ಮನ್ನಾ** ಮಾಡಲು ಅವಕಾಶ ಇರುವುದಾಗಿ ತಿಳಿಸಿದರು. ಇದುವರೆಗೆ ಒಟ್ಟು 55,000 ಪ್ರಕರಣಗಳು ಬಾಕಿ ಇರುವುದಾಗಿ **ಲೀಡ್ ಬ್ಯಾಂಕ್ ಮ್ಯಾನೇಜರ್** ಇವರು ಸಭೆಯಲ್ಲಿ ಮಂಡಿಸಿದರು.

ಜಿಲ್ಲೆಯಲ್ಲಿ ಇಷ್ಟು ಪ್ರಕರಣಗಳು ಏಕೆ ಬಾಕಿ ಇರುವುದಾಗಿ ಕಾರ್ಯದರ್ಶಿಗಳು ಪ್ರಶ್ನಿಸಿದ ಸಂದರ್ಭದಲ್ಲಿ ಈ ಕುರಿತು 3ನೇ ಕಂತಿನ ಅನುದಾನ ಇದುವರೆಗೆ ಜಿಲ್ಲೆಗೆ ಸ್ವೀಕೃತವಾಗಿರುವುದಿಲ್ಲ, ಸ್ವೀಕೃತವಾದ ನಂತರ ಕೂಡಲೇ ಕ್ರಮವಹಿಸುವುದು. ಈಗಾಗಲೇ ಬೆಳೆಸಾಲ ಪೋರ್ಟಲ್‌ನಲ್ಲಿ ಗ್ರೀನ್ ಲಿಸ್ಟ್ ಅನುಮೋದನೆ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ತ್ವರಿತ ಗತಿಯಲ್ಲಿ ವಿವಿಧ ಬ್ಯಾಂಕ್‌ಗಳು ಅನುಮೋದನೆ ನೀಡಲಾಗುವುದೆಂದು ಲೀಡ್ ಬ್ಯಾಂಕ್ ಮ್ಯಾನೇಜರ್ ಸಭೆಯಲ್ಲಿ ತಿಳಿಸಿದರು.

ಈ ಕುರಿತು ಜಿಲ್ಲೆಯಲ್ಲಿ ಈಗಾಗಲೇ ಎಲ್ಲಾ ತಹಶೀಲ್ದಾರರು, ಸಹಾಯಕ ಆಯುಕ್ತರು, ಲೀಡ್ ಬ್ಯಾಂಕ್ ಮ್ಯಾನೇಜರ್ ಹಾಗೂ ವಿವಿಧ ಬ್ಯಾಂಕ್ ಅಧಿಕಾರಿಗಳೊಂದಿಗೆ ಸಭೆಯನ್ನು ನಡೆಸಲಾಗಿದ್ದು, ತಳ ಹಂತದ ಕೆಲಸ ಪೂರ್ಣಗೊಂಡಿದ್ದು, ಅರ್ಹರಿಲ್ಲದ ರೈತರನ್ನು ಪಟ್ಟಿಯಿಂದ ತೆಗೆದುಹಾಕಲಾಗಿದ್ದು, ಅಂತಿಮ ಅರ್ಹ ರೈತರ ಪಟ್ಟಿಯನ್ನು ಗ್ರೀನ್ ಪಟ್ಟಿಯಲ್ಲಿ ಸೇರಿಸಿ, ಅನುಮೋದನೆಗಾಗಿ ಸಲ್ಲಿಸಲಾಗಿರುತ್ತದೆ. ಸರ್ಕಾರದಿಂದ ಅನುದಾನ ಬಿಡುಗಡೆಗೊಳಿಸಿದ ತಕ್ಷಣ ಕ್ರಮವಹಿಸಲಾಗುವುದೆಂದು ಜಿಲ್ಲಾಧಿಕಾರಿಗಳು ಸಭೆಯ ಗಮನಕ್ಕೆ ತಂದರು.

**ರೈತರ ಸಾಲ ಮನ್ನಾ ಯೋಜನೆ: [ಸಹಕಾರ–ಬ್ಯಾಂಕುಗಳ ಕೃಷಿ ಬೆಳೆ ಸಾಲ]**

ಸರ್ಕಾರದ ಸಾಲಮನ್ನಾ ಯೋಜನೆಯಲ್ಲಿ ಕೊಪ್ಪಳ ಜಿಲ್ಲೆಯಿಂದ ಒಟ್ಟು 23976 ರೈತರಿಗೆ 104,25,29,000 ಮೊತ್ತಕ್ಕೆ ಅರ್ಹರಿದ್ದು, ಆ ಪೈಕಿ ಇಲ್ಲಿಯವರೆಗೆ 17,605 ರೈತರಿಗೆ 66,98,58,000

ಮೊತ್ತ ಮಂಜೂರಾಗಿದ್ದು, ಇನ್ನೂ 6371 ರೈತರಿಗೆ 37,26,71,000 ಸರ್ಕಾರದಿಂದ ಹಣ ಬಿಡುಗಡೆಯಾಗುವುದು ಬಾಕಿ ಇರುತ್ತದೆ. ಸಹಕಾರ ಬ್ಯಾಂಕುಗಳಲ್ಲಿ ರೈತರ ಸಾಲ ಮನ್ನಾ ಯೋಜನೆ ಅಡಿ ರೈತರಿಗೆ ರೂ. 1.00 ಲಕ್ಷವರೆಗೆ ಮನ್ನಾ ಇರುತ್ತದೆ. ವಿಶೇಷವಾಗಿ ವಾಣಿಜ್ಯ ಬ್ಯಾಂಕುಗಳಲ್ಲಿ ನಿಗದಿತ ಅವಧಿಯೊಳಗೆ ತಮ್ಮ ಸಾಲವನ್ನು ಪ್ರಮಾಣಿಕವಾಗಿ ಪಾವತಿಸಿದ ರೈತರಿಗೆ ರೂ.25,000/- ವರೆಗೆ ನೀಡುವ ಪ್ರೋತ್ಸಾಹಧನದ ಪ್ರಯೋಜನವನ್ನು ನಮ್ಮ ಸಹಕಾರ ವಲಯಕ್ಕೆ ವಿಸ್ತರಿಸಿದರೆ ರೈತರಲ್ಲಿ ತಾವು ಪಡೆದ ಸಾಲವನ್ನು ಅವಧಿ ಮುಗಿಯುವದರೊಳಗೆ ತುಂಬುವ ಮನೋಭಾವನೆ ಕ್ರಮೇಣ ಗಣನೀಯವಾಗಿ ಹೆಚ್ಚುತ್ತದೆ ಹಾಗೂ ರೈತರಿಗೆ ಆರ್ಥಿಕವಾಗಿ ಸಾಲದ ರೂಪದಲ್ಲಿ ಸಹಕರಿಸುತ್ತಿರುವ ಡಿ.ಸಿ.ಸಿ. ಬ್ಯಾಂಕುಗಳಲ್ಲಿ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ಇದರಿಂದ ಸಮಯಕ್ಕನುಸಾರವಾಗಿ ಹಣವು ಮರುಪಾವತಿಯಾಗುವುದರಿಂದ ಹೊಸ ಸಾಲವನ್ನು ರೈತರಿಗೆ ನೀಡಲು ಅನುಕೂಲವಾಗುತ್ತದೆ.

2018ನೇ ಸಾಲಿನಲ್ಲಿ ಸರ್ಕಾರದ ರೈತರ ಸಾಲಮನ್ನಾ ವಿವರಗಳನ್ನು ತಂತ್ರಾಂಶದಲ್ಲಿ ಅಳವಡಿಸುತ್ತಿದ್ದು, ಅದರಲ್ಲಿ ಪಡಿತರ ಚೀಟಿಯ ವಿವರವನ್ನು ಸಹ ನಮೂದಿಸಲಾಗುತ್ತಿದೆ. ಇದರಲ್ಲಿ ಕೊಪ್ಪಳ ಜಿಲ್ಲೆಯಲ್ಲಿ ಉಳಿದ ಸುಮಾರು 560 ರೈತರನ್ನು ತಂತ್ರಾಂಶದಲ್ಲಿ ಅಳವಡಿಸಲು ಹಲವಾರು ತಾಂತ್ರಿಕ ದೋಷಗಳು ಹಾಗೂ ಗೊಂದಲಗಳು ಉಂಟಾಗಿರುವುದರಿಂದ ಸರ್ಕಾರದ ಹಂತದಲ್ಲಿ ಈ ಕುರಿತು ಸೂಕ್ತ ನಿರ್ಧಾರ ತೆಗೆದುಕೊಂಡರೆ ಜಿಲ್ಲೆಯ ಎಲ್ಲಾ ಅರ್ಹ ರೈತರಿಗೆ ಪ್ರಯೋಜನ ಪಡೆಯಲು ಅನುಕೂಲವಾಗುತ್ತದೆ.

ಜಿಲ್ಲೆಯ ಗಂಗಾವತಿ ತಾಲೂಕಿನಲ್ಲಿ 9 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ವಾಣಿಜ್ಯ ಬ್ಯಾಂಕಿನ ಮೂಲಕ ರೈತರಿಗೆ ಸಾಲವನ್ನು ವಿತರಿಸುತ್ತಿದ್ದು, ರೈತ ಸದಸ್ಯರು ವಾಣಿಜ್ಯ ಬ್ಯಾಂಕಿನಲ್ಲಿ ಖಾತೆಯನ್ನು ಹೊಂದಿರುತ್ತಾರೆ. ಆದರೆ ವಾಣಿಜ್ಯ ಬ್ಯಾಂಕಿನಲ್ಲಿ ಖಾತೆ ಹೊಂದಿದ 1745 ರೈತರ ರೂ. 849.54 ಲಕ್ಷಗಳ ಸಾಲ ಮನ್ನಾ ಮೊತ್ತವು ಆರ್.ಡಿ.ಸಿ.ಸಿ. ಬ್ಯಾಂಕಿನಲ್ಲಿ ಖಾತೆ ಹೊಂದದೇ ಇರುವುದರಿಂದ ಸರ್ಕಾರಕ್ಕೆ ಹಿಂದಿರುಗಿರುತ್ತದೆ. ನಂತರ ಸದರಿ ಎಲ್ಲಾ ರೈತರ ಆರ್.ಡಿ.ಸಿ.ಸಿ. ಬ್ಯಾಂಕ್ ಗಂಗಾವತಿ ಶಾಖೆಯಲ್ಲಿ ಉಳಿತಾಯ ಖಾತೆಯನ್ನು ತೆರೆದಿದ್ದರಿಂದ ಈ ಕುರಿತು ಕೇಂದ್ರ ಕಛೇರಿಗೆ ಈಗಾಗಲೇ ಪತ್ರ ಬರೆದು ರೂ. 849.54 ಲಕ್ಷಗಳ ಮೊತ್ತವನ್ನು ರೈತರ ಖಾತೆಗೆ ಮರಳಿ ಜಮಾ ಮಾಡಲು ವಿನಂತಿಸಲಾಗಿದ್ದು, ಈವರೆಗೆ ಜಮಾ ಆಗಿರುವುದಿಲ್ಲ. ಪ್ರಸ್ತುತ ಮಳೆಯಾಗಿರುವುದರಿಂದ ರೈತರು ಬಿತ್ತನೆ ಕೆಲಸದಲ್ಲಿ ತೊಡಗಿದ್ದು, ಈ ಸಮಯದಲ್ಲಿ ಅವರ ಖಾತೆಗಳಿಗೆ ಸಾಲಮನ್ನಾ ಮೊತ್ತವನ್ನು ಜಮಾ ಮಾಡಿದಲ್ಲಿ ಬಹಳ ಅನುಕೂಲವಾಗುತ್ತದೆಂದು ಉಪ ನೊಂದಣಾಧಿಕಾರಿಗಳು ಸಭೆಯಲ್ಲಿ ವಿವರಿಸಿದರು.

ಎಲ್ಲಾ ವಿಷಯಗಳನ್ನು ಗಣನೆಗೆ ತೆಗೆದುಕೊಂಡು, ರೈತರ ಖಾತೆಗೆ ಮರಳಿ ಜಮಾ ಮಾಡುವ ಕುರಿತು ಸಂಬಂಧಪಟ್ಟ ಇಲಾಖೆಯ ಮುಖ್ಯಸ್ಥರೊಂದಿಗೆ ಚರ್ಚಿಸಿ, ಕ್ರಮವಹಿಸಲಾಗುವುದೆಂದು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ತಿಳಿಸಿದರು.

**ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ:-**

ಸಹಕಾರ ಇಲಾಖೆಯ ಬೆಳೆಸಾಲ ಮಂಜೂರು ಮಾಡಲು ಬಿ.ಪಿ.ಎಲ್. ಪಡಿತರ ಚೀಟಿ ವಿತರಣೆ ಸಮಸ್ಯೆ ಇರುವುದಾಗಿ ಅಧಿಕಾರಿಗಳು ತಿಳಿಸಿರುವುದರಿಂದ ಆಹಾರ ಇಲಾಖೆಯ ಅಧಿಕಾರಿಗಳಿಂದ ಮಾಹಿತಿಯನ್ನು ಕಾರ್ಯದರ್ಶಿಗಳು ಪಡೆಯಲಾಗಿ, ಸಭೆಗೆ ಹಾಜರಿದ್ದ ಆಹಾರ ಇಲಾಖೆಯ ಅಧೀಕ್ಷಕರು ಸಾರ್ವಜನಿಕರಿಂದ ಬಿ.ಪಿ.ಎಲ್. ಪಡಿತರ ಚೀಟಿ ವಿತರಣೆ ಕಾರ್ಯವು ಪ್ರಗತಿಯಲ್ಲಿದ್ದು, ಫಿಫೋ ಸಿಸ್ಟಮ್ ಪ್ರಕಾರ ವಿತರಿಸಲಾಗುತ್ತಿದೆಂದು ತಿಳಿಸಿದರು. ಸದರಿ ಅಧೀಕ್ಷಕರ ಉತ್ತರ ಸಮಂಜಸ ಇರದೇ

- ಎಸ್.ಡಿ.ಆರ್.ಎಫ್. ನಿಧಿಯಡಿ ಒಟ್ಟು 69 ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿ ರೂ.24.425 ಲಕ್ಷ ಅನುದಾನ ಕಾರ್ಯನಿರ್ವಾಹಕ ಅಭಿಯಂತರರು, ಗ್ರಾ.ಕು.ನೀ.ಸ & ನೈ.ವಿಭಾಗ, ಬಳ್ಳಾರಿ ಇವರಿಗೆ ಬಿಡುಗಡೆ ಮಾಡಲಾಗಿದೆ ಎಂದು ತಿಳಿಸಿದರು. ಇವುಗಳಲ್ಲಿ ಈವರೆಗೆ 68 ಕಾಮಗಾರಿ ಪೂರ್ಣಗೊಂಡಿರುತ್ತವೆ.

**ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಬಳ್ಳಾರಿ ಇವರು ಮಾತನಾಡಿ ಕುಡಿಯುವ ನೀರು ಸಂಬಂಧ ಈ ಕೆಳಕಂಡ ನಿರ್ದೇಶನಗಳನ್ನು ನೀಡಿದರು,**

- ಪ್ರತಿ ತಿಂಗಳು ಖಾಸಗಿ ಟ್ಯಾಂಕರ್ ಮತ್ತು ಖಾಸಗಿ ಬೋರ್‌ವೆಲ್‌ಗಳ ಬಿಲ್ಲುಗಳನ್ನು ಪ್ರತಿ ತಿಂಗಳು 05ನೇ ತಾರೀಖು ಒಳಗಡೆ ಪಾವತಿಸಲು ಕಟ್ಟುನಿಟ್ಟಿನ ಸೂಚನೆ ನೀಡಿದರು.
- ಹರಪನಹಳ್ಳಿ ತಾಲ್ಲೂಕಿನ ಮೇ ರಿಂದ ಜುಲೈ 2019 ರ ಬಿಲ್ಲುಗಳ ಬಗ್ಗೆ ಪರಿಶೀಲಿಸಿ ಕೂಡಲೇ ಪಾವತಿ ಮಾಡಲು ಕ್ರಮವಹಿಸುವಂತೆ ಸಹಾಯಕ ಆಯುಕ್ತರು, ಹರಪನಹಳ್ಳಿ ಇವರಿಗೆ ಸೂಚಿಸಿದರು.
- ಪ್ರಸ್ತುತ ಖಾಸಗಿ ಟ್ಯಾಂಕರ್ ಮತ್ತು ಬೋರ್‌ವೆಲ್‌ಗಳ ಮೂಲಕ ನೀರು ನೀಡುತ್ತಿರುವ ಗ್ರಾಮಗಳಲ್ಲಿ ಸಹಾಯಕ ಆಯುಕ್ತರು, ತಹಶೀಲ್ದಾರರು, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಮತ್ತು ಕಾರ್ಯನಿರ್ವಾಹಕ ಅಧಿಕಾರಿಗಳು ಖುದ್ದು ಭೇಟಿ ನೀಡಿ ಸಮರ್ಪಕವಾಗಿ ನೀರು ಪೂರೈಕೆ ಆಗುತ್ತಿರುವ ಬಗ್ಗೆ ಖಚಿಪಡಿಸಿಕೊಳ್ಳಲು ಸೂಚಿಸಿದರು.

<u>ಮೇವಿನ ಪರಿಸ್ಥಿತಿ:-</u>

ಜಿಲ್ಲಾಧಿಕಾರಿಗಳು ಮಾತನಾಡುತ್ತಾ ಈ ಕೆಳಕಂಡಂತೆ ಜಿಲ್ಲೆಯಲ್ಲಿ ಮೇವಿನ ಪರಿತಿಸ್ಥಿತಿ ಮತ್ತು ಕೈಗೊಂಡ ಕ್ರಮಗಳ ಬಗ್ಗೆ ವಿವರಿಸಿದರು,

- ಜಿಲ್ಲೆಯಲ್ಲಿ ಕೂಡ್ಲಿಗಿ ತಾಲ್ಲೂಕು ಗಂಡುಬೊಮ್ಮನಹಳ್ಳಿ ಮತ್ತು ಪೂಜಾರಹಳ್ಳಿ ಗ್ರಾಮಗಳಲ್ಲಿ ತಲಾ ಒಂದರಂತೆ ಒಟ್ಟು 02 ಗೋಶಾಲೆಗಳನ್ನು ತೆರೆಯಲಾಗಿದ್ದು, ಎರಡು ಗೋಶಾಲೆಯಲ್ಲಿ ಸೇರಿ ಒಟ್ಟು 3382 ಜಾನುವಾರುಗಳು ಇವೆ ಎಂದು ತಿಳಿಸಿದರು. ಜಿಲ್ಲಯೆಲ್ಲಿ ಒಟ್ಟು 12 ಮೇವು ಬ್ಯಾಂಕ್ ಕಾರ್ಯನಿರ್ವಹಿಸುತ್ತಿವೆ ಎಂದರು.
- ಜಿಲ್ಲೆಯಲ್ಲಿ ಮತ್ತು ಜಿಲ್ಲೆಯ ಸುತ್ತ ಮುತ್ತಲಿನ ಜಿಲ್ಲೆಗಳಲ್ಲಿ ಮೇವಿನ ಅಭಾವ ಇರುವುದರಿಂದ ಇ-ಟೆಂಡರ್ ನಲ್ಲಿ ನಿಗಧಿಪಡಿದ್ದ 93 ಕಿ.ಮೀ. ಗಳ ದೂರವನ್ನು 183 ಕಿ.ಮೀ.ಗೆ ಹೆಚ್ಚಿಸಿ ಎಲ್-1 ಟೆಂಡರ್‌ದಾರರಿಗೆ ಆದೇಶ ನೀಡುತ್ತಾ, ಸದರಿ ಮೇವನ್ನು ಎರಡು ಗೋಶಾಲೆಗಳಲ್ಲಿ ಸಂಗ್ರಹಿಸಿ, ಮುಂದಿನ 07 ರಿಂದ 10 ದಿನಗಳಲ್ಲಿ ಗೋಶಾಲೆಯನ್ನು ಮುಚ್ಚಿ ಅವಶ್ಯಕತೆ ಇದ್ದಲ್ಲಿ ಮೇವು ಬ್ಯಾಂಕ್ ತೆರೆಯಲಾಗುವುದು ಎಂದು ತಿಳಿಸಿದರು.
- ಈವರೆಗೆ ಒಟ್ಟು ರೂ.208.63 ಲಕ್ಷ ಮೊತ್ತವನ್ನು ಮೇವು ಖರೀದಿಗೆ, ಗೊಶಾಲೆ ಮತ್ತು ಮೇವು ಬ್ಯಾಂಕ್‌ಗಳಲ್ಲಿ ಕಾರ್ಯನಿರ್ವಹಿಸಿದ ಕೂಲಿ ಕಾರ್ಮಿಕರಿಗೆ ನೀಡಲಾಗಿರುತ್ತದೆ.

**ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಬಳ್ಳಾರಿ ಇವರು ಮಾತನಾಡಿ ಮೇವು ನಿರ್ವಹಣೆ ಸಂಬಂಧ ಈ ಕೆಳಕಂಡ ನಿರ್ದೇಶನಗಳನ್ನು ನೀಡಿದರು,**

1) ಪ್ರಸ್ತುತ ನಡೆಯುತ್ತಿರುವ ಗೋಶಾಲೆಗಳನ್ನು ಪರಿಸ್ಥಿತಿ ಅನುಗುಣವಾಗಿ ಮುಚ್ಚಲು ಕ್ರಮ ಕೈಗೊಂಡು ಅವಶ್ಯಕತೆ ಇದ್ದಲ್ಲಿ ಇವುಗಳ ಬದಲಾಗಿ ಮೇವುಬ್ಯಾಂಕ್ ತೆರೆಯಲು ನಿರ್ದೇಶಿಸಿದರು. ಇ-ಟೆಂಡರ್ ಮುಖಾಂತರ ಖರೀದಿ

ಮಾಡುತ್ತಿರುವ ಬಿಲ್ಲುಗಳು ಹಾಗೂ ಕೂಡ್ಲಿಗಿ ತಾಲ್ಲೂಕಿನಲ್ಲಿ ನೇರವಾಗಿ ರೈತರಿಂದ ಖರೀದಿಸಿದ ಮೇವಿನ ಬಿಲ್ಲುಗಳ ಮೊತ್ತವನ್ನು ಕೂಡಲೇ ಪಾವತಿಸಲು ಸೂಚಿಸಿದರು.

**ಮಹಾತ್ಮಗಾಂಧಿ ನರೇಗಾ ಯೋಜನೆ:-**

- 2019-20 ನೇ ಸಾಲಿನಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ನಿಗದಿಪಡಿಸಿದ ಮಾನವ ದಿನಗಳ ಸೃಜನೆಯಲ್ಲಿ ಬಳ್ಳಾರಿ ಜಿಲ್ಲೆಯು 82.00 ಲಕ್ಷ ಮಾನವ ದಿನಗಳ ಗುರಿಗೆ ಅನುಗುಣವಾಗಿ ರೂ.57.51 ಲಕ್ಷ ಸೃಜನೆ ಮಾಡಿ ಶೇ.70% ರಷ್ಟು ಪ್ರಗತಿ ಸಾಧಿಸಿ ರಾಜ್ಯದಲ್ಲಿ ಬಳ್ಳಾರಿ ಜಿಲ್ಲೆಯು ಮೊದಲನೇ ಸ್ಥಾನದಲ್ಲಿದೆ ಎಂದು ತಿಳಿಸಿದರು.
- ಹರಪನಹಳ್ಳಿ ಮತ್ತು ಹ.ಬೊ.ಹಳ್ಳಿ ತಾಲ್ಲೂಕುಗಳ ಪ್ರಗತಿ ಸ್ವಲ್ಪ ಮಂದಗತಿಯಲ್ಲಿದ್ದು, ಮುಂದಿನ ದಿನಗಳಲ್ಲಿ ಉತ್ತಮವಾದ ಪ್ರಗತಿ ಸಾಧಿಸಲಾಗುವುದು ಎಂದು ತಿಳಿಸಿದರು.
- ದಿ:26-06-2019 ರಿಂಮ ಇಲ್ಲಿಯವರೆಗೂ ಒಟ್ಟು ರೂ.28.34 ಕೋಟಿ ಕೂಲಿ ಹಣ ಪಾವತಿಯಾಗದೇ ಬಾಕಿ ಇರುತ್ತದೆ ಹಾಗೂ 2018-19ನೇ ಸಾಲಿನ ರೂ.20.00 ಕೋಟಿ ಮತ್ತು 2019-20ನೇ ಸಾಲಿನ ರೂ.19.00 ಕೋಟಿ ಒಟ್ಟು ರೂ.39.00 ಕೋಟಿ ಸಾಮಾಗ್ರಿ ಹಣ ಸರ್ಕಾರದಿಂದ ಬಿಡುಗಡೆಗೆ ಬಾಕಿ ಇರುತ್ತದೆ ಎಂದು ತಿಳಿಸಿದರು.
- ಜಿಲ್ಲೆಯಲ್ಲಿ 1963 ಕುಟುಂಬ 100 ದಿನ ಪೂರೈಸಿದ್ದು ಹಾಗೂ 17900 ಕುಟುಂಬ 81 ರಿಂದ 100 ದಿನದ ಅಂತರದಲ್ಲಿ ಕೆಲಸ ನಿರ್ವಹಿಸುತ್ತಿರುತ್ತಾರೆ ಮತ್ತು ಒಟ್ಟು ಜಿಲ್ಲೆಯಲ್ಲಿ 1.26 ಕುಟುಂಬಗಳಿಗೆ ಉದ್ಯೋಗವನ್ನು ಒದಗಿಸಲಾಗಿದ್ದು, ಸದರಿ ಕುಟುಂಬಗಳು 100 ದಿನ ಪೂರೈಸುವ ಹಂತದಲ್ಲಿದ್ದು, ಹೆಚ್ಚುವರಿಯಾಗಿ 50 ದಿನದ ಕೆಲಸ ನೀಡಲು ಸರ್ಕಾರದ ಅನುಮತಿ ಅವಶ್ಯಕತೆ ಇರುತ್ತದೆ ಎಂದು ತಿಳಿಸಿದರು.

**ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಬಳ್ಳಾರಿ ಇವರು ಮಾತನಾಡಿ ಮಹಾತ್ಮ ಗಾಂಧಿ ನರೇಗಾ ಯೋಜನೆ ಸಂಬಂಧ ಈ ಕೆಳಕಂಡ ನಿರ್ದೇಶನಗಳನ್ನು ನೀಡಿದರು,**

- ಜಿಲ್ಲೆಯಲ್ಲಿ ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಸಾಧಿಸಿರುವ ಪ್ರಗತಿಯನ್ನು 02 ನಿಮಿಷದ ವಿಡಿಯೋ ಮಾಡಲು ಸೂಚಿಸಿದರು.
- ಹರಪನಹಳ್ಳಿ ಮತ್ತು ಹ.ಬೊ.ಹಳ್ಳಿ ತಾಲ್ಲೂಕುಗಳಲ್ಲಿ ಮಾನವ ದಿನ ಸೃಜನೆಯಲ್ಲಿ ಇನ್ನು ಹೆಚ್ಚಿನ ಪ್ರಗತಿ ಸಾಧಿಸಲು ಸೂಚಿಸಿದರು.

ಧನ್ಯವಾದಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ,
ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು,
ಬಳ್ಳಾರಿ ಜಿಲ್ಲೆ,
ಬಳ್ಳಾರಿ.

ಇರುವುದರಿಂದ ಆಹಾರ ಇಲಾಖೆಯಿಂದ ವಿತರಿಸಲಾಗುತ್ತಿರುವ ಬಿ.ಪಿ.ಎಲ್. / ಎ.ಪಿ.ಎಲ್. ಪಡಿತರ ಚೀಟಿ ವಿತರಣೆಯ ಪ್ರಗತಿಯ ಬಗ್ಗೆ ಪರಿಶೀಲಿಸಿ ಕ್ರಮ ವಹಿಸುವಂತೆ ಜಿಲ್ಲಾಧಿಕಾರಿಗಳಿಗೆ ಉಸ್ತುವಾರಿ ಕಾರ್ಯದರ್ಶಿಗಳು ಸೂಚಿಸಿದರು.

**ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಜನಾಂಗದವರಿಗೆ ರುದ್ರ ಭೂಮಿ ಒದಗಿಸುವ ಕುರಿತು**

ಜಿಲ್ಲೆಯ ಕುಷ್ಟಗಿ ತಾಲೂಕಿನ ಹನಮಸಾಗರ ಮತ್ತು ಹೂಲಗೇರಿಯ ಪರಿಶಿಷ್ಟ ಜಾತಿಯವರಿಗೆ ರುದ್ರಭೂಮಿ ಒದಗಿಸುವ ಕುರಿತು ಖಾಸಗಿಯವರಿಂದ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜರುಗುವ ಜಮೀನು ಖರೀದಿ ಸಭೆಯನ್ನು ನಡೆಸಿ, ಅನುಮೋದನೆ ಸಹ ನೀಡಲಾಗಿರುತ್ತದೆ. ಅದರಂತೆ ಜಿಲ್ಲೆಯ 333 ಗ್ರಾಮಗಳಲ್ಲಿ ಅಧಿಕೃತ ರುದ್ರಭೂಮಿಗಳಿರುವುದಿಲ್ಲವೆಂದು ಜಿಲ್ಲಾಧಿಕಾರಿಗಳು ಸಭೆಯ ಗಮನಕ್ಕೆ ತಂದರು. ಈ ಕುರಿತು ಸಂಬಂಧಪಟ್ಟ ಇಲಾಖೆಯ ವರದಿಗಳನ್ನು ಅವಲೋಕಿಸಲಾಗಿ, ಜಿಲ್ಲೆಯಲ್ಲಿ 333 ಗ್ರಾಮಗಳಲ್ಲಿ ಅಧಿಕೃತ ರುದ್ರಭೂಮಿಗಳಿಲ್ಲದಿರಲು ಸಾಧ್ಯ ಇರುವುದಿಲ್ಲ. ಸಮುದಾಯದ ಆಧಾರದ ಮೇಲೆ ಪರಿಶೀಲಿಸಿದಾಗ ಈ ಸಮಸ್ಯೆ ಉದ್ಭವಿಸಬಹುದು. ಆದ್ದರಿಂದ ಪ್ರತಿ ತಾಲೂಕಿನಲ್ಲಿ ಆಯಾ ಗ್ರಾಮ ಲೆಕ್ಕಾಧಿಕಾರಿಗಳು ನಿಜವಾಗಿ ಸಮುದಾಯದವರಿಗೆ ಅವಶ್ಯವಿದೆಯೇ ಅಥವಾ ಗ್ರಾಮಗಳಲ್ಲಿ ಸಾರ್ವಜನಿಕರಿಗೆ ರುದ್ರಭೂಮಿ ಇಲ್ಲದೇ ಇರುವ ಬಗ್ಗೆ ಪರಿಶೀಲಿಸಿ ಮೇಲಾಧಿಕಾರಿಗಳಿಗೆ ವರದಿ ಸಲ್ಲಿಸಿ, ಜಿಲ್ಲಾಧಿಕಾರಿಗಳು ಸೂಕ್ತ ಕ್ರಮವಹಿಸುವಂತೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸೂಚಿಸಿದರು.

**ಸಾಮಾಜಿಕ ಭದ್ರತೆ ಯೋಜನೆಗಳು, ವಿವಿಧ ಪಿಂಚಣಿಗಳ ವಿವರ:–**

ಜಿಲ್ಲೆಯಲ್ಲಿ ವಿವಿಧ ಸಾಮಾಜಿಕ ಭದ್ರತೆ ಯೋಜನೆಗಳು, ವಿವಿಧ ಪಿಂಚಣಿಗಳನ್ನು ಮಂಜೂರು ಮಾಡಲಾಗುತ್ತಿದ್ದು ಯಾವುದೇ ಸಮಸ್ಯೆಗಳು ಇರುವುದಿಲ್ಲ. ಅಲ್ಲದೇ ಆಧಾರ ಸೀಡಿಂಗ್ ಬಗ್ಗೆ ಈಗಾಗಲೇ ಜಿಲ್ಲೆಯ ಎಲ್ಲಾ ತಹಶೀಲ್ದಾರರು, ಸಹಾಯಕ ಆಯುಕ್ತರು ಹಾಗೂ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳೊಂದಿಗೆ ಸಭೆಯನ್ನು ನಡೆಸಲಾಯಿತು. ತಳ ಹಂತದ ಎಲ್ಲಾ ಕೆಲಸಗಳನ್ನು ಮುಕ್ತಾಯಗೊಳಿಸಲಾಗಿದ್ದು, ಶೇ. 70–75% ಸಾಧನೆ ಮಾಡಿರುವುದಾಗಿ ಜಿಲ್ಲಾಧಿಕಾರಿಗಳು ಸಭೆಯ ಗಮನಕ್ಕೆ ತಂದರು. ಈ ಕುರಿತು ಸಭೆಯಲ್ಲಿ ಹಾಜರಿದ್ದ ಎಲ್ಲಾ ತಹಶೀಲ್ದಾರರುಗಳಿಗೆ ಶೇ.100% ಸಾಧನೆ ಮಾಡಿ ಆಧಾರ ಸೀಡಿಂಗ್ ಕಾರ್ಯವನ್ನು ಪೂರ್ಣಗೊಳಿಸುವಂತೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸೂಚನೆ ನೀಡಿದರು.

**94 'ಸಿ' ಮತ್ತು 94 'ಸಿಸಿ' :**

ಜಿಲ್ಲೆಯಲ್ಲಿ 94 'ಸಿ' ರಡಿ ಒಟ್ಟು 15089 ಅರ್ಜಿಗಳು ಸ್ವೀಕೃತವಾಗಿದ್ದು, 15089 ಅರ್ಜಿಗಳು ವಿಲೆವಾರಿಯಾಗಿರುತ್ತವೆ ಮತ್ತು 94 'ಸಿಸಿ' ರಡಿ ಒಟ್ಟು 336 ಅರ್ಜಿಗಳು ಸ್ವೀಕೃತವಾಗಿದ್ದು, 336 ಅರ್ಜಿಗಳು ವಿಲೆವಾರಿಯಾಗಿರುತ್ತವೆ. ಶೇ.100% ಸಾಧನೆಯಾಗಿರುತ್ತೆ. ಅದರಂತೆ 94 'ಎ' ರಡಿ ಒಟ್ಟು 8622 ಅರ್ಜಿಗಳು ವಿಸ್ತೀರ್ಣ 23705 ಹೆಕ್ಟೇರ್ ಸ್ವೀಕೃತವಾಗಿದ್ದು 8622 ಅರ್ಜಿಗಳು 23705 ಹೆಕ್ಟೇರ್ ವಿಲೇವಾರಿಯಾಗಿರುತ್ತದೆ. ಶೇ. 100% ಸಾಧನೆಯಾಗಿರುತ್ತೆ ಹಾಗೂ 94 'ಬಿ' ರಡಿ ಒಟ್ಟು 7485 ಅರ್ಜಿಗಳು ವಿಸ್ತೀರ್ಣ 24032 ಹೆಕ್ಟೇರ್ ಸ್ವೀಕೃತವಾಗಿದ್ದು 7485 ಅರ್ಜಿಗಳು 24032 ಹೆಕ್ಟೇರ್ ವಿಲೇವಾರಿಯಾಗಿರುತ್ತದೆ. ಶೇ. 100% ಸಾಧನೆಯಾಗಿರುತ್ತದೆ ಎಂದು ಜಿಲ್ಲಾಧಿಕಾರಿಗಳು ಸಭೆಯಲ್ಲಿ ವಿವರಿಸಿದರು.

**ಕರ್ನಾಟಕ ಭೂಸುಧಾರಣೆ ಕಾಯ್ದೆ 1961 ರ ಕಲಂ 79ಎ ಮತ್ತು 79ಬಿ ಉಲ್ಲಂಘನೆ ಪ್ರಕರಣಗಳು:–**

ಕರ್ನಾಟಕ ಭೂಸುಧಾರಣೆ ಕಾಯ್ದೆ 1961 ರ ಕಲಂ 79ಎ ಮತ್ತು 79ಬಿ ರ ಅಡಿ ಒಟ್ಟು ಜಿಲ್ಲೆಯಲ್ಲಿ 289 ಪ್ರಕರಣಗಳು ದಾಖಲಾಗಿದ್ದು, 04 ಪ್ರಕರಣಗಳು ಸರ್ಕಾರದ ಪರ ಆದೇಶವಾಗಿದ್ದು, 246

ಪ್ರಕರಣಗಳು ಕ್ರಯದಾರರ ಪರ ಆದೇಶವಾಗಿದ್ದು, ಒಟ್ಟು 39 ಪ್ರಕರಣಗಳು ಬಾಕಿ ಉಳಿದಿರುತ್ತವೆಂದು ಜಿಲ್ಲಾಧಿಕಾರಿಗಳು ವಿವರಿಸಿದರು.

**ಕರ್ನಾಟಕ ಭೂಸುಧಾರಣೆ ಕಾಯ್ದೆ ನಿಯಮ–109 ರ ಪ್ರಕರಣಗಳು :–**

ಜಿಲ್ಲೆಯಲ್ಲಿ ಕರ್ನಾಟಕ ಭೂಸುಧಾರಣೆ ಕಾಯ್ದೆ ನಿಯಮ 109 ಅಡಿ ಒಟ್ಟು 201 ಪ್ರಕರಣಗಳಲ್ಲಿ ವಿಸ್ತೀರ್ಣ 2086–13 ಎಕರೆ ಇದ್ದು, 186 ಪ್ರಕರಣಗಳು ವಿಸ್ತೀರ್ಣ 2022–35 ಎಕರೆ ಜಮೀನು ಅನುಮತಿ ನೀಡಲಾಗಿದ್ದು, 13 ಪ್ರಕರಣಗಳು ವಿಸ್ತೀರ್ಣ 49–05 ಎಕರೆ ಜಮೀನು ಅನುಮತಿ ನೀಡಲು ಬಾಕಿ ಇದ್ದು, 03 ಪ್ರಕರಣಗಳು ವಿಸ್ತೀರ್ಣ 20–13 ಎಕರೆ ಜಮೀನು ಈಗಾಗಲೇ ಸರ್ಕಾರಕ್ಕೆ ಕಳುಹಿಸಲಾಗಿದ್ದು, ಬಾಕಿ ಉಳಿದಿರುವುದಾಗಿ ಜಿಲ್ಲಾಧಿಕಾರಿಗಳು ಸಭೆಯಲ್ಲಿ ವಿವರಿಸಿದರು.

ಕರ್ನಾಟಕ ಭೂಸುಧಾರಣೆ ಕಾಯ್ದೆ ನಿಯಮ 109 ಅಡಿ ಯಾವ ಸ್ವರೂಪದ ಪ್ರಕರಣಗಳು ಜಿಲ್ಲೆಯಲ್ಲಿ ಇರುವುದಾಗಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾಹಿತಿಯನ್ನು ಕೋರಲಾಗಿ, ಈ ಕುರಿತು ವಾಣಿಜ್ಯ ಉದ್ದೇಶಕ್ಕಾಗಿ, ಶಿಕ್ಷಣ ಉದ್ದೇಶಕ್ಕಾಗಿ, ಸಣ್ಣ ಕೈಗಾರಿಕೆ ಉದ್ದೇಶಕ್ಕಾಗಿ 109 ರ ಅಡಿ ಪ್ರಕರಣಗಳು ದಾಖಲಾಗುತ್ತಿರುವುದಾಗಿ ಜಿಲ್ಲಾಧಿಕಾರಿಗಳು ಸಭೆಯಲ್ಲಿ ತಿಳಿಸಿದರು.

**ಅರಣ್ಯ ಹಕ್ಕು ಕಾಯ್ದೆ ಅಡಿ ಬಾಕಿ ಇರುವ ಅರ್ಜಿಗಳು:–**

ಜಿಲ್ಲೆಯಲ್ಲಿ ಅರಣ್ಯ ಹಕ್ಕು ಕಾಯ್ದೆ ಅಡಿ ಒಟ್ಟು 106 ಅರ್ಜಿಗಳು ಸ್ವೀಕೃತವಾಗಿದ್ದು, ಗಂಗಾವತಿ ತಾಲೂಕಿನ ಆಗೋಲಿ ಗ್ರಾಮ ಪಂಚಾಯತನ ಸವಳಹರವಿಕ್ಯಾಂಪ್‌ಗೆ ಸಂಬಂಧಪಟ್ಟಂತೆ 04 ಕ್ಲೇಮುದಾರರಿಗೆ ಹಕ್ಕುಪತ್ರ ವಿತರಿಸಲಾಗಿದೆ. ಮಾನ್ಯ ಸರ್ವೋಚ್ಛ ನ್ಯಾಯಾಲಯದ ರಿಟ್ ಪಿಟೀಷನ್ **ಸಂ. 109/2008 ರನ್ವಯ ಹಾಗೂ ಸರ್ಕಾರದ ಪತ್ರ ಸಂ.ಸಕಿ 73 ಪವಯೋ 2014 ದಿ: 30.04.2019** ರನ್ವಯ ತಿರಸ್ಕೃತ 97 ಅರ್ಜಿಗಳ ಮುನರ್ ಪರಿಶೀಲನೆ ಕಾರ್ಯ ಪ್ರಗತಿಯಲ್ಲಿರುತ್ತದೆ ಹಾಗೂ ದಿನಾಂಕ: 14.12.2018 ರ ಜಿಲ್ಲಾ ಮಟ್ಟದ ಅರಣ್ಯ ಹಕ್ಕು ಸಮಿತಿ ನಡವಳಿಗಳನ್ವಯ 306 ಅರ್ಜಿಗಳಿಗೆ ಸಂಬಂಧಿಸಿದಂತೆ ಸರ್ವೆ ಕಾರ್ಯವು ಸಹ ಪ್ರಗತಿಯಲ್ಲಿ ಇದ್ದು, ಇನ್ನೂ 05 ಅರ್ಜಿಗಳು ಬಾಕಿ ಉಳಿದಿರುವುದಾಗಿ ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರು ಸಭೆಯಲ್ಲಿ ವಿವರಿಸಿದರು.

ಅರಣ್ಯ ಹಕ್ಕು ಕಾಯ್ದೆ ಅಡಿ ಅರ್ಜಿಗಳ ಬಗ್ಗೆ ವಿವರಿಸುತ್ತಾ, ಜಂಟಿ ಸರ್ವೆ ಕಾರ್ಯ ಪ್ರಗತಿಯಲ್ಲಿದ್ದು, ಮನ: ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳೊಂದಿಗೆ ಜಂಟಿ ಸ್ಥಳ ಪರಿಶೀಲನೆ ನಡೆಸಿ, ರಾಜ್ಯಾದ್ಯಂತ ವೈಯಕ್ತಿಕ ಪ್ರಕರಣಗಳ ಬಗ್ಗೆ ಅಪೀಲು ಕೈಗೊಳ್ಳುತ್ತಿದ್ದು, ಕೂಡಲೇ ಕ್ರಮವಹಿಸುವುದಾಗಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಸಭೆಯಲ್ಲಿ ತಿಳಿಸಿದರು.

ಬಾಕಿ ಉಳಿದಿರುವ ಪ್ರಕರಣಗಳು, ತಿರಸ್ಕೃತಗೊಂಡ ಅರ್ಜಿಗಳ ಮುನರ್ ಪರಿಶಿಲನೆ ಕಾರ್ಯ ಹಾಗೂ ಸರ್ವೆ ಕಾರ್ಯ ತೀವ್ರ ಗತಿಯಲ್ಲಿ ಆದ್ಯತೆ ಮೇರೆಗೆ ಮುಕ್ತಾಯಗೊಳಿಸುವಂತೆ ಉಪ ಸಂರಕ್ಷಣಾಧಿಕಾರಿಗಳಿಗೆ, ಸಮಾಜ ಕಲ್ಯಾಣ ಅಧಿಕಾರಿಗಳಿಗೆ ಹಾಗೂ ಸಂಬಂಧಪಟ್ಟ ತಹಶೀಲ್ದಾರರಿಗೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸೂಚನೆ ನೀಡಿದರು.

**ಪೋಡಿ ಪ್ರಕರಣಗಳ / ಪೋಡಿ ಮುಕ್ತ ಅದಾಲತ್ / ಕಂದಾಯ ಅದಾಲತ್ ವಿವರ:**

ಜಿಲ್ಲೆಯಲ್ಲಿ ಹದ್ದುಬಸ್ತು 1113, ಇತರೆ 323, ಇ–ಸ್ವತ್ತು 441, ದರಖಾಸ್ತು 21 ಹೀಗೆ ಒಟ್ಟು 1898 ಪ್ರಕರಣಗಳು ಬಾಕಿ ಉಳಿದಿದ್ದು, ಪೋಡಿ ಕೆಲಸ ನಿರ್ವಹಿಸುತ್ತಿರುವ ಭೂಮಾಪಕರ ಸಂಖ್ಯೆ 41, ವಿಲೇವಾರಿ 1260 ಹಾಗೂ ಪ್ರತಿ ಮಾಹೆಯ ಸರಾಸರಿ ವಿಲೇವರಿ ಪ್ರತಿ ಭೂಮಾಪಕರಿಂದ ಒಟ್ಟು 30

ಪ್ರಕರಣಗಳು ನಿಗದಿಪಡಿಸಲಾಗಿದೆ. ಅದೇ ರೀತಿ ಪೋಡಿ ಮುಕ್ತ ಆದಾಲತ್‌ನಲ್ಲಿ 2018-19ನೇ ಸಾಲಿಗೆ ಒಟ್ಟು 630 ಗ್ರಾಮಗಳ ಗುರಿ ನಿಗದಿಪಡಿಸಿದ್ದು, ಉಪನಿರ್ದೇಶಕರು, ಭೂಮಾಪನ ಇಲಾಖೆ ಇವರು ಸಭೆಯಲ್ಲಿ ವಿವರಿಸಿದರು. ಅದರಂತೆ ಜಿಲ್ಲೆಯಲ್ಲಿ ಆಯಾ ತಾಲೂಕು ಹೋಬಳಿ ಮಟ್ಟದಲ್ಲಿ ಕಂದಾಯ ಅದಾಲತ್‌ಗಳು ಪ್ರತಿ ಮಾಹೆಯ 4ನೇ ಶನಿವಾರದಂದು ನಿಗದಿಪಡಿಸಿದ್ದು, ಆದರೆ ಸರ್ಕಾರವು 4ನೇ ಶನಿವಾರವನ್ನು ಸಾರ್ವತ್ರಿಕ ರಜಾ ಎಂದು ಘೋಷಿಸಿದ ಹಿನ್ನಲೆಯಲ್ಲಿ ಪ್ರತಿ ಮಾಹೆಯ 4ನೇ ಶುಕ್ರವಾರದಂದು ಕಂದಾಯ ಅದಾಲತ್‌ನ್ನು ನಡೆಸಲಾಗುತ್ತಿದೆ. ಇಲ್ಲಿಯವರೆಗೆ ಜಿಲ್ಲೆಯಲ್ಲಿ ಒಟ್ಟು 554 ಕಂದಾಯ ಅದಾಲತ್ ನಡೆಸಿದ ಸಂದರ್ಭದಲ್ಲಿ ಒಟ್ಟು 19894 ಅರ್ಜಿಗಳು ಸ್ವೀಕೃತವಾಗಿದ್ದು, ಒಟ್ಟು 19894 ಅರ್ಜಿಗಳು ವಿಲೇವಾರಿಯಾಗಿ ಶೇ.100% ಸಾಧನೆಯಾಗಿರುತ್ತದೆಂದು ಜಿಲ್ಲಾಧಿಕಾರಿಗಳು ಸಭೆಯಲ್ಲಿ ವಿವರಿಸಿದರು.

**<u>14ನೇ ಹಣಕಾಸು ಯೋಜನೆ:</u>**

ಸದರಿ ಯೋಜನೆ ಅಡಿ 2015-16 ರಿಂದ 2018-19 ರವರೆಗೆ ಜಿಲ್ಲೆಗೆ ಒಟ್ಟು ರೂ. 125.232 ಕೋಟಿ ಅನುದಾನ ಬಿಡುಗಡೆಯಾಗಿದ್ದು, ಇದರಲ್ಲಿ ರೂ. 94.434 ಕೋಟಿ ವೆಚ್ಚವಾಗಿದ್ದು, ಬಿಡುಗಡೆಗೆ ಶೇ.75.41% ರಷ್ಟು ಸಾಧನೆಯಾಗಿರುತ್ತದೆ. ಈ ಯೋಜನೆ ಅಡಿ 10592 ಕಾಮಗಾರಿಗಳು ಮಂಜೂರಾಗಿದ್ದು, ಈ ಪೈಕಿ 8498 ಕಾಮಗಾರಿಗಳು ಪೂರ್ಣಗೊಂಡಿದ್ದು, 2799 ಕಾಮಗಾರಿಗಳು ಪ್ರಗತಿಯಲ್ಲಿರುವುದಾಗಿ ಉಪ ಕಾರ್ಯದರ್ಶಿಗಳು ಜಿಲ್ಲಾ ಪಂಚಾಯತ ಕೊಪ್ಪಳ ಇವರು ಸಭೆಯ ಗಮನಕ್ಕೆ ತಂದರು.

14ನೇ ಹಣಕಾಸು ಯೋಜನೆ ಅಡಿ 2018-19ನೇ ಸಾಲಿನಲ್ಲಿ ಶೇ.38% ರಷ್ಟು ಸಾಧನೆಯಾಗಿದ್ದು, ಸಾಧನೆ ಕಡಿಮೆಯಾಗಿರುವ ಬಗ್ಗೆ ಪ್ರಸ್ತಾಪಿಸಿದ ಕಾರ್ಯದರ್ಶಿಗಳು, ಈ ಕುರಿತು ಸರ್ಕಾರದಿಂದ ನೇರವಾಗಿ ಗ್ರಾಮ ಪಂಚಾಯತಿಗಳಿಗೆ 2018-19ನೇ ಸಾಲಿನ 2ನೇ ಕಂತಿನ ಅನುದಾನ 2019 ರ ಮಾರ್ಚ್ ಮಾಹೆಯಲ್ಲಿ ಬಿಡುಗಡೆಯಾಗಿದ್ದು, ಇನ್ನೂ ಕೆಲವು ಗ್ರಾಮ ಪಂಚಾಯತಿಗಳ ಕ್ರಿಯಾ ಯೋಜನೆ ಅನುಮೋದನೆಗಾಗಿ ಇರುವುದರಿಂದ ಸಾಧನೆ ಕಡಿಮೆಯಾಗಿರುವುದಾಗಿ ಉಪಕಾರ್ಯದರ್ಶಿಗಳು ಜಿಲ್ಲಾ ಪಂಚಾಯತ ಇವರು ಸಭೆಯ ಗಮನಕ್ಕೆ ತಂದರು. ಮುಂದುವರೆದು ಸದರಿ ಯೋಜನೆ ಅಡಿ ಯಾವ ಕಾಮಗಾರಿಗಳ ಸ್ವರೂಪದ ಬಗ್ಗೆ ವಿವರಿಸುವಂತೆ ಕಾರ್ಯದರ್ಶಿಗಳು ಪ್ರಶ್ನಿಸಿದ ಸಂದರ್ಭದಲ್ಲಿ ಸಿ.ಸಿ.ರಸ್ತೆ, ನೈರ್ಮಲೀಕರಣ, ಚರಂಡಿ ನಿರ್ಮಾಣ, ಜಿಲ್ಲೆಯಲ್ಲಿ ಬರಗಾಲ ಇರುವುದರಿಂದ ಸದರಿ ಯೋಜನೆ ಅಡಿ ಬಿಡುಗಡೆಯಾದ ಅನುದಾನದಲ್ಲಿ ಶೇಕಡಾ 60% ಕುಡಿಯುವ ನೀರು ಕಾಮಗಾರಿಗಳಿಗೆ ಬಳಸುವ ಬಗ್ಗೆ ಪಂಚಾಯತ ಅಭಿವೃದ್ಧಿ ಅಧಿಕಾರಿಗಳಿಗೆ ಸುತ್ತೋಲೆಯ ಮುಖಾಂತರ ಈಗಾಗಲೇ ಸೂಚನೆ ನೀಡಲಾಗಿದೆಂದು ಉಪ ಕಾರ್ಯದರ್ಶಿಗಳು ಜಿಲ್ಲಾ ಪಂಚಾಯತ ಇವರು ತಿಳಿಸಿದರು.

**<u>ಮುಖ್ಯ ಮಂತ್ರಿಯವರ ಗ್ರಾಮ ವಿಕಾಸ ಯೋಜನೆ ವಿವರ:-</u>**

2017-18ನೇ ಸಾಲಿನಲ್ಲಿ ಮುಖ್ಯ ಮಂತ್ರಿಯವರ ಗ್ರಾಮ ವಿಕಾಸ ಯೋಜನೆಯನ್ನು ಅನುಷ್ಠಾನಗೊಳಿಸಲು ಸರ್ಕಾರವು ಅನುಮೋದನೆ ನೀಡಿದ್ದು, ಒಟ್ಟು ಜಿಲ್ಲೆಯಲ್ಲಿರುವ 5 ವಿಧಾನಸಭಾ ಕ್ಷೇತ್ರಗಳಲ್ಲಿ ಪ್ರತಿ ವಿಧಾನಸಭಾ ಮತಕ್ಷೇತ್ರಕ್ಕೆ 4 ಗ್ರಾಮಗಳಂತೆ ಒಟ್ಟು 20 ಗ್ರಾಮಗಳನ್ನು ಆಯಾ ವಿಧಾನಸಭಾ ಮತಕ್ಷೇತ್ರದ ಶಾಸಕರ ಶಿಫಾರಸ್ಸಿನ ಮೇರೆಗೆ 20 ಗ್ರಾಮಗಳನ್ನು ಆಯ್ಕೆ ಮಾಡಿ ಸರ್ಕಾರದಿಂದ ಅನುಮೋನೆ ಪಡೆಯಲಾಗಿದೆ. ಅದರಂತೆ ಪ್ರತಿ ಗ್ರಾಮದ ಅಭಿವೃದ್ಧಿಗಾಗಿ ರೂ. 1.00 ಕೋಟಿ ಅನುದಾನ ನಿಗದಿಪಡಿಸಿದ್ದು, ಸರ್ಕಾರದ ಮಾರ್ಗಸೂಚಿಯಂತೆ ನಿಗದಿಪಡಿಸಿರುವ ವಲಯವಾರು ಹಾಗೂ ಅನುಪಾತದಂತೆ ಅನುದಾನ ಹಂಚಿಕೆ ಮಾಡಿದ್ದು, ಅದರಂತೆ ಗ್ರಾಮಾಭಿವೃದ್ಧಿ ಯೋಜನಾ ವರದಿ ತಯಾರಿಸಿ ಅಂದಾಜು ಪತ್ರಿಕೆಗಳಿಗೆ ಮಂಜೂರಾತಿ ನೀಡಲಾಗಿರುತ್ತದೆ. ಒಟ್ಟು 20 ಗ್ರಾಮಗಳಲ್ಲಿ ರೂ. 20.00 ಕೋಟಿ ಅನುದಾನ ನಿಗದಿಪಡಿಸಿದ್ದು, ಅದರಲ್ಲಿ ಸರ್ಕಾರದಿಂದ ಇಲ್ಲಿಯವರೆಗೂ

ರೂ.11.14 ಕೋಟಿ ಅನುದಾನ ಬಿಡುಗಡೆಯಾಗಿರುತ್ತದೆ. ಈ ಅನುದಾನವನ್ನು ಆಯಾ ಗ್ರಾಮ ಪಂಚಾಯತಿಯ ಪ್ರತ್ಯೇಕ ಬ್ಯಾಂಕ್ ಖಾತೆಗೆ ಇ.ಎಫ್.ಎಂ.ಎಸ್. ಮೂಲಕ ಜಿಲ್ಲಾ ಪಂಚಾಯತದಿಂದ ಬಿಡುಗಡೆ ಮಾಡಲಾಗಿದೆ. ಬಿಡುಗಡೆಯಾದ ಅನುದಾನದಲ್ಲಿ ರೂ. 2.99 ಕೋಟಿ ಅನುದಾನ ಖರ್ಚು ಮಾಡಲಾಗಿರುತ್ತದೆಂದು ಉಪ ಕಾರ್ಯದರ್ಶಿಗಳು ಜಿಲ್ಲಾ ಪಂಚಾಯತ್ ಇವರು ಸಭೆಯಲ್ಲಿ ವಿವರಿಸಿದರು.

ಈ ಕುರಿತು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸದರಿ ಯೋಜನೆ ಅಡಿ ಯಾವ ಸ್ವರೂಪದ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತದೆಂದು ಪ್ರಸ್ತಾಪಿಸಿದ ಸಂದರ್ಭದಲ್ಲಿ ಸದರಿ ಯೋಜನೆ ಅಡಿ ಸಿ.ಸಿರಸ್ತೆ, ಚರಂಡಿ, ಕಟ್ಟಡ ಕಾಮಗಾರಿಗಳು, ತಿಪ್ಪೆಗುಂಡಿ ಸಂಸ್ಕರಣೆ, ಗುಡಿ ಮಸೀದಿಗಳ ಜೀರ್ಣೋದ್ಧಾರ ಹಾಗೂ ಸೋಲಾರ್ ವಿದ್ಯುತ್ ಬೀದಿ ದೀಪಗಳನ್ನು ಅಳವಡಿಸುವುದಾಗಿ ಉಪ ಕಾರ್ಯದರ್ಶಿಗಳು ಜಿಲ್ಲಾ ಪಂಚಾಯತ ಇವರು ಸಭೆಯಲ್ಲಿ ತಿಳಿಸಿದರು.

ಮುಖ್ಯ ಮಂತ್ರಿಯವರ ಗ್ರಾಮ ವಿಕಾಸ ಯೋಜನೆ ಅಡಿ ವಿಧಾನಸಭಾ ಮತಕ್ಷೇತ್ರದ ಆಯಾ ಶಾಸಕರು ಕಾಮಗಾರಿಯನ್ನು ಇಂತಹ ಅನುಷ್ಠಾನಾಧಿಕಾರಿಗಳಿಂದ ವಹಿಸಿಕೊಡಬೇಕೆಂದು ಸೂಚಿಸುತ್ತಿರುವುದು ಸರಿಯಷ್ಟೆ. ಅದರಂತೆ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಕೈಗೊಳ್ಳುತ್ತಿರುವ ಕಾಮಗಾರಿಗಳು, ಹೆಚ್.ಕೆ.ಆರ್.ಡಿ.ಬಿ. ಕಾಮಗಾರಿಗಳು ನಿರ್ಮಿತಿ ಕೇಂದ್ರ ಅಥವಾ ಕೆ.ಆರ್.ಐ.ಡಿ.ಎಲ್. ಇವರುಗಳು ನಿರ್ವಹಿಸುತ್ತಿದ್ದು, 3ನೇ ತಂಡದಿಂದ ತಪಾಸಣೆ ನಡೆಸುತ್ತಿರುವುದು ಮೇಲ್ನೋಟಕ್ಕೆ ಕಂಡುಬರುವುದಿಲ್ಲ. ಆದ್ದರಿಂದ ಸದರಿ ಯೋಜನೆಗಳಲ್ಲಿ ಪ್ರಗತಿಯಲ್ಲಿರುವ ಕಾಮಗಾರಿಗಳ ಪೈಕಿ ಒಂದು **ಗ್ರಾಮದಲ್ಲಿ ನಡೆಯುತ್ತಿರುವ ಕಾಮಗಾರಿಯ ಗುಣಮಟ್ಟ ಹಾಗೂ ಇತರೆ ವಿಷಯಗಳ ಬಗ್ಗೆ ಪ್ರೋಬೇಷನರ್ ಐ.ಎ.ಎಸ್. ಇವರಿಂದ ಪರಿಶೀಲಿಸಿ ಜಿಲ್ಲಾಧಿಕಾರಿಗಳಿಗೆ ವರದಿ ಸಲ್ಲಿಸುವಂತೆ ಕ್ರಮ** ವಹಿಸಲು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸೂಚಿಸಿದರು.

**<u>ಸ್ವಚ್ಛ ಭಾರತ ಮಿಷನ (ಗ್ರಾ) :-</u>**

ಸ್ವಚ್ಛ ಭಾರತ ಮಿಷನ (ಗ್ರಾ) ಯೋಜನೆ ಅಡಿ ಜಿಲ್ಲೆಯಲ್ಲಿ ಗ್ರಾಮೀಣ ಪ್ರದೇಶದ ಒಟ್ಟು ಕುಟುಂಬಗಳ ಸಂಖ್ಯೆ 2,46,563 ಇದ್ದು, ಅದರಲ್ಲಿ ಬೇಸ್‌ಲೈನ್ ಸರ್ವೆ ಪ್ರಕಾರ 1,59,544 ಕುಟುಂಬಗಳು ಶೌಚಾಲಯಗಳನ್ನು ನಿರ್ಮಿಸಿಕೊಳ್ಳಬೇಕಾಗಿತ್ತು. ಅದರಂತೆ 2013-14 ರಿಂದ 2017-18ನೇ ಸಾಲಿನ ವರೆಗೆ 1,59,544 ಕುಟುಂಬಗಳು ವೈಯಕ್ತಿಕ ಶೌಚಾಲಯ ನಿರ್ಮಿಸಿಕೊಂಡಿದ್ದು, **"ಬಯಲು ಬಹಿರ್ದೆಸೆ ಮುಕ್ತ"** ಜಿಲ್ಲೆಯನ್ನಾಗಿ ಸರ್ಕಾರದಿಂದ ಘೋಷಿಸಲಾಗಿರುತ್ತದೆ. ಪ್ರಸ್ತುತ 2019-20ನೇ ಸಾಲಿಗಾಗಿ ಬೇಸ್‌ಲೈನ್ ಸಮೀಕ್ಷೆಯಿಂದ ಹೊರಗುಳಿದ ಫಲಾನುಭವಿಗಳನ್ನು ಆಯ್ಕೆ ಮಾಡಿದ್ದು, ಜಿಲ್ಲೆಯಾದ್ಯಂತ ಒಟ್ಟು 12069 ಫಲಾನುಭವಿಗಳಿದ್ದು, ಇವರುಗಳಿಗೆ ವೈಯಕ್ತಿಕ ಶೌಚಾಲಯಗಳನ್ನು ನಿರ್ಮಾಣಕ್ಕಾಗಿ ಒಟ್ಟು 11175 ಫಲಾನುಭವಿಗಳಿಗೆ ಕಾರ್ಯಾದೇಶಗಳನ್ನು ನೀಡಿದ್ದು, ಈಗಾಗಲೇ ಒಟ್ಟು 1070 ಫಲಾನುಭವಿಗಳ ಶೌಚಾಲಯಗಳನ್ನು ನಿರ್ಮಾಣ ಮಾಡಲಾಗಿದೆ. ಎಲ್.ಒ.ಬಿ. ಫಲಾನುಭವಿಗಳಿಗೆ ಎರಡು ಗುಂಡಿಗಳ ಶೌಚಾಲಯಗಳನ್ನು ನಿರ್ಮಾಣ ಮಾಡಿಕೊಳ್ಳುವಂತೆ ಜಾಗೃತಿ ಮೂಡಿಸಲಾಗುತ್ತಿದೆಯೆಂದು ಯೋಜನಾ ನಿರ್ದೇಶಕರು (ಡಿ.ಆರ್.ಡಿ.ಎ. ಕೋಶ) ಸಭೆಯಲ್ಲಿ ವಿವರಿಸಿದರು. ಮುಂದುವರೆದು ಜಿಲ್ಲೆಗೆ ವೈಯಕ್ತಿಕ ಶೌಚಾಲಯಗಳ ನಿರ್ಮಾಣಕ್ಕಾಗಿ ಸರ್ಕಾರದಿಂದ ರೂ. 300.00 ಲಕ್ಷಗಳು ಬಿಡುಗಡೆಯಾಗಿದ್ದು, ಆರಂಭಿಕ ಶಿಲ್ಕು ರೂ. 333.36 ಲಕ್ಷಗಳು ಒಟ್ಟಾರೆಯಾಗಿ ರೂ. 633.36 ಲಕ್ಷಗಳಲ್ಲಿ ರೂ. 224.03 ಲಕ್ಷಗಳ ಅನುದಾನ ವೆಚ್ಚವಾಗಿರುತ್ತದೆ. 2019-20ನೇ ಸಾಲಿನಲ್ಲಿ ಕೊಪ್ಪಳ ಜಿಲ್ಲೆಯಿಂದ ಒಟ್ಟು 21 ಗ್ರಾಮ ಪಂಚಾಯತಿಗಳನ್ನು ಘನ ತ್ಯಾಜ್ಯ ವಿಲೇವಾರಿಗೆ ಆಯ್ಕೆ ಮಾಡಿಕೊಂಡಿದ್ದು, ಸದರಿ ಎಲ್ಲಾ ಗ್ರಾಮ ಪಂಚಾಯತಗಳಿಂದ

ಡಿಪಿಆರ್ ತಯಾರಿಸಿ ಸಲ್ಲಿಸಲಾಗಿರುತ್ತದೆಂದು ಯೋಜನಾ ನಿರ್ದೇಶಕರು (ಡಿ.ಆರ್.ಡಿ.ಎ. ಕೋಶ) ಸಭೆಯಲ್ಲಿ ವಿವರಿಸಿದರು.

ಈ ಕುರಿತು ಎಲ್.ಒ.ಬಿ. ಫಲಾನುಭವಿಗಳಿಗೆ ಎರಡು ಗುಂಡಿಗಳ ಶೌಚಾಲಯಗಳನ್ನು 2 ತಿಂಗಳಲ್ಲಿ ನಿರ್ಮಾಣ ಮಾಡಿಕೊಳ್ಳುವಂತೆ ಕ್ರಮವಹಿಸುವಂತೆ ಹಾಗೂ ಘನ ತ್ಯಾಜ್ಯ ವಿಲೇವಾರಿ ಪ್ರಗತಿಯನ್ನು ಶೀಘ್ರವಾಗಿ ಪ್ರಗತಿ ಸಾಧಿಸುವಂತೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು.

ಒಟ್ಟು ರೂ. 300.00 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, ಆ ಪೈಕಿ ರೂ. 224.3 ಲಕ್ಷಗಳ ವೆಚ್ಚ ಮಾಡಿದ್ದು, ಶೇ. 35.41% ಸಾಧನೆಯಾಗಿರುತ್ತದೆ.

**ಕೌಶಲ್ಯಾಭಿವೃದ್ಧಿ, ಉದ್ಯಮಶೀಲನೆ ಮತ್ತು ಜೀವನೋಪಾಯ ಇಲಾಖೆ:-**

2016-17ನೇ ಸಾಲಿನ ಆಯವ್ಯಯ ಭಾಷಣದಲ್ಲಿ ರಾಜ್ಯದಲ್ಲಿ ನೂತನವಾಗಿ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯಲ್ಲಿ ಉದ್ಯೋಗಾವಕಾಶ ಹೆಚ್ಚಿಸುವ ಏಕೈಕ ಉದ್ದೇಶದಿಂದ ಎಲ್ಲಾ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳನ್ನು ಒಂದೇ ಇಲಾಖೆಯಡಿ ತರಲು ಉದ್ದೇಶಿಸಿ ಸೃಜಿಸಲಾಯಿತು. ದಿನಾಂಕ: 15.05.2017 ರಂದು ವೆಬ್‌ಪೋರ್ಟಲ್‌ನ್ನು ಲೋಕಾರ್ಪಣೆ ಮಾಡಿದ್ದು, ಯೋಜನೆಯಡಿಯಲ್ಲಿ 18 ರಿಂದ 35 ವಯಸ್ಸಿನ ಯುವಕ-ಯುವತಿಯರಿಗೆ ವಿವಿಧ ಕೌಶಲ್ಯ ತರಬೇತಿಯನ್ನು ನೀಡಿ ತರಬೇತಿ ಹೊಂದಿದ ಅಭ್ಯರ್ಥಿಗಳಿಗೆ ಶೇ.70 ರಷ್ಟು ಉದ್ಯೋಗ ನಿಯುಕ್ತಿಗೊಳಿಸಬೇಕಾಗಿರುತ್ತದೆ. **ಕೊಪ್ಪಳ ಜಿಲ್ಲೆಗೆ ಒಟ್ಟು 11000 ಅಭ್ಯರ್ಥಿಗಳ ಗುರಿ ನಿಗದಿಯಾಗಿದ್ದು, ಪ್ರಸ್ತುತ 22920 ಅಭ್ಯರ್ಥಿಗಳು ವಿವಿಧ ತರಬೇತಿಗಾಗಿ ಕೌಶಲಕರ್ ವೆಬ್‌ಸೈಟಿನಲ್ಲಿ ನೊಂದಾಯಿಸಿರುತ್ತಾರೆ. 2018-19ನೇ ಸಾಲಿನಲ್ಲಿ 240 ಹಾಗೂ 2019-20 ನೇ ಸಾಲಿನಲ್ಲಿ 480 ವಿವಿಧ ತರಬೇತಿಗಳಿಗೆ ಭೌತಿಕ ಗುರಿಯನ್ನು ಅನುಷ್ಠಾನಗೊಳಿಸಬಾಕಾಗಿರುತ್ತದೆ.** ಸದರಿ ಗುರಿಯಲ್ಲಿ 30 ಜನ ಫಲಾನುಭವಿಗಳಂತೆ ತಂಡ ರಚನೆ ಮಾಡಿ ತರಬೇತಿಯನ್ನು ಪ್ರಾರಂಭಿಸಬೇಕಾಗಿರುತ್ತದೆ. ಇಲ್ಲಿಯವರೆಗೆ ಸುಮಾರು 105 ತರಬೇತಿ ಕೇಂದ್ರಗಳನ್ನು ಪರಿಶೀಲಿಸಿ ಮೌಲ್ಯಮಾಪನ ಮಾಡಿ ಕೌಶಲ್ಯ ಮಿಷನ್ ಬೆಂಗಳೂರು ಇವರಿಗೆ ಆನ್‌ಲೈನ್ ಮೂಲಕ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ. ಸದರಿ ಪ್ರಸ್ತಾವನೆಗಳ ಪೈಕಿ 05 ತರಬೇತಿ ಕೇಂದ್ರಗಳಿಗೆ ಅನುಮೋದನೆ ದೊರಕಿರುತ್ತದೆ. ಉಳಿದ ಪ್ರಸ್ತಾವನೆಗಳು ಕೇಂದ್ರ ಕಛೇರಿಯಲ್ಲಿ ಬಾಕಿ ಇರುತ್ತವೆ. ಫೆಬ್ರುವರಿ 2019 ರ ಮಾಹೆಯಲ್ಲಿ ಮಿನಿ ಉದ್ಯೋಗ ಮೇಳವನ್ನು ಕೊಪ್ಪಳ ನಗರದಲ್ಲಿ ಆಯೋಜಿಸಿದ್ದು, ಸದರಿ ಮೇಳದಲ್ಲಿ 4945 ಅಭ್ಯರ್ಥಿಗಳು, 92 ಖಾಸಗಿ ಕಂಪನಿಗಳು ಭಾಗವಹಿಸಿದ್ದು, ಸುಮಾರು 1336 ಜನರಿಗೆ ಉದ್ಯೋಗವಕಾಶಗಳನ್ನು ಕಲ್ಪಿಸಲಾಗಿರುತ್ತದೆ. ಆದರೆ ಉದ್ಯೋಗಾವಕಾಶದಲ್ಲಿ ಸ್ಥಳೀಯ ಕಂಪನಿಗಳು ಕಡಿಮೆ ಆದ್ಯತೆ ನೀಡಿದ್ದು, ಸದರಿ ಮೇಳಕ್ಕೆ ಸರ್ಕಾರದಿಂದ ರೂ.9.00 ಲಕ್ಷಗಳ ಅನುದಾನ ಬರಬೇಕಾಗಿದ್ದು, ಇದುವರೆಗೆ ಬಂದಿರುವುದಿಲ್ಲವೆಂದು ಜಿಲ್ಲಾಧಿಕಾರಿಗಳು ವಿವರಿಸುತ್ತಾ, ಕೂಡಲೇ ಸರ್ಕಾರದಿಂದ ಅನುದಾನ ಬಿಡುಗಡೆಗೊಳಿಸುವಂತೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಿಗೆ ಕೋರಿದರು.

ಬಾಕಿ ಉಳಿದಿರುವ ಪ್ರಸ್ತಾವನೆಗಳನ್ನು ತ್ವರಿತವಾಗಿ ವಿಲೇಗೊಳಿಸುವಂತೆ ಜಿಲ್ಲಾಧಿಕಾರಿಗಳಿಗೆ ಹಾಗೂ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಸೂಚಿಸುತ್ತಾ, ಸರ್ಕಾರದಿಂದ ಬಿಡುಗಡೆಗಾಗಿ ಬಾಕಿ ಇರುವ ಮೊತ್ತವನ್ನು ಸಹ ಕೂಡಲೇ ಬಿಡುಗಡೆಗೊಳಿಸುವ ಕ್ರಮ ವಹಿಸಲಾಗುವುದೆಂದು ಜಿಲ್ಲಾ ಉಸ್ತುವಾರಿ ಕರ್ಯದರ್ಶಿಗಳು ಸಭೆಯಲ್ಲಿ ತಿಳಿಸಿದರು.

## ವಸತಿ ನಗರ :-

ದಿನಾಂಕ: 01.04.2018 ರಿಂದ 31.03.2019 ರ ವರೆಗೆ ಒಟ್ಟು 3799 ವಾರ್ಷಿಕ ಗುರಿಯಲ್ಲಿ 2066 ಮನೆಗಳ ಅನುಮೋದನೆಗೊಂಡಿದ್ದು, 488 ಮನೆಗಳು ಪೂರ್ಣಗೊಂಡಿರುತ್ತವೆ. 995 ಮನೆಗಳು ಪ್ರಗತಿಯಲ್ಲಿದ್ದು, 579 ಮನೆಗಳು ಪ್ರಾರಂಭವಾಗಿರುವುದಿಲ್ಲ ಹಾಗೂ 1733 ಮನೆಗಳಿಗೆ ಫಲಾನುಭವಿಗಳ ಆಯ್ಕೆ ಬಾಕಿ ಇರುತ್ತದೆ. 2018-19ನೇ ಸಾಲಿನಲ್ಲಿ 364 ಗುರಿ ನಿಗದಿಪಡಿಸಿದ್ದು, ನಿಗಮದ ವೆಬ್‌ಸೈಟಿನಲ್ಲಿ ಪ್ರಸ್ತಾವನೆ ಸಲ್ಲಿಸಲು ಅವಕಾಶ ಇದ್ದು, ಬಾಕಿ ಉಳಿದಿರುವ ಹಿಂದಿನ ಸಾಲಿನ ಪ್ರಸ್ತಾವನೆಗಳನ್ನು ಸಲ್ಲಿಸಲು ನಿಗಮದ ವೆಬ್‌ಸೈಟ್‌ನಲ್ಲಿ ಅವಕಾಶ ಕಲ್ಪಿಸಿಲಾಗಿರುವುದಿಲ್ಲ. ಡಾ॥ ಬಿ.ಆರ್.ಅಂಬೇಡ್ಕರ್ ನಿವಾಸ ಯೋಜನೆ ಅಡಿಯಲ್ಲಿ ಆಯ್ಕೆಯಾದ ಫಲಾನುಭವಿಗಳಿಗೆ ನಿಗದಿತ ಅವಧಿಯಲ್ಲಿ ಅನುದಾನ ಬಿಡುಗಡೆಯಾಗಿರುವುದಿಲ್ಲ. ನಗರ ಮಟ್ಟದಲ್ಲಿ ನಗರ ತಾಂತ್ರಿಕ ಕೋಶ ಸಂಬಂಧಿಸಿದಂತೆ ಸಿಬ್ಬಂದಿಗಳನ್ನು ನೇಮಕಾತಿ ಮಾಡುವ ಕುರಿತಾದ ಪ್ರಕರಣವು ನ್ಯಾಯಾಲಯದಲ್ಲಿ ಇರುವುದರಿಂದ ಸದರಿ ಪ್ರಕರಣವು ವಿಲೇಗೊಂಡಲ್ಲಿ ಹೊರಗುತ್ತಿಗೆ ಸಿಬ್ಬಂದಿಗಳ ನೇಮಕಾತಿ ಮಾಡಿಕೊಂಡು ಯೋಜನೆಯ ತ್ವರಿತ ಅನುಷ್ಠಾನಕ್ಕೆ ಅನುಕೂಲವಾಗುತ್ತದೆಂದು ಜಿಲ್ಲಾಧಿಕಾರಿಗಳು ಸಭೆಯಲ್ಲಿ ವಿವರಿಸಿದರು.

ಬಾಕಿ ಉಳಿದಿರುವ ಫಲಾನುಭವಿಗಳ ಆಯ್ಕೆಯನ್ನು ಕೂಡಲೇ ಮಾಡುವಂತೆ, ಬಾಕಿ ಉಳಿದಿರುವ ಹಿಂದಿನ ಸಾಲಿನ ಪ್ರಸ್ತಾವನೆಗಳನ್ನು ನಿಗಮದ ವೆಬ್‌ಸೈಟನಲ್ಲಿ ಅವಕಾಶ ಕಲ್ಪಿಸದೇ ಇರುವ ಬಗ್ಗೆ ನಿಗಮಕ್ಕೆ ಸಂಪರ್ಕಿಸಿ ಕ್ರಮ ವಹಿಸುವಂತೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸೂಚಿಸಿದರು. ಡಾ॥ ಬಿ.ಆರ್.ಅಂಬೇಡ್ಕರ್ ನಿವಾಸ ಯೋಜನೆ ಅಡಿ ಬಿಡುಗಡೆಯಾಗದೇ ಇರುವ ಅನುದಾನವನ್ನು ತ್ವರಿತವಾಗಿ ಬಿಡುಗಡೆಗೊಳಿಸಲು ಕ್ರಮವಹಿಸಲಾಗುವುದು ಹಾಗೂ ಜಿಲ್ಲಾ ಮಟ್ಟದಲ್ಲಿ ನಗರ ತಾಂತ್ರಿಕ ಕೋಶದಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಖಾಲಿ ಇರುವ ಎರಡು ಹುದ್ದೆಗಳನ್ನು ಕೂಡಲೇ ಭರ್ತಿ ಮಾಡಿಕೊಳ್ಳುವಂತೆ ಜಿಲ್ಲಾಧಿಕಾರಿಗಳಿಗೆ ಕ್ರಮ ವಹಿಸುವಂತೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸೂಚಿಸಿದರು. ಮುಂದುವರೆದು ಯೋಜನೆಯಡಿಯಲ್ಲಿ ನೀಡಿರುವ ಗುರಿಗಳಿಗನುಸಾರ ಫಲಾನುಭವಿಗಳನ್ನು ಆಯ್ಕೆ ಮಾಡಿ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವಂತೆ ಹಾಗೂ ವಸತಿ ಯೋಜನೆಗಳ ಸಮರ್ಪಕ ಮತ್ತು ತ್ವರಿತ ಅನುಷ್ಠಾನಕ್ಕೆ ಸಲಹೆ ಸೂಚನೆ ಇದ್ದಲ್ಲಿ ರಾಜೀವ ಗಾಂಧಿ ವಸತಿ ನಿಗಮಕ್ಕೆ ಸಲ್ಲಿಸುವಂತೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳಿಗೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸೂಚಿಸಿದರು.

## ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ:

ಕೊಪ್ಪಳ ನಗರಸಭೆಯ ವ್ಯಾಪ್ತಿಯಲ್ಲಿ 2 ಯೋಜನೆಗಳು ಮುಕ್ತಾಯ ಹಂತದಲ್ಲಿದ್ದು, ಹೊಸದಾಗಿ 4 ಯೋಜನೆಗಳಿಗೆ ಪ್ರಸ್ತಾವನೆ ತಯಾರಿಸಲಾಗಿ ಸರ್ಕಾರದ ಅನುಮೋದನೆಗಾಗಿ ಸಲ್ಲಿಸಲಾಗಿದೆಯೆಂದು ಸಹಾಯಕ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಕೊಪ್ಪಳ ಇವರು ಸಭೆಯಲ್ಲಿ ವಿವರಿಸಿದರು. ಈ ಕುರಿತು ನಗರಸಭೆಯ ವ್ಯಾಪ್ತಿಯಲ್ಲಿ ಕೈಗೊಳ್ಳಲಾಗುತ್ತಿರುವ ಯೋಜನೆಗಳ ಸ್ಥಳ ಪರಿಶೀಲನೆಯನ್ನು ಮಾಡಲಾಗುವುದೆಂದು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸಭೆಯಲ್ಲಿ ಜಿಲ್ಲಾಧಿಕಾರಿಗಳಿಗೆ ಮತ್ತು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು.

## ನಗರಾಭಿವೃದ್ಧಿ ಪ್ರಾಧಿಕಾರ:

ಕೊಪ್ಪಳ ಜಿಲ್ಲೆಯ ಸಾರ್ವಜನಿಕರ ಅನುಕೂಲಕ್ಕಾಗಿ ಈಗಾಗಲೇ ಪ್ರಾಧಿಕಾರ ಹೆಸರಿನಲ್ಲಿ ಜಮೀನು ಖರೀದಿಸಲಾಗಿದ್ದು ಪ್ರಸ್ತಾವನೆಯನ್ನು ನಗರಾಭಿವೃದ್ಧಿ ಇಲಾಖೆ ಬೆಂಗಳೂರು ಇವರಲ್ಲಿ ಅನುಮೋದನೆಗಾಗಿ ಬಾಕಿ ಉಳಿದಿರುತ್ತದೆ. ಪ್ರಾಧಿಕಾರದಿಂದ ಈಗಾಗಲೇ ಇ.ಎಂ.ಡಿ. ಮೊತ್ತವನ್ನು ಸಹ ಪಡೆಯಲಾಗಿದ್ದು,

ಪ್ರಸ್ತಾವನೆ ಅನುಮೋದನೆಯಾಗದೇ ಇರುವುದರಿಂದ ಸಾರ್ವಜನಿಕರಿಗೆ ಉತ್ತರಿಸಲು ಕಷ್ಟವಾಗುತ್ತಿದೆಂದು ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರು ಸಭೆಯ ಗಮನಕ್ಕೆ ತಂದರು. ಈ ಕುರಿತು ಸರ್ಕಾರದಲ್ಲಿ ಅನುಮೋದನೆಗಾಗಿ ಬಾಕಿ ಇರುವ ಪ್ರಸ್ತಾವನೆಯ ಬಗ್ಗೆ ಕ್ರಮವಹಿಸಲಾಗುವುದೆಂದು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸೂಚಿಸಿದರು.

**ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.**

(ಪಿ ಸುನಿಲ್ ಕುಮಾರ ಭಾ.ಆ.ಸೇ)
**ಜಿಲ್ಲಾಧಿಕಾರಿಗಳು**
**ಕೊಪ್ಪಳ.**

(ಹರ್ಷ ಗುಪ್ತಾ, ಭಾ.ಆ.ಸೇ)
**ಮಾನ್ಯ ಸರ್ಕಾರದ ಕಾರ್ಯದರ್ಶಿಗಳು**
**ವಸತಿ ಇಲಾಖೆ ಹಾಗೂ ಕೊಪ್ಪಳ ಜಿಲ್ಲಾ**
**ಉಸ್ತುವಾರಿ ಕಾರ್ಯದರ್ಶಿಗಳು.**

ಪ್ರತಿಯನ್ನು ಸೂಕ್ತ ಕ್ರಮಕ್ಕಾಗಿ,

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಕೊಪ್ಪಳ.
2. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ಕೊಪ್ಪಳ.
3. ಉಪವಿಭಾಗಾಧಿಕಾರಿಗಳು, ಕೊಪ್ಪಳ
4. ಭೂದಾಖಲೆಗಳ ಉಪನಿರ್ದೇಶಕರು, ಕೊಪ್ಪಳ
5. ಉಪ ಕಾರ್ಯದರ್ಶಿಗಳು, ಜಿಲ್ಲಾ ಪಂಚಾಯತ್, ಕೊಪ್ಪಳ
6. ಅರಣ್ಯ ಉಪ ಸಂರಕ್ಷಣಾಧಿಕಾರಿಗಳು (ಪ್ರಾದೇಶಿಕ) ಕೊಪ್ಪಳ.
7. ಅರಣ್ಯ ಉಪ ಸಂರಕ್ಷಣಾಧಿಕಾರಿಗಳು (ಸಾಮಾಜಿಕ) ಕೊಪ್ಪಳ.
8. ಉಪ ನಿರ್ದೇಶಕರು, ಕೃಷಿ ಇಲಾಖೆ, ಕೊಪ್ಪಳ
9. ಜಂಟಿ ಕೃಷಿ ನಿರ್ದೇಶಕರು, ಕೊಪ್ಪಳ.
10. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಕೊಪ್ಪಳ
11. ಉಪ ನಿರ್ದೇಶಕರು, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ, ಕೊಪ್ಪಳ
12. ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಕೊಪ್ಪಳ
13. ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕೊಪ್ಪಳ
14. ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಕೊಪ್ಪಳ
15. ಉಪ ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕೊಪ್ಪಳ
16. ಉಪ ನಿರ್ದೇಶಕರು, ಪಶು ಸಂಗೋಪನಾ ಇಲಾಖೆ, ಕೊಪ್ಪಳ
17. ಜಿಲ್ಲಾ ವಾರ್ತಾಧಿಕಾರಿಗಳು, ಕೊಪ್ಪಳ
18. ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು, ಕೊಪ್ಪಳ
19. ಉಪನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಕೊಪ್ಪಳ
20. ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಇಲಾಖೆ, ಕೊಪ್ಪಳ
21. ಜಿಲ್ಲಾ ವ್ಯವಸ್ಥಾಪಕರು, ರಾಜ್ಯ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ಕೊಪ್ಪಳ
22. ಜಿಲ್ಲಾ ವ್ಯವಸ್ಥಾಪಕರು, ದಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ದಿ ನಿಗಮ ಕೊಪ್ಪಳ
23. ಜಿಲ್ಲಾ ವ್ಯವಸ್ಥಾಪಕರು, ಡಾ: ಅಂಬೇಡ್ಕರ್ ಅಭಿವೃದ್ದಿ ನಿಗಮ ಕೊಪ್ಪಳ
24. ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಕೊಪ್ಪಳ
25. ಕಾರ್ಯನಿರ್ವಾಹಕ ಅಭಿಯಂತರರು, ಪಂ.ರಾಜ್.ಇಂ. ಕೊಪ್ಪಳ
26. ಕಾರ್ಯನಿರ್ವಾಹಕ ಅಭಿಯಂತರರು, ಜೆಸ್ಕಾಂ, ಕೊಪ್ಪಳ
27. ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ ಕೊಪ್ಪಳ
28. ತಹಶೀಲ್ದಾರ, ಕೊಪ್ಪಳ/ಯಲಬುರ್ಗಾ/ಕುಷ್ಟಗಿ/ಗಂಗಾವತಿ/ಕುಕನೂರು/ಕಾರಟಗಿ/ ಕನಕಗಿರಿ
29. ಪೌರಾಯುಕ್ತರು, ನಗರಸಭೆ, ಕೊಪ್ಪಳ
30. ಕಾರ್ಯನಿರ್ವಾಹಕ ಅಧಿಕಾರಿಗಳು, ತಾ.ಪಂ. ಕೊಪ್ಪಳ/ಯಲಬುರ್ಗಾ/ಕುಷ್ಟಗಿ/ಗಂಗಾವತಿ
31. ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ, ಕೊಪ್ಪಳ
32. ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ಕೊಪ್ಪಳ
33. ವಿಭಾಗೀಯ ನಿಯಂತ್ರಕರು, ಎನ್.ಈ.ಕೆ.ಎಸ್.ಆರ್.ಟಿ.ಸಿ ಕೊಪಳ

34. ಕಾರ್ಯನಿರ್ವಾಹಕ ಅಭಿಯಂತರರು, ಕೆ.ಹೆಚ್.ಬಿ, ಕೊಪ್ಪಳ
35. ಸಹಾಯಕ ನಿರ್ದೇಶಕರು, ಪಿಂಚಣಿ ಮತ್ತು ಸಣ್ಣ ಉಳಿತಾಯ ಇಲಾಖೆ, ಕೊಪ್ಪಳ.
36. ಕಾರ್ಯನಿರ್ವಾಹಕ ಇಂಜಿನೀಯರರು, ಯೋಜನಾ ಕೋಶ, (ಪಿ.ಎಂ.ಜಿ.ಎಸ್.ವೈ) ಕೊಪ್ಪಳ
37. ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಕೊಪ್ಪಳ
38. ಉಪನಿರ್ದೇಶಕರು, ರೇಷ್ಮೆ ಇಲಾಖೆ, ಕೊಪ್ಪಳ.
39. ಜಿಲ್ಲಾ ಆಯುಷ್ ಅಧಿಕಾರಿಗಳು, ಕೊಪ್ಪಳ
40. ಶಿಕ್ಷಣಾಧಿಕಾರಿಗಳು, ಅಕ್ಷರ ದಾಸೋಹ, ಜಿ.ಪಂ. ಕೊಪ್ಪಳ
41. ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿಗಳು, ಜಿಲ್ಲಾ ವಯಸ್ಕರ ಶಿಕ್ಷಣ ಇಲಾಖೆ, ಕೊಪ್ಪಳ.
42. ಸಹಾಯಕ ನಿರ್ದೇಶಕರು, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ, ಕೊಪ್ಪಳ.
43. ಮೀನುಗಾರಿಕೆ ಸಹಾಯಕ ನಿರ್ದೇಶಕರು, ಕೊಪ್ಪಳ
44. ಸಹಾಯಕ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಜಿಲ್ಲಾ ಪಂಚಾಯತ್, ಕೊಪ್ಪಳ.
45. ಉಪನಿರ್ದೇಶಕರು, ಖಾದಿ ಗ್ರಾಮೋದ್ಯೋಗ ಇಲಾಖೆ, ಜಿ.ಪಂ. ಕೊಪ್ಪಳ.
46. ಜಿಲ್ಲಾ ಗ್ರಂಥಾಲಯ ಅಧಿಕಾರಿಗಳು, ಕೊಪ್ಪಳ
47. ಜಿಲ್ಲಾ ಅಂಗವಿಕಲ ಕಲ್ಯಾಣಾಧಿಕಾರಿಗಳು, ಕೊಪ್ಪಳ
48. ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತ ಇಲಾಖೆ, ಕೊಪ್ಪಳ
49. ಹಿರಿಯ ಭೂವಿಜ್ಞಾನಿ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಕೊಪ್ಪಳ
50. ಜಿಲ್ಲಾ ಅಧಿಕಾರಿಗಳು, ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ, ಕೊಪ್ಪಳ
51. ಸಹಾಯಕ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಕೊಪ್ಪಳ
52. ಕಾರ್ಯನಿರ್ವಾಹಕ ಅಭಿಯಂತರರು, ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಯಮಿತ, ಕೊಪ್ಪಳ
53. ಯೋಜನಾ ನಿರ್ದೇಶಕರು, ನಿರ್ಮಿತಿ ಕೇಂದ್ರ, ಕೊಪ್ಪಳ
54. ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಕೊಪ್ಪಳ
55. ಮುಖ್ಯ ಅಭಿಯಂತರರ ಕಛೇರಿ, ಕನೀನಿನಿ, ನೀರಾವರಿ ಕೇಂದ್ರ ವಲಯ, ಮುನಿರಾಬಾದ
56. ಕಾರ್ಯನಿರ್ವಾಹಕ ಇಜಿಜಿನೀಯರರು, ಸಣ್ಣ ನೀರಾವರಿ ಇಲಾಖೆ, ಕುಷ್ಟಗಿ
57. ಜಿಲ್ಲಾ ನೊಂದಣಾಧಿಕಾರಿಗಳು, ಕೊಪ್ಪಳ
58. **ಜಿಲ್ಲಾ ವಕ್ಫ್ ಅಧಿಕಾರಿಗಳು, ಕೊಪ್ಪಳ**
59. **ಉಪ ನಿಬಂಧಕರು, ಸಹಕಾರ ಸಂಘಗಳು, ಕೊಪ್ಪಳ**
60. □□□□ □□□□□□□ □□□□□□□□ □□□.□□.ಐ □□□□□□
61. ಜಿಲ್ಲಾಧಿಕಾರಿಗಳ ಆಪ್ತಶಾಖೆಗೆ ಮಾಹಿತಿಗಾಗಿ.

**ಶ್ರೀಮತಿ ಉಮಾ ಮಹಾದೇವನ್, ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್) ಹಾಗೂ ಕೋಲಾರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿರವರ ಅಧ್ಯಕ್ಷತೆಯಲ್ಲಿ ದಿನಾಂಕ:30-07-2019 ರಂದು ಬೆಳಿಗ್ಗೆ 11-00 ಗಂಟೆಗೆ ನಡೆದ ಜಿಲ್ಲಾ ಮಟ್ಟದ ಪ್ರಗತಿ ಪರಿಶೀಲನಾ ಸಭಾ ನಡವಳಿಗಳು.**

ಸಭೆಯ ಪ್ರಾರಂಭದಲ್ಲಿ ಸಭೆಗೆ ಅಧ್ಯಕ್ಷರನ್ನು ಪ್ರಸ್ತಾವಿಕವಾಗಿ ಸ್ವಾಗತಿಸಿ, ಜಿಲ್ಲೆಯ ಪ್ರಸ್ತುತ ಪರಿಸ್ಥಿತಿಯ ಬಗ್ಗೆ ವಿವರಿಸಿದರು. ಸಭೆಯಲ್ಲಿ ಕೃಷಿ ಮತ್ತು ತೋಟಗಾರಿಕೆ, ಮುಂಗಾರು ಮಳೆಯ ಮಾಹಿತಿ, ಕುಡಿಯುವ ನೀರಿನ ಬಗ್ಗೆ ಸಮಗ್ರ ಮಾಹಿತಿ, ಜಿಲ್ಲೆಯ ಮೇವಿನ ದಾಸ್ತಾನು ಮಾಹಿತಿ, ಗೋಶಾಲೆ ಮತ್ತು ಮೇವಿನ ನಿಧಿ ಮತ್ತು ನರೇಗಾ ಯೋಜನೆಯ ಬಗ್ಗೆ ಎಲ್ಲಾ ಮಾಹಿತಿಯನ್ನು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳೊಂದಿಗೆ ತಿಳಿಸಿದರು.

ಕೋಲಾರ ಜಿಲ್ಲೆಯ ಋತುಮಾನ ಪರಿಸ್ಥಿತಿಯ ಬಗ್ಗೆ ಸವಿವರವಾಗಿ ಚರ್ಚಿಸಲಾಯಿತು. ಜಿಲ್ಲೆಯಲ್ಲಿ ಕೃಷಿ ಇಲಾಖೆಯ ಸಮೀಕ್ಷೆಯಂತೆ ಜಿಲ್ಲೆಯಲ್ಲಿ ಸಾಗುವಳಿಗೆ ಯೋಗ್ಯವಾದ ಭೂಮಿ **1,33,626** ಹೆಕ್ಟೇರ್, ಮುಂಗಾರು ಹಂಗಾಮಿನಲ್ಲಿ **1,02,000** ಹೆಕ್ಟೇರ್ ಗುರಿ ಇದ್ದು, ಈವರೆವಿಗೂ **12,492** ಹೆಕ್ಟೇರ್‌ಗಳಲ್ಲಿ ಶೇಕಡ **12%** ರಷ್ಟು ಬಿತ್ತನೆ ಕಾರ್ಯವು ಪೂರ್ಣಗೊಂಡಿರುತ್ತದೆ ಎಂದು ಸಭೆಗೆ ಮಾಹಿತಿ ನೀಡಿದರು.

ಜಿಲ್ಲೆಯಲ್ಲಿ 5 ತಾಲ್ಲೂಕುಗಳು ಸೇರಿದಂತೆ ವಿವಿಧ ಬೆಳೆಗಳಿಗೆ **4,039** ಕ್ವಿಂಟಾಲ್ ಬಿತ್ತನೆ ಬೀಜ ಬೇಡಿಕೆ ಇದ್ದು, ಈವರೆವಿಗೆ **3131** ಕ್ವಿಂಟಾಲ್ ಬಿತ್ತನೆ ಬೀಜ ಸರಬರಾಜು ಮಾಡಿರುವ ಬಗ್ಗೆ, ಇದರಲ್ಲಿ **2161** ಕ್ವಿಂಟಲ್ ಬಿತ್ತನೆ ಬೀಜ ಬಿತ್ತನೆಯಗಿರುತ್ತದೆಂದು ಹಾಗೂ **970** ಕ್ವಿಂಟಲ್ ಬಿತ್ತನೆ ಬೀಜ ದಾಸ್ತಾನು ಇರುವ ಬಗ್ಗೆ ಸಭೆಗೆ ಮಾಹಿತಿ ನೀಡಿದರು. ಇದರಿಂದಾಗಿ ಜಿಲ್ಲೆಯಲ್ಲಿ ಬಿತ್ತನೆ ಬೀಜದ ಕೊರತೆ ಇಲ್ಲ ಎಂದು ಮಾಹಿತಿ ನೀಡಿದರು.

2018ರ ಮುಂಗಾರು ಹಂಗಾಮಿನಲ್ಲಿ ಬಿತ್ತನೆಯಾದ ಪ್ರದೇಶ **71063** ಹೆಕ್ಟೇರ್, ಹಾನಿಗೊಳಗಾದ ಪ್ರದೇಶ **52320** ಹೆಕ್ಟೇರ್ ಹಾಗೂ **39438** ಹೆಕ್ಟೇರ್ ಪ್ರದೇಶವು ಶೇಕಡ **33%** ಕ್ಕಿಂತ ಹೆಚ್ಚು ಹಾನಿಗೊಳಗಾಗಿದೆ. ಜಿಲ್ಲೆಯಲ್ಲಿ ಬಿರುಗಾಳಿ ಮಳೆಯಿಂದಾಗಿ **8948.70** ಹೆಕ್ಟೇರ್ ಪ್ರದೇಶವು ಶೇಕಡ **33%** ಹೆಚ್ಚು ಹಾನಿಗೆ ಒಳಗಾಗಿದೆ. ಇದರಿಂದಾಗಿ ಅಂದಾಜು **3927.90** ಲಕ್ಷಗಳಷ್ಟು ಬೆಳೆ ನಷ್ಟವಾಗಿರುತ್ತದೆ. **8503.85** ಹೆಕ್ಟೇರ್ ಪ್ರದೇಶದ ಅಂದಾಜು **1530.69** ಲಕ್ಷಗಳ ದೀರ್ಘಕಾಲಿಕ ಬೆಳೆಗಳು ಹಾನಿಗೊಳಗಾಗಿದೆ ಎಂದು ಅಂದಾಜಿಸಲಾಗಿದೆ. 444.85 ಹೆಕ್ಟೇರ್‌ನ **60.05** ಲಕ್ಷಗಳ ನೀರಾವರಿ ವಾರ್ಷಿಕ ಬೆಳೆಗಳು ಹಾನಿಗೆ ಒಳಗಾಗಿದೆ

ಎಂದು ಅಂದಾಜಿಸಲಾಗಿದೆ. ಇದರಿಂದಾಗಿ ಒಟ್ಟು **8948.70** ಹೆಕ್ಟೇರ್ ಪ್ರದೇಶದ **1590.748** ಲಕ್ಷಗಳಷ್ಟು ಮೊತ್ತದ ಬೆಳೆ ಹಾನಿಗೊಳಗಾಗಿರುತ್ತದೆ.

ಜಿಲ್ಲೆಯಲ್ಲಿ 5 ತಾಲ್ಲೂಕುಗಳಿಗೆ ಸೇರಿದಂತೆ ಒಟ್ಟು **13505** ಮೆಟ್ರಿಕ್ ಟನ್ ರಸಗೊಬ್ಬರ ಬೇಡಿಕೆ ಇದ್ದು, **8018** ಮೆಟ್ರಿಕ್ ಟನ್ ಸರಬರಾಜಾಗಿರುತ್ತದೆ. ಈ ಪೈಕಿ 5820 ಮೆಟ್ರಿಕ್ ಟನ್ ರಸಗೊಬ್ಬರ ವಿತರಣೆಯಾಗಿದ್ದು, 6043 ಮೆಟ್ರಿಕ್ ಟನ್ ದಾಸ್ತಾನು ಇರುತ್ತದೆ. ಕೆ.ಎಸ್.ಸಿ.ಎಂ.ಎಫ್ ದಲ್ಲಿ **2688** ಮೆಟ್ರಿಕ್ ಟನ್ ಒಳಗೊಂಡಂತೆ ಒಟ್ಟು **6043** ಮೆಟ್ರಿಕ್ ಟನ್‌ನಷ್ಟು ರಸಗೊಬ್ಬರ ದಾಸ್ತಾನು ಇರುತ್ತದೆ.

ಜಾನುವಾರು ಮೇವು ಜಿಲ್ಲೆಯ ರೈತರಲ್ಲಿ **103097** ಮೆಟ್ರಕ್ ಟನ್‌ನಷ್ಟು ದಾಸ್ತಾನು ಇದ್ದು ಇದು ಸುಮಾರು **13** ವಾರಗಳಿಗೆ ಸಾಕಾಗುತ್ತದೆ. ಪಶುಪಾಲನಾ ಇಲಾಖೆಯಿಂದ ಏಪ್ರಲ್ 2019 ಮಾಹೆಯಿಂದ **4520** ಮಿನಿ ಕಿಟ್‌ಗಳನ್ನು ರೈತರಿಗೆ ವಿತರಿಸಲಾಗಿದೆ, ಹೆಚ್ಚುವರಿಯಾಗಿ **25000** ಮಿನಿ ಕಿಟ್ಟುಗಳ ಬೇಡಿಕೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದ್ದು, ಇನ್ನು ವಿತರಣೆಯಾಗಿರುವುದಿಲ್ಲ ಎಂಬ ಮಾಹಿತಿಯನ್ನು ತಿಳಿಸಿದರು. ಸಂದಿಗ್ಧ ಪರಿಸ್ಥಿತಿಯಲ್ಲಿ ಮೇವಿನ ಸಮಸ್ಯೆಯನ್ನು ನಿವಾರಿಸುವ ಸಂಬಂಧ ಜಿಲ್ಲೆಯಲ್ಲಿ ಮೂರು ಮೇವು ಬ್ಯಾಂಕುಗಳನ್ನು ತೆರೆಯಲಾಗಿದೆ ಎಂಬ ಮಾಹತಿಯನ್ನು ಸಭೆಯ ಗಮನಕ್ಕೆ ತಂದರು.

ಜಿಲ್ಲೆಯಲ್ಲಿ ಕುಡಿಯುವ ನೀರಿಗೆ ಸಂಬಂಧಿಸಿದಂತೆ, 2019-20ನೇ ಸಾಲಿನಲ್ಲಿ ಸಿ.ಆರ್.ಪಿ.ಎಫ್ ನಿಂದ ರೂ. **137.05** ಲಕ್ಷಗಳನ್ನು ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಿರುವ ಬಾಕಿ ವೆಚ್ಚವನ್ನು ಪಾವತಿಸಲು ಹಾಗೂ ರೂ.**55.00** ಲಕ್ಷಗಳಲ್ಲಿ **40** ಕುಡಿಯುವ ನೀರಿನ ಕಾಮಗಾರಿಗಳನ್ನು ಕೈಗೊಳ್ಳಲು ಸಿ.ಆರ್.ಎಫ್ ನಿಂದ ಅನುಮೋದನೆ ನೀಡಿ ಸಂಬಂಧಿಸಿದ ಅನುಷ್ಠಾನಾಧಿಕಾರಿಗಳಿಗೆ ಅನುದಾನ ಬಿಡುಗಡೆ ಮಾಡಲಾಗಿದೆ ಎಂಬ ಮಾಹಿತಿ ನೀಡಿದರು. ಸಿ.ಆರ್.ಎಫ್ ಯೋಜನೆಯಲ್ಲಿ 2019-20ನೇ ಸಾಲಿನಲ್ಲಿ ರೂ. 1667.19 ಲಕ್ಷಗಳು ಲಭ್ಯವಿದ್ದು ಕುಡಿಯುವ ನೀರಿನ ವ್ಯವಸ್ಥೆಗಾಗಿ ರೂ. **192.05** ಲಕ್ಷಗಳನ್ನು ಹಾಗೂ ಜಾನುವಾರು ಮೇವು ಮತ್ತು ಸಂರಕ್ಷಣೆಗಾಗಿ ರೂ. **49.64** ಲಕ್ಷಗಳನ್ನು ಮತ್ತು ಮಳೆ ಹಾನಿ ಪರಿಹಾರಕ್ಕೆ ರೂ. 305.48 ಲಕ್ಷ ವೆಚ್ಚ ಮಾಡಲಾಗಿದ್ದು, ರೂ. **1124.02** ಲಕ್ಷಗಳ ಅನುದಾನವು ಬಾಕಿ ಲಭ್ಯವಿರುವ ಬಗ್ಗೆ ವಿವರಿಸಿದರು. ಜಿಲ್ಲಾಧಿಕಾರಿಗಳು ಜಿಲ್ಲೆಯಲ್ಲಿ **1200** ಶುದ್ಧ ನೀರಿನ ಘಟಕಗಳಿಗದ್ದು **225** ಗ್ರಾಮಗಳಲ್ಲಿ ನೀರಿನಲ್ಲಿ ಪ್ಲೋರೈಡ್, ನೈಟ್ರೇಟ್ ಅಂಶ ಕಂಡುಬಂದಿರುವುದರಿಂದ ಹೊಸ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಅಳವಡಿಸಬೇಕಾಗಿದೆ ಎಂದು ಸಭೆಯ ಗಮನಕ್ಕೆ ತಂದರು.

ಅಂತರ ಜಲ ಮಟ್ಟ ಕುಸಿದಿರುವುದರಿಂದ ಕೊಳವೆ ಬಾವಿಗಳನ್ನು 1100 ಅಡಿಗಳವರೆಗೆ ಕೊರೆಸ ಲಾಗುತ್ತಿದೆ. ಮಳೆಯ ಕೊರತೆಯಿಂದಾಗಿ ಕೊಳವೆ ಬಾವಿಗಳಲ್ಲಿ ನೀರು ಕಡಿಮೆಯಾಗಿದ್ದು, ಇದರಿಂದ ಕೊಳವೆ ಬಾವಿಯನ್ನು ಹೆಚ್ಚಿನ ಆಳದವರೆಗೆ ಕೊರೆಯಿಸಲಾಗುತ್ತಿದೆ ಎಂಬ ಮಾಹಿತಿ ನೀಡಿದರು.

ಜಿಲ್ಲೆಯಲ್ಲಿ ಒಟ್ಟು **174** ವಾರ್ಡುಗಳಿದ್ದು, **80** ವಾರ್ಡುಗಳಲ್ಲಿ ಸಮಸ್ಯೆಯಿದ್ದು, ಸದರಿ ವಾರ್ಡುಗಳಲ್ಲಿ ಸ್ಥಳಿಯ ಸಂಸ್ಥೆಗಳ ಸ್ವಂತ **14** ಟ್ಯಾಂಕರ್‌ಗಳ ಮೂಲಕ **67** ಟ್ರಿಪ್ ನೀರಿನ ಸರಬರಾಜು ಮಾಡುತ್ತಿದ್ದು, **21** ಖಾಸಗಿ ಟ್ಯಾಂಕರ್‌ಗಳ ಮೂಲಕ **105** ಟ್ರಿಪ್ ನೀರು ಸರಬರಾಜು ಮಾಡಲಾಗುತ್ತಿದೆ ಎಂದು ಸಭೆಯ ಗಮನಕ್ಕೆ ತಂದರು.

2018-19ನೇ ಸಾಲಿನಲ್ಲಿ ಎಂ.ಜಿ.ಎನ್.ಆರ್.ಇ.ಜಿ.ಎ ಯೋಜನೆಯಡಿ **40.00** ಲಕ್ಷಗಳ ಮಾನವ ದಿನಗಳ ಸೃಜನೆ ಗುರಿಯಿದ್ದು, **40.00** ಲಕ್ಷಗಳ ಮಾನವ ದಿನಗಳ ಸೃಜನೆ ಮಾಡಿ, **ಶೇ.100ರಷ್ಟು** ಪ್ರಗತಿ ಸಾಧನೆ ಮಾಡಿ, **ರೂ.138.58ಕೋಟಿ** ಅನುದಾನ ಖರ್ಚು ಮಾಡಿರುವುದಾಗಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಿಳಿಸಿದರು.

2019-20ನೇ ಸಾಲಿನಲ್ಲಿ **50.00**ಲಕ್ಷಗಳ ಗುರಿಯಿದ್ದು, ದಿನಾಂಕ:30.07.2019ರ ಅಂತ್ಯಕ್ಕೆ **1663732** ಲಕ್ಷಗಳ ಮಾನವ ದಿನಗಳ ಸೃಜನೆ ಮಾಡಿ, **ರೂ.7886.32** ಲಕ್ಷಗಳನ್ನು ಖರ್ಚುಮಾಡಲಾಗಿದೆ. 2019-20ನೇ ಸಾಲಿನಲ್ಲಿ ನರೇಗಾ ಯೋಜನೆಯಡಿ ಅನುಷ್ಠಾನ ಇಲಾಖೆಗಳ ಪ್ರಗತಿ ಪರಿಶೀಲಿಸಲಾಗಿ, ಪಂಚಾಯತ್ ರಾಜ್ ಇಲಾಖೆ, **160757** ಮಾನವ ದಿನಗಳು, ಸಾಮಾಜಿಕ ಅರಣ್ಯ **44546** ಮಾನವ ದಿನಗಳು, ಕೃಷಿ ಇಲಾಖೆ **118245** ಮಾನವ ದಿನಗಳು, ತೋಟಗಾರಿಕೆ ಇಲಾಖೆ 85433 ಮಾನವ ದಿನಗಳು, ರೇಷ್ಮೆ ಇಲಾಖೆ 285909 ಮಾನವ ದಿನಗಳ ಸೃಜನೆ ಮಾಡಲಾಗಿದೆ ಎಂದು ಸಭೆಯಲ್ಲಿ ವಿವರಿಸಿದರು. Timely Wage Payment **ಶೇ.92.75ರಷ್ಟು** ಮಾಡಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು. ಪಿ.ಆರ್.ಇ.ಡಿ. ವತಿಯಿಂದ ಒಟ್ಟು 496 ಚೆಕ್ ಡ್ಯಾಂ ಕಾಮಗಾರಿಗಳನ್ನು ಕೈಗೊಂಡಿದ್ದು, **178** ಕಾಮಗಾರಿಗಳು ಪೂರ್ಣಗೊಂಡಿದ್ದು, **96** ಕಾಮಗಾರಿಗಳನ್ನು ಪ್ರಾರಂಭಿಸಿರುವುದಿಲ್ಲ. ಸಾಮಾಜಿಕ ಅರಣ್ಯ ಇಲಾಖಾ ವತಿಯಿಂದ 1.43ಲಕ್ಷ ಸಸಿಗಳನ್ನು ರೈತರಿಗೆ ವಿತರಣೆ ಮಾಡಲಾಗಿದೆ. 14.00ಲಕ್ಷ ಸಸಿಗಳನ್ನು ಬೆಳೆಸಲಾಗಿದೆ.

ಜಿಲ್ಲೆಯಲ್ಲಿ ನರೇಗಾ ಯೋಜನೆಯಡಿ 1400 ಜಲಸಂರಕ್ಷಣಾ ಕಾರ್ಯಕ್ರಮ ಗಳನ್ನು ಕೈಗೊಳ್ಳಲಾಗಿದೆ. ಒಟ್ಟು 12,000 ಚೆಕ್ ಡ್ಯಾಂಗಳ ಕಾಮಗಾರಿ

ಪ್ರಗತಿಯಲ್ಲಿದ್ದು, 4,000 ಚೆಕ್ ಡ್ಯಾಂಗಳನ್ನು ಪೂರ್ಣಗೊಳಿಸಲಾಗಿದೆ. ರೇಷ್ಮೆ ಇಲಾಖೆಯಡಿ 2,85,909 ಮಾನವ ದಿನಗಳ ಸೃಜನೆ ಮಾಡಿ 19,000ಹೆಕ್ಟೇರ್ ಪ್ರದೇಶದಲ್ಲಿ ಹಿಪ್ಪುನೇರಳೆ ಬೆಳೆಸಲಾಗಿದೆ. ಶೇ.95ರಷ್ಟು ಪ್ರದೇಶವನ್ನು ನರೇಗಾ ಯೋಜನೆಯಡಿ ಮಾಡಲಾಗಿದೆ. ಹುಳು ಸಾಕಣೆ ಮನೆಗಳನ್ನು ನರೇಗಾ ಯೋಜನೆಯಡಿಯಲ್ಲಿ ಸೇರ್ಪಡೆ ಮಾಡಬೇಕೆಂದು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ತೋಟಗಾರಿಕೆ ಇಲಾಖೆಯಡಿ ಪ್ರಗತಿ ಕಡಿಮೆಯಿದ್ದು, ಆಗಸ್ಟ್ ಮತ್ತು ಸೆಪ್ಟೆಂಬರ್ ಮಾಹೆಯಲ್ಲಿ ಪ್ರಗತಿ ಸಾಧನೆಯಾಗುವುದಾಗಿ ಉಪ ನಿರ್ದೇಶಕರು ಸಭೆಗೆ ಮಾಹಿತಿ ನೀಡಿದರು. ನರೇಗಾ ಯೋಜನೆಯಡಿ ಒಟ್ಟು 256 ಶಾಲಾ ಕಾಂಪೌಂಡ್ ಕಾಮಗಾರಿಗಳ ಚಾಲನೆ ಮಾಡಿದ್ದು, 231 ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. ಜಿಲ್ಲೆಯಲ್ಲಿ ಒಟ್ಟು 1986 ಸರ್ಕಾರಿ ಶಾಲೆಗಳಿರುವುದಾಗಿ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ರವರು ಮಾಹಿತಿ ನೀಡಿದರು. ಬಾಕಿಯಿರುವ 276 ಶಾಲಾ ಕಾಂಪೌಂಡ್‌ಗಳನ್ನು ಜುಲೈ ಅಂತ್ಯದೊಳಗಾಗಿ ಪೂರ್ಣಗೊಳಿಸಬೇಕೆಂದು ಸೂಚಿಸಿದ್ದು, ಬಾಕಿಯಿರುವ ಶಾಲಾ ಕಾಂಪೌಂಡ್‌ಗಳನ್ನು ಶೀಘ್ರ ಪೂರ್ಣಗೊಳಿಸ ಲಾಗುವುದೆಂದು ಅನುಷ್ಠಾನಾಧಿಕಾರಿಗಳು ತಿಳಿಸಿದರು.

ಶಾಲಾ ಶೌಚಾಲಯಗಳ ನಿರ್ಮಾಣಕ್ಕೆ 104 ಗುರಿಯಿದ್ದು, 89 ಕಾಮಗಾರಿಗಳು ಮುಕ್ತಾಯಗೊಂಡಿದ್ದು, 13 ಕಾಮಗಾರಿಗಳು ಚಾಲ್ತಿಯಲ್ಲಿರು ವುದಾಗಿ 2 ಕಾಮಗಾರಿಗಳನ್ನು ಪ್ರಾರಂಭಿಸಿರುವುದಿಲ್ಲವೆಂದು ಅಧಿಕಾರಿಗಳು ಮಾಹಿತಿ ನೀಡಿದರು. ಜಿಲ್ಲೆಯ ಎಲ್ಲಾ ಸರ್ಕಾರಿ ಶಾಲೆಗಳಿಗೆ ಶಾಲಾ ಕಾಂಪೌಂಡ್ ಹಾಗೂ ಶೌಚಾಲಯ ನಿರ್ಮಿಸಲು ಹಾಗೂ ಶೌಚಾಲಯಗಳಿಗೆ ನೀರಿನ ಸೌಲಭ್ಯ ಕಲ್ಪಿಸಬೇಕೆಂದು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಅಧಿಕಾರಿಗಳಿಗೆ ಸೂಚಿಸಿದರು. ನರೇಗಾ ಒಗ್ಗೂಡಿಸುವಿಕೆಯಡಿ 150 ಅಂಗನವಾಡಿ ಕಟ್ಟಡಗಳ ನಿರ್ಮಾಣದ ಗುರಿಯಿದ್ದು, 125 ಅಂಗನವಾಡಿ ಕಟ್ಟಡಗಳನ್ನು ಪೂರ್ಣಗೊಳಿಸಿದ್ದು, 25 ಕಟ್ಟಡಗಳು ಪ್ರಗತಿಯಲ್ಲಿರುವುದಾಗಿ ಅಧಿಕಾರಿಗಳು ಮಾಹಿತಿ ನೀಡಿದರು. ಇನ್ನೂ 225 ಅಂಗನವಾಡಿ ಕಟ್ಟಡಗಳ ಅವಶ್ಯಕತೆಯಿರುವುದಾಗಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖಾಧಿಕಾರಿಗಳು ತಿಳಿಸಿದರು. ಗ್ರಾಮ ಪಂಚಾಯಿತಿ ವತಿಯಿಂದ 780 ಬಹುಕಮಾನಿನ ತಡೆಗೋಡೆ (Multiarc check dams) ನಿರ್ಮಾಣದ ಗುರಿಯಿದ್ದು, 218 ಚೆಕ್‌ಡ್ಯಾಮ್‌ಗಳು ಪ್ರಗತಿಯಲ್ಲಿದ್ದು, 161 ಚೆಕ್‌ಡ್ಯಾಂಗಳನ್ನು ಪೂರ್ಣಗೊಳಿಸ ಲಾಗಿದೆ.

ಪಿ.ಆರ್.ಇ.ಡಿ. ಇಲಾಖಾ ವತಿಯಿಂದ 500 ಚೆಕ್‌ಡ್ಯಾಂಗಳನ್ನು ನಿರ್ಮಿಸುವ ಗುರಿ ಹೊಂದಿದ್ದು, 315 ಚೆಕ್‌ಡ್ಯಾಂಗಳನ್ನು ಪೂರ್ಣಗೊಳಿಸಲಾಗಿದೆ ಹಾಗೂ 210

ಕಾಮಗಾರಿಗಳು ಪ್ರಗತಿಯಲ್ಲಿರುವುದಾಗಿ ಅನುಷ್ಠಾನಾಧಿಕಾರಿಗಳು ಮಾಹಿತಿ ನೀಡಿದರು. ನರೇಗಾ ಯೋಜನೆಯಡಿ ಆಟದ ಮೈದಾನ ಕಾಮಗಾರಿಗಾಗಿ **156** ಗುರಿಯಿದ್ದು, **17** ಕಾಮಗಾರಿಗಳು ಪೂರ್ಣಗೊಂಡಿದ್ದು, **34** ಕಾಮಗಾರಿಗಳು ಪ್ರಗತಿಯಲ್ಲಿರುವುದಾಗಿ ಅನುಷ್ಠಾನಾಧಿಕಾರಿಗಳು ಮಾಹಿತಿ ನೀಡಿದರು. ಜಿಲ್ಲೆಯ ಒಟ್ಟು **1986** ಸರ್ಕಾರಿ ಶಾಲೆಗಳಿಗೆ ಆಟದ ಮೈದಾನ ಸೌಲಭ್ಯ ಎಷ್ಟು ಶಾಲೆಗಳಲ್ಲಿದೆ, ಎಷ್ಟು ಶಾಲೆಗಳಲ್ಲಿ ಆಟದ ಮೈದಾನ ಇಲ್ಲ ಎಂಬ ಬಗ್ಗೆ ಮುಂದಿನ ಸಭೆಗೆ ಮಾಹಿತಿ ಒದಗಿಸಬೇಕೆಂದು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸೂಚಿಸಿದರು.

ನರೇಗಾ ಯೋಜನೆಯಡಿ ಕಲ್ಯಾಣಿಗಳ ಪುನರುಜ್ಜೀವನ ಕಾಮಗಾರಿಗಳು **20** ಪ್ರಗತಿಯಲ್ಲಿದ್ದು, **7** ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. ನರೇಗಾ ಯೋಜನೆಯಡಿ **42** ಗೋಕುಂಟೆ ಕಾಮಗಾರಿಗಳು ಪ್ರಗತಿಯಲ್ಲಿದ್ದು, **14** ಗೋಕುಂಟೆ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. ಕೆರೆಗಳ ಹೂಳೆತ್ತುವ ಕಾಮಗಾರಿಗಳು 156 ಗುರಿ ನಿಗದಿಪಡಿಸಲಾಗಿದ್ದು, **64** ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. ಶ್ರೀನಿವಾಸಪುರ ತಾಲ್ಲೂಕಿನಲ್ಲಿ **25** ಗ್ರಾಮ ಪಂಚಾಯಿತಿಗಳ ಪೈಕಿ ಕೇವಲ **3** ಗ್ರಾಮ ಪಂಚಾಯಿತಿಗಳಲ್ಲಿ ಮಾತ್ರ ಕೆರೆಗಳ ಹೂಳೆತ್ತುವ ಕಾಮಗಾರಿ ಪ್ರಾರಂಭಿಸಿದ್ದು, ಮುಂದಿನ ಸಭೆಗೆ ಪ್ರಗತಿ ಉತ್ತಮಪಡಿಸಲು ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಶ್ರೀನಿವಾಸಪುರ ರವರಿಗೆ ಸೂಚಿಸಲಾಯಿತು.

ನರೇಗಾ ಯೋಜನೆಯಡಿ ಜಲಶಕ್ತಿ ಅಭಿಯಾನದಡಿ **1920** ಕಾಮಗಾರಿಗಳ ಗುರಿ ಹೊಂದಿದ್ದು, **870** ಕಾಮಗಾರಿಗಳು ಪ್ರಗತಿಯಲ್ಲಿರುವುದಾಗಿ, ಈಗಾಗಲೇ ಕೈಗೊಂಡಿರುವ 4054 ಕಾಮಗಾರಿಗಳು ಪೂರ್ಣಗೊಂಡಿರುವುದಾಗಿ ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

ವಂದನೆಗಳೊಂದಿಗೆ ಸಭೆಯು ಮುಕ್ತಾಯವಾಯಿತು.

(ಉಮಾ ಮಹಾದೇವನ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್)
ಹಾಗೂ ಕೋಲಾರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ,

**ಚಿಕ್ಕಬಳ್ಳಾಪುರ ಜಿಲ್ಲೆಯ ಬರಪರಿಸ್ಥಿಯ ನಿರ್ವಹಣೆ ಕುರಿತು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಹಕಾರ ಇಲಾಖೆ ಹಾಗೂ ಚಿಕ್ಕಬಳ್ಳಾಪುರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 26/07/2019 ರಂದು ಮದ್ಯಾಹ್ನ 3:00 ಗಂಟೆಗೆ ನಡೆದ ಸಭೆಯ ನಡವಳಿ.**

ಅಧ್ಯಕ್ಷತೆ: ಡಾ|| ಎನ್. ನಾಗಾಂಬಿಕಾ ದೇವಿ, ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಹಕಾರ ಇಲಾಖೆ, ಹಾಗೂ
ಚಿಕ್ಕಬಳ್ಳಾಪುರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಬೆಂಗಳೂರು.

******

ಸಭೆಯ ಹಾಜರಾತಿ:

1. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ.
2. ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿಕ್ಕಬಳ್ಳಾಪುರ.
3. ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ಚಿಕ್ಕಬಳ್ಳಾಪುರ
4. ಉಪನಿರ್ದೇಶಕರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಚಿಕ್ಕಬಳ್ಳಾಪುರ.
5. ಉಪನಿರ್ದೇಶಕರು, ತೋಟಗಾರಿಕೆ ಇಲಾಖೆ, ಚಿಕ್ಕಬಳ್ಳಾಪುರ.
6. ಹಿರಿಯ ಭೂವಿಜ್ಞಾನಿಗಳು, ಅಂತರ್ಜಲ ವಿಭಾಗ, ಚಿಕ್ಕಬಳ್ಳಾಪುರ.
7. ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಬಳ್ಳಾಪುರ.

*****

2018-19 ನೇ ಸಾಲಿನ ಚಿಕ್ಕಬಳ್ಳಾಪುರ ಜಿಲ್ಲೆಯ ಎಲ್ಲಾ ತಾಲ್ಲೂಕುಗಳನ್ನು ಬರಪೀಡಿತ ಪ್ರದೇಶವೆಂದು ಸರ್ಕಾರವು ಘೋಷಿಸಿರುವುದರಿಂದ ಜಿಲ್ಲೆಯಲ್ಲಿ ಜನ ಜಾನುವಾರುಗಳಿಗೆ ನೀರಿನ ತೊಂದರೆಯಾಗದಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಸೂಚಿಸಿ, ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಬರ ನಿರ್ವಹಣೆಯ ಕುರಿತು ತೆಗೆದುಕೊಂಡ ಕ್ರಮಗಳ ಬಗ್ಗೆ ವಿವರಿಸಲು ಜಿಲ್ಲಾಧಿಕಾರಿಗಳಿಗೆ ತಿಳಿಸಲಾಗಿ, ಚಿಕ್ಕಬಳ್ಳಾಪುರ ಜಿಲ್ಲೆಯ ಬರನಿರ್ವಹಣೆಗಾಗಿ ಈ ಕೆಳಕಂಡಂತೆ ಕ್ರಮ ಕೈಗೊಂಡಿರುವುದಾಗಿ ತಿಳಿಸಿರುತ್ತಾರೆ.

1) ಮಳೆ ವಿವರ:-

ಜಿಲ್ಲಾಧಿಕಾರಿಗಳು ಮಾತನಾಡಿ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಕಳೆದ 15 ದಿನಗಳಿಂದ ಮೋಡಕವಿದ ವಾತಾವರಣವಿದ್ದು, ಸಣ್ಣ ಪ್ರಮಾಣದಲ್ಲಿ ಮಳೆಯಾಗಿದ್ದು, ಕೆಲವೊಂದು ಪ್ರದೇಶದಲ್ಲಿ ಮಳೆಯಾಗಿರುವುದಿಲ್ಲವೆಂದು ತಿಳಿಸಿದರು, ಎಲ್ಲಿ ಮಳೆಯಾಗಿದೆ ಮತ್ತು ಎಲ್ಲಿ ಮಳೆಯಾಗಿರುವುದಿಲ್ಲವೆಂಬುದನ್ನು ಪರಿಶೀಲಿಸಿ ಅಗತ್ಯ ಕ್ರಮ ವಹಿಸಲು ತಿಳಿಸಿದರು.

2) <u>ನಗರ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರು ಸರಬರಾಜು:-</u>

- ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಒಟ್ಟು 357 ಗ್ರಾಮಗಳಲ್ಲಿ ನೀರನ್ನು ಟ್ಯಾಂಕರ್/ಖಾಸಗಿ ಕೊಳವೆಬಾವಿಗಳ ಮೂಲಕ ಸರಬರಾಜು ಮಾಡಲಾಗುತ್ತಿದ್ದು, ಈ ಪೈಕಿ 138 ಗ್ರಾಮಗಳಲ್ಲಿ ಟ್ಯಾಂಕರ್ ಮೂಲಕ ದಿನಕ್ಕೆ 347 ಟ್ರಿಪ್ಸ್‌ನಂತೆ ಹಾಗೂ 219 ಗ್ರಾಮಗಳಲ್ಲಿ ಖಾಸಗಿ ಕೊಳವೆಬಾವಿಗಳ ಮೂಲಕ ನೀರು ಸರಬರಾಜು ಮಾಡುತ್ತಿದೆ. ಹಾಗೂ ನಗರ ಪ್ರದೇಶಗಳಲ್ಲಿ ಜಿಲ್ಲೆಯಲ್ಲಿ 25 ವಾರ್ಡುಗಳಲ್ಲಿ 2 ಸ್ಥಳೀಯ ಸಂಸ್ಥೆಯ ಟ್ಯಾಂಕರ್ ಮೂಲಕ ಪ್ರತಿ ದಿನ 9 ಟ್ರಿಪ್ಸ್ ಹಾಗೂ 10

Scanned by CamScanner

ಬಾಡಿಗೆ ಟ್ಯಾಂಕರ್‌ಗಳಿಂದ ಒಟ್ಟು ಪ್ರತಿ ದಿನ 72 ಟ್ರಿಪ್ಸ್ ನೀರು ಸರಬರಾಜು ಮಾಡುತ್ತಿರುವುದಾಗಿ ಜಿಲ್ಲಾಧಿಕಾರಿಗಳು ತಿಳಿಸಿದರು. ಹಾಗೂ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡುತ್ತಿರುವ ಎಲ್ಲಾ ವಾಹನಗಳಿಗೂ ಜಿ.ಪಿ.ಎಸ್‌ನ್ನು ಅಳವಡಿಸಲಾಗಿದ್ದು, ಜಿ.ಪಿ.ಎಸ್ ವರದಿಯಂತೆ ಟ್ಯಾಂಕರ್ ಮಾಲಿಕರಿಗೆ ಹಣ ಪಾವತಿಸುತ್ತಿರುವುದಾಗಿ ತಿಳಿಸಿದರು.

- ಜಿಲ್ಲೆಯಲ್ಲಿ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡುತ್ತಿರುವ ಮಾಲಿಕರಿಗೆ ಪ್ರತಿ 15 ದಿನಗಳಿಗೆ ಹಣವನ್ನು ಪಾವತಿಸಲು ಸೂಚಿಸಲಾಯಿತು.

**(ಕ್ರಮ: ಜಿಲ್ಲಾಧಿಕಾರಿಗಳು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಚಿಕ್ಕಬಳ್ಳಾಪುರ)**

- ಚಿಂತಾಮಣಿ ನಗರ ಪ್ರದೇಶದಲ್ಲಿ ನೀರಿನ ಸಮಸ್ಯೆ ಹೆಚ್ಚಾಗಿದ್ದು, ನಗರ ಪ್ರದೇಶದ ಕನ್ನಂಪಲ್ಲಿ ಕೆರೆಗೆ ನೀರು ಬಂದಿರುತ್ತದೆ ಮತ್ತು ನಗರದಲ್ಲಿ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲಾಗುತ್ತಿರುತ್ತದೆ. ಚಿಕ್ಕಬಳ್ಳಾಪುರ ನಗರ ಪ್ರದೇಶದಲ್ಲಿ ಜಕ್ಕಲಮಡಗು ಜಲಾಶಯದಿಂದ ನೀರು ಸರಬರಾಜು ಮಾಡಲಾಗುತ್ತಿದ್ದು ಮುಂದಿನ 5 ದಿನಗಳಿಗೆ ಮಾತ್ರ ನೀರು ಲಭ್ಯವಾಗಲಿದ್ದು ಈ ಬಗ್ಗೆ ಸಭೆಯನ್ನು ಕರೆದು ಅವಶ್ಯಕವಿರು ಸ್ಥಳಗಳಲ್ಲಿ ಬೋರ್ ಕೊರೆಯಲು ಹಾಗೂ ಅಗತ್ಯವಿದ್ದಲ್ಲಿ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿರುವುದಾಗಿ ಜಿಲ್ಲಾಧಿಕಾರಿಗಳು ತಿಳಿಸಿದರು.

- ಅವಶ್ಯಕವಿರುವ ನಗರ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ನೀರೀನ ಸಮಸ್ಯೆ ಎದುರಾಗದಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡು ಅವಶ್ಯಕವಿದ್ದಲ್ಲಿ ಬೋರ್‌ವೆಲ್ ಕೊರೆಯಲು ಹಾಗೂ ಟ್ಯಾಂಕರ್/ಖಾಸಗಿ ಕೊಳವೆಬಾವಿಗಳ ಮೂಲಕ ನೀರು ಸರಬರಾಜು ಮಾಡಲು ಜಿಲ್ಲಾಧಿಕಾರಿ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಸೂಚಿಸಲಾಯಿತು.

**(ಕ್ರಮ: ಜಿಲ್ಲಾಧಿಕಾರಿಗಳು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಚಿಕ್ಕಬಳ್ಳಾಪುರ)**

- ಜಿಲ್ಲಾಧಿಕಾರಿಗಳು ಮಾತನಾಡಿ 2018-19 ಹಾಗೂ 2019-20 ನೇ ಸಾಲಿನಲ್ಲಿ ಸಿ.ಆರ್.ಎಫ್ ಅನುದಾನದಡಿ ಜಿಲ್ಲೆಯಲ್ಲಿ ಕುಡಿಯುವ ನೀರಿನ ಪುನಶ್ಚೇತನ, ರೀಡ್ರಿಲ್, ಪೈಪ್‌ಲೈನ್ ದುರಸ್ಥಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು, ಈ ವರೆವಿಗೂ 238 ರೀಡ್ರಿಲ್ ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು ಈ ಪೈಕಿ 143 ಕಾಮಗಾರಿಗಳು ಸಫಲವಾಗಿದ್ದು, ಶೇ. 60 ರಷ್ಟು ಸಫಲವಾಗಿರುವುದು ಕಂಡುಬಂದಿರುತ್ತದೆ.

- ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಮಾತನಾಡಿ, ಜಿಲ್ಲೆಯಲ್ಲಿ ಸಮಸ್ಯಾತ್ಮಕ ಗ್ರಾಮಗಳಲ್ಲಿ NRDWP, SDP, Taskforce, ಯೋಜನೆಯಡಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು, ಅನುದಾನದ ಅವಶ್ಯಕತೆ ಇರುವುದಾಗಿ ತಿಳಿಸಿದರು. ಈ ಬಗ್ಗೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ ಚಿಕ್ಕಬಳ್ಳಾಪುರ ಜಿಲ್ಲೆಯು ಪ್ರತಿ ವರ್ಷ ಬರಪೀಡಿತ ಪ್ರದೇಶವೆಂದು ಸರ್ಕಾರ ಘೋಷಿಸುತ್ತಿರುವುದರಿಂದ ಚಿಕ್ಕಬಳ್ಳಾಪುರ ಜಿಲ್ಲೆಗೆ ಪ್ರತಿ ತಾಲ್ಲೂಕಿಗೆ 1 ಕೋಟಿಯಂತೆ ಹೆಚ್ಚಿನ ಅನುದಾನವನ್ನು ಬಿಡುಗಡೆಗೊಳಿಸುವಂತೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪಂಚಾಯತ್ ರಾಜ್ ಇಲಾಖೆಗೆ ಪತ್ರವನ್ನು ಬರೆಯಲು ಸೂಚಿಸಲಾಯಿತು.

**(ಕ್ರಮ: ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ)**

**3) ಬೆಳೆನಷ್ಟ ಪರಿಹಾರ (ಇನ್‌ಪುಟ್ ಸಬ್ಸಿಡಿ):-**

ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಮುಂಗಾರು ಹಂಗಾಮಿಗೆ ಸಂಬಂಧಿಸಿದಂತೆ ಜಿಲ್ಲೆಯಲ್ಲಿ 80851 ಹೆಕ್ಟರ್ ಪ್ರದೇಶದಲ್ಲಿ ಮಳೆ ಕೊರತೆಯಿಂದ ಕೃಷಿ ಬೆಳೆ ನಷ್ಟ ಸಂಭವಿಸಿದ್ದು, ಒಟ್ಟು 52.92 ಕೋಟಿಗೆ ಸರ್ಕಾರಕ್ಕೆ

Scanned by CamScanner

ಮೆಮೊರಾಂಡಮ್‌ನ್ನು ಸಲ್ಲಿಸಲಾಗಿರುತ್ತದೆ. ಈವರೆವಿಗೂ 2 ಹಂತಗಳ ಮೂಲಕ ಒಟ್ಟು 68503 ರೈತರಿಗೆ ಒಟ್ಟು 37.01 ಕೋಟಿಗಳನ್ನು ಸರ್ಕಾರವು ನೇರವಾಗಿ ಜಮೇ ಮಾಡಲಾಗಿದ್ದು ಮೂರನೇ ಹಂತದಲ್ಲಿ ಫಲಾನುಭವಿಗಳ ಪಟ್ಟಿಯನ್ನು ಆಯ್ಕೆ ಮಾಡಿ ಸರ್ಕಾರಕ್ಕೆ ದೃಢೀಕರಣವನ್ನು ಸಲ್ಲಿಸಿರುವುದಾಗಿ ತಿಳಿಸಿದರು.

- ರೈತರಿಗೆ ಬೆಳೆನಷ್ಟ ಪರಿಹಾರವು ಖಾತೆಗೆ ಜಮೇ ಆಗಿರುವ ಬಗ್ಗೆ ಸಂಬಂಧ ಪಟ್ಟ ರೈತರ ಮೊಬೈಲ್ ಸಂಖ್ಯೆಗೆ ಎಸ್.ಎಂ.ಎಸ್‌ನ್ನು ಎನ್.ಐ.ಸಿ ಮೂಲಕ ಕಳುಹಿಸಲು ಹಾಗೂ ಸರ್ಕಾರವು ಜಮೇ ಮಾಡಿರುವ ಬೆಳೆನಷ್ಟ ಪರಿಹಾರವನ್ನು ರೈತರ ಸಾಲಕ್ಕೆ ಜಮೇ ಮಾಡದಂತೆ ಸೂಕ್ತ ನಿರ್ದೇಶನವನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ನೀಡಲು ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಯಿತು.

**(ಕ್ರಮ: ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ/ ಜಿಲ್ಲಾ ಮಾಹಿತಿ ಅಧಿಕಾರಿಗಳು, ಚಿಕ್ಕಬಳ್ಳಾಪುರ)**

4) **ಕೃಷಿ ಇಲಾಖೆ:-**

- ಕೃಷಿ ಇಲಾಖೆಗೆ ಸಂಬಂಧಿಸಿದಂತೆ, ಬಿತ್ತನೆ ಗುರಿಯು ಶೇ. 46 ರಷ್ಟು ಪೂರ್ಣಗೊಂಡಿದ್ದು, ಮುಂದಿನ ವಾರದಲ್ಲಿ ಇನ್ನು ಹೆಚ್ಚು ಬಿತ್ತನೆಯಾಗುವ ನಿರೀಕ್ಷೆಯನ್ನು ಹೊಂದಿರುವುದಾಗಿ ಕೃಷಿ ಇಲಾಖೆ ಉಪನಿರ್ದೇಶಕರು ತಿಳಿಸಿದರು.
- ಬಿತ್ತನೆಗೆ ಅವಶ್ಯಕವಿರುವ ಬೀಜದ ವ್ಯವಸ್ಥೆಯನ್ನು ಮಾಡಿಕೊಳ್ಳಲಾಗಿದ್ದು, ರಸಗೊಬ್ಬರವನ್ನು ದಾಸ್ತಾನು ಮಾಡಿಕೊಳ್ಳಲಾಗಿರುತ್ತದೆ ಎಂದು ತಿಳಿಸಿದರು.
- ಜಿಲ್ಲಾಧಿಕಾರಿಗಳು ಮಾತನಾಡಿ ರಸಗೊಬ್ಬರ ಕಡಿಮೆ ಇರುವುದಾಗಿ ತಿಳಿಸಲಾಗಿ ಉಪನಿರ್ದೇಶಕರು ಮಾತನಾಡಿ ಮುಂದಿನ ವಾರದಲ್ಲಿ ರಸಗೊಬ್ಬರವನ್ನು ಸರಬರಾಜು ಮಾಡುವುದಾಗಿ ತಿಳಿಸಿದರು.
- ಕೃಷಿ ಇಲಾಖೆಯ ವಿವಿಧ ಯೋಜನೆಗಳಿಗೆ ಸಂಬಂಧಿಸಿದಂತೆ ಅವಶ್ಯಕವಿರುವ ಅನುದಾನವನ್ನು ಬಿಡುಗಡೆಗಾಗಿ ಸಂಬಂಧಪಟ್ಟ ಆಯುಕ್ತರಿಗೆ ಪತ್ರವನ್ನು ಬರೆಯಲು ಹಾಗೂ ಕೃಷಿಗೆ ಸಂಬಂಧಿಸಿದಂತೆ ಇತರೆ ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ತಿಳಿಸಿದರು.

**(ಕ್ರಮ: ಜಂಟಿ ಕೃಷಿ ನಿರ್ದೇಶಕರು, ಚಿಕ್ಕಬಳ್ಳಾಪುರ)**

- ಪ್ರಧಾನ ಮಂತ್ರಿ ಕಿಸಾನ್ ಯೋಜನೆಯಡಿ 2015-16 ನೇ ಸಾಲಿನ ಖಾತೆದಾರರ ಮಾಹಿತಿಯಂತೆ ಜಿಲ್ಲೆಯು ಶೇ. 97 ರಷ್ಟು ಪ್ರಗತಿಯನ್ನು ಸಾಧಿಸಿದ್ದು, 2011-12 ಸಾಲಿನ ಮಾಹಿತಿಯನ್ನು ತಂತ್ರಾಂಶದಲ್ಲಿ ಅಳವಡಿಸಿರುವುದರಿಂದ ಜಿಲ್ಲೆಯ ಪ್ರಗತಿಯು ಶೇ. 79 ಕ್ಕೆ ಕುಸಿದಿದ್ದು, ಈ ಬಗ್ಗೆ ಪರಿಶೀಲಿಸಲಾಗಿ, 2011-12 ನೇ ಸಾಲಿನ ನಂತರ ಅನೇಕ ಖಾತೆದಾರರು ಮರಣ ಹೊಂದಿದ್ದು, ಬೇರೆ ಸ್ಥಳಗಳಿಗೆ ಸ್ಥಳಾಂತರಗೊಂಡಿದ್ದು, ಮತ್ತು ಗ್ರಾಮಗಳಲ್ಲಿ ವಾಸವಿರದ ಪ್ರಕರಣಗಳನ್ನು ಹೊರತುಪಡಿಸಿ, ಜಿಲ್ಲೆಯಲ್ಲಿ ಎಲ್ಲಾ ಖಾತೆದಾರರ ಮಾಹಿತಿಯನ್ನು ಪಿ.ಎಂ ಕಿಸಾನ್ ತಂತ್ರಾಂಶದಲ್ಲಿ ಅಳವಡಿಸಲಾಗಿದ್ದು, ಬಾಕಿ ಯಾವುದು ಇರುವುದಿಲ್ಲವೆಂದು ಜಿಲ್ಲಾಧಿಕಾರಿಗಳು ತಿಳಿಸಿದರು.

5. **ಜಾನುವರುಗಳ ಮೇವಿನ ಲಭ್ಯತೆ:-**

- ಉಪನಿರ್ದೇಶಕರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ರವರು ವರದಿ ಸಲ್ಲಿಸಿರುವಂತೆ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಸದ್ಯಕ್ಕೆ ಇನ್ನೂ 7 ವಾರಗಳಿಗೆ ಸಾಕಾಗುವಷ್ಟು ಮೇವು ಲಭ್ಯವಿರುತ್ತದೆ.
- ಪ್ರಸ್ತುತ ಜಿಲ್ಲೆಯಲ್ಲಿ ಎಲ್ಲಾ ಹೋಬಳಿ ಕೇಂದ್ರಗಳಲ್ಲಿ ಮೇವು ಬ್ಯಾಂಕುಗಳು ಕಾರ್ಯನಿರ್ವಹಿಸುತ್ತಿದ್ದು, ಜಿಲ್ಲೆಯಲ್ಲಿ ಈ ವರೆವಿಗೂ 194.53 ಟನ್ ಮೇವನ್ನು ಖರೀದಿಸಿ ಫಲಾನುಭವಿಗಳಿಗೆ ನಿಯಮಾನುಸಾರ ವಿತರಿಸಲಾಗಿರುವುದಾಗಿ ತಿಳಿಸಿದರು. ಮುಂದುವರೆದು ಜಿಲ್ಲೆಯಲ್ಲಿ ಮುಂಬರುವ ದಿನಗಳಲ್ಲಿ ಮೇವಿನ

Scanned by CamScanner

ಕೊರತೆಯಾಗದಂತೆ ಮುಂಜಾಗ್ರತಾ ಕ್ರಮವಾಗಿ ಮತ್ತೊಮ್ಮೇ ಸೈಲಜ್ ಮೇವನ್ನು ಟೆಂಡರ್ ಮ... ಖರೀದಿಸಲು ಟೆಂಡರ್ ಕರೆದಿರುವುದಾಗಿ ಜಿಲ್ಲಾಧಿಕಾರಿಗಳು ತಿಳಿಸಿದರು.

➢ **"ಸಮೃದ್ಧ ಮೇವು ಗೋವುಗಳ ನಲಿವು ಯೋಜನೆ":-**

- ಜಿಲ್ಲಾಧಿಕಾರಿಗಳು ಮಾತನಾಡಿ, ಜಿಲ್ಲೆಯಲ್ಲಿ ಈ ಹಿಂದೆ ರೈತರು ಅವರ ಜಮೀನುಗಳಲ್ಲಿ ಹಸಿರು ಮೇವನ್ನು ಬೆಳೆಯುವ ಉದ್ದೇಶದಿಂದ ಸಮೃದ್ಧ ಮೇವು ಗೋವುಗಳ ನಲಿವು ಯೋಜನೆಯಡಿ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಪ್ರಸ್ತುತ 296 ಹೆಕ್ಟರ್ ಪ್ರದೇಶದಲ್ಲಿ ಮೇವನ್ನು ಬೆಳೆದಿದ್ದು, ಡಿ.ಎಂ.ಎಫ್.ಟಿ ಯೋಜನೆಯಡಿ ಹಸಿವು ಮೇವು ಬೆಳೆದ ಫಲಾನುಭವಿಗಳಿಗೆ ಪ್ರೋತ್ಸಾಹಧನವಾಗಿ ಒಟ್ಟು 213 ಫಲಾನುಭವಿಗಳಿಗೆ ಒಟ್ಟು 5.11 ಲಕ್ಷಗಳನ್ನು ನೇರವಾಗಿ ಖಾತೆಗೆ ಜಮೇ ಮಾಡಲಾಗಿರುತ್ತದೆ.
- ಜಿಲ್ಲೆಯಲ್ಲಿ 7 ವಾರಗಳಿಗೆ ಮೇವು ಲಭ್ಯವಿರುವುದಾಗಿ ತಿಳಿಸಿದ್ದು, ಜಾನುವಾರುಗಳಿಗೆ ಮೇವಿನ ಕೊರತೆಯಾದಂತೆ ಮುನ್ನಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲು ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಯಿತು.

**(ಕ್ರಮ: ಜಿಲ್ಲಾಧಿಕಾರಿಗಳು ಹಾಗೂ ಉಪನಿರ್ದೇಶಕರು, ಪಶುಪಾಲನಾ ಇಲಾಖೆ, ಚಿಕ್ಕಬಳ್ಳಾಪುರ)**

**6. ಸಿ.ಆರ್.ಎಫ್ ಅನುದಾನ:**

- ಜಿಲ್ಲಾಧಿಕಾರಿಗಳು ಮಾತನಾಡಿ, ಚಿಕ್ಕಬಳ್ಳಾಪುರ ಜಿಲ್ಲೆಗೆ 2019-20 ನೇ ಸಾಲಿನಲ್ಲಿ ಒಟ್ಟು 1621.27 ಲಕ್ಷಗಳು ಉಳಿಕೆ ಇದ್ದು ಈ ವರೆವಿಗೂ ಒಟ್ಟು 639.95 ಲಕ್ಷಗಳನ್ನು ಬರನಿರ್ವಹಣೆಗಾಗಿ ವೆಚ್ಚ ಮಾಡಲಾಗಿರುತ್ತದೆ. ಹಾಗೂ 90 ದಿನಗಳ ನಂತರ ನೀರು ಸರಬರಾಜು ಮಾಡಿದ ಬಿಲ್ಲುಗಳ ಮೊತ್ತ, ಕಾಮಗಾರಿಗಳಿಗೆ ಉಳಿಕೆ 25% ಬಿಡುಗಡೆ ಗೊಳಿಸಬೇಕಾದ ಅನುದಾನ, ಶಾಲಾ ಕಾಂಗಾರಿಗಳಿಗೆ ಉಳಿಕೆ ಬಿಡುಗಡೆಗೊಳಿಸಬೇಕಾದ ಅನುದಾನ, ಮುಂತಾದ ಕಮಿಟೆಡ್ ಅನುದಾನ ಸೇರಿ ಒಟ್ಟು 454.59 ಲಕ್ಷಗಳಿದ್ದು ಅದನ್ನು ಹೊರತುಪಡಿಸಿ ಒಟ್ಟು 526.73 ಲಕ್ಷ ಉಳಿಕೆಯಾಗಲಿದ್ದು ಸದ್ಯಕ್ಕೆ ಸಿ.ಆರ್.ಎಫ್ ನಡಿ ಅನುದಾನದ ಅವಶ್ಯಕತೆ ಇರುವುದಿಲ್ಲವೆಂದು ಜಿಲ್ಲಾಧಿಕಾರಿಗಳು ತಿಳಿಸಿದರು.
- ಈ ಹಿಂದೆ 2016-17 ನೇ ಸಾಲಿನಲ್ಲಿ ಚಿಂತಾಮಣಿ ತಾಲ್ಲೂಕಿನ ಮೇವು ಬ್ಯಾಂಕ್ ಬಿಲ್ಲುಗಳು ಬಾಕಿ ಇದ್ದು, ಅವುಗಳನ್ನು ಸಾಮಾಜಿಕ ಪರಿಶೋಧನೆಯನ್ನು ಕೈಗೊಂಡು ಸದರಿ ವರದಿಯಂತೆ ಎಲ್ಲಾ ಎಲ್ಲಾ ಬಿಲ್ಲುಗಳನ್ನು ಪಾವತಿಸಲಾಗಿರುವುದಾಗಿ ಜಿಲ್ಲಾಧಿಕಾರಿಗಳು ತಿಳಿಸಿದರು.
- ಜಿಲ್ಲೆಯ ಬರನಿರ್ವಹಣೆಗಾಗಿ ಅನುದಾನ ಅವಶ್ಯಕವಿದ್ದಲ್ಲಿ ಜರೂರಾಗಿ ಸರ್ಕಾರಕ್ಕೆ ಪತ್ರವನ್ನು ಬರೆಯಲು ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಯಿತು.

**7. ನರೇಗಾ ಯೋಜನೆ:**

- ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ರವರು ಮಾತನಾಡಿ, 2019-20 ನೇ ಸಾಲಿನಲ್ಲಿ 30.00 ಲಕ್ಷ ಮಾನವ ದಿನಗಳ ಗುರಿಯನ್ನು ಹೊಂದಿದ್ದು, ನರೇಗಾದಡಿ ಈಗಾಗಲೇ ಶಾಲಾ ಕಾಂಪೌಂಡ್, ಚೆಕ್ ಡ್ಯಾಂ, ಅಜೋಲ ತೊಟ್ಟಿಗಳ ನಿರ್ಮಾಣ ಇನ್ನು ಅನೇಕ ಕಾಮಗಾರಿಗಳನ್ನು ಕೈಗೊಳ್ಳಲಾಗಿರುತ್ತದೆ.
- ನರೇಗಾದಡಿ ಪಾವತಿಸಬೇಕಾದ ಬಾಕಿ ಕೂಲಿ 824.84 ಲಕ್ಷ ಹಾಗೂ ಸಲಕರಣೆಗಳ ಮೊತ್ತ 1123.64 ಲಕ್ಷಗಳ ಬಾಕಿ ಅನುದಾನವು ಸರ್ಕಾರದಿಂದ ಬಿಡುಗಡೆಯಾಗಬೇಕಾಗಿರುವುದಾಗಿ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ರವರು ತಿಳಿಸಿದರು.

Scanned by CamScanner

ಇತರೆ ವಿಷಯಗಳು:

- ಜಿಲ್ಲಾಧಿಕಾರಿಗಳು ಮಾತನಾಡಿ, ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ 271 ಒತ್ತುವರಿ ಕೆರೆಗಳ ಪೈಕಿ 132 ಕೆರೆಗಳ ಒಟ್ಟು 1465-33 ಎಕರೆ ವಿಸ್ತೀರ್ಣದ ಪ್ರದೇಶದ ಒತ್ತುವರಿಯನ್ನು ತೆರವುಗೊಳಿಸಲಾಗಿದ್ದು, ಉಳಿಕೆ ಒತ್ತುವರಿಯನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳುತ್ತಿರುವುದಾಗಿ ತಿಳಿಸಿದರು. ಹಾಗೂ 7779-10 ಎಕರೆ ಸರ್ಕಾರಿ ಜಮೀನಿನ ಒತ್ತುವರಿಯನ್ನು ತೆರವುಗೊಳಿಸಿರುವುದಾಗಿ ತಿಳಿಸಿದರು.
- ಜಿಲ್ಲೆಯಲ್ಲಿ ಅಧಿಕಾರಿ, ಸಿಬ್ಬಂದಿಗಳು ಹಾಗೂ ಸಾರ್ವಜನಿಕರು ಸೇರಿ ಸ್ವಯಂ ಪ್ರೇರಿತವಾಗಿ ಒಟ್ಟು 149 ಕಲ್ಯಾಣಿಗಳ ಪೈಕಿ 94 ಕಲ್ಯಾಣಿಗಳನ್ನು ಸ್ವಚ್ಛಗೊಳಿಸಲಾಗಿರುವುದಾಗಿ ತಿಳಿಸಿದರು.
- ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಕಂದಾಯ ಅದಾಲತ್‌ಗಳನ್ನು ನಡೆಸಲಾಗುತ್ತಿದೆ ಮತ್ತು ಬಾಗೇಪಲ್ಲಿ ತಾಲ್ಲೂಕು ಹಾಗೂ ಗೌರಿಬಿದನೂರು ತಾಲ್ಲೂಕಿನಲ್ಲಿ ಜನಸ್ಪಂದನಾ ಕಾರ್ಯಕ್ರಮಗಳನ್ನು ನಡೆಸಿದ್ದು, ಅನೇಕ ಅರ್ಜಿಗಳು ಪಿಂಚಣಿಗೆ ಸಂಬಂಧಿಸಿರುವುದರಿಂದ ಈ ಬಗ್ಗೆ ಪರಿಶೀಲಿಸಲಾಗಿ ತಂತ್ರಾಂಶದಲ್ಲಿ ಅನೇಕ ಅರ್ಜಿಗಳು ತಿರಸ್ಕೃತವಾಗುತ್ತಿರುವುದು ಕಂಡುಬಂದಿರುತ್ತವೆಂದು ತಿಳಿಸಿದರು. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಪತ್ರವನ್ನು ಬರೆಯಲು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ತಿಳಿಸಿದರು.

ಡಾ|| ಎನ್. ನಾಗಾಂಬಿಕಾ ದೇವಿ, ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಹಕಾರ ಇಲಾಖೆ, ಹಾಗೂ
ಚಿಕ್ಕಬಳ್ಳಾಪುರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಬೆಂಗಳೂರು.

ಪ್ರತಿಯನ್ನು:

ಸಂಬಂಧಪಟ್ಟ ಅಧಿಕಾರಿಗಳ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

Scanned by CamScanner

**ಸರ್ಕಾರದ ಕಾರ್ಯದರ್ಶಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ, ಬೆಂಗಳೂರು ಗ್ರಾಮಾಂತರ ಜಿಲ್ಲೆರವರ ಅಧ್ಯಕ್ಷತೆಯಲ್ಲಿ ದಿನಾಂಕ:12/07/2019ರಂದು ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಪ್ರಮುಖವಾಗಿ ಪರಿಶೀಲಿಸಿದ ಅಂಶಗಳು:**

| ಕ್ರಸಂ | ಅಂಶಗಳು | ಷರಾ |
|---|---|---|
| 1 | ಜಿಲ್ಲೆಯ ಹೆಸರು | ಬೆಂಗಳೂರು ಗ್ರಾಮಾಂತರ ಜಿಲ್ಲೆ |
| 2 | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯ ಹೆಸರು | ಶ್ರೀಮತಿ ಪಿ.ಹೇಮಲತ, ಭಾ.ಆ.ಸ ಸರ್ಕಾರದ ಕಾರ್ಯದರ್ಶಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ. |
| 3 | ಭೇಟಿಯಾದ/ಪ್ರವಾಸದ ದಿನಾಂಕ | 12/07/2019, ಬೀರಸಂದ್ರ ಗ್ರಾಮ, ದೇವನಹಳ್ಳಿ ತಾಲ್ಲೂಕು. |
| 4 | ಮುಖ್ಯವಾಗಿ ಗಮನಿಸಿದ ಅಂಶಗಳು ಹಾಗೂ ಸಲಹೆಗಳು | ಈ ಕೆಳಕಾಣಿಸಿದಂತಿರುತ್ತದೆ. |

<u>ಹಾಜರಾತಿ:</u>

ಎಲ್ಲಾ ಜಿಲ್ಲಾಮಟ್ಟದ ಅಧಿಕಾರಿಗಳು.

<u>ಜಿಲ್ಲೆಯ ಋತುಮಾನ ಹಾಗೂ ಮಳೆ ಬೆಳೆ ಪರಿಸ್ಥಿತಿಯ ಬಗ್ಗೆ ಪರಿಶೀಲಿಸಲಾಯಿತು.</u>

- ➢ ಸರ್ಕಾರದ ಆದೇಶಗಳ ಸಂ.ಕಂಇ 186 ಟಿಎನ್‌ಆರ್ 2018, ದಿನಾಂಕ 25.09.2018ರಂತೆ 2018-19ನೇ ಸಾಲಿನಲ್ಲಿ ಹೊಸಕೋಟೆ ತಾಲ್ಲೂಕನ್ನು ಮುಂಗಾರು ಹಂಗಾಮಿನಲ್ಲಿ ಬರಪೀಡಿತ ತಾಲ್ಲೂಕ್ಕೆಂದು ಘೋಷಿಸಲಾಗಿದೆ.
- ➢ ಸರ್ಕಾರದ ಆದೇಶ ಸಂ.ಕಂಇ 186 ಟಿಎನ್‌ಆರ್ 2018, ದಿನಾಂಕ 12.10.2018ರಂತೆ 2018-19ನೇ ಸಾಲಿನಲ್ಲಿ ದೊಡ್ಡಬಳ್ಳಾಪುರ ಮತ್ತು ದೇವನಹಳ್ಳಿ ತಾಲ್ಲೂಕುಗಳನ್ನು ಮುಂಗಾರು ಹಂಗಾಮಿನಲ್ಲಿ ಬರಪೀಡಿತ ತಾಲ್ಲೂಕುಗಳೆಂದು ಘೋಷಿಸಲಾಗಿದೆ.
- ➢ ಸರ್ಕಾರದ ಆದೇಶ ಸಂ.ಕಂಇ 319ಟಿಎನ್‌ಆರ್ 2018, ದಿನಾಂಕ 29.12.2018 ರಂತೆ 2018-19ನೇ ಸಾಲಿನಲ್ಲಿ ಹೊಸಕೋಟೆ, ದೊಡ್ಡಬಳ್ಳಾಪುರ, ದೇವನಹಳ್ಳಿ ಮತ್ತು ನೆಲಮಂಗಲ ತಾಲ್ಲೂಕುಗಳನ್ನು ಹಿಂಗಾರು ಹಂಗಾಮಿನಲ್ಲಿ ಬರಪೀಡಿತ ತಾಲ್ಲೂಕಗಳೆಂದು ಘೋಷಿಸಲಾಗಿದೆ.

***<u>ಜಿಲ್ಲೆಯ ಋತುಮಾನ ಹಾಗೂ ಮಳೆ ಬೆಳೆ ಪರಿಸ್ಥಿತಿ:</u>***

**ಮಳೆ ವಿವರಗಳು :**

- ➢ 2018-19 ಸಾಲಿನಲ್ಲಿ 809.0 ಮಿ.ಮೀ. ವಾಡಿಕೆ ಮಳೆಗೆ 714 ಮಿ.ಮೀ. ವಾಸ್ತವ ಮಳೆ( ಶೇ.-12)ಕಡಿಮೆ ಮಳೆಯಾಗಿದೆ.
- ➢ 2019 ಸಾಲಿನಲ್ಲಿ ಜನವರಿ 01.01.2019 ರಿಂದ 30.06.2019 ರವರೆಗೆ 209ಮಿ.ಮೀ. ವಾಡಿಕೆ ಮಳೆಗೆ 269 ಮಿ.ಮೀ. ವಾಸ್ತವ ಮಳೆಯಾಗಿದೆ.

Scanned by CamScanner

ಬೆಳೆ ವಿಸ್ತೀರ್ಣ ಹಾಗೂ ಬೆಳೆ ಪರಿಸ್ಥಿತಿ :

- 2018-19ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ವಿವಿಧ ಬೆಳೆಗಳನ್ನೊಳಗೊಂಡಂತೆ ಒಟ್ಟಾರೆ 54448 ಹೆ.ವಿಸ್ತೀರ್ಣದ ಗುರಿಗೆ 47714 ಹೆ.ವಿಸ್ತೀರ್ಣದಲ್ಲಿ (ಶೇ.88%) ಮುಖ್ಯವಾಗಿರಾಗಿ ಬೆಳೆಯಲ್ಲಿ 32093 ಹೆ. ತೊಗರಿ ಬೆಳೆಯಲ್ಲಿ 901 ಹೆ. ಮುಸುಕಿನ ಜೋಳ ಬೆಳೆಯಲ್ಲಿ 9125 ಹೆ. ಅಲಸಂದೆ ಬೆಳೆಯಲ್ಲಿ 518 ಹೆ ಹಾಗೂ ಎಣ್ಣೆ ಕಾಳು ಬೆಳೆಗಳಲ್ಲಿ 527 ಹೆ. ಪ್ರದೇಶದಲ್ಲಿ ಬಿತ್ತನೆಯಾಗಿರುತ್ತದೆ.
- 2019-20ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ವಿವಿಧ ಬೆಳೆಗಳನ್ನೊಳಗೊಂಡಂತೆ ಒಟ್ಟಾರೆ 58746 ಹೆ.ವಿಸ್ತೀರ್ಣದ ಗುರಿಗೆ 807 ಹೆ.ವಿಸ್ತೀರ್ಣದಲ್ಲಿ ಪ್ರದೇಶದಲ್ಲಿ ಬಿತ್ತನೆಯಾಗಿರುತ್ತದೆ
- ಆಗಸ್ಟ್, ಸೆಪ್ಟಂಬರ್, ಅಕ್ಟೋಬರ್ ಮತ್ತು ನವೆಂಬರ್ ಮಾಹೆಗಳಲ್ಲಿ ಗಣನೀಯವಾಗಿ ಶೇ.39,40,54, ಮತ್ತು 85 ರಷ್ಟುಕಡಿಮೆ ಮಳೆಯನ್ನು ಪಡೆದಿದ್ದು, ತೇವಾಂಶದ ಕೊರತೆಯಿಂದ ಬೆಳೆ ಕುಂಠಿತವಾಗಿದ್ದು, ಸರ್ಕಾರದ ಆದೇಶ ಸಂಖ್ಯೆ: ಕಂಇ/186 ಟಿ.ಎನ್.ಆರ್.2018 ದಿನಾಂಕ: 25.09.2018 ಹಾಗೂ ದಿನಾಂಕ: 12.10.2018 ರಂದು ನಡೆದ ಸಚಿವ ಸಂಪುಟದ ಉಪ ಸಮಿತಿ ಸಭೆಯ ತೀರ್ಮಾನದಂತೆ ಹೊಸಕೋಟೆ, ದೇವನಹಳ್ಳಿ ಹಾಗೂ ದೊಡ್ಡಬಳ್ಳಾಪುರ ತಾಲ್ಲೂಕುಗಳನ್ನು ಬರಪೀಡಿತ ಪ್ರದೇಶವೆಂದು ಘೋಷಿಸಿದ್ದು, ದಿನಾಂಕ: 14.11.2018 ರಂತೆ ಹೊಸಕೋಟೆ ತಾಲ್ಲೂಕಿನಲ್ಲಿ 1081.89 ಹೆ. ದೇವನಹಳ್ಳಿ ತಾಲ್ಲೂಕಿನಲ್ಲಿ 2995.02 ಹೆ. ಮತ್ತು ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ 10319.69 ಹೆ. ನಷ್ಟು ವಿಸ್ತೀರ್ಣದಲ್ಲಿ ಬೆಳೆ ನಷ್ಟವಾಗಿರುವ ಬಗ್ಗೆ ಜಂಟಿ ಸಮೀಕ್ಷೆ ಕೈಗೊಂಡು ವರದಿ ಮಾಡಲಾಗಿರುತ್ತದೆ.
- ಮುಂದುವರೆದು ದೇವನಹಳ್ಳಿ ತಾಲ್ಲೂಕಿನಲ್ಲಿ ದಿನಾಂಕ 19.11.2018 ರವರೆಗೆ ಬೆಳೆ ಪರಿಸ್ಥಿತಿಯನ್ನು ಗಮನಿಸಿದಾಗ ದೇವನಹಳ್ಳಿ ತಾಲ್ಲೂಕಿನಲ್ಲಿ 3362.98 ಹೆ.(ಒಟ್ಟು 6127 ಹೆ.) ಹಾಗೂ ಹೊಸಕೋಟೆ ತಾಲ್ಲೂಕಿನಲ್ಲಿ 4130.11ಹೆ.(ಒಟ್ಟು 5212 ಹೆ.)ನಷ್ಟು ಹೆಚ್ಚುವರಿ ವಿಸ್ತೀರ್ಣಗಳಲ್ಲಿ ಶೇ.50 ಕ್ಕಿಂತ ಹೆಚ್ಚು ಬೆಳೆ ನಷ್ಟವಾಗಿದ್ದು, ಸದರಿ ತಾಲ್ಲೂಕುಗಳಿಂದ ಜಂಟಿ ಸಮೀಕ್ಷೆಯನ್ನೂ ಕೈಗೊಂಡು ವರದಿಯನ್ನು ಮಂಡಿಸಿರುತ್ತಾರೆ.
- ಹಾಗೆಯೇ ನೆಲಮಂಗಲ ತಾಲ್ಲೂಕಿನಲ್ಲಿ 1150 ಹೆ.ಪ್ರದೇಶದಲ್ಲಿ ತೇವಾಂಶದ ಕೊರತೆಯಿಂದ, ಬೆಳೆಗಳು ಬಾಡುತ್ತಿರುವ ಬಗ್ಗೆ ವರದಿಯನ್ನು ನೀಡಿರುತ್ತಾರೆ.

ಹಿಂಗಾರು ಬೆಳೆ ವಿಸ್ತೀರ್ಣ:

- 2018-19ನೇ ಸಾಲಿನಲ್ಲಿ ಹಿಂಗಾರಿನಲ್ಲಿ ಒಟ್ಟು 2515 ವಿಸ್ತೀರ್ಣದ ಗುರಿ ಇದ್ದು, ಇದುವರೆಗೂ 1468 ಹೆ. ಪ್ರದೇಶದಲ್ಲಿ ಬಿತ್ತನೆಯಾಗಿರುತ್ತದೆ.(ಮುಂಗಾರು ಹಂಗಾಮಿನ ಲೇಟ್ ಖರೀಫ್ ನ ಹುರುಳಿ ವಿಸ್ತೀರ್ಣವೂ ಸೇರುದಂತೆ)
- **ಹಿಂಗಾರು ಹಂಗಾಮಿನಲ್ಲಿ ಜಿಲ್ಲೆಯ 4 ತಾಲ್ಲೂಕುಗಳನ್ನು ಸರ್ಕಾರದ ಆದೇಶ ಸಂ. ಕಂಇ 319 ಟಿಎನ್‌ಆರ್ 2018, ದಿನಾಂಕ 29.12.2018 ರಲ್ಲಿ ಬರ ಪೀಡಿತ ಪ್ರದೇಶವೆಂದು ಘೋಷಿಸಿರುವ ಹಿನ್ನೆಲೆಯಲ್ಲಿ 988.64 ಹೆ ಹುರುಳಿ ಬೆಳೆ ನಷ್ಟದ ಬಗ್ಗೆ ಸರ್ಕಾರಕ್ಕೆ ವರದಿ ಮಾಡಲಾಗಿದೆ.**

ಕೃಷಿ ಪರಿಕರ:

- 2018 ನೇ ಮುಂಗಾರು ಹಂಗಾಮಿನಲ್ಲಿ ತೀವ್ರ ಬರಪೀಡಿತ ತಾಲ್ಲೂಕು ಎಂದು ಘೋಷಣೆಯಾಗಿರುವ ಹೊಸಕೋಟೆ ತಾಲ್ಲೂಕಿನಲ್ಲಿ ಒಟ್ಟು 195 ಹಳ್ಳಿಗಳಲ್ಲಿ ಮಳೆಯಾಶ್ರಿತ ರಾಗಿ ಬೆಳೆ ನಷ್ಟದ ಮಾಹಿತಿಯನ್ನು Crop loss Module ಅಳವಡಿಸಲಾಗಿದ್ದು, ಸದರಿ ಹಳ್ಳಿಗಳಿಗೆ ಅನುಗುಣವಾಗಿ ಒಟ್ಟು 17091 ಫಲಾನುಭವಿಗಳಿರುತ್ತಾರೆ. ಇದುವರೆವಿಗೂ 5297 ಫಲಾನುಭವಿಗಳಿಗೆ ಒಟ್ಟು ರೂ.215.82011 ಲಕ್ಷ ಹಣವನ್ನು ಪರಿಹಾರ ತಂತ್ರಾಂಶದಿಂದ ವರ್ಗಾಯಿಸಲಾಗಿದೆ.

Scanned by CamScanner

ರಸಗೊಬ್ಬರಗಳ ಮಾಹಿತಿ :

- 2018-19 ನೇ ಸಾಲಿನ ಮಾರ್ಚಿ 2018 ರ ಮಾಹೆಯವರೆಗೆ 43521 ಟನ್ ಬೇಡಿಕೆಗೆ 40012 ಟನ್ ಸರಬರಾಜಾಗಿದ್ದು, 29332 ರಷ್ಟು ವಿತರಣೆಯಾಗಿದ್ದು, ಇದುವರೆಗೂ 6984 ಟನ್‌ರಷ್ಟು ಉಳಿಕೆ ಇರುತ್ತದೆ.
- 2019-20 ನೇ ಸಾಲಿನಲ್ಲಿ ಮುಂಗಾರಿಗೆ ಒಟ್ಟಾರೆ 27445 ಮೆ.ಟನ್ ಬೇಡಿಕೆಯನ್ನು ಕೋರಿದ್ದು,ಜೂನ್ 2019 ರ ಮಾಹೆವರೆಗೆ 9260 ಟನ್ ಬೇಡಿಕೆಗೆ 9600 ಟನ್ ಸರಬರಾಜಾಗಿದ್ದು, 9025 ರಷ್ಟು ವಿತರಣೆಯಾಗಿದ್ದು, ಇದುವರೆಗೂ 7349 ಟನ್‌ರಷ್ಟು ಉಳಿಕೆ ಇರುತ್ತದೆ(ಹಿಂದಿನ ಸಾಲಿನ ಉಳಿಕೆಯೂ ಸೇರಿದಂತೆ)
- 1165 ಮೆ.ಟನ್ ವಿವಿಧ ರಸಗೊಬ್ಬರಗಳ ಕಾಪು ದಾಸ್ತಾನು ಇರುತ್ತದೆ. ಅಭಾವ (ತುರ್ತು ಪರಿಸ್ಥಿತಿಯಲ್ಲಿ) ಕಂಡು ಬಂದಲ್ಲಿ ವಿತರಿಸಲು ಕ್ರಮ ವಹಿಸಲಾಗುವುದು.

ಬೀಜಗಳ ಪೂರೈಕೆ :

- 2018-19 ನೇ ಸಾಲಿನಲ್ಲಿ **ಮುಂಗಾರು ಹಂಗಾಮಿನಲ್ಲಿ** 3756.48 ಕ್ವಿಂ. ಬೇಡಿಕೆಗೆ 3019.35 ಕ್ವಿಂ. ತೊಗರಿ, ಮು.ಜೋಳ ಮತ್ತು ರಾಗಿ ವಿವಿಧ ಬಿತ್ತನೆ ಬೀಜಗಳು ಸರಬರಾಜು ಆಗಿದ್ದು, 2041.14 ಕ್ವಿಂ. ವಿತರಣೆಯಾಗಿರುತ್ತದೆ.
- 2018-19 ನೇ ಸಾಲಿನಲ್ಲಿ **ಹಿಂಗಾರು ಹಂಗಾಮಿನಲ್ಲಿ** 157.00 ಕ್ವಿಂ. ರಾಗಿ ಹಾಗೂ ಕಡಲೆ ಬಿತ್ತನೆ ಬೀಜ ಬೇಡಿಕೆಗೆ 76.60 ಕ್ವಿಂ ಸರಬರಾಜಾಗಿದ್ದು, 66.55ಕ್ವಿಂ. ವಿತರಣೆಯಾಗಿರುತ್ತದೆ.
- 2019-20 ನೇ ಸಾಲಿನಲ್ಲಿ **ಮುಂಗಾರು ಹಂಗಾಮಿನಲ್ಲಿ** 3392 ಕ್ವಿಂ. ಬೇಡಿಕೆಗೆ 1530 ಕ್ವಿಂ. ತೊಗರಿ, ಮು.ಜೋಳ ಮತ್ತುರಾಗಿ ವಿವಿಧ ಬಿತ್ತನೆ ಬೀಜಗಳು ಸರಬರಾಜು ಆಗಿರುತ್ತದೆ.

ಬೆಳೆ ವಿಮೆ:

- **2018-19** ನೇ ಸಾಲಿನಲ್ಲಿ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆಯಡಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಒಟ್ಟು 3951 ರೈತರು ನೋಂದಾಯಿಸಿಕೊಂಡಿರುತ್ತಾರೆ. ಪ್ರಸಕ್ತ ಸಾಲಿನಲ್ಲಿ ಜಿಲ್ಲೆಯಲ್ಲಿ ಗ್ರಾಮ ಪಂಚಾಯ್ತಿ ಮಟ್ಟದಲ್ಲಿರಾಗಿ (ಮಳೆಯಾಶ್ರಿತ), ಮು.ಜೋಳ (ಮಳೆಯಾಶ್ರಿತ) ಹೋಬಳಿ ಮಟ್ಟದಲ್ಲಿ ರಾಗಿ (ನೀರಾವರಿ) ಭತ್ತ (ನೀರಾವರಿ), ಮು.ಜೋಳ (ನೀರಾವರಿ), ತೊಗರಿ (ಮಳೆಯಾಶ್ರಿತ ಹಾಗೂ ನೀರಾವರಿ), ಹುರುಳಿ (ಮಳೆಯಾಶ್ರಿತ), ನೆಲಗಡಲೆ (ಮಳೆಯಾಶ್ರಿತ) ಬೆಳೆಗಳು ಸರ್ಕಾರದಿಂದ ಅಧಿಸೂಚಿತಗೊಂಡಿದ್ದು ದಿನಾಂಕ 14.08.2019 ರೊಳಗೆ ಜಿಲ್ಲೆಯ ಎಲ್ಲಾ ರೈತರು ಬೆಳೆವಿಮೆ ಯೋಜನೆಯಲ್ಲಿ ಪಾಲ್ಗೊಳ್ಳಬಹುದಾಗಿದೆ

ಮೇವಿನ ಪರಿಸ್ಥಿತಿ:

- 19ನೇ ಜಾನುವಾರು ಗಣತಿಯಂತೆ ಜಿಲ್ಲೆಯಲ್ಲಿ ಒಟ್ಟು **183201** ಜಾನುವಾರುಗಳಿರುತ್ತವೆ. ಜಿಲ್ಲೆಯ 4 ತಾಲ್ಲೂಕುಗಳಲ್ಲಿ ದಿನಾಂಕ **11.07.2019**ರ ಅಂತ್ಯಕ್ಕೆ ಒಟ್ಟು **95746** ಮೆ.ಟನ್ ಲಭ್ಯವಿರುವ ಮೇವಿನ ದಾಸ್ತಾನು ಸುಮಾರು **14** ವಾರಗಳವರೆಗೆ ಸಾಕಾಗುತ್ತದೆ.



Scanned by CamScanner

**ಕುಡಿಯುವ ನೀರಿನ ಪರಿಸ್ಥಿತಿ:**

ಗ್ರಾಮೀಣ:

- ಜಿಲ್ಲೆಯಲ್ಲಿ ಒಟ್ಟು 4 ತಾಲ್ಲೂಕುಗಳ ಗ್ರಾಮೀಣ ಪ್ರದೇಶಗಳಲ್ಲಿ ದಿನಾಂಕ **11.07.2019** ರಂತೆ **84** ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದ್ದು, ಈ ಗ್ರಾಮಗಳ ಪೈಕಿ ಟ್ಯಾಂಕರ್ ಮೂಲಕ **44** ಮತ್ತು **40** ಗ್ರಾಮಗಳಲ್ಲಿ ಖಾಸಗಿ ಬೋರ್‌ವೆಲ್‌ಗಳ ಮೂಲಕ ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತಿದೆ.

ನಗರ ಸ್ಥಳೀಯ ಸಂಸ್ಥೆ:

- ಜಿಲ್ಲೆಯ 5 ಪಟ್ಟಣ ಪ್ರದೇಶಗಳಲ್ಲಿ ಒಟ್ಟು **131** ವಾರ್ಡ್‌ಗಳಿದ್ದು, ದಿನಾಂಕ **11.07.2019**ರಂತೆ ವಿಜಯಪುರ ಪುರಸಭೆಯ **30** ವಾರ್ಡ್‌ಗಳಲ್ಲಿ ಟ್ಯಾಂಕರ್‌ಗಳ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ.

***2018-19 ನೇ ಸಾಲಿನಲ್ಲಿ ಕುಡಿಯುವ ನೀರು ಸರಬರಾಜಿಗಾಗಿ ಸರ್ಕಾರದಿಂದ ಅನುದಾನ ಬಿಡುಗಡೆ ಆಗಿರುವ ಬಗ್ಗೆ :***

(ರೂ.ಲಕ್ಷಗಳಲ್ಲಿ)

| | | | |
|---|---|---|---|
| 1 | ಸಂ.ಆರ್‌ಡಿ 212 ಟಿಎನ್‌ಆರ್ 2018, ದಿನಾಂಕ 07.12.2018 | 300.00 | ತುರ್ತುಕುಡಿಯುವ ನೀರು ಸರಬರಾಜು ಹಾಗೂ ಜಾನುವಾರು ಸಂರಕ್ಷಣೆ |
| 2 | ಸಂ.ಆರ್‌ಡಿ 212 ಟಿಎನ್‌ಆರ್ 2018, ದಿನಾಂಕ 12.02.2019 | 400.00 | ತುರ್ತುಕುಡಿಯುವ ನೀರು ಪೂರೈಕೆ ಹಾಗೂ ಜಾನುವಾರು ಸಂರಕ್ಷಣೆ |
| 3 | ಸಂ.ಆರ್‌ಡಿ 212 ಟಿಎನ್‌ಆರ್ 2018, ದಿನಾಂಕ 18.03.2019 | 400.00 | ತುರ್ತುಕುಡಿಯುವ ನೀರು ಪೂರೈಕೆ ಹಾಗೂ ಜಾನುವಾರು ಸಂರಕ್ಷಣೆ |
| | ಒಟ್ಟು | **1100.00** | |

***ಎಸ್.ಡಿ.ಆರ್.ಎಫ್.ರಡಿಯಲ್ಲಿಕುಡಿಯುವ ನೀರಿನ ಕಾಮಗಾರಿಗಳು:***

- 2018-19ನೇ ಸಾಲಿಗೆ ಎಸ್.ಡಿ.ಆರ್.ಎಫ್. ಯೋಜನೆಯಡಿ ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಪೈಪ್‌ಲೈನ್ ವಿಸ್ತರಣೆ ಕಾಮಗಾರಿಗಳಿಗೆ **ರೂ.230.70** ಲಕ್ಷಗಳ ಅಂದಾಜು ಪಟ್ಟಿಗಳಿಗೆ ಜಿಲ್ಲಾಧಿಕಾರಿಗಳಿಂದ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು, ಹಾಗೂ **ರೂ.173.03** ಲಕ್ಷಗಳ ಅನುದಾನ ಬಿಡುಗಡೆಮಾಡಲಾಗಿದ್ದು, ಈ ಪೈಕಿ ಒಟ್ಟು **163** ಕಾಮಗಾರಿಗಳಿಗೆ ಅನುಮೋದನೆ ನೀಡಲಾಗಿದ್ದು, ಸದರಿ ಕಾಮಗಾರಿಗಳ ಪೈಕಿ **156** ಕಾಮಗಾರಿಗಳು ಭೌತಿಕವಾಗಿ ಪೂರ್ಣಗೊಂಡಿರುತ್ತವೆ. ಉಳಿದ 7 ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

Scanned by CamScanner

➢ 2019-20ನೇ ಸಾಲಿಗೆ ಎಸ್.ಡಿ.ಆರ್.ಎಫ್. ಯೋಜನೆಯಡಿ ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಪೈಪ್‌ಲೈನ್ ವಿಸ್ತರಣೆ ಕಾಮಗಾರಿಗಳಿಗೆ **ರೂ.438.35 ಲಕ್ಷಗಳ** ಅಂದಾಜು ಪಟ್ಟಿಗಳಿಗೆ ಜಿಲ್ಲಾಧಿಕಾರಿಗಳಿಂದ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು, ಮೊದಲನೇ ಹಂತದಲ್ಲಿ ಶೇ.75 ರಷ್ಟು**ರೂ.328.76 ಲಕ್ಷಗಳ** ಅನುದಾನ ಬಿಡುಗಡೆ ಮಾಡಲಾಗಿದೆ. ಈ ಪೈಕಿ ಒಟ್ಟು308 ಕಾಮಗಾರಿಗಳಿಗೆ ಅನುಮೋದನೆ ನೀಡಲಾಗಿದ್ದು,ಸದರಿ ಕಾಮಗಾರಿಗಳ ಪೈಕಿ **180 ಕಾಮಗಾರಿಗಳು ಭೌತಿಕವಾಗಿ ಪೂರ್ಣಗೊಂಡಿರುತ್ತವೆ.** ಉಳಿದ **128** ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

***ಶಾಲಾ ಕಟ್ಟಡಗಳ ದುರಸ್ಥಿಗಾಗಿ:***

➢ 2018-19ನೇ ಸಾಲಿನಲ್ಲಿ ಶಾಲಾ ಕಟ್ಟಡಗಳ ದುರಸ್ಥಿಗಾಗಿ ಎಸ್.ಡಿ.ಆರ್.ಎಫ್. ನಿಧಿಯಡಿ ಒಟ್ಟು **305** ಶಾಲಾ ಕಟ್ಟಡಗಳು/ಕಾಮಗಾರಿಗಳಿಗೆ ಅಂದಾಜು ಮೊತ್ತ **ರೂ.405.985 ಲಕ್ಷಗಳಿಗೆ** ಮೊದಲನೇ ಹಂತದಲ್ಲಿ ಶೇ.75 ರಷ್ಟು, **ರೂ.304.48 ಲಕ್ಷ**ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

***ಜಿಲ್ಲಾಧಿಕಾರಿಎಸ್.ಡಿ.ಆರ್.ಎಫ್. ಪಿ.ಡಿ ಖಾತೆಯಲ್ಲಿ ಹಣ ಲಭ್ಯತೆ ಹಾಗೂ ಅನುಮೋದಿಸಿದ ಖರ್ಚುಗಳ ಬಗ್ಗೆ:***

➢ ಜಿಲ್ಲಾಧಿಕಾರಿಯವರ ಪ್ರಕೃತಿ ವಿಕೋಪ ಪರಿಹಾರ ನಿಧಿ ಪಿ.ಡಿ. ಖಾತೆಯಲ್ಲಿ ಹಿಂದಿನ ಬಾಕಿಯನ್ನು ಒಳಗೊಂಡಂತೆ **ರೂ.727.51ಲಕ್ಷ** ಅನುದಾನ ಲಭ್ಯವಿದ್ದು, ಈ ಪೈಕಿ, ಕಮಿಟೆಡ್ ಖರ್ಚು **ರೂ.276.76 ಲಕ್ಷ** ಹೊರತುಪಡಿಸಿ, **ರೂ.450.75 ಲಕ್ಷ** ಅನುದಾನ ಲಭ್ಯವಿರುತ್ತದೆ.

➢ ಪ್ರಸ್ತುತ 2019-20 ನೇ ಸಾಲಿನಲ್ಲಿ ಈ ತಹಲ್‌ವರೆವಿಗೂ (11.07.2019) **ರೂ.512.05 ಲಕ್ಷ** ಅನುದಾನವನ್ನು ಈ ಕೆಳಕಾಣಿಸಿದ ಉದ್ದೇಶಗಳಿಗೆ ಮರು ಹಂಚಿಕೆ ಮಾಡಲಾಗಿದೆ.

(ರೂ.ಲಕ್ಷಗಳಲ್ಲಿ)

| ಕ್ರ.ಸಂ. | ಅನುಷ್ಠಾನಾಧಿಕಾರಿಗಳಿಗೆ ಅನುದಾನ ಮರು ಹಂಚಿಕೆ ಮಾಡಿರುವಉದ್ದೇಶ | 2018-19 | 2019-20 | ಒಟ್ಟು |
|---|---|---|---|---|
| 01. | ಟ್ಯಾಂಕರ್ ಮೂಲಕ ಕುಡಿಯುವ ನೀರು ಸರಬರಾಜು (ಅನುಷ್ಠಾನಾಧಿಕಾರಿಗಳಿಗೆ) | 8.18 | 75.75 | **83.93** |
| 02. | ಟ್ಯಾಂಕರ್ ಮೂಲಕ ಕುಡಿಯುವ ನೀರು ಸರಬರಾಜು (ತಹಶೀಲ್ದಾರ್‌ಗಳಿಗೆ) | - | 100.00 | **100.00** |
| 03. | ಕುಡಿಯುವ ನೀರಿನ ಪುನಃಶ್ಚೇತನ ಕಾಮಗಾರಿಗಳಿಗೆ ಮೊದಲನೇ ಕಂತು (75%) | 173.03 | 328.75 | **501.78** |
| 04. | ಕುಡಿಯುವ ನೀರಿನ ಪುನಃಶ್ಚೇತನ ಕಾಮಗಾರಿಗಳಿಗೆ 2ನೇ ಕಂತು (25%) | 12.49 | 1.49 | **13.98** |
| 05. | ಮಳೆ ಹಾನಿ ಪರಿಹಾರಕ್ಕಾಗಿ | 80.00 | 3.37 | **83.37** |
| 06. | ಮೇವು ಒದಗಿಸುವ ಸಲುವಾಗಿ | - | - | - |
| 07. | ಡಾ॥ ವಿನುತ, ವಿಪತ್ತು ತಜ್ಞರುರವರಿಗೆ ಸಂಭಾವನೆ | 11.60 | 1.32 | **12.92** |
| 08. | ಶಾಲಾ ಕಟ್ಟಡಗಳ ದುರಸ್ಥಿಗಾಗಿ | 304.48 | 0 | **304.48** |
| 09 | ಶಾಲಾ ಕಟ್ಟಡಗಳ ದುರಸ್ಥಿಗಾಗಿ ಉಳಿಕೆ ಅನುದಾನ (25%) | - | 1.37 | **1.37** |
| 10. | ಇತರೆ | 1.52 | - | **1.52** |
| | ಒಟ್ಟು | **591.30** | **512.05** | **1103.35** |

Scanned by CamScanner

**... ವರ್ಗಗಳ ಕಲ್ಯಾಣ ಇಲಾಖೆ:**

ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ರವರು ಮಾತನಾಡುತ್ತಾ, ತಮ್ಮ ಇಲಾಖೆಗೆ ಸಂಬಂಧಿಸಿಂದತೆ ಒಟ್ಟು 32 ವಸತಿ ನಿಲಯಗಳಿದ್ದು, ಇದರಲ್ಲಿ 18 ಮೆಟ್ರಿಕ್ ಪೂರ್ವ ಹಾಗೂ 14 ಮೆಟ್ರಿಕ್ ನಂತರದ ವಸತಿ ನಿಲಯಗಳು ಇರುವುದಾಗಿ ಸಭೆಗೆ ತಿಳಿಸಿದರು. ವಸತಿ ಶಾಲೆಗಳ ಬಗ್ಗೆ ಚರ್ಚಿಸಲಾಗಿ, ಜಿಲ್ಲೆಯಲ್ಲಿ ಹೊಸಕೋಟೆ ತಾಲ್ಲೂಕು, ಸೂಲಿಬೆಲೆ ಹೋಬಳಿಯಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆ, ಹಿಂದುಳಿದ ಇಲಾಖೆ ಇದ್ದು, ವಸತಿ ಶಾಲೆಗಳಿಗೆ ಬಹಳ ಬೇಡಿಕೆ ಇರುವುದರಿಂದ ಕರ್ನಾಟಕ ವಸತಿ ಶಿಕ್ಷಣಗಳ ಸಂಸ್ಥೆ ರವರಿಗೆ ಹೋಬಳಿಗೆ ಒಂದಂತೆ ವಸತಿ ಶಾಲೆಗಳನ್ನು ತೆರೆಯಲು ಪತ್ರ ಬರೆಯಲಾಗಿದೆ ಎಂದು ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ರವರು ಸಭೆಗೆ ತಿಳಿಸಿದರು.

ಹೋಬಳಿ ಮಟ್ಟದಲ್ಲಿ ವಸತಿ ಶಾಲೆಗಳನ್ನು ತೆರೆಯಲು ಸರ್ಕಾರಿ ಜಮೀನು ಲಭ್ಯವಿದ್ದಲ್ಲಿ ಕರ್ನಾಟಕ ಭೂಕಂದಾಯ ಕಾಯ್ದೆ 1964 ಕಲಂ 71ರಡಿಯಲ್ಲಿ ವಸತಿ ಶಾಲೆಗಳಿಗೆ ಕಾಯ್ದಿರಿಸಲು ಜಿಲ್ಲಾಧಿಕಾರಿಗೆ ನಿರ್ದೇಶಿಸಲಾಯಿತು.

**ಸಮಾಜ ಕಲ್ಯಾಣ ಇಲಾಖೆ:**

ಉಪನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ರವರ ಪರವಾಗಿ ಇದ್ದ ಅಧಿಕೃತ ಅಧಿಕಾರಿ ರವರು ಮಾತನಾಡುತ್ತಾ, ತಮ್ಮ ಇಲಾಖೆಗೆ ಸಂಬಂಧಿಸಿದಂತೆ ಒಟ್ಟು 32 ವಸತಿ ನಿಲಯಗಳು ಇದ್ದು, ಇದರಲ್ಲಿ 23 ಮೆಟ್ರಿಕ್ ಪೂರ್ವ ಹಾಗೂ 9 ಮೆಟ್ರಿಕ್ ನಂತರದ ವಸತಿ ನಿಲಯಗಳಿರುತ್ತದೆ. ಮತ್ತು 11 ವಸತಿ ಶಾಲೆಗಳಿರುವುದಾಗಿ ತಿಳಿಸಿದರು. 1 ಕಟ್ಟಡ ಬಾಡಿಗೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ನಿವೇಶನ ಮಂಜೂರಿ ಮಾಡಲು ಕೋರಿ ಯೋಜನಾ ಪ್ರಾಧಿಕಾರ, ಹೊಸಕೋಟೆ ರವರಿಗೆ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ ಎಂದು ಸಭೆಗೆ ತಿಳಿಸಿದರು. ಈ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳಲು ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ ರವರಿಗೆ ನಿರ್ದೇಶಿಸುವಂತೆ ಜಿಲ್ಲಾಧಿಕಾರಿಯವರಿಗೆ ತಿಳಿಸಲಾಯಿತು.

**ತೋಟಗಾರಿಕೆ ಇಲಾಖೆ:**

ಉಪನಿರ್ದೇಶಕರು, ತೋಟಗಾರಿಕೆ ಇಲಾಖೆ ರವರು ಈ ಕೆಳಕಾಣಿಸಿದ ಮಾಹಿತಿಯನ್ನು ಸಭೆಗೆ ತಿಳಿಸಿದರು.

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 2013-14ನೇ ಸಾಲಿನಿಂದ 2018-19ನೇ ಸಾಲಿನ ವರೆಗೂ ಕೃಷಿ ಭಾಗ್ಯ ಮತ್ತು ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ಹಸಿರು ಮನೆ ಘಟಕಗಳನ್ನು ನಿರ್ಮಿಸಲಾಗಿದ್ದು, ಈವರೆಗೂ 325 ಹಸಿರು ಮನೆ ಘಟಕಗಳನ್ನು ಜಿಲ್ಲೆಯಲ್ಲಿ ನಿರ್ಮಿಸಲಾಗಿರುತ್ತದೆ ಹಾಗೂ ತೋಟಗಾರಿಕೆ ಇಲಾಖೆ ವತಿಯಿಂದ ಈ ಕೆಳಕಾಣಿಸಿದ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿರುತ್ತದೆ ಎಂದು ಸಭೆಗೆ ತಿಳಿಸಿದರು.

1. ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆ.
2. ಕೈತೋಟ ಮತ್ತು ತಾರಸಿ ತೋಟಗಳ ಅಭಿವೃದ್ಧಿಗಾಗಿ ಉತ್ತೇಜನ ಕಾರ್ಯಕ್ರಮ.
3. ಹೂ ಕೃಷಿ ಉತ್ತೇಜನ ಯೋಜನೆ.
4. ನೀರಿನ ಟ್ಯಾಂಕರ್ ಖರೀದಿಗೆ ಸಹಾಯ ಧನ.
5. ಮಧುವನ ಮತ್ತು ಜೇನು ಸಾಕಾಣಿಕೆ.

Scanned by CamScanner

6. ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆ.
7. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ನಿಖರ ಬೇಸಾಯ.
8. ತೋಟಗಾರಿಕೆಯಲ್ಲಿ ಯಾಂತ್ರೀಕರಣ.
9. ಹನಿ ನೀರಾವರಿ.
10. ಕೃಷಿ ಭಾಗ್ಯ.
11. ತೋಟಗಾರಿಕೆ ಕ್ಷೇತ್ರಗಳ ನಿರ್ವಹಣೆ.
12. ರೈತರಿಗೆ ಸಹಾಯ.
13. ರೈತರಿಗೆ ತರಬೇತಿ.
14. ಮಹಾತ್ಮ ಗಾಂಧಿ ಉದ್ಯೋಗ ಖಾತರಿ ಯೋಜನೆ.

ಈ ಜಿಲ್ಲೆಗೆ ಸಂಬಂಧಿಸಿದಂತೆ, ಮುಖ್ಯ ಬೆಳೆಗಳಾದ ಮಾವು, ತೆಂಗು, ಸಪೋಟಾ ಗಿಡಗಳನ್ನು ನರ್ಸರಿಯಲ್ಲಿ ರಿಯಾಯಿತಿ ದರದಲ್ಲಿ ರೈತರಿಗೆ ನೀಡಲಾಗುತ್ತಿದೆ ಎಂದು ತಿಳಿಸಿದರು ಹಾಗೂ ಕೈತೋಟ ಮತ್ತು ತಾರಸಿ ತೋಟಗಳಿಗೆ ಹೆಚ್ಚು ಪ್ರಾಮುಖ್ಯತೆ ನೀಡಿ ಸಾರ್ವಜನಿಕರಲ್ಲಿ ತಿಳುವಳಿಕೆ ನೀಡಲು ಕ್ರಮ ಕೈಗೊಳ್ಳಬೇಕೆಂದು ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ ರವರಿಗೆ ನಿರ್ದೇಶನ ನೀಡಲಾಯಿತು. ಈ ಯೋಜನೆಯ ಬಗ್ಗೆ ಒಟ್ಟು 574 ಅಂಗನವಾಡಿ ಕೇಂದ್ರಗಳಲ್ಲಿ ಕೈತೋಟ (Kitchen gardening) ಮಾಡಲು ಪ್ರಸ್ತುತ ಸಾಲಿನಲ್ಲಿ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ ರವರು ಸಭೆಗೆ ತಿಳಿಸಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.

ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ರವರು ಮಾತನಾಡುತ್ತಾ, ಸದರಿ ಇಲಾಖೆಯಡಿ ಒಟ್ಟು 1,230 ಅಂಗನವಾಡಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು, 541 ಕಾಂಪೌಂಡ್ ವ್ಯವಸ್ಥೆ ಹೊಂದಿರುವ ಅಂಗನವಾಡಿ ಕೇಂದ್ರಗಳಲ್ಲಿ ಕೈ ತೋಟ ಬೆಳೆಸಲು ತೋಟಗಾರಿಕೆ ಇಲಾಖೆಯ ಸಹಯೋಗದೊಂದಿಗೆ ಕರಿಬೇವು, ಪಪ್ಪಾಯ, ತರಕಾರಿ ಗಿಡಗಳು, ನಿಂಬೆ, ಚಿಕ್ಕು ಗಿಡಗಳನ್ನು ವಿತರಿಸಲು ಕ್ರಮ ವಹಿಸಲಾಗಿದೆ ಎಂದು ಸಭೆಗೆ ತಿಳಿಸಿದರು.

ಜಿಲ್ಲೆಯ ಎಲ್ಲಾ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕರಿಗೆ ಗೌರವಧನ ಪಾವತಿಯಾಗಿರುವ ಬಗ್ಗೆ ವಿಚಾರಿಸಲಾಗಿ, ಜೂನ್ 2019ರ ಅಂತ್ಯದವರೆಗೆ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕರಿಗೆ ಗೌರವಧನ ಪಾವತಿಯಾಗಿರುವುದಾಗಿ ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ರವರು ತಿಳಿಸಿರುತ್ತಾರೆ.

ಆರೋಗ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವತಿಯಿಂದ ಕೈಗೊಳ್ಳಲಾಗುತ್ತಿರುವ ಚುಚ್ಚು ಮದ್ದು, ಆರೋಗ್ಯ ತಪಾಸಣೆ, ಅಂಕಿ ಅಂಶಗಳು, ಗ್ರಾಮ ಮಟ್ಟದಿಂದ ಹೊಂದಾಣಿಕೆಯಾಗುತ್ತಿರುವ ಪ್ರಕ್ರಿಯೆ ಬಗ್ಗೆ ಚರ್ಚಿಸಲಾಗಿ, ಸದರಿ ವಿಷಯವಾಗಿ ಮಾಹಿತಿ ನೀಡಲು ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ರವರಿಗೆ ಸೂಚಿಸಲಾಯಿತು.

Scanned by CamScanner

ಮಹಿಳಾ ಅಭಿವೃದ್ಧಿ ನಿಗಮದ ಲಿಂಗತ್ವ ಅಲ್ಪ ಸಂಖ್ಯಾತರಿಗೆ ವಸತಿ ಯೋಜನೆಯಡಿ ಸೌಲಭ್ಯ ಒದಗಿಸುವ ಬಗ್ಗೆ ಸಲ್ಲಿಸಬೇಕಾದ ಅವಶ್ಯ ದಾಖಲೆಗಳ ಬಗ್ಗೆ ಚರ್ಚಿಸಲಾಯಿತು.

**ಶಿಕ್ಷಣ ಇಲಾಖೆ:**

ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ರವರು ಮಾತನಾಡುತ್ತಾ, 2017-18ನೇ ಸಾಲಿನಲ್ಲಿ ಜಿಲ್ಲೆಯು ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ 14ನೇ ಸ್ಥಾನದಿಂದ 2018-19ನೇ ಸಾಲಿನಲ್ಲಿ ರಾಜ್ಯದಲ್ಲಿ 3ನೇ ಸ್ಥಾನ ಪಡೆದಿದ್ದು, Quality Performance ನಲ್ಲಿಯೂ ಸಹ 3ನೇ ಸ್ಥಾನದಲ್ಲಿದ್ದು, ಮಕ್ಕಳ ಕಲಿಕಾ ಪ್ರಗತಿ ಉತ್ತಮವಾಗಿದೆ ಹಾಗೂ 1142 ಸರ್ಕಾರಿ ಶಾಲಾ ಮಕ್ಕಳಿಗೆ ಸಮವಸ್ತ್ರ, ಬೈಸಿಕಲ್, ಶೂ, ಸಾಕ್ಸ್, ಪಠ್ಯ ಪುಸ್ತಕ, ಮಧ್ಯಾಹ್ನದ ಉಪಹಾರ ಹಾಗೂ ಕ್ಷೀರ ಭಾಗ್ಯ ಸೌಲಭ್ಯ ನೀಡಲಾಗುತ್ತಿದೆ ಎಂದು ಸಭೆಗೆ ತಿಳಿಸಿದರು.

**ನರೇಗಾ ಪ್ರಗತಿ ವರದಿ:**

ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್ ರವರು ಮಾತನಾಡುತ್ತಾ, ಈ ಕೆಳಕಾಣಿಸಿದಂತೆ 2019-20ನೇ ಸಾಲಿನ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಪ್ರಗತಿಯ ವಿವರವನ್ನು ಸಭೆಗೆ ತಿಳಿಸಿದರು.

**2019-20ನೇ ಸಾಲಿನ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ (ದಿನಾಂಕ:11.07.2019ರವರೆಗೆ)**

| ಕ್ರ.ಸಂ. | ತಾಲ್ಲೂಕು | ಆರ್ಥಿಕ ಪ್ರಗತಿ (ರೂ.ಲಕ್ಷಗಳಲ್ಲಿ) | | | | | ಭೌತಿಕ ಪ್ರಗತಿ (ಮಾನವದಿನಗಳು ಲಕ್ಷಗಳಲ್ಲಿ) | | | | | |
|---|---|---|---|---|---|---|---|---|---|---|---|---|
| | | | | | | | ವಾರ್ಷಿಕ ಗುರಿಗೆ ಸಾಧನೆ | | | ಜೂನ್-2019 (ಗುರಿ ಸಾಧನೆ) | | |
| | | ಗುರಿ | ಬಿಡುಗಡೆ | ಖರ್ಚು | ಬಾಕಿ | ಶೇಕಡ | ಗುರಿ | ಸಾಧನೆ | ಶೇಕಡ | ಗುರಿ | ಸಾಧನೆ | ಶೇಕಡ |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 |
| 1 | ದೇವನಹಳ್ಳಿ | 1377.58 | 441.79 | 441.79 | 0.00 | 100.00 | 3.13 | 0.76 | 24.15 | 0.55 | 0.76 | 137.85 |
| 2 | ದೊಡ್ಡಬಳ್ಳಾಪುರ | 1682.35 | 644.26 | 644.26 | 0.00 | 100.00 | 3.82 | 1.03 | 27.05 | 0.67 | 0.98 | 146.94 |
| 3 | ಹೊಸಕೋಟೆ | 1567.19 | 547.92 | 547.92 | 0.00 | 100.00 | 3.56 | 1.04 | 29.10 | 0.62 | 0.97 | 155.64 |
| 4 | ನೆಲಮಂಗಲ | 1531.47 | 563.06 | 563.06 | 0.00 | 100.00 | 3.48 | 0.79 | 22.58 | 0.61 | 0.74 | 120.77 |
| ಒಟ್ಟು | | **6158.60** | **2197.03** | **2197.03** | **0.00** | **100.00** | **14.00** | **3.61** | **25.81** | **2.45** | **3.45** | **140.61** |

Scanned by CamScanner

**ಸಕಾಲ:**

ಸಕಾಲ ಪ್ರಗತಿ ವರದಿಯನ್ನು ಪರಿಶೀಲಿಸಲಾಗಿ, ನಿಗದಿತ ಅವಧಿಯೊಳಗೆ ಬಾಕಿ ಇರುವ ಎಲ್ಲಾ ಪ್ರಕರರಣಗಳನ್ನು ವಿಲೇವಾರಿ ಮಾಡಲು ಸೂಚಿಸಲಾಯಿತು ಹಾಗೂ ಎಲ್ಲಾ ವಿಷಯಗಳ ಪ್ರಗತಿ ಬಗ್ಗೆ ಪರಿಶೀಲಿಸಲಾಯಿತು.

**ದರಖಾಸ್ತು ಪೋಡಿ ಆಂದೋಲನ:**

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ನೆಲಮಂಗಲ ತಾಲ್ಲೂಕು, ತ್ಯಾಮಗೊಂಡ್ಲು ಹೋಬಳಿ ಮತ್ತು ದೊಡ್ಡಬಳ್ಳಾಪುರ ತಾಲ್ಲೂಕಿನ ಮಧುರೆ ಹೋಬಳಿ, 2 ಹೋಬಳಿಗಳಲ್ಲಿ ಬರುವ ಎಲ್ಲಾ ಗ್ರಾಮಗಳನ್ನು ಪೋಡಿ ಮುಕ್ತ ಗ್ರಾಮಗಳನ್ನಾಗಿ ಮಾಡುವ ಕಾರ್ಯವನ್ನು ಪೂರ್ಣಗೊಳಿಸಲು ತಹಶೀಲ್ದಾರ್, ದೊಡ್ಡಬಳ್ಳಾಪುರ ಹಾಗೂ ನೆಲಮಂಗಲ ತಾಲ್ಲೂಕು ರವರಿಗೆ ಸೂಚಿಸಲಾಯಿತು.

**94ಎ, 94ಬಿ, 94ಸಿ ಮತ್ತು 94ಸಿಸಿ:**

ಈ ವಿಷಯದ ಬಗ್ಗೆ ಮಾತನಾಡುತ್ತಾ, 94(ಎ)ರಡಿ ಸ್ವೀಕೃತವಾದ ಎಲ್ಲಾ ಅರ್ಜಿಗಳು ವಿಲೇವಾರಿಯಾಗಿದ್ದು, ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ 59 ಪ್ರಕರಣಗಳು ಹಾಗೂ ನೆಲಮಂಗಲ ತಾಲ್ಲೂಕಿನಲ್ಲಿ 198 ಪ್ರಕರಣಗಳಿಗೆ ಸಾಗುವಳಿ ಚೀಟಿ ನೀಡಲು ಬಾಕಿ ಇದ್ದು ಹಾಗೂ ಅನಧಿಕೃತ ಸಾಗುವಳಿ ಸಕ್ರಮೀಕರಣ ನಿಯಮ 94(ಬಿ)ರಡಿಯಲ್ಲಿ ಜಿಲ್ಲೆಯ ನೆಲಮಂಗಲ ತಾಲ್ಲೂಕಿನಲ್ಲಿ–09 ಅರ್ಜಿಗಳು, ದೇವನಹಳ್ಳಿ ತಾಲ್ಲೂಕಿನಲ್ಲಿ–15 ಅರ್ಜಿಗಳು, ಹೊಸಕೋಟೆ ತಾಲ್ಲೂಕಿನಲ್ಲಿ–171 ಅರ್ಜಿಗಳು ಹಾಗೂ ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ–127 ಅರ್ಜಿಗಳು ಬಾಕಿ ಇದ್ದು, ಈ ಅರ್ಜಿಗಳನ್ನು ಕೂಡಲೇ ನಿಯಮಾನುಸಾರ ವಿಲೇವಾರಿ ಮಾಡಲು ಎಲ್ಲಾ ತಹಶೀಲ್ದಾರ್‌ರವರಿಗೆ ಸೂಚಿಸಲಾಯಿತು.

94(ಸಿ)ರಡಿಯಲ್ಲಿ ಹೊಸಕೋಟೆ ತಾಲ್ಲೂಕಿನಲ್ಲಿ 72, ನೆಲಮಂಗಲ ತಾಲ್ಲೂಕಿನಲ್ಲಿ 8 ಹಾಗೂ ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ 51 ಪ್ರಕರಣಗಳು ಸಕ್ರಮಗೊಳಿಸಲು ಬಾಕಿ ಇದ್ದು, ಹಾಗೂ 94ಸಿಸಿ ರಡಿಯಲ್ಲಿ ಹೊಸಕೋಟೆ 42, ನೆಲಮಂಗಲ 102, ದೇವನಹಳ್ಳಿ 1264 ಹಾಗೂ ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ 780 ಪ್ರಕರಣಗಳು ಬಾಕಿ ಇದ್ದು, ಈ ಎಲ್ಲಾ ಪ್ರಕರಣಗಳನ್ನು 15 ದಿನಗಳೊಳಗಾಗಿ ವಿಲೇವಾರಿ ಮಾಡಲು ಸಂಬಂಧಪಟ್ಟ ತಹಶೀಲ್ದಾರರಿಗೆ ಸೂಚಿಸಲಾಯಿತು.

**ನ್ಯಾಯಾಲಯ ಪ್ರಕರಣಗಳ ವಿಲೇವಾರಿ ಕುರಿತು:**

| ನ್ಯಾಯಾಲಯದ ಹೆಸರು | ದಿನಾಂಕ:01.06.2019ಕ್ಕೆ ಬಾಕಿ | ಸ್ವೀಕೃತಿ | ಒಟ್ಟು | ವಿಲೇವಾರಿ | ಬಾಕಿ | ಬಾಕಿ ಪ್ರಕರಣಗಳ ವಿವರ | | | | | | | | | | | | |
|---|---|---|---|---|---|---|---|---|---|---|---|---|---|---|---|---|---|---|
| | | | | | | 1 ವರ್ಷ ಒಳಗೆ | 1–2 ವರ್ಷ | 2 – 3 ವರ್ಷ | 3 – 4 ವರ್ಷ | 4 – 5 ವರ್ಷ | 5 – 6 ವರ್ಷ | 6 – 7 ವರ್ಷ | 7 – 8 ವರ್ಷ | 8 – 9 ವರ್ಷ | 9–10 ವರ್ಷ | 10–15 ವರ್ಷ | 15–20 ವರ್ಷ | 20 ವರ್ಷ ಮೇಲ್ಪಟ್ಟು |
| ಜಿಲ್ಲಾಧಿಕಾರಿಯವರ ನ್ಯಾಯಾಲಯ | 1528 | 34 | 1562 | 162 | 1400 | 199 | 280 | 215 | 90 | 89 | 110 | 118 | 47 | 30 | 35 | 131 | 18 | 0 |
| ಉಪವಿಭಾಗಾಧಿಕಾರಿಯವರ ನ್ಯಾಯಾಲಯ | 7547 | 190 | 7737 | 196 | 7541 | 4367 | 1467 | 678 | 698 | 285 | 14 | 15 | 7 | 0 | 10 | 0 | 0 | 0 |
| ತಾಲ್ಲೂಕು ಕಛೇರಿ ದೇವನಹಳ್ಳಿ | 431 | 16 | 447 | 43 | 404 | 246 | 158 | 0 | 0 | 0 | 0 | 0 | 0 | 0 | 0 | 0 | 0 | 0 |
| ತಾಲ್ಲೂಕು ಕಛೇರಿ ದೊಡ್ಡಬಳ್ಳಾಪುರ | 438 | 30 | 468 | 50 | 418 | 350 | 50 | 18 | 0 | 0 | 0 | 0 | 0 | 0 | 0 | 0 | 0 | 0 |
| ತಾಲ್ಲೂಕು ಕಛೇರಿ ಹೊಸಕೋಟೆ | 226 | 87 | 313 | 17 | 296 | 255 | 41 | 0 | 0 | 0 | 0 | 0 | 0 | 0 | 0 | 0 | 0 | 0 |
| ತಾಲ್ಲೂಕು ಕಛೇರಿ ನೆಲಮಂಗಲ | 253 | 61 | 314 | 70 | 244 | 210 | 23 | 11 | 0 | 0 | 0 | 0 | 0 | 0 | 0 | 0 | 0 | 0 |



Scanned by CamScanner

**ಕಂದಾಯ/ಪಿಂಚಣಿ ಅದಾಲತ್:**

ಕಂದಾಯ/ಪಿಂಚಣಿ ಅದಾಲತ್ ಯೋಜನೆಗಳು ಸಾರ್ವಜನಿಕರಿಗೆ ನೇರವಾಗಿ ಸೇವೆಗಳನ್ನು ಒದಗಿಸುವಂತಹ ಯೋಜನೆಗಳಾಗಿದ್ದು, ಹೆಚ್ಚಿನ ಅದಾಲತ್‌ಗಳನ್ನು ನಡೆಸಿ ಸ್ವೀಕೃತವಾದ ಅರ್ಜಿಗಳನ್ನು ತ್ವರಿತವಾಗಿ ವಿಲೇವಾರಿ ಮಾಡುವ ಬಗ್ಗೆ ಕ್ರಮ ಕೈಗೊಳ್ಳಲು ಎಲ್ಲಾ ತಹಶೀಲ್ದಾರ್ ರವರಿಗೆ ಸೂಚಿಸಲಾಯಿತು.

ಎಲ್ಲಾ ಇಲಾಖೆಗಳ ಪ್ರಗತಿ ವರದಿಗಳನ್ನು ಪರಿಶೀಲಿಸಲಾಗಿ ಹೆಚ್ಚಿನ ಪ್ರಗತಿಯನ್ನು ಸಾಧಿಸಲು ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಸೂಚಿಸಲಾಯಿತು.

**ಇತರೆ ವಿಷಯಗಳು:**

